₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 16.06.2025 ಸಂಪುಟ: 10 ಸಂಚಿಕೆ: 153 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪಕ್ಷ ಸಂಘಟನೆಗಾಗಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ 'ಜನರೊಂದಿಗೆ ಜನತಾದಳ' ರಾಜ್ಯ ಪ್ರವಾಸ ಹಾಗೂ 'ಮಿಸ್ಡ್ ಕಾಲ್' ಸದಸ್ಯತ್ವದ ಅಭಿಯಾನಕ್ಕೆ ಬೆಂಗಳೂರಿನ ಜೆ.ಪಿ. ಭವನದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಭಾನುವಾರ ಚಾಲನೆ ನೀಡಿದರು. ಈ ವೇಳೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಲ್‌ಪಿ ನಾಯಕ ಸುರೇಶ್‌ಬಾಬು ಸೇರಿದಂತೆ ಹಲವರಿದ್ದರು.

ಸೊಂಪಾದ ಪುಟಗಳು


ಮುಂದಿನ ವರ್ಷ ನಾನೇ ಸಿಎಂ ಆಗಿರ್ತೀನಲ್ಲ?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಏರ್ ಇಂಡಿಯಾ, ಫೇರ್ ಇಂಡಿಯಾ ಆಗುವುದು ಯಾವಾಗ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಬೆಕ್ಕು ಸಿಂಹವಾಗಲು ಬಯಸುವುದು ತಪ್ಪಲ್ಲ. ಆದರೆ ಅದು ಮೊದಲು ಇಲಿ, ಹೆಗ್ಗಣಗಳನ್ನು ತಿನ್ನುವುದನ್ನು ಬಿಡಬೇಕು. ನಾವು ಜೀವನದಲ್ಲಿ ಏನು ಬೇಕಾದರೂ ಆಗಬಹುದು. ಆದರೆ ಏನಾಗಬೇಕು ಎಂದು ಬಯಸುತ್ತೇವೋ, ಅದಕ್ಕೆ ತಕ್ಕಂಥ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಸಿಟಿಯಲ್ಲಿ ಓವರ್ ಟೇಕ್ ಮಾಡುವ ಒಂದು ಸಮಸ್ಯೆ ಅಂದ್ರೆ ಮುಂದೆ ಸಿಗ್ನಲ್ ದೀಪದ ಮುಂದೆ ಹೆಚ್ಚು ಹೊತ್ತು ನಿಲ್ಲಬೇಕಾಗುತ್ತದೆ.

ಕಬ್ಬಿಣದ ಸೇತುವೆ ಕುಸಿತ: 2 ಸಾವು

ಪುಣೆ: ಪುಣೆಯ ಮಾವಲ್ ತಾಲೂಕಿನ ಕುಂದಾಮಲ ಬಳಿ ಇಂದ್ರಾಯಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಕಬ್ಬಿಣದ ಸೇತುವೆ ಭಾನುವಾರ ಮಧ್ಯಾಹ್ನ ಕುಸಿದಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಪುಣೆಯ ಜಿಲ್ಲಾಧಿಕಾರಿ ಜಿತೇಂದ್ರ ದುಡಿ ಅವರು, ಒಟ್ಟು 38 ಜನರನ್ನು ರಕ್ಷಿಸಲಾಗಿದೆ. ಗಾಯಗೊಂಡಿರುವ 30 ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಆರು ಮಂದಿಗೆ ಗಂಭೀರ ಸ್ವರೂಪದಲ್ಲಿ ಪೆಟ್ಟಾಗಿದೆ ಎಂದು ತಿಳಿಸಿದ್ದಾರೆ. ಘಟನೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್, ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ, 32 ಮಂದಿ ಗಾಯಗೊಂಡಿದ್ದಾರೆ. ಕೊಚ್ಚಿಹೋಗಿರುವವರ ಪತ್ತೆ ಕಾರ್ಯ ಕ್ಷಿಪ್ರಗತಿಯಲ್ಲಿದೆ ಎಂದು ತಿಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ 6 ತಾಲೂಕುಗಳ ಅಂಗನವಾಡಿ, ಶಾಲೆಗಳಿಗೆ ಇಂದು ರಜೆ

ಅಲ್ಲಲ್ಲಿ ಗುಡ್ಡ ಕುಸಿತ, ರಸ್ತೆ ಸಂಚಾರಕ್ಕೆ ಅಡ್ಡಿ, ಜನಜೀವನ ಅಸ್ತವ್ಯಸ್ತ

ಮನೆಗಳ ಮೇಲೆ ಉರುಳಿದ ಮರಗಳು; ಆತಂಕದಲ್ಲಿ ದಿನಕಳೆಯುತ್ತಿರುವ ಜನತೆ

ಮಳೆನಾಡು, ಕರಾವಳಿ ತತ್ತರ

ಬೆಂಗಳೂರು: ಕಳೆದ ಮೂರು ದಿನಗಳಿಂದ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಮಳೆ ಸುರಿಯುತ್ತಿದ್ದು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು ಸೇರಿ ಹಲವೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ಶಾಲೆಗಳಿಗೆ ಸೋಮವಾರ ರಜೆ: ಚಿಕ್ಕಮಗಳೂರಿನಲ್ಲಿ ಸತತ ಮಳೆ ಸುರಿಯುತ್ತಿದ್ದು, 6 ತಾಲೂಕುಗಳ ಶಾಲೆ ಮತ್ತು ಅಂಗನವಾಡಿಗಳಿಗೆ ಸೋಮವಾರ ರಜೆ ಘೋಷಿಸಲಾಗಿದೆ. ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲೂಕುಗಳ ಶಿಶುಪಾಲನ ಕೇಂದ್ರ, ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಜೂ.16ರಂದು ರಜೆ ಘೋಷಿಸಲಾಗಿದೆ.

ಶೃಂಗೇರಿ ಬಳಿ ಹೆದ್ದಾರಿಗೆ ಕುಸಿದ ಗುಡ್ಡದ ಮಣ್ಣು: ಚಿಕ್ಕಮಗಳೂರು ಜಿಲ್ಲೆಯ ಕಳಸ, ಕುದುರೆಮುಖ, ಕೊಪ್ಪ, ಶೃಂಗೇರಿ, ಬಾಳೆಹೊನ್ನೂರು, ಕೊಟ್ಟಿಗೆಹಾರ, ಆಲ್ದೂರು, ಎನ್.ಆರ್.ಪುರ, ಆಲ್ದೂರು, ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ ಸೇರಿ ಹಲವೆಡೆ ಮಳೆ ಸುರಿಯುತ್ತಿದೆ. ಶೃಂಗೇರಿ ಸಮೀಪದ ಸುಂಕದ ಮಕ್ಕಿ-ನೆಮ್ಮಾರ್ ಸಮೀಪ ವಿಪರೀತ ಮಳೆಗೆ ಹೆದ್ದಾರಿ ಮೇಲೆ ಗುಡ್ಡದ ಮಣ್ಣು ಬಿದ್ದಿದೆ. ಇದರಿಂದ ಎಸ್.ಕೆ, ಬಾರ್ಡರ್ ಮತ್ತು ಕಾರ್ಕಳಕ್ಕೆ ಸಂಪರ್ಕ ಕಡಿತಗೊಂಡಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ರಸ್ತೆಗೆ ಬಿದ್ದಿರುವ ಮಣ್ಣು ತೆರವುಗೊಳಿಸಿದ್ದಾರೆ.

ಸಂಪರ್ಕ ಕಡಿತ: ಶಿರಸಿ-ಕುಮಟಾ ಸಂಪರ್ಕ ರಸ್ತೆಯ ದೇವಿಮನೆ ಘಟ್ಟ ಪ್ರದೇಶದಲ್ಲಿ ಭಾನುವಾರ ಬೆಳಗ್ಗೆ ಭೂಕುಸಿತ ಉಂಟಾಗಿ ವಾಹನ ಸಂಚಾರ ಕಡಿತವಾಗಿದೆ. ಕಳೆದೆರಡು ದಿನಗಳ ಅವಧಿ ಯಲ್ಲಿ ನಡೆದ 2ನೇ ಭೂಕುಸಿತ ಪ್ರಕರಣ ಇದಾಗಿದೆ. ಶನಿವಾರ ರಾತ್ರಿಯಿಂದ ಹೆಚ್ಚಿರುವ ಮಳೆಯ ಕಾರಣದಿಂದ ಭೂಕುಸಿತ ಸಂಭವಿಸಿರುವ ಸಾಧ್ಯತೆಯಿದೆ. ಪ್ರಸ್ತುತ ರಸ್ತೆ ನಿರ್ಮಾಣ ಕಂಪನಿಯಿಂದ ತೆರವು ಕಾರ್ಯ ಆರಂಭವಾಗಿದೆ.

ಮಂಗಳೂರಿನಲ್ಲಿ ಜಲಾವೃತವಾಗಿರುವ ರಸ್ತೆಯಲ್ಲಿ ಸಿಲುಕಿಕೊಂಡಿರುವ ಆಂಬ್ಯುಲೆನ್ಸ್.

ಕರಾವಳಿ ಭಾಗಕ್ಕೆ ರೆಡ್ ಅಲರ್ಟ್

ಜೂನ್ 16ರಂದು ಕರಾವಳಿ ಜಿಲ್ಲೆಗಳಿಗೆ ರೆಡ್ ಅಲರ್ಟ್, ಬೆಳಗಾವಿ, ಧಾರವಾಡ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಎಚ್ಚರಿಕೆ ನೀಡಲಾಗಿದೆ. ಜೂ.17 ರಂದು 6 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್, ಮೈಸೂರು, ಹಾಸನ, ಚಾಮರಾಜನಗರ, ಧಾರವಾಡ, ಬೆಳಗಾವಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಸಿಸಲಾಗಿದೆ. ಜೂ.18 ರಿಂದ ಮಳೆ ಕಡಿಮೆಯಾಗಲಿದ್ದು, ಕರಾವಳಿ ಜಿಲ್ಲೆಗಳಿಗೆ ಮಾತ್ರ ಯೆಲ್ಲೋ ಅಲರ್ಟ್ ಕೊಡಲಾಗಿದೆ.

ಮತ್ತೆ ಕೆತ್ತಿಕಲ್ ಗುಡ್ಡ ಕುಸಿತ

ಮಂಗಳೂರು ನಗರದ ಹೊರ ವಲಯದ ಕೆತ್ತಿಕಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ಗುಡ್ಡ ಜರಿದಿದ್ದು, ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ನಗರದಲ್ಲಿ ಶನಿವಾರ ಸುರಿದ ಭಾರಿ ಮಳೆಗೆ ಜಲಾವೃತವಾಗಿದ್ದ ಕೊಡಿಯಾಲ್‌ಬೈಲ್, ಜಪ್ಪಿನಮೊಗರು ಮತ್ತಿತರ ಪ್ರದೇಶಗಳಲ್ಲಿ ನೀರಿನ ಪ್ರಮಾಣ ಇಳಿದಿದೆ. ಮನೆಯೊಳಗೆ ತುಂಬಿದ್ದ ಕೆಸರು ನೀರನ್ನು ಸ್ವಚ್ಛಗೊಳಿಸುವಲ್ಲಿ ಈ ಪ್ರದೇಶದ ನಿವಾಸಿಗಳು ನಿರತರಾಗಿದ್ದರು. ಭಾನುವಾರ ರಾತ್ರಿಯೂ ಬಿಟ್ಟು ಬಿಟ್ಟು ಮಳೆಯಾಗಿದೆ.

ಮರ ಬಿದ್ದು ಮನೆ ಜಖಂ

ಭಟ್ಕಳ ತಾಲೂಕಿನಲ್ಲಿ ಭಾನುವಾರ ಸುರಿದ ಭಾರಿ ಮಳೆ ಗಾಳಿಗೆ ಹಲವು ಕಡೆ ಮರ, ವಿದ್ಯುತ್ ಕಂಬ ಮುರಿದು ಬಿದ್ದು ಅಪಾರ ಹಾನಿ ಸಂಭವಿಸಿದೆ. ಪಟ್ಟಣದ ಚೌಥನಿಯ ಕೀರ್ತಿ ನಗರದ ಜಟಕೇಶ್ವರ ದೇವಸ್ಥಾನದ ಮೇಲೆ ಬಾರಿ ಗಾತ್ರದ ಮರ ಬಿದ್ದು ದೇವಸ್ಥಾನದ ಚಾವಣಿ ಸಂಪೂರ್ಣ ಜಖಂಗೊಂಡಿದೆ. ಪಟ್ಟಣದ ಜಂಬರ ಮಠದ ನಿವಾಸಿ ರಾಮಾ ನಾಯ್ಕ ಅವರ ಮನೆಯ ಮೇಲೆ ತೆಂಗಿನ ಮರ ಬಿದ್ದು ಭಾಗಶಃ ಹಾನಿಯಾಗಿದೆ.

ಪುದು ಕೇಂದ್ರ: ಅತ್ಯಧಿಕ ಮಳೆ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಪುದು ಕೇಂದ್ರದಲ್ಲಿ ರಾಜ್ಯದಲ್ಲೇ ಅತ್ಯಧಿಕ ಮಳೆ ದಾಖಲಾಗಿದೆ. ಭಾನುವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ ಪುದುವಿನಲ್ಲಿ 18.95 ಸೆಂ.ಮೀ ಮಳೆ ದಾಖಲಾಗಿದೆ. ಜಿಲ್ಲೆಯ 34 ಕೇಂದ್ರಗಳಲ್ಲಿ 10 ಸೆಂ.ಮೀಗಿಂತ ಮಳೆಯಾಗಿದೆ. ಪುತ್ತೂರಿನ ಕೆದಂಬಾಡಿಯಲ್ಲಿ ಜಿಲ್ಲೆಯಲ್ಲೇ ಅತಿ ಕಡಿಮೆ 4.5 ಸೆಂ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಾಲ್ತುಳಿತ ಘಟನೆ: ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹಿಸಿ ಎಲ್ಲೆಡೆ ಪ್ರತಿಭಟನೆ

ನಾಳೆ ಬಿಜೆಪಿ ಹೋರಾಟ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ಸಮಯದಲ್ಲಿನ ಕಾಲ್ತುಳಿತ ಪ್ರಕರಣದಲ್ಲಿ ಬಿಜೆಪಿ 'ಸಕ್ರಿಯ'ವಾಗಿ ಹೋರಾಡಿಲ್ಲ ಎನ್ನುವ ಆರೋಪದ ಹೊರತಾಗಿಯೂ ಸರಕಾರದ ವಿರುದ್ಧ ಹೋರಾಟಕ್ಕೆ ಅಣಿಯಾಗಿದ್ದು, ಮಂಗಳವಾರದಿಂದ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.

- ಫ್ರೀಡಂಪಾರ್ಕ್‌ನಲ್ಲಿ 10 ಸಾವಿರ ಜನರನ್ನು ಸೇರಿಸಲು ಸಿದ್ಧತೆ

ಕಾಲ್ತುಳಿತ ಪ್ರಕರಣ ಸರಕಾರಕ್ಕೆ ತೀವ್ರ ಮುಜುಗರ ತಂದಿದ್ದರೂ ಪ್ರತಿಪಕ್ಷಗಳು ಕೇವಲ ಸಾಮಾಜಿಕ ಜಾಲತಾಣಕ್ಕೆ ಸೀಮಿತವಾಗಿವೆ ಎನ್ನುವ ಆರೋಪ ಕೇಳಿಬಂದಿತ್ತು. ಆದ್ದರಿಂದ ಇದೀಗ ಕಾಲ್ತುಳಿತ ದುರಂತ ಸಂಬಂಧ ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹಿಸಿ ಮಂಗಳವಾರ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲು ರಾಜ್ಯ ಬಿಜೆಪಿ ತೀರ್ಮಾನಿಸಿದೆ. ಬಳಿಕ ಸ್ಥಳೀಯ ನಾಯಕರ ನೇತೃತ್ವದಲ್ಲಿ ಜಿಲ್ಲಾ ಕೇಂದ್ರಗಳಲ್ಲಿಯೂ ಪ್ರತಿಭಟನೆ ನಡೆಸಬೇಕು ಎನ್ನುವ ಸೂಚನೆ ನೀಡಲಾಗಿದೆ.

ಇಡೀ ಘಟನೆಯ ಹೊಣೆಯನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಪ್ರತಿಭಟನೆ ನಡೆಸುತ್ತಿದೆ. ರಾಜ್ಯಮಟ್ಟದ ಪ್ರತಿಭಟನೆಯನ್ನು ಫ್ರೀಡಂ ಪಾರ್ಕ್‌ನಲ್ಲಿ ನಡೆಸಲಿರುವ ಬಿಜೆಪಿ, ಈ ಪ್ರತಿಭಟನೆಯಲ್ಲಿ ಕನಿಷ್ಠ 10 ಸಾವಿರ ಜನರನ್ನು ಸೇರಿಸುವ ಇರಾದೆಯಲ್ಲಿದೆ. ಈ ಮೂಲಕ 'ಶಕ್ತಿ' ಪ್ರದರ್ಶನಕ್ಕೆ ವೇದಿಕೆ ಸಿದ್ಧಪಡಿಸಿಕೊಂಡಿದೆ. ಇದೇ ವೇಳೆ ಜಾತಿ ಗಣತಿಯ ಮರು ಸಮೀಕ್ಷೆಗೆ ಸರಕಾರ ತೀರ್ಮಾನಿಸಿರುವುದನ್ನು ವಿರೋಧಿಸಲು ತೀರ್ಮಾನಿಸಲಾಗಿದೆ.

ವಿಜಯೋತ್ಸವಕ್ಕೆ ಭದ್ರತೆ ಒದಗಿಸಲು ಆಗಲ್ಲ ಎಂದು ಪೊಲೀಸ್ ಇಲಾಖೆ ಹೇಳಿತ್ತು. ಆದರೆ ಸರಕಾರ ಅದೇ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ವಹಿಸಿದೆ. ಖಡಕ್ ಪೊಲೀಸ್ ಕಮಿಷನರ್ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಈ ಎಲ್ಲ ಕೇಸ್ ಮುಚ್ಚಿಹಾಕಲು ಜಾತಿಗಣತಿ ಅಡ್ಡ ತಂದಿದ್ದಾರೆ. ಕಾಲ್ತುಳಿತದ ಘಟನೆಯ ನೇರ ಹೊಣೆ ಸಿಎಂ, ಡಿಸಿಎಂ ಹೊರಬೇಕು. ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು.

- **ಎನ್.ರವಿಕುಮಾರ್**, ವಿಧಾನ ಪರಿಷತ್ ಸದಸ್ಯ

ಹೆಲಿಕಾಪ್ಟರ್ ಪತನ, ಪೈಲಟ್ ಸೇರಿ 7 ಸಾವು

ಡೆಹರಾಡೂನ್: ಉತ್ತರಾಖಂಡ ರಾಜ್ಯದ ಡೆಹ್ರಾಡೂನ್ ನಗರದಿಂದ ಚಾರ್‌ಧಾಮ್‌ಗಳಲ್ಲೊಂದಾದ ಶ್ರೀ ಕೇದಾರನಾಥ ಪುಣ್ಯ ಕ್ಷೇತ್ರಕ್ಕೆ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಸೇವಾ ಹೆಲಿಕಾಪ್ಟರ್ ಭಾನುವಾರ ಬೆಳಗ್ಗೆ ಗೌರಿಕುಂಡದ ಬಳಿ ಪತನಗೊಂಡಿದ್ದು, ಪೈಲಟ್ ಸೇರಿ 7 ಮಂದಿ ಸಾವನ್ನಪ್ಪಿದ್ದಾರೆ. ಆರ್ಯನ್ ಏವಿಯೇಷನ್ ಕಂಪನಿಗೆ ಸೇರಿದ ಹೆಲಿಕಾಪ್ಟರ್ 6 ಪ್ರಯಾಣಿಕರನ್ನು ಗುಪ್ತಕಾಶಿಗೆ ಹೊತ್ತು ತೆರಳುತ್ತಿತ್ತು. ಗೌರಿಕುಂಡ್ ಬಳಿ ಮುಂಜಾನೆ 5.30ರ ವೇಳೆ ದಿಢೀರ್ ಪತನವಾಯಿತು. ಹವಾಮಾನ ವೈಪರೀತ್ಯದಿಂದಾಗಿ ದುರ್ಘಟನೆ ಸಂಭವಿಸಿದೆ ಎಂದು ನೋಡಲ್ ಅಧಿಕಾರಿ ರಾಹುಲ್ ಚೌಬೆ ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜವರ್ ತಿಳಿಸಿದ್ದಾರೆ. → 4

ಶನಿವಾರದ ಇರಾನ್ ಕ್ಷಿಪಣಿ ದಾಳಿಗೆ ಇಸ್ರೇಲ್ ಪ್ರಬಲ ತಿರುಗೇಟು

ಎರಡೂ ಕಡೆ ತಲಾ 10 ಮಂದಿ ಸಾವು, ನೂರಾರು ಮಂದಿಗೆ ಗಾಯ

ಇರಾನ್ ಪರಮಾಣು ಘಟಕ, ರಕ್ಷಣಾ ಕೇಂದ್ರ ಕಚೇರಿ ನಾಶ

ಟೆಹರಾನ್/ಟೆಲ್‌ಅವಿವ್: ಇರಾನ್ ಪರಮಾಣು ಕಾರ್ಯಕ್ರಮ ಕೈಗೊಳ್ಳಲು ಮುಂದಾಗಿದ್ದರಿಂದ ಕಳವಳಕ್ಕೀಡಾದ ಇಸ್ರೇಲ್ ಕಳೆದ 3 ದಿನಗಳಿಂದ ಇರಾನ್ ವಿರುದ್ಧ 'ಆಪರೇಷನ್ ರೈಸಿಂಗ್ ಲಯನ್' ಹೆಸರಲ್ಲಿ ತೀವ್ರ ಸ್ವರೂಪದ ಸೇನಾ ಕಾರ್ಯಾಚರಣೆ ಆರಂಭಿಸಿದ್ದು, 3ನೇ ದಿನವಾದ ಭಾನುವಾರ ನಡೆಸಿದ ಪ್ರಬಲ ಕ್ಷಿಪಣಿ ದಾಳಿಯಲ್ಲಿ ಇರಾನ್‌ಗೆ ದೊಡ್ಡಮಟ್ಟದ ಹಾನಿಯಾಗಿದೆ.

ಶನಿವಾರ ರಾತ್ರಿ ಇಡೀ ಇಸ್ರೇಲ್‌ನ ವಿವಿಧ ನಗರಗಳ ಮೇಲೆ ಇರಾನ್ ಕ್ಷಿಪಣಿಗಳ ಮಳೆಗೈದಿದೆ. ಪರಿಣಾಮ ಇಸ್ರೇಲ್‌ನ ವಿವಿಧ ನಗರಗಳಲ್ಲಿ ಇಬ್ಬರು ವೃದ್ಧೆಯರು ಸೇರಿದಂತೆ 8 ನಾಗರಿಕರು, ಇಬ್ಬರು ಯೋಧರು (ಒಟ್ಟು 10 ಮಂದಿ) ಸಾವಿಗೀಡಾಗಿದ್ದಾರೆ. → 4

ಆಪರೇಷನ್ ರೈಸಿಂಗ್ ಲಯನ್

'ಆಪರೇಷನ್ ರೈಸಿಂಗ್ ಲಯನ್' ಕಾರ್ಯಾಚರಣೆಯ ಉದ್ದೇಶವೇ ಇರಾನ್ ಪರಮಾಣು ಶಸ್ತ್ರಾಸ್ತ್ರಗಳ ಸಾಮರ್ಥ್ಯ ದುರ್ಬಲಗೊಳಿಸುವುದಾಗಿದೆ. ಅಲ್ಲದೇ, ಜಾಗತಿಕವಾಗಿ ಸಂಭಾವ್ಯ ಅಣ್ವಸ್ತ್ರ ದಾಳಿ ಬೆದರಿಕೆ ತಡೆಯುವುದಾಗಿದೆ ಎಂದು ಇಸ್ರೇಲ್ ಹೇಳಿಕೊಂಡಿದೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಪಡೆದರೆ ಇಸ್ರೇಲ್‌ಗೆ ಮಾತ್ರವಲ್ಲ, ಇಡೀ ಯುರೋಪ್ ಖಂಡಕ್ಕೆ ಮತ್ತು ಅಮೆರಿಕಕ್ಕೂ ಹಾನಿ ಆಗಬಹುದು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಸಿದ್ದಾರೆ. ಈ ಅಪಾಯ ತಡೆಯಲೆಂದೇ ಮುಂಜಾಗ್ರತೆ ಕ್ರಮವಾಗಿ ಆಪರೇಷನ್ ರೈಸಿಂಗ್ ಲಯನ್ ಆರಂಭಿಸಲಾಗಿದೆ ಎಂದಿದ್ದಾರೆ.

ವಿಮಾನ ದುರಂತ; 47 ಮೃತರ ಗುರುತು ಪತ್ತೆ

ಅಹಮದಾಬಾದ್: ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟವರ ಪೈಕಿ 47 ಜನರ ಗುರುತನ್ನು ಡಿಎನ್‌ಎ ಪರೀಕ್ಷೆ ಮೂಲಕ ಪತ್ತೆ ಮಾಡಲಾಗಿದ್ದು, 24 ಶವಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಇದರಲ್ಲಿ ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಮೃತದೇಹ ಕೂಡ ಇದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಏರ್‌ಇಂಡಿಯಾ ದುರಂತ

ದುರಂತದಲ್ಲಿ ಮೃತಪಟ್ಟವರ ದೇಹಗಳು ಛಿದ್ರವಾಗಿದ್ದು, ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆಗೆ ಕಳುಹಿಸಲಾಗಿತ್ತು. ಡಿಎನ್‌ಎ ಪರೀಕ್ಷೆ ಮೂಲಕ ಗುರುತು ಪತ್ತೆಯಾಗಿರುವ ಬಹುಪಾಲು ಮೃತರು ರಾಜಸ್ಥಾನ ಹಾಗೂ ಗುಜರಾತ್ ಮೂಲದವರಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. 'ಕಳೆದ ರಾತ್ರಿ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಮ್ಮ ತಂಡಗಳು ಡಿಎನ್‌ಎ ಮಾದರಿಗಳನ್ನು ಹೊಂದಿಸಲು ಅವಿಶ್ರಾಂತವಾಗಿ ಶ್ರಮಿಸಿವೆ. ಹೆಚ್ಚುವರಿಯಾಗಿ 22 ಡಿಎನ್‌ಎ ಮಾದರಿಗಳನ್ನು ಹೊಂದಿಸಲಾಗಿದೆ. ಇದುವರೆಗೆ ಒಟ್ಟು 47 ಡಿಎನ್‌ಎ ಮಾದರಿಗಳು ಹೊಂದಿಕೆಯಾಗಿವೆ ಎಂದು ಗುಜರಾತ್ ಗೃಹ ಸಚಿವ ಹರ್ಷ್ ರಮೇಶ್‌ಭಾಯ್ ಸಂಘವಿ ತಿಳಿಸಿದ್ದಾರೆ.

ದುಡಿದವರಿಗೆ ಅವಕಾಶ ನೀಡಿ

ಕೌಟುಂಬಿಕ ಕಾರಣಕ್ಕೆ ಅಥವಾ ಜಾತಿ ಕಾರಣಕ್ಕೆ ಸಚಿವ ಸ್ಥಾನ ನೀಡುವುದಕ್ಕಿಂತ ಪಕ್ಷಕ್ಕೆ ಕೊಡುಗೆ ಏನು ಎನ್ನುವ ಆಧಾರದಲ್ಲಿ ಸಚಿವ ಸ್ಥಾನ ನೀಡಬೇಕು. ಯಾವುದೇ ರಾಜಕೀಯ ಹಿನ್ನಲೆಯಿಲ್ಲದೇ ರಾಜಕೀಯಕ್ಕೆ ಧುಮುಕಿದ ನನಗೆ ಅನೇಕ ಬಾರಿ ಅನ್ಯಾಯವಾಗಿದೆ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅಭಿಪ್ರಾಯಪಟ್ಟರು. ವಿಶ್ವವಾಣಿಯೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಸ್ತರಣೆ, ಶಾಸಕರಿಗೆ ಅನುದಾನ, ಮರು ಗಣತಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ
ರಂಜಿತ್ ಎಚ್. ಅಶ್ವತ್ಥ

● ಸಚಿವ ಸಂಪುಟ ವಿಸ್ತರಣೆಯ ಕೂಗು ಹೇಗಿದೆ?
ಸಚಿವಾಕಾಂಕ್ಷಿಗಳ ಬೇಡಿಕೆ ತಪ್ಪಲ್ಲ. ಆದರೆ ಜಾತಿ, ಕುಟುಂಬದ ಆಧಾರದಲ್ಲಿ ಸಚಿವ ಸ್ಥಾನ ನೀಡುವುದಕ್ಕಿಂತ ಪಕ್ಷಕ್ಕೆ ಯಾರಿಂದ ಎಷ್ಟು ಕೊಡುಗೆ ಸಿಕ್ಕಿದೆ? ಎನ್ನುವುದನ್ನು ಗಮನಿಸಿ ನೀಡಬೇಕು. ಪಕ್ಷ ತಳಮಟ್ಟದಿಂದ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದವರಿಗೆ ಅವಕಾಶ ನೀಡುವುದು ಪಕ್ಷದ ಜವಾಬ್ದಾರಿ. ಆದರೆ ವೈಯಕ್ತಿಕವಾಗಿ ಹೇಳುವುದಾದರೆ, ನಮ್ಮ ತಂದೆ ರಾಜಕಾರಣಿಯಲ್ಲ, ಕೈಗಾರಿಕೋದ್ಯಮಿಯಲ್ಲ. ಸಾಮಾನ್ಯ ರೈತ. ಆದ್ದರಿಂದ ನನಗೆ ಹಲವು ಬಾರಿ ಅವಕಾಶ ವಂಚನೆಯಾಗಿದೆ. ವಿದ್ಯಾರ್ಥಿ ಸಂಘಟನೆಯಿಂದ ಪಕ್ಷ ದೊಂದಿಗೆ ಇದ್ದರೂ, ನನಗೆ ಸದಾಕಾಲ ವಂಚನೆಯಾಗುತ್ತಿದೆ. ಹೊರಗಿನಿಂದ ಬಂದವರಿಗೆ ಮಣೆ ಹಾಕಿರುವ ಅನೇಕ ಉದಾಹರಣೆಗಳಿವೆ. ಆದರೆ ಪಕ್ಷದ ಸಿದ್ಧಾಂತದಲ್ಲಿ ಕೆಲಸ ಮಾಡುವವರಿಗೆ ಅವಕಾಶ ಸಿಗುವ ಕೆಲಸವಾಗಬೇಕು. → 4

ಜಾರಕಿಹೊಳಿಗೆ ಹೈಕಮಾಂಡ್ ಸಂದೇಶ, ಗರಿಗೆದರಿದ ಚಟುವಟಿಕೆ, ಪದಾಧಿಕಾರಿಗಳ ಪಟ್ಟಿಗೆ ಆಪರೇಷನ್

ಕೈ ಹೊಸ ಸಾರಥಿಯ ಚಿಂತನೆ ಶುರು

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ವಿಧಾನ ಪರಿಷತ್‌ಗೆ ನಾಲ್ವರು ಪರಿಣತರನ್ನು ನಾಮಕರಣ ಮಾಡುವುದಕ್ಕೆ ಸಂಬಂಧಿಸಿದ ಪಟ್ಟಿ ಪರಿಷ್ಕರಣೆ ಆಗುತ್ತಿರುವಾಗಲೇ ಕಾಂಗ್ರೆಸ್‌ನಲ್ಲಿ ಬದಲಾವಣೆ ಚರ್ಚೆಗಳು ಆರಂಭವಾಗಿವೆ. ಅಂದಹಾಗೆ ಇದು ಪದಾಧಿಕಾರಿಗಳ ನೇಮಕ ವಿಚಾರ. ಅಷ್ಟೇ ಅಲ್ಲ, ಹೊಸ ಅಧ್ಯಕ್ಷರ ವಿಚಾರವೂ ಇದರಲ್ಲಿ ಸೇರಿಕೊಂಡಿದೆ ಎನ್ನಲಾಗಿದೆ.

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪಕ್ಷದ ವರಿಷ್ಠರೊಂದಿಗೆ ಈ ವಿಚಾರ ಚರ್ಚೆ ನಡೆಸಲಾಗಿದ್ದು, 'ಇನ್ನೆರಡು 3 ತಿಂಗಳಲ್ಲಿ ಕೆಪಿಸಿಸಿ ಹೊಸ ಅಧ್ಯಕ್ಷರನ್ನು ನೇಮಕ ಮಾಡಬೇಕಾಗುತ್ತದೆ' ಎಂದು ಪಕ್ಷದ ವರಿಷ್ಠರು ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಇದೇ ವೇಳೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರೂ ದೆಹಲಿಗೆ ಭೇಟಿ ಮಾಡಿ ಬಂದಿದ್ದು, ಹೈಕಮಾಂಡ್‌ನ ಅನೇಕ ನಾಯಕರ ಜತೆ ಮಾತನಾಡಿ ಬಂದಿದ್ದಾರೆ. ಈ ವೇಳೆ 'ಮೂರು ಅಥವಾ ನಾಲ್ಕು ತಿಂಗಳು ಕಾಯಿರಿ. ನಂತರ ಬದಲಾವಣೆ ಮಾಡೋಣ' ಎಂದು ವರಿಷ್ಠರು ಭರವಸೆ ನೀಡಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರ ವಿಚಾರವಾಗಿ ಬಹಿರಂಗವಾಗಿ ಮಾತನಾಡುವುದನ್ನು ನಿಲ್ಲಿಸಿದ್ದು, ಮುಂದೆ ಪಕ್ಷದ ಸಾರಥ್ಯ ವಹಿಸಲು ಬೇಕಾದ ನಾಯಕರು, ಶಾಸಕರು ಮತ್ತು ಪಕ್ಷದ ಪದಾಧಿಕಾರಿಗಳ ಜತೆ ಸಂವಾದ ನಡೆಸುತ್ತಾ ಮಾನಸಿಕವಾಗಿ ಸಿದ್ಧರಾಗುತ್ತಿದ್ದಾರೆ. → 4

ಸತೀಶ್ ಮೇಲೆ ಒಲವು

ಕೆಪಿಸಿಸಿ ಹುದ್ದೆ ಜತೆಗೆ ಮಂತ್ರಿ ಸ್ಥಾನವನ್ನೂ ಉಳಿಸಿಕೊಡಿ ಎಂದು ಉಳಿದ ಆಕಾಂಕ್ಷಿಗಳು ಬೇಡಿಕೆ ಇಟ್ಟಿದ್ದು, ಸತೀಶ್ ಜಾರಕಿ ಹೊಳಿ ಮಾತ್ರ ನನಗೆ ಕೆಪಿಸಿಸಿ ಹುದ್ದೆ ನೀಡಿದರೆ, ಸಚಿವ ಸ್ಥಾನ ತ್ಯಾಗ ಮಾಡಲು ಸಿದ್ಧ ಎಂದು ಪಕ್ಷದ ವರಿಷ್ಠರಿಗೆ ಸ್ಪಷ್ಟವಾಗಿ ಹೇಳಿ ಬಂದಿದ್ದಾರೆ. ಹೀಗಾಗಿ ಪಕ್ಷದ ವರಿಷ್ಠರು ಸಚಿವ ಸ್ಥಾನ ತ್ಯಾಗ ಮಾಡುವವರ ಕಡೆ ಒಲವು ತೋರಿದ್ದಾರೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಸುಪಾರಿ ನೀಡಿ ಗೆಳೆಯನ ಸುಲಿಗೆ

ಬೆಂಗಳೂರು: ಪಾರ್ಟಿ ಮಾಡಲು ಪಬ್‌ಗೆ ಕರೆಸಿ, ಸುಪಾರಿ ನೀಡಿ ಗೆಳೆಯನ ಸುಲಿಗೆ ಮಾಡಿಸಿರುವ ಘಟನೆಯೊಂದು ಬೆಂಗಳೂ ರಿನ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆ ದಿದೆ. ಚಂದನ್ ಸುಲಿಗೆಗೆ ಒಳಗಾದ ಯುವಕ. ಚಂದನ್‌ಗೆ ಪವನ್ ಮತ್ತು ಅಚಲ್ ಎಂಬ ಇಬ್ಬರು ಸ್ನೇಹಿತರಿದ್ದರು. ಚಂದನ್ ಆರ್ಥಿಕವಾಗಿ ಚೆನ್ನಾಗಿದ್ದ. ಕಳೆದ ಮೇ 1ರಂದು ಚಂದನ್‌ಗೆ ಇಬ್ಬರು ಸ್ನೇಹಿತರು ಕರೆ ಮಾಡಿ ಚಿಕ್ಕಜಾಲ ಬಳಿಯ ಪಬ್‌ಗೆ ಬರಲು ಹೇಳಿದ್ದರು. ತಡರಾತ್ರಿ ತನಕ ಅಚಲ್ ಮತ್ತು ಪವನ್, ಚಂದನ್ ಮೂವರು ಸೇರಿ ಪಾರ್ಟಿ ಮಾಡಿದ್ದರು. ನಂತರ ಜಾಲಿ ರೈಡ್ ಹೋಗೋಣ ಎಂದು ಚಂದನ್ ಕಾರಿನಲ್ಲೇ ಏರ್ಪೋರ್ಟ್ ಕಡೆಗೆ ಹೊರಟಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕಾರಿನಲ್ಲಿದ್ದ ಮೂವರ ಮೇಲೂ ಹಲ್ಲೆ ಮಾಡಿ ಚಂದನ್ ಬಳಿಯಿದ್ದ 3 ಲಕ್ಷ ಮೌಲ್ಯದ ಚಿನ್ನ, ನಗದು ದೋಚಿ ಪರಾರಿ ಆಗಿದ್ದರು. ಈ ವೇಳೆ ಜತೆಗಿದ್ದ ಅಚಲ್ ಮತ್ತು ಪವನ್ ಪೊಲೀಸರಿಗೆ ದೂರು ನೀಡೋದು ಬೇಡ ಎಂದು ಚಂದನ್ ಮನವೊಲಿಸಿದ್ದರು. ಇದಾದ 1 ವಾರದ ನಂತರದ ಘಟನೆ ಬಗ್ಗೆ ಅನುಮಾನಗೊಂಡ ಚಂದನ್ ಪೊಲೀಸರಿಗೆ ದೂರು ನೀಡಿದ್ದ. ಪೊಲೀಸ್ ತನಿಖೆಯಲ್ಲಿ ಜತೆಗಿದ್ದ ಸ್ನೇಹಿತರೇ ಸುಪಾರಿ ನೀಡಿ, ಸುಲಿಗೆ ಮಾಡಿಸಿರುವುದು ಗೊತ್ತಾಗಿದೆ. ಸದ್ಯ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಕುಡಿದು ಸಿಬ್ಬಂದಿ ಕರ್ತವ್ಯ ನಿರ್ವಹಣೆ: ಅಮಾನತು

ಬೆಂಗಳೂರು: ಮದ್ಯ ಸೇವಿಸಿ ಕರ್ತವ್ಯ ನಿರ್ವಹಿಸಿದ 19 ನೌಕರರನ್ನು ಕಳೆದ ಆರು ತಿಂಗಳಲ್ಲಿ ಬಿಎಂಟಿಸಿ ಅಮಾನತು ಮಾಡಿದೆ. ಕುಡಿದು ವಾಹನ ಚಲಾಯಿಸುವುದು ಮತ್ತು ಕರ್ತವ್ಯದಲ್ಲಿರುವಾಗ ಮದ್ಯ ಸೇವಿಸಿರುವುದನ್ನು ಪತ್ತೆ ಹಚ್ಚಲು ಬಿಎಂಟಿಸಿಯ ಸಾರಥಿ ಸ್ಕ್ವಾಡ್' ಮತ್ತು ಭದ್ರತಾ ತಂಡ' ಕಾರ್ಯನಿರ್ವಹಿಸುತ್ತಿವೆ. ಆರು ತಿಂಗಳಲ್ಲಿ ವಿವಿಧೆಡೆ ಪರಿಶೀಲನೆ ನಡೆಸಿದಾಗ ಇಬ್ಬರು ಚಾಲಕರು ಮದ್ಯ ಕುಡಿದು ಬಸ್ ಚಲಾಯಿಸುತ್ತಿರುವುದು ಕಂಡು ಬಂದಿದೆ. ಇದಲ್ಲದೆ ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಸೇರಿ ಒಟ್ಟು 17 ನೌಕರರು ಕರ್ತವ್ಯದ ವೇಳೆ ಮದ್ಯ ಸೇವಿಸಿರುವುದು ಪತ್ತೆಯಾಗಿದೆ. ಕೆಲವು ಪ್ರಕರಣಗಳನ್ನು ಗಂಭೀರ ಎಂದು ಪರಿಗಣಿಸಲಾಗುತ್ತದೆ. ಮದ್ಯ ಸೇವಿಸಿ ಕರ್ತವ್ಯ ನಿರ್ವಹಿಸುವುದು, ಟಿಕೆಟ್ ನೀಡದೇ 100ಕ್ಕಿಂತ ಅಧಿಕ ವಂಚನೆ ಮಾಡುವುದೆಲ್ಲ ಇದರಲ್ಲಿ ಒಳಗೊಂಡಿದೆ. ಗಂಭೀರ ಸ್ವರೂಪದ ಪ್ರಕರಣ ಪತ್ತೆಯಾದ ತಕ್ಷಣವೇ ಅಂಥವರನ್ನು ಅಮಾನತು ಮಾಡಲಾಗುತ್ತದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಹೃದಯಿ ಸಾಹಿತಿ ಎಚ್‌ಎಸ್‌ವಿ

ಕೆಂಗೇರಿ: ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಛಾಪು ಮೂಡಿಸಿದ್ದ ಎಚ್.ಎಸ್.ವೆಂಕಟೇಶಮೂರ್ತಿ ಅವರು, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದ ಸಹೃದಯಿಯಾಗಿದ್ದರು ಎಂದು ಕವಿ ಬಿ.ಆರ್.ಲಕ್ಷ್ಮಣರಾವ್ ಸ್ಮರಿಸಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇಲ್ಲಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಎಚ್.ಎಸ್.ವೆಂಕಟೇಶಮೂರ್ತಿ ನುಡಿ ನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗ್ರಾಮೀಣ ಹಿನ್ನೆಲೆಯಿಂದ ಬಂದ ಎಚ್‌ಎಸ್‌ವಿ, ಸಾಹಿತ್ಯ ಲೋಕದಲ್ಲಿ ತಮ್ಮ ಅಗಾಧ ಪ್ರತಿಭೆ ಹಾಗೂ ಪರಿಶ್ರಮದಿಂದ ಯಾವುದೇ ಬೆಂಬಲವಿಲ್ಲದೆ ಬೆಳೆದು ಬಂದರು ಎಂದು ಶ್ಲಾಘಿಸಿದರು.

ರಂಗಕರ್ಮಿ ಶ್ರೀನಿವಾಸ್ ಜಿ ಕಪ್ಪಣ್ಣ ಮಾತನಾಡಿ, ಸಹಕಾರ ಮನೋಭಾವ ಹೊಂದಿದ್ದ ಎಚ್‌ಎಸ್‌ವಿ, ಕಲಾವಿದನ ಸೃಜನಶೀಲತೆಗೂ ಮನ್ನಣೆ ನೀಡಿ ಬದಲಾವಣೆಗೆ ಮುಕ್ತ ಅವಕಾಶ ನೀಡುತ್ತಿದ್ದರು' ಎಂದು ನೆನಪಿಸಿಕೊಂಡರು. ಬೆಂಗಳೂರು ನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ ಮಾತನಾಡಿದರು.

ಸಣ್ಣ ಸಮಾಜಗಳೂ ಆರ್ಥಿಕವಾಗಿ ಮೇಲೆ ಬರಬೇಕು: ಸಿಎಂ | ಜಾತಿ, ಧರ್ಮವೆಲ್ಲ ಮನೆಯೊಳಗೆ ಆಚರಣೆಯಾಗಲಿ

ಮೆಟ್ರೋಗೆ ಕಾರ್ಯಪ್ಪ ಹೆಸರು: ಸಂಪುಟದಲ್ಲಿ ಚರ್ಚೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ಮೆಟ್ರೋದ ಒಂದು ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಹೆಸರನ್ನು ಇಡುವ ಸಂಬಂಧ ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

ವಸಂತನಗರದ ಕೊಡವ ಸಭಾಂಗಣದಲ್ಲಿ ಕೊಡವ ಸಮಾಜದ ಸನ್ಮಾನ ಕಾರ್ಯಕ್ರಮದಲ್ಲಿ ಈ ಪ್ರಸ್ತಾಪವನ್ನು ಕೊಡವ ಸಮುದಾಯದವರು ಮಾಡಿದರು. ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿದ ಸಿಎಂ, ಡಿಸಿಎಂ ಈ ಬಗ್ಗೆ ಸಂಪುಟದಲ್ಲಿ ಚರ್ಚಿಸುವುದಾಗಿ ಹೇಳಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೊಡವ ಸಮಾಜ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರಾದರೂ ದೇಶ ಸೇವೆಯಲ್ಲಿ ಇವರಿಗೆ ಸರಿಸಮಾನವಾದವರು ಬೇರೆ ಇಲ್ಲ. ಸಂಸ್ಕೃತಿ, ಶಿಸ್ತಿನಲ್ಲಿ ಕೊಡವರು ಮುಂಚೂಣಿಯಲ್ಲಿದ್ದಾರೆ. ಸೈನ್ಯಕ್ಕೆ, ದೇಶ ರಕ್ಷಣೆಗೆ, ಕ್ರೀಡೆಗೆ, ರಾಜಕಾರಣಕ್ಕೆ ಕೊಡವರ ಕೊಡವರ ಕೊಡುಗೆ ಅಪಾರ. ಎ.ಕೆ.ಸುಬ್ಬಯ್ಯ ಮತ್ತು ಎಂ.ಸಿ.ನಾಣಯ್ಯ ಉತ್ತಮ ಸಂಸದೀಯ ಪಟುಗಳು. ಇವರು ಸದನದಲ್ಲಿ ಸಮಾಜಮುಖಿಯಾಗಿ ಮಾತನಾಡಿದ ಫೈರ್ ಬ್ರಾಂಡ್ ಗಳು. ಪೊನ್ನಣ್ಣ ಅವರಿಗೂ ಫೈರ್ ಬ್ರಾಂಡ್ ಆಗುವ ಎಲ್ಲಾ ಲಕ್ಷಣಗಳೂ ಇವೆ ಎಂದರು. ಯಾವುದೇ ಸಮುದಾಯಗಳು ಜಾಗ ಕೇಳಿದರೂ ಗೈಡೆನ್ಸ್ ಬೆಲೆಯಲ್ಲಿ ಶೇ.10 ರಷ್ಟು ಬೆಲೆಗೆ ಕೊಡಬೇಕು ಎಂದು ಕಂದಾಯ ಸಚಿವರಿಗೆ ಸೂಚಿಸಿದ್ದೇನೆ. ಅದರಂತೆ ಕೊಡವ ಸಮಾಜಕ್ಕೂ ನೀಡಿದ್ದೇವೆ ಎಂದರು. ನಾವೆಲ್ಲರೂ ಭಾರತೀಯರು ಮತ್ತು ಕನ್ನಡಿಗರು. ದೇಶ ರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಕೊಡವರು ಜಾತಿ-ಧರ್ಮ ಮಾಡುವವರಲ್ಲ. ಎಲ್ಲರನ್ನೂ ಭಾರತೀಯರು ಎಂದು ಗೌರವಿಸುವವರು ಎಂದರು.

ಕಾರ್ಯಪ್ಪ ಹೆಸರಿಡುವುದು ನಮ್ಮ ಭಾಗ್ಯ: ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೆಟ್ರೋ ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಹೆಸರಿಡುವ ಬಗ್ಗೆ ನಾನು ಹಾಗೂ ಮುಖ್ಯಮಂತ್ರಿಗಳು ಚರ್ಚೆ ಮಾಡಿ ತೀರ್ಮಾನಿಸುತ್ತೇವೆ. ಕಾರ್ಯಪ್ಪ ಅವರ ಹೆಸರಿಡುವುದು ನಮ್ಮ ಭಾಗ್ಯ. ಈ ವಿಚಾರವಾಗಿ ನಾವು ಮುಕ್ತ ಮನಸ್ಸು ಹೊಂದಿದ್ದೇವೆ. ಕಾಂಗ್ರೆಸ್ ಸರಕಾರ ಕಾರ್ಯಪ್ಪ ಅವರ ಹೆಸರನ್ನು ಉಳಿಸುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು. ಮನುಷ್ಯನಿಗೆ ಮುತ್ತುರತ್ನ ಶೋಭೆ ತರುವಂತೆ ಇಡೀ ದೇಶಕ್ಕೆ ಕೊಡಗು ಹಾಗೂ ಕೊಡವರು ಆಭರಣವಿದ್ದಂತೆ. ಇತಿಹಾಸ ನೋಡಿದಾಗ ನಿಮಗೆ ಯಾವುದೇ ಜವಾಬ್ದಾರಿ ಕೊಟ್ಟರೂ ಅದನ್ನು ಸಮ ರ್ಥವಾಗಿ ನಿಭಾಯಿಸಿದ್ದೀರಿ. ರಾಜಕೀಯ ಮಾತ್ರವಲ್ಲ ಕ್ರೀಡೆ, ಕಾನೂನು ವ್ಯವಸ್ಥೆ, ಸೇನೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕೊಡವರ ಕೊಡುಗೆ ಅಪಾರ. ದೇಶದ ಸ್ವಾತಂತ್ರ್ಯ ಹೋರಾಟಕ್ಕೂ ನಿಮ್ಮ ಕೊಡುಗೆಯಿದೆ.

ಸಂಸ್ಕೃತಿ ಹಾಗೂ ಪರಂಪರೆಗಳನ್ನು ನಾವು ಹಾಳು ಮಾಡಿಕೊಳ್ಳಬಾರದು ಎಂಬುದು ನಮ್ಮ ಬಯಕೆ. ಕೊಡವ ಸಮಾಜಕ್ಕೆ ನೀಡಲಾಗಿರುವ 7 ಎಕರೆ ಜಮೀನಿಗೆ 30-40 ಕೋಟಿ ಕಡಿಮೆ ಮಾಡಿರುವುದು ದೊಡ್ಡ ವಿಚಾರವಲ್ಲ, ಇದಕ್ಕಿಂತ ನಿಮ್ಮ ತ್ಯಾಗ, ಪರಿಶ್ರಮ, ಶಿಸ್ತು ದೊಡ್ಡದು ಎಂದು ತಿಳಿಸಿದರು. ಕಾರ್ಯಕ್ರಮ ದಲ್ಲಿ ಸಚಿವರಾದ ಕೆ.ಜೆ.ಜಾರ್ಜ್, ಬೈರತಿ ಸುರೇಶ್, ಕೃಷ್ಣಬೈರೇಗೌಡ ಹಾಗೂ ಶಾಸಕರೂ ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಪೊನ್ನಣ್ಣ ಹಾಗೂ ಶಾಸಕ ಮಂಥರ್ ಗೌಡ ಅವರು ಉಪಸ್ಥಿತರಿದ್ದರು.

ವಸಂತನಗರದ ಕೊಡವ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೊಡವ ಸಮಾಜದ ಮುಖಂಡರು ಸನ್ಮಾನಿಸಿದರು.

> ಕಾಂಗ್ರೆಸ್ ಪಕ್ಷದ ಸಂಸ್ಕೃತಿ ಕೂಡ ಸರ್ವರಿಗೂ ಸಮಾನವಾಗಿ ಕಾಣುವುದಾಗಿದೆ. ಎಲ್ಲಾ ಜಾತಿ, ಎಲ್ಲಾ ಧರ್ಮದವರನ್ನೂ ಭಾರತೀಯರು, ಭಾರತೀಯ ಪ್ರಜೆಗಳು ಎಂದು ಕಾಂಗ್ರೆಸ್ ಪರಿಗಣಿಸುತ್ತದೆ.ಜಾತಿ ಇರಲಿ, ಧರ್ಮ ಇರಲಿ ಅದೆಲ್ಲಾ ಮನೆಯೊಳಗೆ ಆಚರಣೆಯಾಗಲಿ. ಹೊರಗೆ ಬಂದ ಕೂಡಲೇ ನಾವೆಲ್ಲರೂ ಒಂದೇ, ನಾವು ಭಾರತೀಯರಾಗಬೇಕು.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ನಮ್ಮ ಸರಕಾರ ಕೊಡವರಿಗೆ ಅನೇಕ ಕಾರ್ಯಕ್ರಮ ಕೊಟ್ಟಿದೆ. ಸೇನೆಯಲ್ಲಿ ಸೇವೆ ಸಲ್ಲಿಸಿ ಬಂದವರಿಗೆ ಭೂಮಿ ಕೊಟ್ಟಿದೆ. ಕೊಡವರನ್ನು ರಾಜ್ಯಸಭೆ ಸದಸ್ಯರನ್ನಾಗಿ ಮಾಡಿದ್ದೇವೆ, ಮೂರ್ನಾಲ್ಕು ನಾಯಕರನ್ನು ಶಾಸಕರನ್ನಾಗಿ ಮಾಡಿದ್ದೇವೆ. ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ. ರಾಜಕೀಯದಲ್ಲಿ ನಿಮ್ಮ ಧ್ವನಿ ಇರಬೇಕು ಎಂದು ಹಲವು ತೀರ್ಮಾನ ಮಾಡಿದ್ದೇವೆ. ಈ ಇತಿಹಾಸವನ್ನು ಅರಿತು ನೀವು ನಮ್ಮ ಪರವಾಗಿ ನಿಲ್ಲಬೇಕು. ನಾವು ನಿಮ್ಮ ಜತೆ ಇದ್ದೇವೆ, ನೀವು ನಮ್ಮ ಜತೆ ನಿಂತು ನಮ್ಮ ಕೈಗೆ ಶಕ್ತಿ ತುಂಬಬೇಕು.
>
> - ಡಿ.ಕೆ.ಶಿವಕುಮಾರ್,ಉಪಮುಖ್ಯಮಂತ್ರಿ

ಹಿಂದೂಗಳಿಗೆ ರಕ್ಷಣೆ ನೀಡದಿದ್ದರೆ ಹೋರಾಟ

ಬೆಂಗಳೂರು: ಕರ್ನಾಟಕದಲ್ಲಿ ಇತ್ತೀಚಿನ ದಿನದಲ್ಲಿ ಹಿಂದೂ ಧರ್ಮದ ಮೇಲೆ ಆಕ್ರಮಣ ನಡೆಯುತ್ತಿದೆ. ಇದನ್ನು ನಿಯಂತ್ರಿಸದಿದ್ದರೆ ಮುಂದಿನ ದಿನದಲ್ಲಿ ಉಗ್ರ ಹೋರಾಟ ನಡೆಸುವ ತೀರ್ಮಾನವನ್ನು ಹಿಂದೂ ಸಂಘಟನೆಗಳ ಒಕ್ಕೂಟ ತೀರ್ಮಾನಿಸಿದೆ.

ಬೆಂಗಳೂರುನಲ್ಲಿ 25ಕ್ಕೂ ಹೆಚ್ಚು ಹಿಂದೂ ಪರ ಸಂಘಟನೆಗಳ ಪ್ರಮುಖರು ಸಭೆ ನಡೆಸಿ, ಒಮ್ಮತ ಅಭಿಪ್ರಾಯದಿಂದ ಸಮಸ್ತ ಹಿಂದೂ ಸಂಸ್ಥೆಗಳ ಒಕ್ಕೂಟ ರಚನೆ ಮಾಡಲು ನಿರ್ಣಯ ಮಾಡಲಾಗಿದೆ. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಹಿಂದೂತ್ವಕ್ಕಾಗಿ ಕಾರ್ಯ ಮಾಡುವ 25 ಕ್ಕೂ ಹೆಚ್ಚು ಹಿಂದೂ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಹಿಂದೂಪರ-ದೇಶಪರ ಹೋರಾಟ ಮಾಡುವ ಕಾರ್ಯಕರ್ತರಿಗೆ ಗಂಭೀರ ಸ್ವರೂಪದ ಸಮಸ್ಯೆಗಳಾದಾಗ ಅವರಿಗೆ ನೈತಿಕ ಬೆಂಬಲ,ಕಾನೂನು ಬೆಂಬಲ, ಅಗತ್ಯವಿದ್ದಾಗ ಆರ್ಥಿಕ ಬೆಂಬಲವೂ ಸಹ ನೀಡುವ ಮೂಲಕ ರಕ್ಷಣೆಗೆ ಧಾವಿಸುವುದು. ಯಾವುದೇ ಸರಕಾರ, ವ್ಯಕ್ತಿಗಳು, ಹಿಂದೂಪರ ಹೋರಾಟ ಮಾಡುವ ಕಾರ್ಯ ಕರ್ತರಿಗೆ ಅಥವಾ ಸಂಘಟನೆಗಳಿಗೆ ದುರದ್ದೇಶಪೂರಿತವಾಗಿ ಕಾರ್ಯಕರ್ತರ ನೈತಿಕ ಶಕ್ತಿಯನ್ನು ಕುಗ್ಗಿಸಲು ಸುಳ್ಳು ಆಪಾದನೆ ಮೂಲಕ ಅವರಿಗೆ ಕಾನೂನು ದುರುಪಯೋಗಪಡಿಸಿಕೊಂಡು ಹೋರಾಟ ನಡೆಸುವ ಎಚ್ಚರಿಕೆ ನೀಡಿದರು.

ಪ್ರಸ್ತುತದಲ್ಲಿ ಧರ್ಮಪರ ಹೋರಾಟ ನಡೆಸಿ ಕಾನೂನು ತೊಂದರೆಗೆ ಸಿಲುಕಿ ಶಿಕ್ಷೆ ಅನುಭವಿಸುತ್ತಿರುವ ಕಾರ್ಯಕರ್ತರಿಗೂ ಸಹ ಕಾನೂನು ನೆರವು ನೀಡಿ ಅವರ ಜತೆಗೆ ಅವರ ಕುಟುಂಬಕ್ಕೆ ವ್ಯಾಪಾರ ವ್ಯವಹಾರ ಹುದ್ದೆಗಳ ಮೂಲಕ ಆರ್ಥಿಕ ಶಕ್ತಿ ತುಂಬಿ ಕುಟುಂಬವನ್ನು ಸಂರಕ್ಷಿಸುವುದು. ಪ್ರಸ್ತುತ ರಾಜ್ಯ ಸರಕಾರ ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ಸುಳ್ಳು ದೂರಗಳನ್ನು ದಾಖಲಿಸಿ ರೌಡಿ ಹಾಳೆ ಕರೆದು ಗಡಿಪಾರು ಆದೇಶಗಳನ್ನು ಮಾಡು ತ್ತಿರುವ ಕ್ರಮಕ್ಕೆ ಒಕ್ಕೂಟವು ತೀವ್ರವಾಗಿ ಖಂಡಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಟನಲ್

ಟನಲ್ ರಸ್ತೆ ನಿರ್ಮಾಣಕ್ಕೆ ಜಾಗತಿಕ ಟೆಂಡರ್‌ಗೆ ಸಜ್ಜು

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆ ಹಾಗೂ ಸಂಚಾರ ದಟ್ಟಣೆ ನಿರ್ವಹಣೆಗಾಗಿ ಅವಳಿ ಅಂಡರ್ ಗ್ರೌಂಡ್ ಮಾರ್ಗ ನಿರ್ಮಾಣಕ್ಕೆ ಪಾಲಿಕೆಯು ಜಾಗತಿಕ ಟೆಂಡರ್ ಆಹ್ವಾನಿಸಲು ದಾಖಲೆಗಳನ್ನು ಸಿದ್ಧಪಡಿಸಿಕೊಂಡಿದೆ.

ಹೆಬ್ಬಾಳದ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 16.745ಕಿ.ಮೀ ಉದ್ದದ ಸುಧಾರಿತ ಒಟಿಟಿ ಮಾದರಿಯ ಟ್ವಿನ್ ಟ್ಯೂಬ್ ಮಾದರಿಯ ಸುರಂಗ ಮಾರ್ಗ ನಿರ್ಮಿಸಲು ನಿರ್ಧರಿಸಲಾ ಗಿದ್ದು, ಸಚಿವ ಸಂಪುಟ ಸಭೆಯೂ ಈ ಕಾಮಗಾರಿಗೆ ಅನುಮತಿಯನ್ನು ನೀಡಿದೆ. ಈ ಹಿನ್ನೆಲೆ ಪಾಲಿಕೆಯು ಎರಡು ಪ್ಯಾಕೇಜ್‌ಗಳಲ್ಲಿ ಅಂಡರ್‌ಗ್ರೌಂಡ್ ನಿರ್ಮಾಣಕ್ಕೆ ಟೆಂಡರ್ ಕರೆಯಲು ಪೂರ್ವಭಾವಿ ಸಿದ್ಧತೆಯನ್ನು ನಡೆಸಿದೆ. ಸುರಂಗ ಮಾರ್ಗ ನಿರ್ಮಾಣದ ಯೋಜನೆಗಾಗಿ ಎರಡು ಪ್ಯಾಕೇಜ್‌ಗಳನ್ನು ಮಾಡಲಾಗಿದ್ದು, ಹೆಚ್ಚಿನ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲಿದೆ. ಈ ಹಿನ್ನೆಲೆ ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಂಗಡಿಸಿ 2 ಪ್ಯಾಕೇಜ್‌ಗಳಡಿ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಪ್ಯಾಕೇಜ್-1ರಡಿ (ಉತ್ತರ) ಹೆಬ್ಬಾಳದ ಎಸ್ಟಿಮ್ ಮಾಲ್ ಜಂಕ್ಷನ್‌ನಿಂದ ಶೇಷಾದ್ರಿ ರಸ್ತೆವರೆಗೆ 8.748 ಕಿ.ಮೀ. ಹಾಗೂ ಪ್ಯಾಕೇಜ್-2ರಲ್ಲಿ ಶೇಷಾದ್ರಿ ರಸ್ತೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ 8.748 ಕಿ.ಮೀ. ಉದ್ದದ ಸುರಂಗ ನಿರ್ಮಿಸಲಾಗುತ್ತದೆ. ಪಾಲಿಕೆ ವ್ಯಾಪ್ತಿಯ ಹೆಬ್ಬಾಳದ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆ ಯನ್ನು ಎರಡು ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲು ಸಿದ್ಧಪಡಿಸಿರುವ 17,780 ಕೋಟಿ ರು. ಅಂದಾಜು ವೆಚ್ಚಕ್ಕೆ ಸಚಿವ ಸಂಪುಟವು ಅನುಮೋದನೆ ನೀಡಿದೆ.

38 ತಿಂಗಳಲ್ಲಿ ಕಾಮಗಾರಿ ಪೂರ್ಣ: ಅವಳಿ ಭೂಗತ ಸುರಂಗ ಮಾರ್ಗ 33.490 ಕಿ.ಮೀ. ಉದ್ದವಿರಲಿದೆ. ಜೋಡಿ ಸುರಂಗವನ್ನು 26 ತಿಂಗಳಲ್ಲಿ ಕೊರೆದು, ಆನಂತರ 12 ತಿಂಗಳೊಳಗೆ ನಿರ್ಮಾಣ ಯೋಜನೆಯನ್ನು ಪೂರ್ಣ ಗೊಳಿಸಲು ಉದ್ದೇಶಿಸಲಾಗಿದೆ. ಸುರಂಗ ಕೊರೆಯುವುದ ಕ್ಕಾಗಿ 8 ಟನಲ್ ಬೋರಿಂಗ್ ಮೆಷಿನ್‌ಗಳನ್ನು (ಟಿಬಿಎಂ) ಬಳಸಿಕೊಳ್ಳಲಾಗುತ್ತಿದೆ. ಪ್ರತಿಯೊಂದು ಟಿಬಿಎಂ ವಾರ್ಷಿಕ 2 ಕಿ.ಮೀ. ಉದ್ದದಷ್ಟು ಸುರಂಗ ಕೊರೆಯಲಿವೆ. ಮಹಾನಗರದಲ್ಲಿನ ಭೂಮಿಯ ಅಲಭ್ಯತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ತೊಡಕುಗಳ ಕಾರಣದಿಂದಾಗಿ ಅಸ್ತಿತ್ವ ದಲ್ಲಿರುವ ರಸ್ತೆಗಳ ವಿಸ್ತರಣೆಯು ಅತ್ಯಂತ ಕಷ್ಟಕರವಾಗಿದೆ. ಹೀಗಾಗಿ, ನಗರದ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು ಸುರಂಗ ರಸ್ತೆ ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಯಿತು.

> **ಕಿಲೋ ಮೀಟರ್‌ಗೆ 19 ರು. ಟೋಲ್**
>
> ವಾಹನಗಳಿಗೆ ಏಕ ಸಂಚಾರದ ಪೂರ್ಣ ಉದ್ದದ ಸುರಂಗ ಮಾರ್ಗ ಬಳಕೆಗೆ ಪ್ರತಿ ಕಿ.ಮೀ.ಗೆ ಕನಿಷ್ಠ 19 ರು. ಟೋಲ್ ಶುಲ್ಕ ನಿಗದಿಪಡಿಸಲು ಚಿಂತಿಸ ಲಾಗಿದೆ. ಮುಂಬೈ ನಗರದ ಟ್ರಾನ್ಸ್ ಹಾರ್ಬರ್ ಮೇಲ್ಸೇತುವೆಯಲ್ಲಿ 22 ಕಿ.ಮೀ.ಗೆ 250 ರು. ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. ಈ ಹಿನ್ನೆಲೆ ಉದ್ದೇಶಿತ ಟನಲ್ ರಸ್ತೆಯಲ್ಲಿ ಪ್ರತಿ ಕಿ.ಮೀ.ಗೆ 2029-2030ರ ಅವಧಿಗೆ 19 ರು. ಟೋಲ್ ವಸೂಲು ಮಾಡುವುದು ಸಮಂಜಸವೆಂದು ಅಭಿಪ್ರಾಯಿಸಲಾಗಿದೆ. ಗುತ್ತಿಗೆ ಪಡೆಯುವ ಕಂಪನಿಗೆ 30 ವರ್ಷಗಳ ಕಾಲ ಸುರಂಗ ರಸ್ತೆಯಲ್ಲಿ ಟೋಲ್ ಸಂಗ್ರಹಿಸಲು ಅವಕಾಶ ಮಾಡಿಕೊಡಲಾಗುತ್ತಿದೆ.

ಅಪ್ಪನ ಜನ್ಮದಿನದಂದೇ ಮಗನಿಗೆ ಅವಘಡ

ಕೊಂಬೆ ಬಿದ್ದು ಯುವಕನ ಸ್ಥಿತಿ ಗಂಭೀರ

ಬೆಂಗಳೂರು: ಬನಶಂಕರಿ 2ನೇ ಹಂತದ ಶ್ರೀನಿವಾಸನಗರದಲ್ಲಿ ಬಳಿ ಭಾನುವಾರ ಒಣಗಿದ ಮರದ ಕೊಂಬೆ ಮುರಿದು ಬಿದ್ದು ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಜಯನಗರದ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಕ್ಷಯ್ (29) ಗಾಯಗೊಂಡ ಯುವಕ. ಅಕ್ಷಯ್ ತಂದೆಯ ಹುಟ್ಟುಹಬ್ಬ. ಹುಟ್ಟುಹಬ್ಬದ ಸಂಭ್ರಮದಲ್ಲಿದ್ದ ಅಕ್ಷಯ್ ಮಟನ್ ತರಲು ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ದುರ್ಘಟನೆ ನಡೆದಿದೆ. ಅಕ್ಷಯ್ ಚಿಕಿತ್ಸಾ ವೆಚ್ಚ ಇದುವರೆಗೆ 1.35 ಲಕ್ಷ ರುಪಾಯಿ ಆಗಿದ್ದು, ಕುಟುಂಬಸ್ಥರು ಬಿಲ್ ಪಾವತಿಸಲು ಹಣವಿಲ್ಲದೆ ಪರದಾಡುತ್ತಿದ್ದಾರೆ. ಒಂದು ವರ್ಷದ ಹಿಂದೆ ಅಕ್ಷಯ್ ತಾಯಿ ಮೃತಪಟ್ಟಿದ್ದಾರೆ. ಅಕ್ಷಯ್ ತಂದೆ ಡಯಾಲಿಸಿಸ್ ರೋಗಿಯಾಗಿದ್ದಾರೆ. ಅಕ್ಷಯ್ ದುಡಿದು ಮನೆ ನಡೆಸುವುದರ ಜತೆಗೆ ತಂದೆಗೆ ಚಿಕಿತ್ಸೆ ಸಹ ಕೊಡಿಸುತ್ತಿದ್ದರು. ಇದೀಗ ಅಕ್ಷಯ್ ಆಸ್ಪತ್ರೆ ಪಾಲಾಗಿರುವುದರಿಂದ ಕುಟುಂಬ ಕಂಗಾಲಾಗಿದೆ. ಆಸ್ಪತ್ರೆಯಲ್ಲಿ ಅಕ್ಷಯ್ ಸಹೋದರ ಬೆನಕ, ಅಜ್ಜಿ ಸಾವಿತ್ರಮ್ಮ ಪರದಾಡುತ್ತಿದ್ದಾರೆ. ಅಕ್ಷಯ್ ಕೆಲಸಕ್ಕೆ ಹೋಗುವವರೆಗೆ ನೀವು ನಮ್ಮ ಜೊತೆಗಿರಬೇಕು. ಮಧ್ಯದಲ್ಲಿ ನಮ್ಮ ಕೈಬಿಟ್ಟರೆ ಸುಮ್ಮನಿರಲ್ಲ ಎಂದು ಅಜ್ಜಿ ಸಾವಿತ್ರಮ್ಮ ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿ ರಂಗನಾಥಸ್ವಾಮಿಗೆ ಕ್ಲಾಸ್ ತೆಗೆದುಕೊಂಡಿದ್ದಾರೆ.

ಪ್ರಕರಣ ಸಂಬಂಧ ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿ ರಂಗನಾಥಸ್ವಾಮಿ ಮಾತನಾಡಿ, ಜಯನಗರದ ಅಪೋಲೊ ಆಸ್ಪತ್ರೆ ವೈದ್ಯರು ಅಕ್ಷಯ್‌ಗೆ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ. ಸುಮಾರು 3 ಗಂಟೆ ಕಾಲ ಅಕ್ಷಯ್‌ಗೆ ಶಸ್ತ್ರಚಿಕಿತ್ಸೆ ನಡೆಯಲಿದೆ. ಅಕ್ಷಯ್ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಬಿಬಿಎಂಪಿ ಭರಿಸಲಿದೆ. ಗಾಳಿಯಿಂದ ಒಣಗಿದ್ದ ಕೊಂಬೆ ಮುರಿದುಬಿದ್ದು ಪೆಟ್ಟು ಬಿದ್ದಿದೆ ಎಂದು ಹೇಳಿದರು.

ಕಾಲಿಗೆ ಗುಂಡೇಟು: ಆರೋಪಿ ಸೆರೆ

ಬೆಂಗಳೂರು: ಹಲ್ಲೆ ಮಾಡಲು ಮುಂದಾಗಿದ್ದ ಕೊಲೆ ಆರೋಪಿಗಳ ಕಾಲಿಗೆ ಪೊಲೀಸರು ಗುಂಡು ಹೊಡೆದಿರುವ ಘಟನೆ ಆರ್.ಆರ್. ನಗರದ ಷಣ್ಮುಕ ದೇವಸ್ಥಾನದ ಸಮೀಪ ನಡೆದಿದೆ.

ಆರೋಪಿಗಳಾದ ದೀಪು (28), ಅರುಣ್ (27) ನನ್ನು ಪೊಲೀಸರು ಬಂಧಿಸಲು ತೆರಳಿದ್ದರು. ಈ ವೇಳೆ ಆರೋಪಿಗಳು ಎಎಸ್‌ಐ ಕುಮಾರ್, ಕಾನ್ಸ್‌ಟೇಬಲ್ ಕರೀಂಸಾಬ್ ಮೇಲೆಯೇ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ಆತ್ಮರಕ್ಷಣೆಗಾಗಿ ಜೆಜೆ ನಗರ ಪೊಲೀಸ್ ಠಾಣೆ ಪಿಐ ಕೆಂಪೇಗೌಡ, ಪಿಎಸ್‌ಐ ಪದ್ಮನಾಭ ಆರೋಪಿಗಳ ಕಾಲಿಗೆ ಗುಂಡು ಹೊಡೆದಿದ್ದಾರೆ. ಆರೋಪಿಗಳು ಯುವಕ ವಿಜಯ್ (26) ಎಂಬುವರನ್ನು ಮಾತುಕತೆಗೆ ಅಂತ ಜೆ.ಜೆ.ನಗರದ ಜನತಾ ಕಾಲೋನಿಗೆ ಕರೆಸಿ ಕೊಲೆ ಮಾಡಿದ್ದಾರೆ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಕೊಲೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಸ್ಥಳಕ್ಕೆ ಜೆ.ಜೆ.ನಗರ ಠಾಣೆ ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಇನ್ನು, ವಿಜಯ್ ಶನಿವಾರ (ಜೂ.14) ಜೈಲಿನಿಂದ ಹೊರಬಂದಿದ್ದನು. ಶನಿವಾರ ರಾತ್ರಿ ವಿಜಯ್‌ನನ್ನು ಮಾತುಕತೆಗೆ ಅಂತ ಕರೆಸಿ ಆರೋಪಿಗಳು ಏರಿಯಾದಲ್ಲಿ ಅಟ್ಟಾಡಿಸಿ ಹತ್ಯೆಗೈದಿದ್ದರು. ಕೇಸ್ ದಾಖಲಿಸಿಕೊಂಡು ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದರು. ಆರೋಪಿಗಳು ಆರ್.ಆರ್.ನಗರ ಠಾಣಾ ವ್ಯಾಪ್ತಿಯಲ್ಲಿ ಅವಿತು ಕುಳಿತಿದ್ದಾರೆ ಎಂಬ ಖಚಿತ ಮಾಹಿತಿ ಪಡೆದ ಪೊಲೀಸರು ಬಂಧಿಸಲು ತೆರಳಿದ್ದರು. ಈ ವೇಳೆ ಆರೋಪಿಗಳು ಮಾರಕಾಸ್ತ್ರಗಳಿಂದ ಪೊಲೀಸರ ಮೇಲೆಯೇ ಹಲ್ಲೆ ಮಾಡಲು ಮುಂದಾಗಿದ್ದರು. ಆಗ, ಇನ್ಸ್‌ಪೆಕ್ಟರ್ ಕೆಂಪೇಗೌಡ ಗಾಳಿಯಲ್ಲಿ ಗುಂಡು ಹಾರಿಸಿ ವಾರ್ನ್ ಮಾಡಿದ್ದರು. ಆದರೂ ಆರೋಪಿಗಳು ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಲು ಮುಂದಾದರು. ಈ ವೇಳೆ ಇಬ್ಬರ ಕಾಲಿಗೂ ಪೊಲೀಸರು ಗುಂಡು ಹೊಡೆದು ಬಂಧಿಸಿದರು. ಗಾಯಾಳು ಪೊಲೀಸ್ ಸಿಬ್ಬಂದಿ ಮತ್ತು ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಲ್ಲೆ, ಅವಮಾನದ ವಿರುದ್ಧ ಸೂಕ್ತ ಕ್ರಮಕ್ಕೆ ರಾಮಲಿಂಗಾರೆಡ್ಡಿ ಆಗ್ರಹ

ಬಿಎಂಟಿಸಿ ಸಿಬ್ಬಂದಿ ಮೇಲೆ ಹಲ್ಲೆ: ಪರಂಗೆ ಪತ್ರ



ಬೆಂಗಳೂರು: ನಗರದಲ್ಲಿ ಬಿಎಂಟಿಸಿ ಸಿಬ್ಬಂದಿ ಮೇಲೆ ಪದೇಪದೆ ನಡೆಯುತ್ತಿರುವ ಹಲ್ಲೆ ಮತ್ತು ಅವಮಾನದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪತ್ರ ಬರೆದು ಆಗ್ರಹಿಸಿದ್ದಾರೆ.

ಈ ಹಿಂದೆಯೂ ಹಲವಾರು ಈ ರೀತಿಯ ಪ್ರಕರಣಗಳು ನಡೆದಿದ್ದು, ನಾನು ಬೆಂಗಳೂರು ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ಸೂಕ್ತ ಕ್ರಮ ತೆಗೆದುಕೊಳ್ಳಲು ಹಾಗೂ ಈ ಸಂಬಂಧ ಖುದ್ದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ ವಿವರಿಸಲು ಕೂಡ ಸೂಚಿಸಿರುತ್ತೇನೆ. ಈ ಎಲ್ಲಾ ಕ್ರಮಗಳ ಹೊರತಾಗಿಯೂ ಮತ್ತೊಂದು ಪ್ರಕರಣವು ಎರಡು ದಿನಗಳಿಂದಷ್ಟೇ ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವುದು ಆಘಾತಕಾರಿಯಾಗಿದೆ ಎಂದಿದ್ದಾರೆ.

ಬೆಳ್ಳಂದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಮಹಿಳಾ ಟೆಕ್ಕಿಯೊಬ್ಬರು ತಾವು ಕೋರಿದ ಕಡೆ ಬಸ್ ನಿಲ್ಲಿಸಲಿಲ್ಲ ಎಂಬ ಕಾರಣಕ್ಕೆ ಚಾಲಕ ಹುಸೇನ್ ಮೇಲೆ ಚಪ್ಪಲಿಯಿಂದ ಹಲ್ಲೆ ನಡೆಸಿದ್ದಾರೆ ಎಂದು ವರದಿಯಾಗಿದೆ. ಈ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಹೇಳಿದ್ದಾರೆ. ಇತ್ತೀಚೆಗೆ ಬಸ್ ಚಾಲಕರು ಹಾಗೂ ನಿರ್ವಾಹಕರ ಮೇಲೆ ಇಂತಹ ಹಲ್ಲೆ ಮತ್ತು ಅವಮಾನಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ಕೆಲವು ಕಿಡಿಗೇಡಿಗಳು ಪ್ರಾಣಕ್ಕೆ ಸಂಚಕಾರ ತರುವಂತಹ ಪ್ರಯತ್ನವನ್ನೂ ನಡೆಸಿದ್ದಾರೆ. ಚಾಕುವಿನಿಂದ ಹಲ್ಲೆ ಮಾಡಿದ ಘಟನೆಯೂ ಈ ಹಿಂದೆ ನಡೆದಿತ್ತು. ಹೀಗಾಗಿ, ಇಂತಹ ನಡೆ ತಪ್ಪಿಸಲು ಪೊಲೀಸ್ ಇಲಾಖೆ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ಆಗ್ರಹಿಸಿದ್ದಾರೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸೇರಿ ಯಾವುದೇ ಸಾರಿಗೆ ಸಂಸ್ಥೆಯ ಸಿಬ್ಬಂದಿಯ ಹಿತರಕ್ಷಣೆ ನಮ್ಮ ಬದ್ಧತೆಯಾಗಿದ್ದು, ನಮ್ಮ ಇಲಾಖೆಯ ಸಿಬ್ಬಂದಿ ಮೇಲೆ ನಡೆಯುವ ಹಲ್ಲೆ ಮತ್ತು ಅವಮಾನವನ್ನು ಸಹಿಸಲಾಗದು. ನಮ್ಮ ಸಿಬ್ಬಂದಿಯಿಂದ ಏನಾದರೂ ಪ್ರಮಾದವಾದರೆ, ದೂರು ನೀಡಿದ ಕೂಡಲೇ ವಿಚಾರಣೆ ನಡೆಸಿ ತಪ್ಪಿತಸ್ಥರೆಂದು ಕಂಡುಬಂದಲ್ಲಿ ನಾವು ಕೂಡ ಮುಲಾಜಿಲ್ಲದೆ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ. ಆದರೆ, ಕಾನೂನು ಮೀರಿ ಸಿಬ್ಬಂದಿ ಮೇಲೆ ಹಲ್ಲೆ ನಡೆಸುವುದು ಸರಿಯಲ್ಲ. ಹೀಗಾಗಿ, ಇಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

PUBLIC NOTICE

This is to inform the General public that **I Sanju Kumar Satya and Selvakumari** are intending to purchase the properties described in the Schedule below site No.125B and 125C respectively in near the layout formed by the BDS layout from Shankar R and Sathish R who are the owners of the below referred respective schedule properties apart from the said owners if any persons has/ have any kind of right little interest and claim or whatsoever in respect of the schedule properties they are hereby called upon to file the objections along with documentary proof within **7 days** from the date of publication to below referred address. If no objection are received with in time, it will be presumed that the above referred owners are absolute owners of the schedule property and there are no other claimants

SCHEDULE PROPERTY

ITEM No 1: All that part and parcel of the residential vacant **Site bearing No.125B** measuring East to West 50 feet and North to South 25 feet measuring **1250 Sq Feet** Katha No.10234, formed in Sy No.98/2, situated at **Rachanahalli Village, Yelahanka Hobli, Bangalore North:**
East: 125 A Manjunath Private Property, West: 125 C Sathish Property North: Road, South: Private Property

ITEM No 2: All that part and parcel of the residential vacant **Site bearing No.125C** measuring East to West 27 feet and North to South 50 feet total measuring **1350 Sq Feet** Katha No. 2135, formed in Sy No.98/2, BBMP E-Katha No.2135/98/2/125/C situated at **Rachanahalli Village, Yelahanka Hobli, Bangalore North**
East: 125B Shankar R Property, West: Sri Ashirwad Private Property, North: Road, South: Private Property.

Sanju Kumar Satya
78/6, Rachenahalli Main Road,
Opp Govt High School, P&T Layout,
Thanisandra, Bangalore-560077,
M : 9353705102/8553747107

ಗ್ಲೋಬಲ್ ವಿಂಡ್ ಡೇ 2025 ಪವನ್-ಉರ್ಜಾ: ಪವರಿಂಗ್ ದಿ ಫ್ಯೂಚರ್ ಆಫ್ ಇಂಡಿಯಾ ಕಾರ್ಯಕ್ರಮ

ಹನುಮನ ನಾಡಿನಲ್ಲಿ ಪವನ ಶಕ್ತಿಯ ಸಾಧನೆ: ಸಚಿವ ಜೋಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಹನುಮನ ಜನ್ಮಭೂಮಿಯಾಗಿದ್ದು, ಇಲ್ಲಿ ವಿಶ್ವ ಪವನ ದಿನ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಮದು ಕೇಂದ್ರ, ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಗ್ಲೋಬಲ್ ವಿಂಡ್ ಡೇ' 2025 ಪವನ್-ಉರ್ಜಾ: ಪವರಿಂಗ್ ದಿ ಫ್ಯೂಚರ್ ಆಫ್ ಇಂಡಿಯಾ ಕಾರ್ಯಕ್ರಮದಲ್ಲಿ ಮಾತನಾಡಿ, ಕರ್ನಾಟಕದವನಾಗಿ ರಾಜ್ಯ ಪವನ ವಿದ್ಯುತ್ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಬಗ್ಗೆ ನನಗೆ ಅಪಾರ ಹೆಮ್ಮೆ ಇದೆ. ಪವನ ವಿದ್ಯುತ್ ಸಾಮರ್ಥ್ಯದಲ್ಲಿ ಭಾರತ ಜಾಗತಿಕವಾಗಿ 4ನೇ ಸ್ಥಾನದಲ್ಲಿದ್ದು, 51.5 ಗಿಗಾವ್ಯಾಟ್ ಸಾಮರ್ಥ್ಯವನ್ನು ಈಗಾಗಲೇ ಸ್ಥಾಪಿಸಲಾಗಿದೆ. 2030ರ ವೇಳೆಗೆ ಒಟ್ಟಾರೆ ವಿದ್ಯುತ್ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಇಂಧನದ ಪಾಲನ್ನು ಶೇ. 50ಕ್ಕೆ ಏರಿಸುವ ಜತೆಗೆ 2070ರ ವೇಳೆಗೆ ಇಂಗಾಲದ ಹೊರಸೂಸುವಿಕೆ ನಿವ್ವಳ ಶೂನ್ಯದ ಗುರಿ ಸಾಧಿಸಬೇಕಿದೆ. ಪವನ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲಾಗು ತ್ತಿದೆ ಎಂದರು.

ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, 2025ರ ಮೇ ವೇಳೆಗೆ ಪವನ ವಿದ್ಯುತ್ತಿನ ಸ್ಥಾಪಿತ ಸಾಮರ್ಥ್ಯ 7,351 ಮೆಗಾವ್ಯಾಟ್‌ನಷ್ಟಿತ್ತು. ಕಳೆದ ಆರ್ಥಿಕ ಸಾಲಿನಲ್ಲಿ 1,331 ಮೆಗಾವ್ಯಾಟ್‌ಗಳನ್ನು ಸೇರ್ಪಡೆಗೊಳಿಸಿ ದೇಶದಲ್ಲಿ ಅಗ್ರಮಾನ್ಯ ಸ್ಥಾನದಲ್ಲಿದ್ದೇವೆ. ಇದು ಕೇವಲ ಅಂಕಿ-ಅಂಶವಲ್ಲ, ನಮ್ಮ ಬದ್ಧತೆ, ಯೋಜನೆಗಳನ್ನು ಕಾರ್ಯಗತಗೊಳಿಸುವ ನಮ್ಮ ಸಾಮರ್ಥ್ಯದ ಪ್ರತೀಕ. ರಾಜ್ಯದ ಕೈಗಾರಿಕೆಗಳಿಗೆ, ನಮ್ಮ ರೈತರಿಗೆ, ಮನೆಗಳಿಗೆ ಶುದ್ಧ ಇಂಧನ ಒದಗಿಸುವ ಇಚ್ಛಾ ಶಕ್ತಿಯಾಗಿದೆ ಎಂದು ಹೇಳಿದರು. ರಾಜ್ಯವು 2024-25ನೇ ಸಾಲಿನಲ್ಲಿ ಪವನ ವಿದ್ಯುತ್ ಕ್ಷೇತ್ರಕ್ಕೆ 1331.48 ಮೆ.ವ್ಯಾ. ಸೇರ್ಪಡೆಗೊಳಿಸುವ ಮೂಲಕ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. 2024-25ನೇ ಸಾಲಿನಲ್ಲಿ ಪವನ ವಿದ್ಯುತ್ ವಲಯಕ್ಕೆ 1331.48 ಮೆ.ವ್ಯಾ. ಸಾಮರ್ಥ್ಯ ಸೇರ್ಪಡೆಗೊಳಿಸಿರುವ ರಾಜ್ಯ ಪ್ರಥಮ ಸ್ಥಾನದಲ್ಲಿದ್ದರೆ, 1136.37 ಮೆ.ವ್ಯಾ. ಸಾಮರ್ಥ್ಯವನ್ನು ಸೇರ್ಪಡೆಗೊಳಿಸಿರುವ ತಮಿಳುನಾಡು ಎರಡನೇ ಸ್ಥಾನದಲ್ಲಿದೆ. 954.74 ಮೆ.ವ್ಯಾ ಸೇರ್ಪಡೆಗೊಳಿಸಿರುವ ಗುಜರಾತ್ ಮೂರನೇ ಸ್ಥಾನದಲ್ಲಿದೆ. ಕಳೆದ ಸಾಲಿನಲ್ಲಿ ಗುಜರಾತ್ ಮೊದಲ ಸ್ಥಾನ, ಕರ್ನಾಟಕ ಎರಡನೇ ಸ್ಥಾನ ಹಾಗೂ ತಮಿಳುನಾಡು ಮೂರನೇ ಸ್ಥಾನದಲ್ಲಿತ್ತು. ಪ್ರಸಕ್ತ ಸಾಲಿನಲ್ಲಿ ಈ ಎರಡೂ ರಾಜ್ಯಗಳನ್ನು ಹಿಂದಿಕ್ಕಿ ಕರ್ನಾಟಕ ಅಗ್ರ ಸ್ಥಾನಕ್ಕೇರಿದೆ.

ವಿಶ್ವ ಪವನ ದಿನ-2025' ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರಿಂದ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಪ್ರಶಸ್ತಿ ಸ್ವೀಕರಿಸಿದರು. ಇಂಧನ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ಮತ್ತಿತರರು ಹಾಜರಿದ್ದರು

> **ನವೀಕರಿಸಬಹುದಾದ ಇಂಧನ ನೀತಿ ಪ್ರಕಟಿಸಿದ್ದು ಕರ್ನಾಟಕ**
>
> ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕದ ಹೆಜ್ಜೆಗಳು ಹೊಸತೇನಲ್ಲ. 2009ರಲ್ಲಿ ನವೀಕರಿಸಬಹುದಾದ ಇಂಧನ ನೀತಿಯನ್ನು ಪ್ರಕಟಿಸಿದ ದೇಶದ ಮೊದಲ ರಾಜ್ಯ ನಮ್ಮದು. ನಾವು ಇಂದು ಈ ಎತ್ತರಕ್ಕೆ ಏರಲು ಅಂದೇ ಅಡಿಪಾಯ ಹಾಕಲಾಗಿತ್ತು. ನವೀಕರಿಸಬಹುದಾದ ಇಂಧನ ನೀತಿ 2022-2027 ನಮ್ಮ ದೂರದೃಷ್ಟಿಯ ಪ್ರತೀಕ. ಕೇವಲ ಸಾಮರ್ಥ್ಯ ಸೇರ್ಪಡೆ ಮಾತ್ರವಲ್ಲದೇ, ನಾವೀನ್ಯತೆ, ಹೂಡಿಕೆ ಮತ್ತು ಸಮಗ್ರ ಬೆಳವಣಿಗೆಯನ್ನು ಉತ್ತೇಜಿ ಸುವ ನಿಟ್ಟಿನಲ್ಲಿ ರೂಪಿಸಲಾದ ನೀತಿ ಇದು. ಐಎಸ್‌ಟಿಎಸ್ ಮತ್ತು ಐಎನ್‌ಎಸ್‌ಟಿಎಸ್ ಯೋಜನೆಗಳು, ಹೈಬ್ರಿಡ್ ಮಾದರಿಗಳು, ಹಳೆಯ ಟರ್ಬೈನ್‌ಗಳಿಗೆ ಮರುಶಕ್ತಿ ತುಂಬುವುದು ಸೇರಿದಂತೆ ಡಿಜಿಟಲೀಕರಣ ಮತ್ತು ಜಿಯೋ -ಟ್ಯಾಗಿಂಗ್ ಮೂಲಕ ಸುಲಲಿತ ವ್ಯವಹಾರವನ್ನು ಬೆಂಬಲಿಸುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

> 2030ರ ವೇಳೆಗೆ 500 ಗಿಗಾ ವ್ಯಾಟ್ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಸ್ಥಾಪಿಸಲು ನಾವು ಬದ್ಧರಾಗಿದ್ದು. ಈ ಪೈಕಿ 30 ಗಿಗಾವ್ಯಾಟ್ ಕಡಲಾಚೆಯ ಪವನ ಶಕ್ತಿಯೂ ಸೇರಿ ಒಟ್ಟು 100 ಗಿಗಾವ್ಯಾಟ್ ಪವನ ವಿದ್ಯುತ್ ಕ್ಷೇತ್ರದ್ದಾಗಿರಲಿದೆ. ದೇಶೀಯ ನಿಯೋಜನೆ ಮಾತ್ರವಲ್ಲದೇ ಜಾಗತಿಕ ಶುದ್ಧ ಇಂಧನ ಪೂರೈಕೆ ಸರಪಳಿಗಳ ಭಾಗವಾಗಿಯೂ ದೇಶ ದೃಢ ಹೆಜ್ಜೆ ಇರಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತವು 3.5 ರಿಂದ 4 ಗಿ.ವ್ಯಾ. ಪವನ ಟರ್ಬೈನ್‌ಗಳು ಮತ್ತು ಘಟಕಗಳನ್ನು ರಫ್ತು ಮಾಡಿದೆ.
>
> ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

> ಪವನ ವಿದ್ಯುತ್ ವಲಯದಲ್ಲಿನ ಕರ್ನಾಟಕದ ಈ ಸಾಧನೆ ಕೇವಲ ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲ, ಜಾಗತಿಕವಾಗಿಯೂ ಪ್ರಸ್ತುತವಾಗಿದೆ. ರಾಜ್ಯದ ಪವನ ವಿದ್ಯುತ್ ಸಾಮರ್ಥ್ಯವು ದಕ್ಷಿಣ ಆಫ್ರಿಕಾ, ಪೋರ್ಚುಗಲ್, ನ್ಯೂಜಿಲೆಂಡ್‌ನಂತಹ ದೇಶಗಳ ಒಟ್ಟು ಪವನ ವಿದ್ಯುತ್ ಸಾಮರ್ಥ್ಯಕ್ಕಿಂತ ಹೆಚ್ಚಾಗಿದೆ. ಸ್ವೀಡನ್ ಮತ್ತು ಆಸ್ಟ್ರೇಲಿಯಾದ ಪವನ ವಿದ್ಯುತ್ ಸಾಮರ್ಥ್ಯಕ್ಕೆ ಹತ್ತಿರವಾಗಿದೆ.
>
> -ಗೌರವ್ ಗುಪ್ತ, ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ

ಇದೇ ವೇಳೆ, ರ್‍ಯಾಂಪಿಂಗ್‌ಅಪ್ ಲೋಕಲ್ ಮ್ಯಾನುಫ್ಯಾಕ್ಚರಿಂಗ್ ಫಾರ್ ವಿಂಡ್ ಟರ್ಬೈನ್ಸ್ ಇನ್ ಇಂಡಿಯಾ' ವರದಿಯನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯ ರಾಜ್ಯ ಸಚಿವ ಶ್ರೀಪಾದ್ ಯೆಸ್ಸೋ ನಾಯಕ್, ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯ ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ, ಕ್ರೆಡಲ್ ಅಧ್ಯಕ್ಷ ಟಿ.ಡಿ.ರಾಜೇಗೌಡ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪಯ್ಯ ಇದ್ದರು.

ಸಮಾಚಾರ ಸಣ್ಣದಲ್ಲ

ಚಾಲಕ-ಕಂ-ನಿರ್ವಾಹಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕ-ಕಂ-ನಿರ್ವಾಹಕ ಪರಿಶಿಷ್ಟ ಜಾತಿಯ - ಹಿಂಬಾಕಿ ಮತ್ತು ಚಾಲಕ ಹುದ್ದೆಗಳಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆ ಪಟ್ಟಿಯ ಪ್ರವರ್ಗವಾರು ಹಾಗೂ ಶೇಕಡಾವಾರು ಕಟ್‌ಆಫ್ ವಿವರಗಳನ್ನು ಹಾಗೂ ಕೌನ್ಸಲಿಂಗ್ ನಡೆಯುವ ದಿನಾಂಕಗಳ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.nwkrtc.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಸಂಬಂಧಪಟ್ಟ ಅಭ್ಯರ್ಥಿಗಳು ಕೌನ್ಸಲಿಂಗ್ ಪ್ರಕ್ರಿಯೆಗೆ ತಪ್ಪದೇ ನಿಗದಿತ ದಿನಾಂಕದಂದು ಹಾಜರಾಗುವುದು ಎಂದು ಸಂಸ್ಥೆಯ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು: 2025-26ನೇ ಶೈಕ್ಷಣಿಕ ವರ್ಷದಲ್ಲಿ ಉಡುಪಿ ಜಿಲ್ಲೆಯ ಬ್ರಹ್ಮಾವರದ ಕೃಷಿ ಡಿಪ್ಲೊಮೊ ಕೋರ್ಸ್‌ಗೆ ಪ್ರವೇಶಾತಿ ಅರ್ಜಿ ಆಹ್ವಾನಿಸಲಾಗಿದ್ದು, ಡಿಪ್ಲೊಮೊ ಕೃಷಿ ದಾಖಲಾತಿಗೆ ಈ ಹಿಂದೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನು ಜೂನ್ 6 ರವರೆಗೆ ನಿಗದಿಪಡಿಸಲಾಗಿತ್ತು. ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಅರ್ಜಿ ಸಲ್ಲಿಸುವ ಅವಧಿಯ ಅಂತಿಮ ದಿನಾಂಕವನ್ನು ಜೂನ್ 27 ರ ವರೆಗೆ ವಿಸ್ತರಿಸಲಾಗಿದೆ. ಅರ್ಜಿಯನ್ನು ವೆಬ್ ಸೈಟ್ www.uahs.edu.in ನಿಂದ ಡೌನ್ ಲೋಡ್ ಮಾಡಿ ಭರ್ತಿ ಮಾಡಿದ ಅರ್ಜಿಗಳನ್ನು ಜೂನ್ 27 ರ ಒಳಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದ, ಕನಿಷ್ಠ ಶೇ.45% ಕನಿಷ್ಠ ಶೇ.40% ಪ.ಜಾ. ಮತ್ತು ಪ.ಪಂ./ಪ್ರವರ್ಗ-1 ಅಂಕಗಳೊಂದಿಗೆ ಉತ್ತೀರ್ಣರಾದ, 19 ವರ್ಷ ವಯಸ್ಸು ಮೀರದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ. 50% ರಷ್ಟು ಮೀಸಲಾತಿ ಇರುತ್ತದೆ. ಈ ಎರಡು ವರ್ಷದ ಡಿಪ್ಲೊಮೊ ಕೋರ್ಸ್ ನಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಹೈನುವಿಜ್ಞಾನ, ರೇಬಿಫ್ಡ್ ಕೃಷಿ, ಜೇನು ಕೃಷಿ ಹೀಗೆ ಕೃಷಿಗೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ನುರಿತ ವಿಜ್ಞಾನಿಗಳಿಂದ ಭೋದನೆ ಇರುತ್ತದೆ. ಹಾಗೂ ಕೃಷಿರಂಗದ ಪ್ರಾಯೋಗಿಕ ಪರಿಚಯ / ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ.

20ರಂದು ಡಾಕ್ ಅದಾಲತ್

ಬೆಂಗಳೂರು: ವಿಭಾಗ ಮಟ್ಟದ ಡಾಕ್ ಅದಾಲತ್ ಅನ್ನು ಜೂನ್ 20 ರಂದು ಬೆಳಿಗ್ಗೆ 12 ಗಂಟೆಗೆ ಹಿರಿಯ ಅಂಚೆ ಕಚೇರಿ, ಬೆಂಗಳೂರು ಪಶ್ಚಿಮ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂಚೆ ಸೇವೆಗಳಿಗೆ ಸಂಬಂಧಿಸಿದ ಕುಂದು-ಕೊರತೆಗಳು ಅಥವಾ ದೂರುಗಳಾದ ಮೇಲ್‌ಗಳ ವಿತರಣೆ, ಸ್ಪೀಡ್ ಪೋಸ್ಟ್ ಲೇಖನಗಳು, ಪಾರ್ಸಲ್‌ಗಳು, ಮನಿ ಆರ್ಡರ್‌ಗಳು, ಉಳಿತಾಯ ಬ್ಯಾಂಕ್, ನಗದು ಪ್ರಮಾಣ ಪತ್ರಗಳು ಮತ್ತು ಕೌಂಟರ್ ಸೇವೆಗಳು ಬೆಂಗಳೂರು ಪಶ್ಚಿಮ ವಿಭಾಗಕ್ಕೆ ಸಂಬಂಧಿಸಿದ ಯಾವುದಾದರೂ ಇದ್ದರೆ ಕಳುಹಿಸಬಹುದು ಅಥವಾ ಹಿರಿಯ ಅಧೀಕ್ಷಕರನ್ನು ಭೇಟಿ ಮಾಡಿ ದೂರುಗಳನ್ನು ಸಲ್ಲಿಸಬಹುದು. ದೂರುಗಳೇನಾದರೂ ಇದ್ದಲ್ಲಿ ಜೂನ್ 16 ರಂದು ಸಂಜೆ 4.00 ಗಂಟೆಯೊಳಗಾಗಿ ಹಿರಿಯ ಅಂಚೆ ಕಛೇರಿ, ಬೆಂಗಳೂರು ಪಶ್ಚಿಮ ವಿಭಾಗ, ವಿದ್ಯಾ ಭಾರತಿ ಶಾಲೆಯ ಎದುರು, ಕಾರ್ಡ್ ರಸ್ತೆಯ ಪಶ್ಚಿಮ, ಎರಡನೇ ಹಂತ, ಅಂಚೆ ಕಚೇರಿ ಕಟ್ಟಡ, ಬೆಂಗಳೂರು ಇಲ್ಲಿಗೆ ಸಲ್ಲಿಸಬೇಕು. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-23493264, 23493267ಗೆ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸೌಖ್ಯ ವೇಮರಾಜು ರಂಗಪ್ರವೇಶ

ಬೆಂಗಳೂರು: ನಟರಾಜರಂಗಂ ಸ್ಕೂಲ್ ಆಫ್ ಡ್ಯಾನ್ಸ್ ನೃತ್ಯಸಂಸ್ಥೆಯ ಸೌಖ್ಯರ ಭರತನಾಟ್ಯರಂಗಪ್ರವೇಶ ಜೂ.22ರಂದು ಬೆಳಗ್ಗೆ 10.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.



ನಟರಾಜರಂಗಂ ಸ್ಕೂಲ್ ಆಫ್ ಡ್ಯಾನ್ಸ್ ನೃತ್ಯಸಂಸ್ಥೆಯ ನಾಟ್ಯ ಗುರು ಅಭಿನಯ ನಟರಾಜನ್ ಅವರ ಶಿಷ್ಯೆಯಾದ ಸೌಖ್ಯ ವೇಮರಾಜು ಮುರಳಿ ಕೃಷ್ಣ ವೇಮರಾಜು ಮತ್ತು ಭಾಗ್ಯಲಕ್ಷ್ಮಿ ವೇಮರಾಜು ಅವರ ಮಗಳು. ಡಾ. ಗಂಗೂಬಾಯಿ ಹಾನಗಲ್ ಮ್ಯೂಸಿಕ್ ಮತ್ತು ಪರ್ಫಾರ್ಮಿಂಗ್ ಆರ್ಟ್ಸ್ ಯೂನಿವರ್ಸಿಟಿಯಿಂದ ಜ್ಯೂನಿಯರ್ ಬೋರ್ಡ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದಿರುವ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿತಿದ್ದು, ಈಗಾಗಲೇ ದೇಶಾದ್ಯಂತ ಅನೇಕ ನೃತ್ಯಪ್ರದರ್ಶನಗಳನ್ನು ನೀಡಿದ್ದಾರೆ.

{ **ಡಾ.ಶರಣಪ್ರಕಾಶ ಪಾಟೀಲ** } ಸಚಿವ

ಮನುಷ್ಯ ಹೇಗೆ ಜೀವನ ನಡೆಸಬೇಕು ಎಂಬ ಮಾರ್ಗದರ್ಶನ ನೀಡುವ ಉದ್ದೇಶದಿಂದ ಶರಣ ಹಾಗೂ ಬಸವ ಧರ್ಮ ಹುಟ್ಟಿತು. ಶರಣಧರ್ಮವೂ ಕೆಳ ಸಮುದಾಯದ ಧರ್ಮ. ವಚನ ಸಾಹಿತ್ಯಕ್ಕೆ ಶೋಷಿತ ಸಮುದಾಯದಿಂದ ಬಂದ ಶರಣರೇ ಹೆಚ್ಚು ವಚನಗಳನ್ನು ನೀಡಿದ್ದಾರೆ. ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ

ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮಾತು

ಬೆಂಗಳೂರು: ಜೆಡಿಎಸ್ ಪಕ್ಷವನ್ನು ಮುಗಿಸುತ್ತೇವೆ ಎಂಬ ಮಹಾನುಭಾವರು ಎಂದಿಗೂ ಹುಟ್ಟಲು ಸಾಧ್ಯವಿಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸವಾಲು ಹಾಕಿದರು.

ಜೆ.ಪಿ.ಭವನದಲ್ಲಿ ನಡೆದ ಜನರೊಂದಿಗೆ ಜನತಾದಳ ಸಂಘಟನಾ ಪ್ರವಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೊರಾರ್ಜಿ ದೇಸಾಯಿಯವರು ಈ ಪಕ್ಷವನ್ನು ನನ್ನ ಕೈಗೆ ಕೊಟ್ಟರು. ಅನಂತರ ಜನತಾದಳ ವಿಭಜನೆಯಾದರೂ ಈ ಪಕ್ಷ ಉಳಿದಿದೆ. ನನ್ನ ಅನಂತರವೂ ಉಳಿಯಲಿದೆ. ಹಿಂದಿನ ಸೋಲು ಮುಂದಿನ ಗೆಲುವಿಗೆ ಬುನಾದಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಯಾರೇ ನನ್ನ ಬಳಿಗೆ ಬಂದರೂ ತಿರಸ್ಕಾರ ಮನೋಭಾವದಿಂದ ನೋಡಿಲ್ಲ. ನೋಡುವುದೂ ಇಲ್ಲ. ಯಾವಾಗ ಯಾರು ಬೇಕಾದರೂ ಬರಬಹುದು, ಎಲ್ಲಿಗೆ ಬೇಕಾದರೂ ನನ್ನನ್ನು ಕರೆಯಿರಿ, ಬರುತ್ತೇನೆ. ಚನ್ನಪಟ್ಟಣ ಉಪ ಚುನಾವಣೆಯಲ್ಲಿ 32 ಕಡೆ ಬಹಿರಂಗ ಸಭೆ ಮಾಡಿದ್ದೇನೆ. ಆದರೆ ಜನರು ಏಕೆ ನಮ್ಮನ್ನು ಕೈ ಬಿಟ್ಟರು, ಹೇಗೆ ಸೋತೆವು? ಎಂದು ನಾನು ಹೇಳಲು ಹೋಗುವುದಿಲ್ಲ. ಈ ಒಂದು ಸೋಲು ನಮ್ಮನ್ನು ಎದೆಗುಂದಿಸಲು ಸಾಧ್ಯವಿಲ್ಲ. ಎದೆಗುಂದು ಪ್ರಶ್ನೆಯೂ ಇಲ್ಲ. ಮತ್ತೆ ಪುಟಿದೆದ್ದು ಬರುತ್ತೇವೆ. ಆ ಶಕ್ತಿ ನಮ್ಮ ಪಕ್ಷಕ್ಕಿದೆ ಎಂದು ಮಾಜಿ ಪ್ರಧಾನಿಗಳು ವಿಶ್ವಾಸದಿಂದ ನುಡಿದರು.

ಜೆಡಿಎಸ್ ಒಂದು ಕುಟುಂಬದ ಪಕ್ಷವಲ್ಲ: ಜೆಡಿಎಸ್ ಕುಟುಂಬದ ಪಕ್ಷ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಇದು ಒಂದು ಕುಟುಂಬದ ಪಕ್ಷವಲ್ಲ, ಇದು ಕಾರ್ಯಕರ್ತರ ಪಕ್ಷ. ಎಷ್ಟೋ ಮಹಾನುಭಾವರು ಈ ಪಕ್ಷದಲ್ಲಿ ಅಧಿಕಾರ ಅನುಭವಿಸಿ ಹೋಗಿದ್ದಾರೆ, ಇನ್ನೂ ಅನುಭವಿಸುತ್ತಿದ್ದಾರೆ, ಎಲ್ಲಾ ಅಧಿಕಾರ ಅನುಭವಿಸಿ ಪಕ್ಷ ಬಿಟ್ಟು ಹೋಗಿದ್ದಾರೆ. ಆದರೆ ಪಕ್ಷ ಮಾತ್ರ ಹಾಗೆಯೇ ಇದೆ. ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ಜೆಡಿಎಸ್ ಇನ್ನೂ ಸದೃಢವಾಗಿ ಬದುಕಿದೆ. ಇದು ಹೇಗೆ ಎಂಬ ಪ್ರಶ್ನೆಯನ್ನು ಟೀಕೆ ಮಾಡುವವರು ಕೇಳಿಕೊಳ್ಳಬೇಕು ಎಂದು ತಿರುಗೇಟು ನೀಡಿದರು.

ಬಿಜೆಪಿ, ಕಾಂಗ್ರೆಸ್ ಬಿಟ್ಟರೆ ಉಳಿದ ಎಲ್ಲಾ ಪಕ್ಷಗಳು ಪ್ರಾದೇಶಿಕ ಪಕ್ಷಗಳು. ಅನೇಕ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಆಡಳಿತ ನಡೆಸುತ್ತಿವೆ. ಮೋದಿ ಅವರು ದೊಡ್ಡ ನಾಯಕರು, ಪ್ರಧಾನಿಯಾಗಿ, ವಿಶ್ವನಾಯಕರಾಗಿ ಅವರು ಬೆಳೆದಿದ್ದಾರೆ. ಅವರಿಗೆ ಎದುರು ನಿಲ್ಲುವ ಮತ್ತೊಬ್ಬ ನಾಯಕ ಇಡೀ ದೇಶದಲ್ಲಿ ಯಾರೂ ಇಲ್ಲ. ಯಾವ ಪಕ್ಷದಲ್ಲಿಯೂ ಇಲ್ಲ. ಈ ಕಾರಣಕ್ಕಾಗಿ ನಾವು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದೇವೆ. ನಾವು ಪ್ರಧಾನಿಗಳ ಜತೆ ಕೈ ಜೋಡಿಸಿದ್ದೇವೆ. ಅವರ ವಿಶ್ವಾಸ ಗಳಿಸಿದ್ದೇವೆ. ಕುಮಾರಸ್ವಾಮಿ ಅವರನ್ನು ನಾನು ಮಾಡಿ ಎಂದು ಕೇಳಿದವನಲ್ಲ, ಆದರೆ, ಮೋದಿ ಅವರೇ ಅವರನ್ನು ತಮ್ಮ ಸಂಪುಟದಲ್ಲಿ ಸಚಿವರನ್ನಾಗಿ ಮಾಡಿ ಉತ್ತಮ ಖಾತೆಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಬಿಡಿ; ಗುರುಮಿಟ್ಕಲ್‌ಗೆ ಖರ್ಗೆ ಕೊಡುಗೆ ಏನು?: ಇನ್ನು ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಕಲ್ಯಾಣ ಕರ್ನಾಟಕಕ್ಕೆ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಎಷ್ಟು ಅನುದಾನ ನೀಡಿದ್ದೀರಿ? ಎಷ್ಟು ವೆಚ್ಚ ಮಾಡಿದ್ದೀರಿ? ಏನೇನು ಅಭಿವೃದ್ಧಿ ಕೆಲಸ ಆಗಿವೆ ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸಿ. ಆರೋಗ್ಯ ಆವಿಷ್ಕಾರ ಎಂದು ನಮ್ಮ ಸಿಎಂ, ಡಿಸಿಎಂ ಯಾದಗಿರಿಗೆ ಹೋಗಿದ್ದರು. ಕಲ್ಯಾಣ ಕರ್ನಾಟಕದ ಉದ್ಧಾರ ಮಾಡುತ್ತೇವೆ ಎಂದು ಭಾಷಣ ಮಾಡಿದ್ದಾರೆ. ಸಂತೋಷ, ಹಾಗಾದರೆ ನಿಮ್ಮ ಪಕ್ಷದ ಆಡಳಿತಾವಧಿಯಲ್ಲಿ ಏನೇನು ಕೆಲಸ ಮಾಡಿದ್ದೀರಿ ಎಂಬುದನ್ನು ಜನರ ಮುಂದಿಡಿ ಎಂದರು.

ಗುರುಮಿಟ್ಕಲ್ ಕ್ಷೇತ್ರಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರು ಎಷ್ಟು ವರ್ಷ ಶಾಸಕರಾಗಿದ್ದರು ಎನ್ನುವುದು ಎಲ್ಲರೂ ಬಲ್ಲರು. ಆ ಕ್ಷೇತ್ರಕ್ಕೆ ಏನು ಮಾಡಿದ್ದೀರಿ? ಇವತ್ತಿಗೂ ಆ ಕ್ಷೇತ್ರದಲ್ಲಿ ಸರಿಯಾದ ಮೂಲ ಸೌಕರ್ಯ ಇಲ್ಲ. ಕುಡಿಯುವ ನೀರಿನ ಸಮಸ್ಯೆ ಇದೆ. ಕಲ್ಯಾಣ ಕರ್ನಾಟಕವನ್ನು ಬೆಂಗಳೂರು ಮಾಡಬೇಕಂತೆ! ನೀವು ಬೇಕಾದರೆ ಬೆಂಗಳೂರನ್ನು ಸಿಂಗಾಪುರ ಮಾಡಿಕೊಳ್ಳಿ. ಆದರೆ, ಕಲ್ಯಾಣ ಕರ್ನಾಟಕವನ್ನು ಬೆಂಗಳೂರು, ಮೈಸೂರಿನಂತೆ ಅಭಿವೃದ್ಧಿ ಮಾಡಿ ಎಂದು ಖರ್ಗೆ ಅವರು ಹೇಳಿದ್ದಾರೆ. ಹಾಗಾದರೆ ಇಷ್ಟು ಸುದೀರ್ಘ ಕಾಲ ನೀವು ಮಾಡಿದ್ದೇನು? ಇಷ್ಟೂ ವರ್ಷ ಬಂದ ಹಣವೆಲ್ಲ ಎಲ್ಲಿ ಹೋಯಿತು? ಎಂದು ಕೇಂದ್ರ ಸಚಿವರು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಉಪ ನಾಯಕಿ ಶಾರದಾಪೂರ್ಯಾ ನಾಯ್ಕ್, ಮಾಜಿ ಸಚಿವರಾದ ಲೀಲಾದೇವಿ ಪ್ರಸಾದ್, ಎಚ್.ಕೆ.ಕುಮಾರಸ್ವಾಮಿ, ವೆಂಕಟರಾವ್ ನಾಡಗೌಡ, ಡಾ. ಎ.ಬಿ. ಮಾಲಕರೆಡ್ಡಿ, ಆಲ್ಕೋಡ್ ಹನುಮಂತಪ್ಪ, ಶಾಸಕರಾದ ಎಂ.ಟಿ.ಕೃಷ್ಣಪ್ಪ, ಕರೆಮ್ಮ ನಾಯಕ್, ಟಿ.ಎ. ಜವರಾಯಿ ಗೌಡ ಸೇರಿ ಹಲವರಿದ್ದರು.



ಜೆ.ಪಿ.ಭವನದಲ್ಲಿ ನಡೆದ ಜನರೊಂದಿಗೆ ಜನತಾದಳ ಸಂಘಟನಾ ಪ್ರವಾಸ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಚಾಲನೆ ನೀಡಿದರು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮತ್ತಿತರರು ಇದ್ದರು.

ನಾನು ಗಟ್ಟಿಮುಟ್ಟಾಗಿದ್ದೇನೆ: ಎಚ್.ಡಿ. ಕುಮಾರಸ್ವಾಮಿ

ಕುಮಾರಸ್ವಾಮಿ ಅವರು ತಮ್ಮ ಆರೋಗ್ಯದ ಬಗ್ಗೆ ಮಾತನಾಡಿದ್ದು, ನಾನು ಆರೋಗ್ಯವಾಗಿ ಗಟ್ಟಿಮುಟ್ಟಾಗಿದ್ದೇನೆ. ಏನೂ ಚಿಂತೆ ಬೇಡ. ಕಾಂಗ್ರೆಸ್ಸಿನವರು ಕುಮಾರಸ್ವಾಮಿ ಆರೋಗ್ಯ ಕೆಟ್ಟಿದೆ, ನಮ್ಮ ಪಕ್ಷಕ್ಕೆ ಬನ್ನಿ ಎಂದು ಶಾಸಕರನ್ನು ಕರೆಯುತ್ತಿದ್ದಾರೆ. ನೀವು ಏನೂ ಚಿಂತೆ ಮಾಡಬೇಡಿ. ನಾನು ಆರೋಗ್ಯವಾಗಿದ್ದೇನೆ ಎಂದರು. ನಾನು ಇನ್ನೂ ನಿಮ್ಮ ಜೊತೆ ಹದಿನೈದು ಇಪ್ಪತ್ತು ವರ್ಷ ಕಾಲ ಇರುತ್ತೇನೆ. ಜನತಾದಳವೂ ಇರುತ್ತದೆ. ನಮ್ಮ ಪಕ್ಷಕ್ಕೆ ಶಕ್ತಿಯಿದೆ. ಜೆಡಿಎಸ್ ಬಿಟ್ಟು ಬನ್ನಿ ಎನ್ನುವವರಿಗೆ ಈ ಸಭೆಯ ಮೂಲಕ ಉತ್ತರ ಕೊಟ್ಟಿದ್ದೀರಿ. ಧೈರ್ಯದಿಂದ ಹೊರಡಿ, ಈ ಸಲ ಜನತಾದಳ-ಬಿಜೆಪಿ ಮೈತ್ರಿ ಸರಕಾರ ಬರಲಿದೆ. ಜೆಡಿಎಸ್-ಬಿಜೆಪಿ ಮೈತ್ರಿ ಬಗ್ಗೆ ಯಾವುದೇ ಅಪಪ್ರಚಾರಗಳಿಗೆ ತಲೆ ಕೆಡಿಸಿಕೊಳ್ಳಬೇಡಿ. ಕೈಲಾಗದವರು ಅಪಪ್ರಚಾರ ಮಾಡುತ್ತಾರೆ. ಅವರಿಗೆಲ್ಲ ದಿಟ್ಟ ಉತ್ತರ ಕೊಡೋಣ. ನಿಮ್ಮ ಪಾಡಿಗೆ ನೀವು ಪಕ್ಷದ ಕೆಲಸ ಮಾಡಿ ಎಂದು ಹೇಳಿದರು.

ಜಾತಿಗಣತಿ ವರದಿ ಸ್ವೀಕಾರ ಮಾಡುವ ವಿಚಾರದಲ್ಲಿ ಕುಮಾರಸ್ವಾಮಿ ಅಂದಿನ ಸಚಿವ ಪುಟ್ಟರಂಗಶೆಟ್ಟಿಯನ್ನು ಹೆದರಿಸಿದರು ಎಂದು ಮುಖ್ಯಮಂತ್ರಿ ಸುಳ್ಳು ಹೇಳಿದ್ದಾರೆ. ನೀವು ಅಧಿಕಾರಕ್ಕೆ ಬಂದು ಎರಡು ವರ್ಷ ಆಯಿತಲ್ಲವೇ? ಜಾತಿ ಗಣತಿ ವರದಿಯನ್ನು ಅಂಗೀಕಾರ ಮಾಡಬೇಡಿ ಎಂದು ನಿಮ್ಮನ್ನು ಯಾರು ಹಿಡಿದು ಕೂತಿದ್ದಾರೆ? ಈ ಸಮಯದಲ್ಲಿ ನಾನು ವಿಧಾನಸೌಧದಲ್ಲಿ ಇರಬೇಕಿತ್ತು. ನಿಮಗೆ ತಕ್ಕ ಪಾಠ ಕಲಿಸುತ್ತಿದ್ದೆ.

- ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವ

ಪಕ್ಷ ಸಂಘಟಿಸಲು ರಾಜ್ಯಾದ್ಯಂತ ಪ್ರವಾಸ

ಕಾರ್ಯಕ್ರಮದಲ್ಲಿ ಮಾತನಾಡಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ಸೋಮವಾರ ತುಮಕೂರು ಜಿಲ್ಲೆಯಿಂದ ಅಧಿಕೃತವಾಗಿ ಪ್ರವಾಸ ಆರಂಭ ಮಾಡುತ್ತೇವೆ. ಎಲ್ಲಾ ಹಿರಿಯ ಮುಖಂಡರು ಸಹಕಾರ ಕೊಡಬೇಕು. ಪಕ್ಷವನ್ನು ಜನರ ಬಳಿಗೆ ಕರೆದೊಯ್ಯುವ ಉದ್ದೇಶದಿಂದ ಹಿರಿಯರು ಸೇರಿ ಪಕ್ಷದ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜನರೊಂದಿಗೆ ಜನತಾದಳ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಇದರ ಭಾಗವಾಗಿಯೇ ರಾಜ್ಯ ಪಕ್ಷ ಸಂಘಟನಾ ರಾಜ್ಯ ಪ್ರವಾಸ ಮತ್ತು ಮಿಸ್ ಕಾಲ್ ಅಭಿಯಾನ ನಡೆಸುತ್ತಿದ್ದೇವೆ ಎಂದು ತಿಳಿಸಿದರು. ಕನಿಷ್ಠ ಐವತ್ತು ಲಕ್ಷ ಜನ ಸದಸ್ಯರಾಗಬೇಕು ಎಂಬ ಗುರಿ ಇಟ್ಟುಕೊಂಡು ಹೋಗೋಣ. ಸೋಮವಾರದಿಂದ ಬಹುತೇಕ ಜಿಲ್ಲೆ, ತಾಲೂಕುಗಳಿಗೆ ಭೇಟಿ ನೀಡುತ್ತೇನೆ. ಇವತ್ತು ಬಹಳ ಉತ್ಸಾಹದಿಂದ ಪಕ್ಷ ಕಟ್ಟೋಕ್ಕೆ ಎಲ್ಲರು ಬಂದಿದ್ದಾರೆ. 58 ದಿನಗಳ ಕಾಲ ನಿಮ್ಮ ಜತೆ ನಿರಂತರವಾಗಿ ಹೆಜ್ಜೆ ಹಾಕುತ್ತೇನೆ. ನಾನು ನಿಮ್ಮ ಜತೆ ಇರುತ್ತೇನೆ. ಒಂದು ಕಡೆ ಪಕ್ಷ ಸಂಘಟನೆ ಆದರೆ ಮತ್ತೊಂದು ಕಡೆ ಸರಕಾರದ ವೈಫಲ್ಯ ತೆರೆದಿಡಲು ಬರುತ್ತಿದ್ದೇನೆ. ರೈತ ವರ್ಗಕ್ಕೆ ಕುಮಾರಣ್ಣ ಕೊಟ್ಟ ಕೊಡುಗೆ ಹೇಳಲಾಗದು. 25 ಸಾವಿರ ಕೋಟಿ ಯೋಜನೆಯನ್ನು ರೈತಾಪಿ ವರ್ಗಕ್ಕೆ ನೀಡಿದ್ದಾರೆ. ಪಂಚ ರತ್ನ ಯೋಜನೆ ಕನಸು ನನಸು ಆಗಬೇಕು ಎಂದು ಹೇಳಿದರು.

ಹಳದಿ ಮೆಟ್ರೋ ಸಂಚಾರ 2 ತಿಂಗಳು ವಿಳಂಬ

ಆಗಸ್ಟ್ ಮೊದಲ ವಾರದಲ್ಲಿ ಹಳದಿ ಮಾರ್ಗದ ಮೆಟ್ರೋ ಸೇವೆಗೆ ಮುಕ್ತ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗವು ಇನ್ನೂ ಎರಡು ತಿಂಗಳು ವಿಳಂಬವಾಗಲಿದ್ದು, ಜುಲೈ ಅಂತ್ಯ ಅಥವಾ ಆಗಸ್ಟ್ ಮೊದಲ ವಾರದಲ್ಲಿ ಕಾರ್ಯಾಚರಣೆ ಆರಂಭವಾಗುವ ಸಾಧ್ಯತೆಯಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಸಂಚಾರ ದಟ್ಟಣೆಯ ವೇಳೆ ಮೆಟ್ರೋ ಸಂಚಾರವು ಸಮಯ ಉಳಿಸಲು ಹಾಗೂ ಅನಗತ್ಯ ಕಿರಿಕಿರಿ ತಡೆಯಲು ಸಹಾಯಕವಾಗುತ್ತಿದ್ದು, ಪ್ರಯಾಣಿಕರು ಆರ್‌ವಿ ರಸ್ತೆ ಟು ಬೊಮ್ಮಸಂದ್ರ ಮೆಟ್ರೋದ ವಾಣಿಜ್ಯ ಸಂಚಾರದ ಆರಂಭಕ್ಕೆ ಕಾಯುತ್ತಿದ್ದಾರೆ. ಹಲವು ಬಾರಿ ಹಳದಿ ಮಾರ್ಗದ ಸಂಚಾರವು ಮುಂದಕ್ಕೆ ಹೋಗಿದೆ. ಈಗ ಮತ್ತೊಂದು ಬಾರಿ ಹಳದಿ ಮಾರ್ಗದ ಆರಂಭದ ಕುರಿತು ಬಿಎಂಆರ್‌ಸಿಎಲ್ ಮಾಹಿತಿ ನೀಡಿದ್ದು, ವಾಣಿಜ್ಯ ಸಂಚಾರದ ಆರಂಭಕ್ಕಾಗಿ ಇನ್ನೂ ಎರಡು ತಿಂಗಳು ಕಾಯಬೇಕಾಗಿದೆ ಎಂದು ಹೇಳಿದೆ.

ಹಳದಿ ಮಾರ್ಗದಲ್ಲಿ ಸಂಚಾರವನ್ನು ಶೀಘ್ರವೇ ಆರಂಭಿಸಿದರೆ ಆರ್‌ವಿ ರಸ್ತೆ ಹಾಗೂ ಬೊಮ್ಮಸಂದ್ರ ಮಾರ್ಗದಲ್ಲಿ ಪ್ರಯಾಣಿಸುವವರಿಗೆ ಹೆಚ್ಚು ಅನುಕೂಲ ಆಗಲಿದೆ. ಏಕೆಂದರೆ ಇಲ್ಲಿ ಸುತ್ತಮುತ್ತ ಕೆಲಸ ಮಾಡುವವರು, ಕಾಲೇಜು, ಸರಕಾರಿ ನೌಕರರಿಗೆ ಇದರಿಂದ ಅನುಕೂಲ ಆಗಲಿದೆ.

ಮಳೆ ಬಂದರೆ ನಮ್ಮ ಬದುಕು ಕಷ್ಟವಾಗುತ್ತದೆ. ಏಕೆಂದರೆ ನಾವು ಕೂಡ ಕ್ಯಾಬ್ ಡ್ರೈವರ್ ಆಗಿದ್ದು, ಒಂದು ಪಿಕ್ ಅಪ್ ಮಾಡಿಕೊಳ್ಳಲು ಇಲ್ಲಿಯೇ ಒಂದು ಎರಡು ಗಂಟೆ ಬೇಕು ಬೆಳಂದೂರಿಗೆ ಹೋಗಲು. ಆದ್ದರಿಂದ ಮೆಟ್ರೋ ಮಾರ್ಗ ಆರಂಭವಾದರೆ ಟ್ರಾಫಿಕ್ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ಕ್ಯಾಬ್ ಚಾಲಕರು ಹೇಳುತ್ತಾರೆ.

ಚಾಲಕ ರಹಿತ ರೈಲುಗಳ ಆಗಮನ ತಡ

ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರದ ವಿಳಂಬಕ್ಕೆ ಚಾಲಕ ರಹಿತ ರೈಲುಗಳ ಆಗಮನ ತಡವಾಗಿರುವುದು ಕಾರಣವಾಗಿದ್ದು, ಈಗ ಮೂರು ರೈಲುಗಳು ಆಗಮಿಸಿರುವುದರಿಂದ ಪ್ರಾಯೋಗಿಕ ಸಂಚಾರವನ್ನು ನಡೆಸಲಾಗುತ್ತಿದೆ. ಕೇಂದ್ರ ರೈಲ್ವೆ ಸುರಕ್ಷತಾ ಅಧಿಕಾರಿಗಳಿಂದ ಮತ್ತೊಮ್ಮೆ ಮಾರ್ಗ ಪರಿಶೀಲನೆ ನಡೆಯಲಿದೆ. ಆ ಬಳಿಕ ಸಿಗ್ನಲಿಂಗ್ ಪರೀಕ್ಷೆ ನಡೆಸಿ ಮಾರ್ಗದ ಆರಂಭಕ್ಕೆ ಅನುಮತಿ ದೊರೆಯಲಿದೆ. ಅದಾದ ಬಳಿಕ ಸರಕಾರಗಳಿಗೆ ಪತ್ರ ಬರೆದು ಅನುಮತಿ ಪಡೆದು ಜುಲೈ ಅಂತ್ಯ ಇಲ್ಲವೇ ಆಗಸ್ಟ್ ಮೊದಲ ವಾರದಲ್ಲಿ ಮೆಟ್ರೋ ಕಾರ್ಯಾಚರಣೆ ಮಾಡಲಿದೆ.

ನಗರದಲ್ಲಿ ಹೆಚ್ಚಿದ ಚಳಿಯ ವಾತಾವರಣ

ಬೆಂಗಳೂರು: ಉದ್ಯಾನನಗರಿಯಲ್ಲಿ ಭಾನುವಾರವೂ ಮೋಡ ಕವಿದ ವಾತಾವರಣ ಕಂಡು ಬಂದಿದ್ದು, ವೇಗವಾದ ಗಾಳಿಯಿಂದಾಗಿ ನಗರಾದ್ಯಂತ ಚಳಿಯ ವಾತಾವರಣದ ಅನುಭವವಾಗುತ್ತಿದೆ.

ಅರಬ್ಬಿ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮ ಮುಂದಿನ ಎರಡು ದಿನ ಮೋಡ ಕವಿದ ವಾತಾವರಣ ಇರಲಿದ್ದು, ಪ್ರತಿ ಗಂಟೆಗೆ 40-50ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದೆ. ಈ ಅವಧಿಯಲ್ಲಿ ಹಗುರದಿಂದ ಮಳೆಯಾಗಬಹುದು. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 27 ಮತ್ತು 20 ಡಿ.ಸೆ.ದಾಖಲಾಗಲಿದೆ. ವಾಡಿಕೆಯಂತೆ 28.7 ಡಿ.ಸೆ. ದಾಖಲಾಗಬೇಕಿತ್ತು. 26.7 ಡಿ.ಸೆ. ವರದಿಯಾಗಿದ್ದು, ವಾಡಿಕೆಗಿಂತ 2.2 ಡಿ.ಸೆ. ಕಡಿಮೆ ದಾಖಲಾಗಿದೆ. ಮೂರು ದಿನಗಳಿಂದ ನಗರದಲ್ಲಿ ಜಿಟಿ ಜಿಟಿ ಮಳೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಉಷ್ಣಾಂಶ ಕುಸಿತವಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ಕೊಟ್ಟಿದೆ.

ಮಾ.1ರಿಂದ ಮೇ 31ರವರೆಗೆ ನಗರದಲ್ಲಿ ವಾಡಿಕೆಗಿಂತ ಅಧಿಕವಾಗಿ ಪೂರ್ವ ಮುಂಗಾರು ಮಳೆಯಾಗಿತ್ತು. ಈ ಅವಧಿಯಲ್ಲಿ ದಾಖಲೆ ಮಟ್ಟದಲ್ಲಿ ಮಳೆ ಸುರಿದಿತ್ತು. ಜತೆಗೆ, ವಾಡಿಕೆಗಿಂತ ಮುನ್ನ ಮುಂಗಾರು ಪ್ರವೇಶಿಸಿದ್ದ ಸಂದರ್ಭದಲ್ಲಿ ಒಳ್ಳೆಯ ಮಳೆಯಾಗಿತ್ತು. ಆದರೆ, 2 ವಾರಗಳಿಂದ ವಾಡಿಕೆಗಿಂತ ಕಡಿಮೆ ಪ್ರಮಾಣ ಮಳೆಯಾಗಿದೆ. ವಾಡಿಕೆಯಂತೆ 48 ಮಿಮೀ ಸುರಿಯಬೇಕಿತ್ತು. ಆದರೆ, 38 ಮಿಮೀ ಬಿದ್ದಿದ್ದು, ವಾಡಿಕೆಗಿಂತ ಶೇ.21 ಕಡಿಮೆಯಾಗಿದೆ. ಈ ಅವಧಿಯಲ್ಲಿ ಮಳೆಗಿಂತ ಮೋಡ ಕವಿದ ವಾತಾವರಣ ಜಾಸ್ತಿ ಕಾಣಿಸಿಕೊಂಡಿತ್ತು.

ಕಾಲ್ತುಳಿತ ಪ್ರಕರಣ: ತುರ್ತು ಅಧಿವೇಶನಕ್ಕೆ ಆಗ್ರಹ

ಈ ಸಂಬಂಧ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದ ಪ್ರತಿಪಕ್ಷ ನಾಯಕ ಆರ್.ಅಶೋಕ್

ಬೆಂಗಳೂರು: ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿಯಿಂದ ಮಂಗಳವಾರದಿಂದ ಹೋರಾಟ ಶುರುವಾಗುತ್ತಿರುವ ಬೆನ್ನಲ್ಲೇ, ತುರ್ತು ವಿಶೇಷ ಅಧಿವೇಶನ ನಡೆಸಬೇಕೆಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿರುವ ಅವರು, ಈ ದುರ್ಘಟನೆಯು ಸಾರ್ವಜನಿಕ ಸುರಕ್ಷತೆ, ಗುಂಪು ನಿಯಂತ್ರಣ, ಕ್ರೀಡಾ ಹಾಗೂ ಇತರೆ ಕಾರ್ಯಕ್ರಮಗಳ ಆಯೋಜನೆಗೆ ಸಂಬಂಧಿಸಿದಂತೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಈ ದುರಂತ ಜನರಲ್ಲಿ ಆತಂಕ ಮತ್ತು ಕಳವಳ ಉಂಟುಮಾಡಿದೆ. ಘಟನೆಗೆ ಸಂಬಂಧಿಸಿದಂತೆ ಆಡಳಿತದಲ್ಲಿ ಆಗಿರುವ ಲೋಪಗಳು, ಘಟನೆ ನಂತರ ಸರಕಾರದ ಕ್ರಮಗಳು ಅನೇಕ ಸಂಶಯಗಳನ್ನು ಹುಟ್ಟುಹಾಕಿದೆ. ಕಾಲ್ತುಳಿತಕ್ಕೆ ಕಾರಣರಾದ ಬಲಾಢ್ಯರನ್ನು ರಕ್ಷಿಸಲಾಗುತ್ತಿದೆ. ಸತ್ಯವನ್ನು ಮರೆಮಾಚಲು ಮೂರು ರೀತಿಯ ತನಿಖೆಗಳನ್ನು ಮಾಡಲಾಗುತ್ತಿದೆ. ಅಸಹಾಯಕ ಅಧಿಕಾರಿಗಳನ್ನು ಬಲಿಪಶು ಮಾಡಲಾಗಿದೆ ಎಂಬ ಚರ್ಚೆಗಳು ಸಾರ್ವಜನಿಕ ವಲಯದಲ್ಲಿ ನಡೆಯುತ್ತಿವೆ ಎಂದು ದೂರಿದ್ದಾರೆ.

ಭವಿಷ್ಯದಲ್ಲಿ ಇಂತಹ ದುರ್ಘಟನೆಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಮಗ್ರ ಚರ್ಚೆಯ ಅಗತ್ಯವಿದೆ. ಇದಕ್ಕಾಗಿ ಮೂರು ದಿನಗಳ ತುರ್ತು ಅಧಿವೇಶನ ಕರೆಯಬೇಕಿದೆ. ಕಾಲ್ತುಳಿತ ಘಟನೆಗೆ ಕಾರಣವಾದ ಸಂದರ್ಭಗಳ ಸಂಪೂರ್ಣ ತನಿಖೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಗುಂಪು ನಿಯಂತ್ರಣ ಮತ್ತು ಸುರಕ್ಷತಾ ಕ್ರಮಗಳ ಬಲವರ್ಧನೆ, ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಹಾಗೂ ಸಂತ್ರಸ್ತ ಕುಟುಂಬಗಳಿಗೆ ಪರಿಹಾರದ ವ್ಯವಸ್ಥೆ, ಭವಿಷ್ಯದಲ್ಲಿ ಇಂತಹ ಘಟನೆ ತಪ್ಪಿಸಲು ರಾಜ್ಯ ಸರ್ಕಾರದ ಯೋಜನೆಗಳ ಕುರಿತು ಅಧಿವೇಶನದಲ್ಲಿ ಚರ್ಚಿಸಬೇಕಿದೆ. ಈ ತುರ್ತು ಅಧಿವೇಶನವು ಸರಕಾರದ ಬದ್ಧತೆಯನ್ನು ಜನರಿಗೆ ತೋರಿಸಲು ಮತ್ತು ದುರಂತದಿಂದ ಕಲಿತ ಪಾಠಗಳ ಆಧಾರದಲ್ಲಿ ಭವಿಷ್ಯದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹಾಯಕವಾಗಲಿದೆ. ಹಾಗೆಯೇ ಘಟನೆಗೆ ಕಾರಣಗಳೇನು ಎಂಬುದನ್ನು ಜನತೆಗೆ ತಿಳಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಿದೆ ಎಂದು ಆಗ್ರಹಿಸಿದ್ದಾರೆ.

ನೀರು ಬಾರದಿದ್ದರೂ ಬಿಲ್

ಬೆಂಗಳೂರು: ದಾಸರಹಳ್ಳಿಯ ಸಂಜೀವಿನಿ ಲೇಔಟ್‌ನಲ್ಲಿ ಮೂರು ನಾಲ್ಕು ತಿಂಗಳಿನಿಂದ ಸರಿಯಾಗಿ ನೀರಿನ ಸರಬರಾಜಾಗದಿದ್ದರೂ ನೀರಿಗೆ ಒನ್ ಟು ಡಬಲ್ ಬಿಲ್ ಮಾತ್ರ ಬರುತ್ತಿದೆ ಎಂದು ಜಲಮಂಡಳಿಯ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಸರಿಯಾಗಿ ನೀರು ಸರಬರಾಜಾಗುತ್ತಿಲ್ಲ. ನೀರಿನ ಬದಲು ಕೇವಲ ಗಾಳಿ ಮಾತ್ರ ದೊರೆಯುತ್ತಿದೆ. ಆದರೆ ತಿಂಗಳು ತಿಂಗಳು ನೀರಿನ ಬಿಲ್ ಮಾತ್ರ ಸರಿಯಾಗಿ ಆಗಮಿಸುತ್ತಿದೆ. ಈ ಹಿಂದೆ 700 ರಿಂದ 800 ರು ನೀರಿನ ಬಿಲ್ ಬರುತ್ತಿದ್ದ ಮನೆಗಳಿಗೆ, ಇದೀಗ 3500, ನಾಲ್ಕು ಸಾವಿರ, ಕೆಲವೊಂದು ಮನೆಗೆ ಎಂಟು ಸಾವಿರ ರು ಬಿಲ್ ಬರುತ್ತಿದೆ. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳಿಗೆ ದೂರು ನೀಡಿದರೂ, ಸರಿ ಮಾಡುತ್ತೇವೆ ಎಂದು ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ನಿವಾಸಿಗಳು ದೂರಿದ್ದಾರೆ.

ಈ ಪ್ರದೇಶದಲ್ಲಿ ಒಂದೋ, ಎರಡೋ ಮನೆಗೆ ಈ ರೀತಿಯ ಒನ್ ಟು ಡಬಲ್ ಬಿಲ್ ಬರುತ್ತಿಲ್ಲ. ನೂರಾರು ಮನೆಗಳಿಗೆ ದುಪ್ಪಟ್ಟು ಬಿಲ್ ಬರುತ್ತಿದೆಯಂತೆ. ನೀರು ಬರದೆ ಇದರೂ ಗಾಳಿಗೆ ವಾಟರ್ ಮೀಟರ್ ತಿರುಗುತಿದೆಯಂತೆ. ನೀರು ಬರುವ ಮುನ್ನ ಮತ್ತು ನೀರು ನಿಂತ ಮೇಲೆ ವಾಟರ್ ಮೀಟರ್‌ನಲ್ಲಿರುವ ಫ್ಯಾನ್ ಜೋರಾಗಿ ರನ್ ಆಗುತ್ತಿದೆಯಂತೆ. ಹಾಗಾಗಿ ಜಾಸ್ತಿ ಬಿಲ್ ಬರುತ್ತಿದೆ ಎಂದು ಹೇಳಲಾಗುತ್ತಿದೆ. ಮೀಟರ್ ರೀಡರ್ ಬಂದಾಗ ನಾವು ಇಷ್ಟೊಂದು ನೀರು ಬಳಕೆ ಮಾಡಿಲ್ಲ ಯಾಕೆ ಇಷ್ಟೊಂದು ಬಿಲ್ ಬರುತ್ತಿದೆ ಎಂದು ಕೇಳಿದರೆ, ನೀವು ನೀರು ಬಳಕೆ ಮಾಡಿರೋದ್ರಿಂದಲೇ ಇಷ್ಟೊಂದು ಮೀಟರ್ ರೀಡಿಂಗ್ ತೋರಿಸುತ್ತಿದೆ ಎನ್ನುತ್ತಿದ್ದಾರಂತೆ. ಸಣ್ಣಪುಟ್ಟ ಮನೆಗೂ ಸಾವಿರಾರು ರೂ ಬಿಲ್ ಬರುತ್ತಿದೆ. ಹಾಗಾಗಿ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೂವರ ಬಂಧನ 290 ಗ್ರಾಂ ಚಿನ್ನ ಜಪ್ತಿ

ಆನೇಕಲ್: 4 ಪ್ರತ್ಯೇಕ ಕಳ್ಳತನ ಘಟನೆಗಳಲ್ಲಿ 1 ಕೆಜಿ ಚಿನ್ನ ಕಳುವಾದ ಬಗ್ಗೆ ಸೂರ್ಯನಗರ ಠಾಣೆಯಲ್ಲಿ ದಾಖಲಾಗಿತ್ತು. ಈ ಪೈಕಿ 290 ಗ್ರಾಂ ಚಿನ್ನವನ್ನು ರಿಕವರಿ ಮಾಡಿರುವ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ತಮಿಳುನಾಡು ಮೂಲದ ಸುಧಾಕರ್(37) ಅಜಯ್(36), ಅರವಿಂದ್ (32) ಬಂಧಿತರು.

ಮಗಳ ಮದುವೆಗಾಗಿ ಮಾಡಿಸಿಟ್ಟಿದ್ದ 240 ಗ್ರಾಂ ಚಿನ್ನಾಭರಣ ಮನೆ ಬಾಗಿಲು ಮುರಿದು ಕಳ್ಳತನ ಮಾಡಲಾಗಿದೆ ಎಂದು ಪ್ರೇಮ ಎಂಬವರು ಸೂರ್ಯನಗರ ಠಾಣೆಗೆ ದೂರು ಕೊಟ್ಟಿದ್ದರು. ತನಿಖೆ ನಡೆಸಿದ ಪೊಲೀಸರು, ಸಿಸಿ ಟಿವಿ ಆಧರಿಸಿ ತಮಿಳುನಾಡಿನಲ್ಲಿದ್ದ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರೇಮ ಒಡವೆ ಕಳೆದು ಕೊಂಡಿದ್ದ ಕಾರಣ ನಿಶ್ಚಿತಾರ್ಥವಾಗಿದ್ದ ಮದುವೆಯನ್ನು ಮುಂದೂಡಲಾಗಿತ್ತು. ಹಾಸನದ ವೃದ್ಧ ದಂಪತಿಗಳ ನಡುವೆ ಪರಸ್ಪರ ಬಿರುಕು ಮೂಡಿತ್ತು. ಮತೊಬ್ಬರು ವೈ ದ್ಯಕೀಯ ಚಿಕಿತ್ಸೆಗೆ ಒದಗಿಸಲು ಒಡವೆ ಇಟ್ಟು ಕೊಂಡಿದ್ದರು.

ಕರುನಾಡ ಕನ್ನಡ ಕಲಾಸಿರಿ ಬಳಗದ ಕಾರ್ಯ ಶ್ಲಾಘನೀಯ

ಉತ್ತಮ ಸಾಧಕ ಶಿಕ್ಷಕ ಪ್ರಶಸ್ತಿ ಕಾರ್ಯಕ್ರಮದಲ್ಲಿ ತೋತಾಪುರಿ ಸೋಮಶೇಖರ್ ಗುರೂಜಿ ಅಭಿಮತ

ಬೆಂಗಳೂರು: ಕರುನಾಡ ಕನ್ನಡ ಕಲಾಸಿರಿ ಬಳಗದ ಕಾರ್ಯ ಶ್ಲಾಘನೀಯ. ಕನ್ನಡ ಶಿಕ್ಷಕರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಸತ್ಕಾರ್ಯ. ಇನ್ನಷ್ಟು ಕನ್ನಡ ಪರ ಕೆಲಸಗಳನ್ನು ಕರುನಾಡ ಕಲಾಸಿರಿ ಬಳಗ ಮಾಡಲಿ ಎಂದು ತೋತಾಪುರಿ ಸೋಮಶೇಖರ್ ಗುರೂಜಿ ಆಶೀರ್ವಚನ ನೀಡಿದರು.

ಕೆಂಗೇರಿ ಸಮೀಪದ ದರ್ಶನ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಉತ್ತಮ ಸಾಧಕ ಶಿಕ್ಷಕ ಪ್ರಶಸ್ತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರುನಾಡ ಕನ್ನಡ ಕಲಾಸಿರಿ ಬಳಗ ಗೌರವಾಧ್ಯಕ್ಷ ಡಾ.ಟಿ ಯಲ್ಲಪ್ಪ ಮಾತನಾಡಿ, ಇಂತಹ ಕನ್ನಡದ ಕೆಲಸ ನಿರಂತರವಾಗಿ ನಮ್ಮ ಬಳಗ ನಡೆಸಿಕೊಂಡು ಹೋಗುತ್ತಿದೆ. ಕನ್ನಡ ಶಿಕ್ಷಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದಲೇ ಈ ಸಂಘಟನೆ ಕಟ್ಟಿದ್ದೇವೆ. ನೂರಾರು ಕನ್ನಡ ಸಂಘಟನೆಗಳು ತಮ್ಮ ಹೋರಾಟಗಳ ಮೂಲಕ ಕನ್ನಡದ ಪರವಾಗಿ ಧ್ವನಿ ಎತ್ತುತ್ತಾ ಕನ್ನಡದ ಉಳಿಸಲು ಹೋರಾಟ ಮಾಡುತ್ತಿವೆ. ಆದರೆ ಕರುನಾಡ ಕನ್ನಡ ಕಲಾಸಿರಿ ಬಳಗ ವಿಭಿನ್ನ ರೀತಿಯಲ್ಲಿ ಕನ್ನಡದ ನಾಡು, ನುಡಿ ಬೆಳವಣಿಗಾಗಿ ಶ್ರಮಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಹುಲಿಜಂತಿ ಮಾಳಿಂಗರಾಯ ವಂಶಸ್ಥ ಸೋಮರಾಯ ಶಿವರಮರಾಯ ಮಹಾರಾಜರು, ಸಮಾಜ ಸೇವಕ ವೆಂಕಟೇಶ್ ಮೂರ್ತಿ, ದರ್ಶನ್ ಕಾಲೇಜಿನ ನಿರ್ದೇಶಕ ಫಾದರ್ ಚಾರ್ಲ್ಸ್, ಫಾದರ್ ರೋಷನ್ ರೋಜಾರಿಯೋ, ಲಿಟಲ್ ಬ್ಲೂಂ ಸಂಸ್ಥಾಪಕಿ ಸರಸ್ವತಿ ಮೇಡಂ, ಬಳಗದ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಪಿಎಟಿ ಸಂಸ್ಥೆಯ ರವಿತಾ, ಯುವನಿಯೋಗದ ಸಂಸ್ಥಾಪಕ ಕಿರಣ್, ರಕ್ತದಾನಿ ಮೈಸೂರಿನ ತ್ಯಾಗರಾಜ, ಕೆಆರ್ ಸೇವಾ ಚಾರಿಟಬಲ್ ಅಧ್ಯಕ್ಷ ರಾಜಶೇಖರ್, ಸಮಾಜ ಸೇವಕ ಆನಂದ್, ಶ್ರೀಧರ್ ಸೇರಿದಂತೆ ಇತರರಿದ್ದರು.

ಕೆಂಗೇರಿ ಸಮೀಪದ ದರ್ಶನ್ ಕಾಲೇಜಿನ ಸಭಾಂಗಣದಲ್ಲಿ ಕರುನಾಡ ಕಲಾಸಿರಿ ಬಳಗದಿಂದ ಆಯೋಜಿಸಿದ್ದ ಉತ್ತಮ ಸಾಧಕ ಶಿಕ್ಷಕ ಪ್ರಶಸ್ತಿ ಕಾರ್ಯಕ್ರಮಕ್ಕೆ ತೋತಾಪುರಿ ಸೋಮಶೇಖರ್ ಗುರೂಜಿ ಸೇರಿದಂತೆ ಗಣ್ಯರು ಚಾಲನೆ ನೀಡಿದರು.

200 ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ

ಕನ್ನಡ ಶಿಕ್ಷಕರನ್ನು ಪ್ರೋತ್ಸಾಹಿಸಿ, ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನ ಹುಟ್ಟಿಸುವ ಕೆಲಸವನ್ನು ಕರುನಾಡ ಕಲಾಸಿರಿ ಬಳಗ ಮಾಡುತ್ತಿದೆ. ಈ ವರ್ಷ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆದ 1800 ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾರ್ಥಿ ಪ್ರಶಸ್ತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಸಾಧನೆ ಹಿಂದೆ ಬೆನ್ನುಲುಬಾಗಿ ಪ್ರೋತ್ಸಾಹಿಸಿದ 200 ಕನ್ನಡ ಶಿಕ್ಷಕರಿಗೆ ಉತ್ತಮ ಸಾಧಕ ಶಿಕ್ಷಕ ಪ್ರಶಸ್ತಿ ನೀಡಲಾಗಿದೆ.

ವಿದ್ಯಾರ್ಥಿಗಳಲ್ಲಿ, ಕನ್ನಡ ಶಿಕ್ಷಕರಲ್ಲಿ, ಕನ್ನಡದ ಭಾಷಾಭಿಮಾನ ಉಳಿದರೆ ಮಾತ್ರ ಕನ್ನಡದ ಉಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಕರುನಾಡ ಕಲಾಸಿರಿ ಬಳಗ ಕನ್ನಡವನ್ನು ಕಟ್ಟುವ ಕೆಲಸ ಮಾಡುತ್ತಿದೆ.

-ಡಾ. ಅಂಬರೀಶ್ ಸಿ.ಎಂ
ಕರುನಾಡ ಕಲಾಸಿರಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಜಮೀನು ವಿವಾದ: ಅಣ್ಣನಿಂದ ತಮ್ಮನ ಕೊಲೆ

ಕೋಲಾರ: ಜಮೀನು ವಿವಾದ ಹಿನ್ನೆಲೆ ಅಣ್ಣ ತಮ್ಮನನ್ನು ಹೊಡೆದು ಕೊಲೆ ಮಾಡಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಕೋಲಾರ ಜಿಲ್ಲೆಯ ಕೆಜಿಎಫ್ ತಾಲೂಕು ಎನ್ಜಿ ಹುಲ್ಕುರು ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ತಂದೆ ಆಸ್ತಿಯಲ್ಲಿ ನಾಲ್ಕು ಗುಂಟೆ ಪಾಲು ಬೇಕೆಂದು ಮೂವರು ಅಣ್ಣ ತಮ್ಮಂದಿರು ನ್ಯಾಯಾಲಯದ ಮೊರೆ ಹೋಗಿದ್ದರು. ಜಮೀನು ವಿವಾದ ಸದ್ಯ ನ್ಯಾಯಾಲಯದಲ್ಲಿ ಬಾಕಿ ಇದ್ದು, ಸದರಿ ಜಮೀನಿನಲ್ಲಿ ತಮ್ಮ ರಮೇಶ್ ಶೆಡ್ ನಿರ್ಮಿಸಲು ತಯಾರಿ ನಡೆಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ವಿಚಾರ ತಿಳಿದ ಸೀನಪ್ಪ (ಶ್ರೀನಿವಾಸ್) ಮತ್ತು ಸಂಪಂಗಿ ಇಬ್ಬರೂ ರಮೇಶ್ ಬಳಿ ತಕರಾರು ತೆಗೆದಿದ್ದಾರೆ. ಸೀನಪ್ಪ ಮತ್ತು ರಮೇಶ್ ನಡುವೆ ಮಾತಿನ ಚಕಮಕಿ ನಡೆದು ಕೋಪಾವೇಶದಲ್ಲಿ ಸೀನಪ್ಪ ಪಕ್ಕದಲ್ಲಿದ್ದ ದೊಣ್ಣೆಯನ್ನು ತೆಗೆದು ರಮೇಶ್‌ಗೆ ಬಲವಾಗಿ ಹೊಡೆದ ಪರಿಣಾಮ ರಮೇಶ್ ಸ್ಥಳದಲ್ಲೆ ಮೃತಪಟ್ಟಿದ್ದಾನೆ. ಘಟನೆ ನಡೆಯುವಾಗ ಅಕ್ಕಪಕ್ಕದ ಜನರೂ ಗುಂಪುಗೂಡಿದ್ದು, ತಮ್ಮ ಮೃತನಾದ ಎಂದು ತಿಳಿಯುತ್ತಿದ್ದಂತೆ ಭಯದಿಂದ ಸೀನಪ್ಪ ಮತ್ತು ಸಂಪಂಗಿ ಸ್ಥಳದಿಂದ ಪರಾರಿಯಾಗಿದ್ದಾರೆ

1 ವರ್ಷದಿಂದ ದಲಿತ ಸಿಎಂ ಕೂಗು ನಿಂತಿದೆ

ಕಲಬುರಗಿ: ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ದಲಿತ ಸಿಎಂ ಕೂಗು ನಿಂತಿದೆ. ಸದ್ಯ ಯಾವುದೇ ಸಿಎಂ ಬದಲಾವಣೆ ಚರ್ಚೆ ಇಲ್ಲ. ಹೊಸ ಎಲೆಕ್ಷನ್ ಬಳಿಕ ದಲಿತ ಸಿಎಂ ಬಗ್ಗೆ ನೋಡೋಣ. ಈಗ 2028ರ ಚುನಾವಣೆಯ ಗಂಭೀರ ಚರ್ಚೆ ಮಾಡಬೇಕಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು. ಭಾನುವಾರ ನಗರದಲ್ಲಿ ರಾಜ್ಯದಲ್ಲಿ ದಲಿತ ಸಿಎಂ ಕೂಗು ಹಾಗೂ ನವೆಂಬರ್ ತಿಂಗಳಲ್ಲಿ ಸಿಎಂ ಬದಲಾವಣೆ ಎಚ್.ವಿಶ್ವನಾಥ್ ಹೇಳಿಕೆ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶ್ವನಾಥ್ ಹೇಳಿಕೆಗೂ ನಮಗೂ ಸಂಬಂಧ ಇಲ್ಲ. ಅವರು ನಮ್ಮ ಪಕ್ಷದವರಲ್ಲ. ನಮ್ಮಪಕ್ಷದವರು ಹೇಳಿದರೇ, ಅದಕ್ಕೆ ಪ್ರತಿಕ್ರಿಯೆ ನೀಡಬಹುದು ಇವರಿಗೆ ಉತ್ತರ ನೀಡುವ ಅಗತ್ಯವಿಲ್ಲ ಎಂದು ಟಾಂಗ್ ನೀಡಿದರು. ಗ್ಯಾರಂಟಿಯಿಂದ ಅಭಿವೃದ್ಧಿ ಕೆಲಸ ನಿಂತಿಲ್ಲ: ಬೊಮ್ಮಾಯಿ ಅವಧಿಯಲ್ಲಿ ಇಲಾಖೆಗಳಿಗೆ ನೀಡಿದ ಅನುದಾನ, ನಮ್ಮ ಸರಕಾರದ ಅವಧಿಯಲ್ಲಿ ಇಲಾಖೆಗಳಿಗೆ ಅನುದಾನ ನೋಡಲಿ. ಗ್ಯಾರಂಟಿ ಅಭಿವೃದ್ಧಿ ಇಲ್ಲ ಎಂದು ಎರಡು ವರ್ಷದಿಂದ ಬಿಜೆಪಿ ಅವರು ಹೇಳುತ್ತಿದ್ದಾರೆ. ಮುಂದಿನ ಮೂರು ವರ್ಷ ಬಿಜೆಪಿಯವರು ಗ್ಯಾರಂಟಿಯಿಂದ ಅಭಿವೃದ್ಧಿ ಇಲ್ಲ ಎಂದು ಹೇಳುತಾ ಓಡಾಡುತ್ತಾರೆ. ಗ್ಯಾರಂಟಿಯಿಂದ ಯಾವ ಅಭಿವೃದ್ಧಿ ಸಹ ನಿಂತಿಲ್ಲ ಎಂದು ತಿರುಗೇಟು ನೀಡಿದರು.

ಬೀದಿ ನಾಯಿಗಳ ದಾಳಿ ಏಳು ಕುರಿಗಳ ಸಾವು

ಚಿಕ್ಕಬಳ್ಳಾಪುರ: ಬೀದಿನಾಯಿಗಳ ದಾಳಿಗೆ ಏಳು ಕುರಿಗಳು ಬಲಿಯಾದ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ತಾಲೂಕಿನ ಗೌನವಾರಪಲ್ಲಿ ಗ್ರಾಮದಲ್ಲಿ ನಡೆದಿದೆ. ರವಿಕುಮಾರ್ ಎಂಬುವರಿಗೆ ಸೇರಿದ 7 ಕುರಿಗಳು ಬೀದಿ ನಾಯಿಗಳ ದಾಳಿಗೆ ಮೃತಪಟ್ಟಿವೆ. ಏಕಾಏಕಿ 5-6 ನಾಯಿಗಳು ಕುರಿಗಳ ಹಿಂಡಿನ ಮೇಲೆ ಹೆಗರಿ ದಾಳಿ ನಡೆಸಿವೆ. ಸುಮಾರು 60 ಸಾವಿರ ರು ನಷ್ಟ ಉಂಟಾಗಿದ್ದು, ಪರಿಹಾರ ನೀಡಲು ರವಿಕುಮಾರ್ ಸರಕಾರಕ್ಕೆ ಮನವಿ ಮಾಡಿದ್ದಾರೆ. ಬೀದಿ ನಾಯಿಗಳು ಹೆಚ್ಚಾಗಿ ಜನರ ಮೇಲೆ ದಾಳಿ ಮಾಡುತ್ತಿವೆ. ಬೀದಿ ನಾಯಿಗಳನ್ನು ಹಿಡಿದು ಬೇರೆ ಪ್ರದೇಶಕ್ಕೆ ಸ್ಥಳಾಂತರ ಮಾಡಲು ಗ್ರಾಮಪಂಚಾಯಿತಿ ಅಧಿಕಾರಿಗಳಿಗೆ ಸ್ಥಳೀಯರು ಆಗ್ರಹಿಸಿದ್ದಾರೆ.

... ಪೈಲಟ್ ಸೇರಿ 7 ಸಾವು

← ಮೊದಲಪುಟದಿಂದ

ರುದ್ರಪ್ರಯಾಗ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಪತನವಾದ ಸುದ್ದಿ ಕೇಳಿ ತೀವ್ರ ದುಃಖವಾಗಿದೆ. ಹೆಲಿಕಾಪ್ಟರ್‌ನಲ್ಲಿ ಪುಟ್ಟ ಮಗು ಸೇರಿ ಒಟ್ಟು 7 ಜನರಿದ್ದರು. ಎಸ್‌ಡಿಆರ್‌ಎಫ್, ಸ್ಥಳೀಯ ಆಡಳಿತ ಮತ್ತು ಇತರ ರಕ್ಷಣಾ ತಂಡಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಎಲ್ಲಾ ಪ್ರಯಾಣಿಕರ ಸುರಕ್ಷತೆಗಾಗಿ ಬಾಬಾ ಕೇದಾರನನ್ನು ಪ್ರಾರ್ಥಿಸುತ್ತೇನೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮೊಬೈಲ್ ಕಸಿದು ಮರವೇರಿದ ಮಂಗ

ಸುದ್ದಿ

ಮಾಲಿನ್ಯ ನಿಯಂತ್ರಣಕ್ಕೆ ಕಾನೂನಿಗಿಂತ ಜಾಗೃತಿ ಅಗತ್ಯ

ರಾಜ್ಯವನ್ನು ಕಾಡುತ್ತಿರುವ ವಿವಿಧ ಮಾದರಿಯ ಮಾಲಿನ್ಯವನ್ನು ನಿಯಂತ್ರಿಸಲು ಸರಕಾರ ಹತ್ತಾರು ಕಾನೂನು ತರಬಹುದು. ಆದರೆ ಈ ಎಲ್ಲ ಕಾನೂನು ಮೀರಿ, ಜನರಲ್ಲಿ ಮಾಲಿನ್ಯ ನಿಯಂತ್ರಿಸುವ ಅರಿವು ಮೂಡಿಸಿದಾಗ ಮಾತ್ರ ಮಾಲಿನ್ಯ ನಿಯಂತ್ರಿಸುವಲ್ಲಿ ಯಶಸ್ಸು ಸಾಧ್ಯ. ಆದ್ದರಿಂದ ಮುಂದಿನ ಮೂರು ತಿಂಗಳುಗಳ ಕಾಲ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ, ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅಭಿಪ್ರಾಯಪಟ್ಟರು. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪನೆಗೊಂಡು 50 ವರ್ಷ ಕಳೆದಿರುವ ಹಿನ್ನೆಲೆಯಲ್ಲಿ 'ಪ್ಲಾಸ್ಟಿಕ್ ಮಾಲಿನ್ಯವನ್ನು ಅಂತ್ಯಗೊಳಿಸೋಣ' ಎನ್ನುವ ಧ್ಯೇಯವಾಕ್ಯದೊಂದಿಗೆ ಅರಮನೆ ಮೈದಾನದಲ್ಲಿ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನೀಡಿರುವ ವಿಶೇಷ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ

- **ಮಾಲಿನ್ಯ ನಿಯಂತ್ರಣ ಮಂಡಳಿಯ ಜವಾಬ್ದಾರಿ ಹೇಗನಿಸುತ್ತಿದೆ?**

– ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ನಾಲ್ಕು ತಿಂಗಳಾಗಿದೆ. ಸುಮಾರು 50 ವರ್ಷದ ಇತಿಹಾಸವಿರುವ ಮಂಡಳಿಗೂ ಕಾಂಗ್ರೆಸ್ ಪಕ್ಷಕ್ಕೂ ಒಂದು ಅವಿನಾಭಾವ ಸಂಬಂಧವಿದೆ. ಸ್ವಾಯತ್ತ ಸಂಸ್ಥೆಯಾಗಿರುವ ಈ ಮಂಡಳಿಯನ್ನು ಈ ಹಿಂದೆ ಅನೇಕರು, ಸರಿಯಾದ ರೀತಿಯಲ್ಲಿ ನಿಭಾಯಿಸಿಲ್ಲ. ಮಂಡಳಿಯ ಅಧಿಕಾರ ವ್ಯಾಪ್ತಿಯನ್ನು ಅರ್ಥೈಸಿಕೊಳ್ಳುವಲ್ಲೇ ಹಿಂದಿನವರು ವಿಫಲವಾಗಿದ್ದರು.

- **ಅಧಿಕಾರ ವಹಿಸಿಕೊಂಡ ಬಳಿಕ ಎದುರಾದ ಬಹುದೊಡ್ಡ ಸವಾಲುಗಳೇನು?**

– ಸವಾಲು ಎನ್ನುವುದಕ್ಕಿಂತ ಇಲ್ಲಿ ಹಲವು ಸಮಸ್ಯೆಗಳಿವೆ. ಮೊದಲೇ ಹೇಳಿದಂತೆ ಈ ಹಿಂದಿನವರು ತಮ್ಮ ಅಧಿಕಾರಾವಧಿಯಲ್ಲಿ ಸರಿಯಾಗಿ ನಿರ್ವಹಣೆ ಮಾಡಿಲ್ಲ. ಪ್ರಮುಖವಾಗಿ, ನಮ್ಮಲ್ಲಿ ಸಿಬ್ಬಂದಿಯ ಕೊರತೆಯಿದೆ. 730 ಹುದ್ದೆಗಳಿದ್ದು, ಇದರಲ್ಲಿ 230 ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ತಾಂತ್ರಿಕ ಪರಿಣಿತರನ್ನು ಹೊಂದಿರಬೇಕಾದ ಮಂಡಳಿಯಲ್ಲಿ ಸಿಬ್ಬಂದಿಗಳೇ ಇಲ್ಲ ಎಂದರೆ ಹೇಗೆ? ಬರುವ ದೂರನ್ನು ದಾಖಲಿಸಲು, ಸ್ಯಾಂಪಲ್‌ಗಳನ್ನು ಪರೀಕ್ಷಿಸಲು, ಸಂಗ್ರಹಿಸಲು ಸಿಬ್ಬಂದಿ ಅತ್ಯಗತ್ಯ. ಈಗ ನಾಲ್ವರು ಮಾಡುವ ಕೆಲಸವನ್ನು ಒಬ್ಬರೇ ಮಾಡುತ್ತಿರುವುದರಿಂದ ಹಲವು ಸಮಸ್ಯೆಯಾಗುತ್ತಿದೆ.

ಇನ್ನು ಇಡೀ ರಾಜ್ಯಕ್ಕೆ 15ವರ್ಷದೊಳಗಿನ ವಾಹನಗಳನ್ನು ಬಳಸುವಂತೆ ಆದೇಶ ಹೊರಡಿಸುವ ನಮ್ಮ ಮಂಡಳಿಯಲ್ಲಿಯೇ ಅನೇಕ ವಾಹನಗಳ ಆಯಸ್ಸು 15 ವರ್ಷ ಕಳೆದಿದೆ. ಮಂಗಳೂರಿಗೆ ಪ್ರವಾಸಕ್ಕೆ ಹೋದ ಸಮಯದಲ್ಲಿ ನಮ್ಮ ಮಂಡಳಿಯ ಹಳೇ ವಾಹನಗಳನ್ನು ನೋಡಿ ಪ್ರಶ್ನಿಸಿದಾಗ, ಅನುದಾನ ಕೊರತೆಯಿಂದ ಇವುಗಳನ್ನೇ ಬಳಸಲಾಗುತ್ತಿದೆ ಎನ್ನುವ ಉತ್ತರವನ್ನು ಅಧಿಕಾರಿಗಳು ನೀಡಿದರು. ಎಲ್ಲರಿಗೂ ಸೂಚನೆ ನೀಡುವ ನಾವೇ ಕಾನೂನು ಉಲ್ಲಂಘಿಸಿದರೆ ಹೇಗೆ? ಎಂದು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಿಎಂ ಸಿದ್ದರಾಮಯ್ಯ ಅವರ ಬಳಿ ಸಿಬ್ಬಂದಿ ನೇಮಕ ಹಾಗೂ ನೂತನ ವಾಹನಗಳ ಖರೀದಿಗೆ ಮನವಿ ಮಾಡಿದಾಗ, ಆರ್ಥಿಕ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ ಒಪ್ಪಿಗೆ ಕೊಡಿಸಿದರು.



> ಮಾಲಿನ್ಯ ನಿಯಂತ್ರಣದ ಹೆಸರಲ್ಲಿ ಕಾನೂನು, ಕಾಯಿದೆ, ದಂಡ ವಿಧಿಸುವ ಮೊದಲು ಮಾಲಿನ್ಯ ನಿಯಂತ್ರಣ ವಿಷಯದಲ್ಲಿ ಜನರೇನು ಮಾಡಬೇಕು ಎನ್ನುವ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕಿದೆ. ಆದ್ದರಿಂದ ಮಾಲಿನ್ಯ ಮಂಡಳಿಯ ಸುವರ್ಣಮಹೋತ್ಸವದ ಸಮಯದಲ್ಲಿ ಮೂರು ತಿಂಗಳ ಕಾಲ ರಾಜ್ಯಾದ್ಯಂತ ಜನಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುವುದು.
>
> – ಪಿ.ಎಂ. ನರೇಂದ್ರ ಸ್ವಾಮಿ ಅಧ್ಯಕ್ಷರು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ

- ಮಾಲಿನ್ಯ ನಿಯಂತ್ರಣದ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯ
- 10ಲಕ್ಷಕ್ಕಿಂತ ಕಡಿಮೆ ಮೊತ್ತದ ಟೆಂಡರ್‌ಗೆ ಮಂಡಳಿಯೇ ಕರೆಯಲು ಸರಕಾರ ಒಪ್ಪಿಗೆ
- ರಾಜ್ಯದ 34,500 ಆಸ್ಪತ್ರೆಗಳಿಂದ ನಿತ್ಯ 74.01 ಟನ್ ಜೈವಿಕ-ವೈದ್ಯಕೀಯ ತ್ಯಾಜ್ಯ ಉತ್ಪಾದನೆ; ಇದನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕಿದೆ
- ರಾಜ್ಯದ 197 ಕೆರೆಗಳ ನೀರಿನ ಗುಣಮಟ್ಟ ಪರಿವೀಕ್ಷಣೆಗೆ ಅವಕಾಶ

ಇದೀಗ ಹೊಸ ವಾಹನಗಳನ್ನು ಖರೀದಿಸಲಾಗುತ್ತಿದ್ದು, ಒಳಮೀಸಲು ನೀಡಿದ ಬಳಿಕ ಖಾಲಿಯಿರುವ ಶೇ.80ರಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು.

- **ನಿಯಂತ್ರಣ ಕೇವಲ ಸರಕಾರದಿಂದ ನಿರ್ವಹಣೆ ಸಾಧ್ಯವೇ?**

– ಮಾಲಿನ್ಯ ನಿಯಂತ್ರಣ ಮಾಡುವುದಕ್ಕೆ ನಾವು ಏನೇ ನಿಯಮ, ದಂಡ, ಶಿಕ್ಷೆ ವಿಧಿಸಬಹುದು. ಆದರೆ ಸಾರ್ವಜನಿಕರಲ್ಲಿಯೇ ಮಾಲಿನ್ಯ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಬೇಕಿದೆ. ಮಂಡಳಿಯೊಂದಿಗೆ ಸ್ಥಳೀಯ ಆಡಳಿತಗಳೂ ಸಾಥ್ ನೀಡಬೇಕಿದೆ. ನಗರೀಕರಣದ ಬೆಳವಣಿಗೆಯಿಂದ ಮಾಲಿನ್ಯದ ಮಟ್ಟವು ತೀವ್ರ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಇನ್ನು ಇದರ ಜತೆಗೆ ನಗರದಲ್ಲಿ ನೀರು ಶುದ್ಧೀಕರಣ ಘಟಕಗಳು ಈ ವೇಗಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತಿಲ್ಲ. ಖಾಸಗಿ ಬಡಾವಣೆಗಳು ಹಾಗೂ ದೊಡ್ಡ ದೊಡ್ಡ ಲೇಔಟ್‌ಗಳಲ್ಲಿ ಎಸ್‌ಸಿಟಿ ಸ್ಥಾಪಿಸುವಂತೆ ಸೂಚನೆ ನೀಡಿದ್ದೇವೆ. ಆದರೆ ಇದು ಯಾವ ರೀತಿಯಲ್ಲಿ ಶುದ್ಧೀಕರಣವನ್ನು ನಿಭಾಯಿಸುತ್ತಿದೆ ಎನ್ನುವುದನ್ನು ಸ್ಥಳೀಯ ಆಡಳಿತಗಳು ನಿಭಾಯಿಸಬೇಕು.

ಇನ್ನು ಯಾವುದೇ ಊರಿಗೆ ಹೋಗಿ, ಅಲ್ಲಿ ಊರಾಚೆ ಕಸಗಳನ್ನು ಎಸೆಯುವುದು ಸಾಮಾನ್ಯವಾಗಿದೆ. ಈ ರೀತಿ ಮಾಡಬಾರದು ಎನ್ನುವ ಕುರಿತು ಜಾಗೃತಿಯನ್ನು ಜನರಲ್ಲಿ ಮೂಡಿಸಬೇಕಿದೆ. ಈ ಹಿನ್ನಲೆಯಲ್ಲಿ 50 ವರ್ಷದ ಆಚರಣೆಯ ಸಮಯದಲ್ಲಿ ಮುಂದಿನ ಮೂರು ತಿಂಗಳ ಕಾಲ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತೇವೆ. ಸಾರ್ವಜನಿಕ ಜಾಥಾ, ಕಾರ್ಯಕ್ರಮಗಳ ಮೂಲಕ ಜನರಿಗೆ ಮಂಡಳಿಯ ಕಾರ್ಯಚರಣೆಯ ಜತೆ ಜತೆಗೆ ಸಾರ್ವಜನಿಕರು ಯಾವ ರೀತಿಯಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಕೈಜೋಡಿಸಬೇಕು ಎನ್ನುವ ಬಗ್ಗೆ ಮಾಹಿತಿ ನೀಡುವ ಕೆಲಸವನ್ನು ಮಾಡುತ್ತೇವೆ. ಕೇವಲ ಸಾರ್ವಜನಿಕರು ಮಾತ್ರವಲ್ಲದೇ, ಬೃಹತ್ ಕೈಗಾರಿಕೆ, ಸಣ್ಣ ಕೈಗಾರಿಕೆ, ವಿವಿಧ ಉದ್ಯಮಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನಿನ ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ.

- **ಕೈಗಾರಿಕೆಗಳಿಂದಾಗುತ್ತಿರುವ ಪರಿಸರ ಹಾನಿಗೆ ಯಾವ ಕ್ರಮವಹಿಸುವಿರಿ?**

– ಬೃಹತ್ ಕೈಗಾರಿಕೆಯ ಸಣ್ಣ ತಪ್ಪುಗಳು ಬಹುದೊಡ್ಡ ದುರಂತಕ್ಕೆ ಕಾರಣವಾಗುತ್ತದೆ. ಕೈಗಾರಿಕೆಗಳು ನದಿಗೆ ಬಿಡುವ ಸಂಸ್ಕರಿಸದ ನೀರು, ವಾತಾವರಣಕ್ಕೆ ಬಿಡುತ್ತಿರುವ ಹೊಗೆಯಿಂದ ಇಡೀ ಸಮಾಜಕ್ಕೆ ಸಮಸ್ಯೆಯಾಗುತ್ತದೆ. ಆದ್ದರಿಂದ ಕೈಗಾರಿಕೆಗಳ ಇಂತಹ ಅಲ್ಯಕ್ಷದ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಮಾಲಿನ್ಯದ ನಿಯಂತ್ರಣಕ್ಕೆ ಅಗತ್ಯ ಕಾನೂನು ಕ್ರಮವಹಿಸಲಾಗುತ್ತಿದೆ. ಕಳೆದ ಸಭೆಯೊಂದರಲ್ಲಿಯೇ 40 ಕೈಗಾರಿಕೆಗಳನ್ನು ಮುಚ್ಚುವುದಕ್ಕೆ ಸೂಚನೆ ನೀಡಿದ್ದೇವೆ. ಇರುವ ಲೋಪಗಳನ್ನು ಸರಿಪಡಿಸಿ, ಸ್ಥಳೀಯ ಆಡಳಿತದಿಂದ ಅನುಮತಿ ಪಡೆದುಕೊಂಡು ಬಂದರೆ ಅಂತಹ ಕೈಗಾರಿಕೆಗಳ ಪುನರಾರಂಭಕ್ಕೆ ಚಿಂತನೆ ನಡೆಸುತ್ತೇವೆ.

- **50 ವರ್ಷ ಪೂರ್ಣಗೊಳಿಸಿರುವ ಈ ಸಮಯದಲ್ಲಿ ಮಂಡಳಿಯ ಯೋಜನೆಗಳೇನು?**

– ಸುವರ್ಣ ಮಹೋತ್ಸವಕ್ಕೂ ಕಾಂಗ್ರೆಸಿಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ, 1972ರಲ್ಲಿ ಪ್ರಧಾನಿ ದಿ.ಇಂದಿರಾ ಗಾಂಧಿ ಅವರು ಸಾರ್ಕ್ ಸಮ್ಮೇಳನದಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಯಾವೆಲ್ಲ ರೀತಿಯಲ್ಲಿ ಕಾರ್ಯನಿರ್ವಹಿಸಬಹುದು ಎಂದು ವಿಶ್ವದ ಕಣ್ಣು ತೆರೆಸುವ ಭಾಷಣವನ್ನು ಮಾಡುತ್ತಾರೆ. ಬಳಿಕ ಅದಕ್ಕಾಗಿ ಪ್ರತ್ಯೇಕ ಕಾನೂನುಗಳನ್ನು ಜಾರಿಗೆ ತಂದರು. ಬಳಿಕ 94ರಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಜಾರಿಗೊಳಿಸಿದರು. ಇಂದಿರಾಗಾಂಧಿ ಅವರು ಹಲವು ಕಾನೂನುಗಳನ್ನು ಜಾರಿಗೊಳಿಸಿದ ಬಳಿಕ ಈ ಕಾನೂನುಗಳಿಗೆ ಬಲತುಂಬುವ ನಿಟ್ಟಿನಲ್ಲಿ ಕೆಲಸ ಮಾಡಿದ್ದು ರಾಜೀವ್ ಗಾಂಧಿ ಅವರು. ಇನ್ನು ಇತ್ತೀಚಿನ ದಿನದಲ್ಲಿ ಕಾನೂನುಗಳಿಗೆ ತಿದ್ದುಪಡಿ ತಂದಿದ್ದು ಮನಮೋಹನ್ ಸಿಂಗ್ ಸರಕಾರ. ಆದ್ದರಿಂದ ಈ ಎಲ್ಲದರಲ್ಲಿಯೂ ಕಾಂಗ್ರೆಸ್ ಬೇರುಗಳಿವೆ. ಆದ್ದರಿಂದ ಸೋಮವಾರದ ಕಾರ್ಯಕ್ರಮದಲ್ಲಿ ಮಂಡಳಿ ಸ್ಥಾಪನೆಗೆ ಕಾರಣ ಯಾರು ಎನ್ನುವುದನ್ನು ತಿಳಿಸಲು ಇಂದಿರಾ ಗಾಂಧಿ ಅವರ ಚಿತ್ರವನ್ನು ಬಳಸಿಕೊಳ್ಳಲಾಗಿದೆ.

- **ಪ್ಲಾಸ್ಟಿಕ್ ನಿಷೇಧ ಕೇವಲ ಕಾಗದದ ಹುಲಿಯಾಗಿದೆ ಅನಿಸುವುದಿಲ್ಲವೇ?**

– ಪ್ಲಾಸ್ಟಿಕ್ ಎನ್ನುವುದು ಕರ್ನಾಟಕದ ಸಮಸ್ಯೆಯಾಗಿ ಉಳಿದಿಲ್ಲ. ಇದು ಇಡೀ ವಿಶ್ವದ ಸಮಸ್ಯೆಯಾಗಿದೆ. ಪ್ರಕೃತಿ, ಭೂಮಿತಾಯಿಯನ್ನು ಸಂರಕ್ಷಿಸಿಕೊಳ್ಳಲು ಪ್ಲಾಸ್ಟಿಕ್‌ನಿಂದ ದೂರ ಹೋಗಬೇಕಿದೆ. ವಿಶ್ವಸಂಸ್ಥೆ ಈಗಾಗಲೇ ನೋ ಪ್ಲಾಸ್ಟಿಕ್ ಘೋಷವಾಕ್ಯವನ್ನು ನೀಡಿದ್ದು, ಅದನ್ನೇ ಕರ್ನಾಟಕದಲ್ಲಿಯೂ ಅನುಸರಿಸಲಾಗುತ್ತಿದೆ. ಪ್ಲಾಸ್ಟಿಕ್‌ನ್ನು ರಿಸೈಕಲ್ ಮಾಡುವುದಕ್ಕೆ ಯಾವ ರೀತಿಯಲ್ಲಿ ಕ್ರಮವಹಿಸಬೇಕು ಎನ್ನುವ ಬಗ್ಗೆಯೂ ಚಿಂತನೆ ನಡೆಸಬೇಕಿದೆ. ನಿಷೇಧಗೊಂಡಿರುವ ಪ್ಲಾಸ್ಟಿಕ್ ವಿಷಯದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಈಗಾಗಲೇ ಹಲವು ಕ್ರಮಗಳನ್ನು ವಹಿಸಲಾಗಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿಯೇ 1.65 ಲಕ್ಷ ಕಡೆ ದಾಳಿ ನಡೆಸಿದ್ದು, 1012 ಟನ್ ಪ್ಲಾಸ್ಟಿಕ್ ಅನ್ನು ಜಪ್ತಿ ಮಾಡಿದ್ದು, 5.65 ಕೋಟಿ ದಂಡ ವಿಧಿಸಲಾಗಿದೆ. ಈ ಅಂಕಿ-ಅಂಶಗಳು ನೋಡಿದಾಗ ಪ್ಲಾಸ್ಟಿಕ್ ಎನ್ನುವುದು ಜನರಲ್ಲಿ ಯಾವ ಮಟ್ಟದಲ್ಲಿ ಹಾಸುಹೊಕ್ಕಾಗಿದೆ ಎನ್ನುವುದನ್ನು ಸ್ಪಷ್ಟವಾಗುತ್ತದೆ. ಆದ್ದರಿಂದ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಲಾಗುತ್ತದೆ.

ಸಮಾಜ ಕಲ್ಯಾಣ ಸಚಿವ ಎಚ್.ಸಿ ಮಹಾದೇವಪ್ಪ ಸ್ಪಷ್ಟನೆ

ರಾಜ್ಯದಲ್ಲಿ ಸಿಎಂ ಬದಲಾವಣೆ ಪ್ರಸ್ತಾಪವಿಲ್ಲ

ಕಲಬುರಗಿ: ರಾಜ್ಯದಲ್ಲಿ ಸೆಪ್ಟೆಂಬರ್ ವೇಳೆಗೆ ಸಿಎಂ ಬದಲಾವಣೆ ಪ್ರಸ್ತಾವನೆ ಸರಕಾರದ ಮುಂದಿಲ್ಲ. ಸದ್ಯ ಸಿಎಂ ಆಗಿ ಸಿದ್ದರಾಮಯ್ಯ ಇದ್ದಾರೆ. ಅವರೇ ಮುಂದುವರೆಯುತ್ತಾರೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ ಮಹಾದೇವಪ್ಪ ಸ್ಪಷ್ಟಪಡಿಸಿದರು.

ಸೆಪ್ಟೆಂಬರ್ ನಂತರ ಸಿಎಂ ಬದಲಾವಣೆ ಎನ್ನುವ ಎಚ್. ವಿಶ್ವನಾಥ್ ಹೇಳಿಕೆ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಬದಲಾವಣೆ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ. ವಿಶ್ವನಾಥ್ ಅವರಿಗೆ ಹೈಕಮಾಂಡ್ ಯಾವಾಗ ಆ ರೀತಿ ಹೇಳಿದ್ದಾರೋ ನಮಗೆ ಗೊತ್ತಿಲ್ಲ. ಆದರೆ, ಸಿಎಂ ಆಗಿ ಸಿದ್ದರಾಮಯ್ಯ ಅವರೇ ಮುಂದುವರಿಯಲಿದ್ದಾರೆ ಎಂದು ಹೇಳಿದರು.

ಇನ್ನೂ, ಬೆಂಗಳೂರು ಕಾಲ್ತುಳಿತ ದುರಂತಕ್ಕೆ ಸಿಎಂ., ಡಿಸಿಎಂ ನೇರ ಹೊಣೆ ಎನ್ನುವ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಕಕಾಲ್ತುಳಿತ ದುರಂತದಿಂದ ತುಂಬಾ ನೋವಾಗಿದೆ. ಅಂತಹ ಘಟನೆ ಆಗಬಾರದಿತ್ತು, ಆಗಿದೆ. ಅದಕ್ಕೆ ವಿಷಾದ ಇದೆ. ಆದರೆ, ವಿಜಯೇಂದ್ರ ಹೇಳಿಕೆ ತುಂಬಾ ಬಾಲಿಷವಾಗಿದೆ ಎಂದು ತಿರುಗೇಟು ನೀಡಿದರು.

ರಾಜಕೀಯ ಬೆರೆಸುವುದು ಮೂರ್ಖತನ

ಕಾಲ್ತುಳಿತ ದುರಂತದ ಲೋಪ ಕಂಡು ಹಿಡಿಯಲು ಸಮಿತಿ ನೇಮಕ ಮಾಡಲಾಗಿದೆ. ಈ ಬಗ್ಗೆ ಸಂಪೂರ್ಣ ತನಿಖೆ ಮುಗಿಯಬೇಕಾಗಿದೆ. ಇದರಲ್ಲಿ ರಾಜಕೀಯ ಬೆರೆಸುವುದು ಮೂರ್ಖತನ. ಇಂತಹ ಘಟನೆ ಯುಪಿ ಸೇರಿ ಬೇರೆ ಬೇರೆ ಕಡೆ ಸಹ ನಡೆದಿವೆ. ಗುಜರಾತನಲ್ಲಿ ವಿಮಾನ ದುರಂತ ಆಗಿದೆ. ನಾವು ಪ್ರಧಾನಿ ರಾಜೀನಾಮೆ ಕೇಳಿದ್ದಿವಾ? ಇಂತದ್ದರಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದು ಸಚಿವ ಎಚ್.ಸಿ ಮಹಾದೇವಪ್ಪ ತಿಳಿಸಿದರು.

ವೃದ್ಧೆ ಮೇಲೆ ಅತ್ಯಾಚಾರ: ಆರೋಪಿಗೆ ಗುಂಡೇಟು

ಕಾರವಾರ: ಜಿಲ್ಲೆಯ ದಾಂಡೇಲಿ ನಗರ ವ್ಯಾಪ್ತಿಯಲ್ಲಿ 60 ವರ್ಷದ ವೃದ್ಧೆಯ ಮೇಲೆ ನಡೆದ ಅತ್ಯಾಚಾರ ಹಾಗೂ ದರೋಡೆ ಪ್ರಕರಣದ ಆರೋಪಿಯನ್ನು ಬಂಧಿಸಲು ತೆರಳಿದ ಪೊಲೀಸರ ಮೇಲೆ ಹಲ್ಲೆ ನಡೆಸಿ, ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಆತನ ಕಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ.

ಜೂನ್ 12ರಂದು ಐಪಿಎಂ ಅರಣ್ಯ ಪ್ರದೇಶದಲ್ಲಿ ವೃದ್ಧೆಯ ಮೇಲೆ ಅತ್ಯಾಚಾರ ಹಾಗೂ ದರೋಡೆ ನಡೆದಿರುವ ಬಗ್ಗೆ ದಾಂಡೇಲಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಶನಿವಾರ ದಾಂಡೇಲಿ ಗ್ರಾಮೀಣ ಠಾಣೆ ವ್ಯಾಪ್ತಿಯ ಕುಳಗಿ ರಸ್ತೆಯ ಅರಣ್ಯ ಪ್ರದೇಶದಲ್ಲಿ ಆರೋಪಿ ಫೈರೋಜ ಯಾಸೀನ ಯರಗಟ್ಟಿ (23) ಇರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭಿಸಿತು. ಅದರ ಆಧಾರದ ಮೇಲೆ ದಾಂಡೇಲಿ ನಗರ ಠಾಣೆ ಪಿಎಸ್‌ಐ ಕಿರಣ ಪಾಟೀಲ್ ಮತ್ತು ಸಿಬ್ಬಂದಿ ಆರೋಪಿಯನ್ನು ಬಂಧಿಸಲು ತೆರಳಿದ್ದರು.

ಆದರೆ ಈ ವೇಳೆ, ಆರೋಪಿ ಫೈರೋಜ ಪೊಲೀಸರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾನೆ. ಬಳಿಕ ಕಲ್ಲು ಮತ್ತು ಚಾಕುವಿನಿಂದ ಪಿಎಸ್‌ಐ ಮತ್ತು ಸಿಬ್ಬಂದಿಯ ಮೇಲೆ ಹಲ್ಲೆಗೈದು ಕೊಲೆಗೆ ಯತ್ನಿಸಿದ್ದಾನೆ. ಆಗ ಪಿಎಸ್‌ಐ ಕಿರಣ ಪಾಟೀಲ್ ತಮ್ಮ ಸರ್ವಿಸ್ ರಿವಾಲ್ವರ್‌ನಿಂದ ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗಲು ಸೂಚಿಸಿದ್ದಾರೆ. ಆದರೂ ಆರೋಪಿ ಮತ್ತೊಮ್ಮೆ ಹಲ್ಲೆಗೆ ಮುಂದಾದಾಗ, ಆತನ ಎಡಗಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ ಎಂದು ಉತ್ತರಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಎಂ. ಮಾಹಿತಿ ನೀಡಿದ್ದಾರೆ.

ನಿಂಬಾಳ್ಕರ್ ಪುತ್ರನಿಗೆ ಪದವಿ ಪ್ರದಾನ

ಬೆಳಗಾವಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಕ್ಯಾಲಿಫೋರ್ನಿಯಾದಲ್ಲಿ ಪುತ್ರನ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ್ದರು.

ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಹಾಗೂ ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಅವರ ಪುತ್ರ ಮಲ್ಹಾರ್ ನಿಂಬಾಳ್ಕರ್ ಅವರು ಅರ್ಥಶಾಸ್ತ್ರದಲ್ಲಿ ಬ್ಯಾಚುಲರ್ ಆಫ್ ಆರ್ಟ್ಸ್ ಸ್ಟ್ಯಾಟಿಸ್ಟಿಕ್ಸ್‌ನಲ್ಲಿ ಬ್ಯಾಚುಲರ್ ಆಫ್ ಸೈನ್ಸ್‌ನಲ್ಲಿ ಪದವಿ ಪಡೆದುಕೊಂಡರು. ಕ್ಯಾಲಿಫೋರ್ನಿಯಾದ ಸ್ಯಾಕ್ರಮೆಂಟೋದಲ್ಲಿರುವ ಗೋಲ್ಡನ್ 1 ಸೆಂಟರ್‌ನಲ್ಲಿ ಈ ಪದವಿ ಪ್ರದಾನ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಲ್ಹಾರ್ ನಿಂಬಾಳ್ಕರ್ ಭಾರತೀಯ ಸಾಂಪ್ರದಾಯವನ್ನು ಬಿಂಬಿಸುವ ಕುರ್ತಾ ಮತ್ತು ಧೋತಿ ಉಡುಗೆಯನ್ನು ತೊಟ್ಟು ಕುಲಪತಿವರನ್ನು ನಮಸ್ತೆ ಎಂದು ಸ್ವಾಗತಿಸಿದ್ದು, ಭಾರತೀಯ ಸಂಸ್ಕೃತಿಯನ್ನು ಎತ್ತಿ ತೋರಿಸಿತು. ಪುತ್ರನ ಸಾಧನೆಗೆ ಮಾಜಿ ಶಾಸಕಿ ಡಾ. ಅಂಜಲಿ ನಿಂಬಾಳ್ಕರ್ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಸಂತಸ ವ್ಯಕ್ತಪಡಿಸಿದರು.

ಪುತ್ರ ಮಲ್ಹಾರ್ ನಿಂಬಾಳ್ಕರ್ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ್ದ ನಿಂಬಾಳ್ಕರ್ ಕುಟುಂಬ.

ದುಡಿದವರಿಗೆ ಅವಕಾಶ ನೀಡಿ

← ಮೊದಲಪುಟದಿಂದ

- **ಶಾಸಕರಿಗೆ ಅನುದಾನದ ಕೊರತೆ ಎನ್ನುವ ಆರೋಪವಿದೆಯಲ್ಲ?**

– ಶಾಸಕರಿಗೆ ಅನುದಾನ ವಿಷಯದಲ್ಲಿ ಮೊದಲ ವರ್ಷ ಸಮಸ್ಯೆಯಾಗಿದ್ದು ನಿಜ. ಆದರೆ ಸಿಎಂ ಸಿದ್ದರಾಮಯ್ಯ ಅವರು ಈಗ ಈ ಎಲ್ಲ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ನಾನೊಬ್ಬ ಶಾಸಕನಾಗಿ ಕ್ಷೇತ್ರಕ್ಕೆ ಕೇಳಿರುವ ಎಲ್ಲ ಯೋಜನೆಗಳನ್ನು ನೀಡಿದ್ದಾರೆ. ನೀರಾವರಿ, ಸಮಾಜ ಕಲ್ಯಾಣ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಇಲಾಖೆಯಿಂದ 400 ಕೋಟಿ ರು. ಅನುದಾನ ಬಂದಿದೆ. ಸಿದ್ದರಾಮಯ್ಯ ನೇತೃತ್ವದ ಸರಕಾರ ಅನುದಾನ ನೀಡುತ್ತಿಲ್ಲ ಎಂದು ಆರೋಪಿಸುತ್ತಿರುವ ಬಿಜೆಪಿಗರು, ಅವರ ಸರಕಾರದ ಅವಧಿಯಲ್ಲಿ ಎಷ್ಟು ಅನುದಾನ ಪಡೆದಿದ್ದಾರೆ ಎನ್ನುವುದನ್ನು ಹೇಳಲಿ. ನಮ್ಮ ಸರಕಾರ ಗ್ಯಾರಂಟಿ ಯೋಜನೆಯೊಂದಿಗೆ ಅನುದಾನ ನೀಡುತ್ತಿದೆ. ಆದರೆ ಅವರ ಸಮಯದಲ್ಲಿ ಗ್ಯಾರಂಟಿಯೂ ಇಲ್ಲ, ಅನುದಾನವೂ ಇರಲಿಲ್ಲ.

- **ಮರುಗಣತಿ ನಿಜಕ್ಕೂ ಅಗತ್ಯವಿತ್ತೇ?**

– ಜಾರಿ ಗಣತಿ ಮರು ಸಮೀಕ್ಷೆ ಅವಶ್ಯಕತೆಯಿತ್ತು. ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರೂಪಿಸುವಾಗಲೇ ಜನರ ಸಮಸ್ಯೆಗೆ ಪೂರಕವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದಿದ್ದರು. ಯಾವ ವರ್ಗ ಯಾವ ಸ್ತರದಲ್ಲಿದೆ ಎನ್ನುವುದನ್ನು ಪರಿಶೀಲಿಸಿ ಯೋಜನೆಗಳನ್ನು ಸಿದ್ಧಪಡಿಸಬೇಕು. ಆ ಕಾರಣಕ್ಕೆ ನಮ್ಮ ಸರಕಾರ ಜಾತಿ ಗಣತಿಯನ್ನು ಮಾಡಿತ್ತು. ಆದರೆ ಸಮೀಕ್ಷೆ ನಡೆಸಿ 10 ವರ್ಷವಾಗಿರುವುದರಿಂದ ಮರು ಸಮೀಕ್ಷೆ ಮಾಡಲಾಗುತ್ತಿದೆ. ಇದರಲ್ಲಿ ತಪ್ಪೇನಿಲ್ಲ. ದತ್ತಾಂಶವಿಲ್ಲದೇ, ಜಾತಿಗಳ ಆಧಾರದಲ್ಲಿ ಮಾಡುವುದು ಸರಿಯಲ್ಲ. ಸರಕಾರ ಸಾಮಾಜಿಕ-ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯನ್ನು ನಡೆಸುತ್ತಿದೆ.

- **ಕೇಂದ್ರ ಹಾಗೂ ರಾಜ್ಯದಿಂದ ಪ್ರತ್ಯೇಕ ಗಣತಿ ಅಗತ್ಯವಿತ್ತೆ?**

– ಕೇಂದ್ರ ಸರಕಾರ ಮಾಡುತ್ತಿರುವುದು ಕೇಂದ್ರದ ಯೋಜನೆಗಳಿಗೆ, ನಮ್ಮ ಸಮೀಕ್ಷೆ ರಾಜ್ಯ ಸರಕಾರದ ಯೋಜನೆಗಳಿಗೆ. ನಮ್ಮ ರಾಜ್ಯದಲ್ಲಿ ನಾವು ಸಮೀಕ್ಷೆ ನಡೆಸಿದರೆ ಅವರಿಗೇನು (ಬಿಜೆಪಿ) ಸಮಸ್ಯೆ? ಈಗಾಗಲೇ ಸಚಿವ ಸಂಪುಟದಲ್ಲಿ ಮಂಡಿಸಿದ್ದ ಜಾತಿ ಗಣತಿಯನ್ನು ಅವರ ರಾಜಕೀಯ ಕಾರಣಕ್ಕಾಗಿ ವಿರೋಧಿಸಿದರು. ಜಾತಿಗಳನ್ನು ನಮ್ಮ ಸರಕಾರದ ವಿರುದ್ಧ ಎತ್ತಿಕಟ್ಟಿದ್ದರು. ಕೇಂದ್ರ ಮಾಡಿದ ದತ್ತಾಂಶವನ್ನು ಒಪ್ಪಿಕೊಳ್ಳಬೇಕು ಎನ್ನುವ ನಿಯಮವೇನಿದೆ? ಡಿಜಿಟಲ್ ಯುಗದಲ್ಲಿ ದತ್ತಾಂಶ ಏರುಪೇರಾಗಲು ಸಾಧ್ಯವಿಲ್ಲ. ಹೀಗಿರುವಾಗ ಯಾವುದೇ ಸಮಸ್ಯೆಯಾಗುವುದಿಲ್ಲ.

> ನನ್ನ ಜಾತಿಯ ಸಂಖ್ಯೆ ಕಡಿಮೆಯಾಗುತ್ತದೆ, ರಾಜಕೀಯ 'ಡಾಮಿನೇಷನ್' ಕಡಿಮೆಯಾಗುತ್ತಿದೆ ಎನ್ನುವ ಕಾರಣಕ್ಕೆ ಕೆಲವರು ವಿರೋಧಿಸುತ್ತಿದ್ದಾರೆ. ಆದರೆ ದೇಶದ ಸಮಗ್ರತೆಯ ದೃಷ್ಟಿಯಿಂದ ಜಾತಿ ಗಣತಿ ಇಂದಿನ ಅಗತ್ಯ.
>
> – ಪಿ.ಎಂ. ನರೇಂದ್ರ ಸ್ವಾಮಿ ಅಧ್ಯಕ್ಷರು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ

- **ಮರುಗಣತಿಯಿಂದ ಒಳ ಮೀಸಲು ಸಮಸ್ಯೆಯಾಗುವುದಿಲ್ಲವೇ?**

– ರಾಜ್ಯ ಸರಕಾರ ನಡೆಸಲಿರುವ ಮರು ಜಾತಿ ಗಣತಿಯಿಂದ ಒಳ ಮೀಸಲಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಒಳ ಮೀಸಲಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನಿರ್ದೇಶನವಿರುವುದರಿಂದ ನಿಖರ ಸಂಖ್ಯೆಯನ್ನು ಪತ್ತೆ ಹಚ್ಚುವುದು ಮಾತ್ರ ಬಾಕಿ ಉಳಿದಿದೆ. ಈಗಾಗಲೇ ಒಳ ಮೀಸಲು ಸಮೀಕ್ಷೆ ಮುಗಿಯುವ ಹಂತಕ್ಕೆ ತಲುಪಿದ್ದು, ಇನ್ನೊಂದು ತಿಂಗಳಲ್ಲಿ ಜಾರಿಯಾಗಲಿದೆ.

ಕೈ ಹೊಸ ಸಾರಥಿಯ ಚಿಂತನೆ ಶುರು

← ಮೊದಲಪುಟದಿಂದ

ಅಂದಹಾಗೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಗ್ಯಾರಂಟಿಗಳ ಮೂಲಕ ಮನೆ ಮಾತಾಗಿದ್ದು, ಅದನ್ನು ಮತಗಳನ್ನಾಗಿ ಪರಿವರ್ತಿಸಿ ಬ್ಯಾಂಕ್ ಮಾಡಿಕೊಳ್ಳುವ ನಿಟ್ಟಿನಲ್ಲಿ ಇನ್ನೂ ಪರಿಣಾಮಕಾರಿಯಾಗಿ ಕಾರ್ಯಕ್ರಮಗಳು ನಡೆಯಬೇಕು. ಈ ನಿಟ್ಟಿನಲ್ಲಿ ಸಂಘಟನೆ ಬಲಪಡಿಸಬೇಕಿದ್ದು, ಇದಕ್ಕಾಗಿ ಹೊಸ ಪದಾಧಿಕಾರಿಗಳನ್ನು ನೇಮಕ ಮಾಡಿ ಅವರಲ್ಲಿ ಹುರುಪು ಮೂಡುವಂತೆ ಮಾಡಬೇಕೆಂದು ಹೈಕಮಾಂಡ್ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು, ಕೆಪಿಸಿಸಿಗೆ ಹೊಸ ಸಾರಥಿಯಾಗಿ ಸತೀಶ್ ಜಾರಕಿಹೊಳಿ ಸೇರಿದಂತೆ ಕೆಲವರ ಹೆಸರನ್ನು ಪಟ್ಟಿ ಮಾಡಿ ಕೈಯಲ್ಲಿಟ್ಟುಕೊಂಡಿದ್ದಾರೆ ಎಂದು ಪಕ್ಷದ ದೆಹಲಿ ಮೂಲಗಳು ತಿಳಿಸಿವೆ.

ಏನಿದು ಹೊಸ ಅಧ್ಯಕ್ಷರ ವಿಚಾರ?: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಪಕ್ಷದ ರಾಜ್ಯ, ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳನ್ನು ಬದಲಾವಣೆ ಮಾಡುವ ಪ್ರಸ್ತಾಪವಾಗಿತ್ತು. ಆದರೆ ಆ ಸಂದರ್ಭದಲ್ಲಿ ಸಿದ್ಧಪಡಿಸಿದ್ದ ಪಟ್ಟಿಯಲ್ಲಿ ಅಪಾರ ಸಂಖ್ಯೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಸೇರಿದಂತೆ ವಿವಿಧ ಹಂತದ ಪದಾಧಿಕಾರಿಗಳ ಪಟ್ಟಿ ತಯಾರಿಸಿಲಾಗಿತ್ತು. ಒಂದೇ ಹುದ್ದೆಗೆ 80ರಿಂದ 100 ಮಂದಿಯನ್ನು ನೇಮಕ ಮಾಡಿ ಪಟ್ಟಿ ಸಿದ್ಧಪಡಿಸಲಾಗಿತ್ತು. ಅದನ್ನು ಪಕ್ಷದ ವರಿಷ್ಠರಿಗೂ ಸಲ್ಲಿಸಲಾಗಿತ್ತು. ಆದರೆ ಸರಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳೇ ಆದರೂ ಆ ಪಟ್ಟಿಗೆ ಮುಕ್ತಿ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿ ಈ ವಿಚಾರವನ್ನು ಚರ್ಚಿಸಿದ್ದಾರೆ ಎನ್ನುವುದು ತಡವಾಗಿ ಗೊತ್ತಾಗಿದೆ. ಈ ಸಂದರ್ಭದಲ್ಲಿ ಈಗಾಗಲೇ ಸಲ್ಲಿಸಲಾಗಿರುವ ಪದಾಧಿಕಾರಿಗಳ ಪಟ್ಟಿಯನ್ನು ಪರಿಷ್ಕರಿಸಿ ಒಂದೇ ಹುದ್ದೆಗೆ ಅಪಾರ ಸಂಖ್ಯೆಯ ಮುಖಂಡರನ್ನು ನೇಮಕ ಮಾಡಿ ಅದರ ಮೌಲ್ಯ ಕುಸಿಯುವಂತೆ ಮಾಡುವ ಬದಲು ಅದರ ಘನತೆ ಹೆಚ್ಚಾಗುವಂತೆ ಪದಾಧಿಕಾರಿಗಳ ಸಂಖ್ಯೆಯನ್ನು ಕಡಿತಗೊಳಿಸಿ ಎಂದು ವರಿಷ್ಠರು ಸೂಚಿಸಿದ್ದರು ಎನ್ನಲಾಗಿದೆ.

ಇದೇ ವೇಳೆ ಇನ್ನು ಮೂರ್‍ನಾಲ್ಕು ತಿಂಗಳಲ್ಲಿ ಕೆಪಿಸಿಸಿ ಸಾರಥ್ಯವನ್ನು ಹೊಸಬರಿಗೆ ನೀಡುವ ಬಗ್ಗೆಯೂ ಆಲೋಚನೆ ಮಾಡಿ ಎಂದು ಹೇಳಿದ್ದರು. ಹೀಗಾಗಿ ಕಾಂಗ್ರೆಸ್ ಈಗ ವಿಧಾನ ಪರಿಷತ್‌ಗೆ ನಾಮಕರಣ ಮಾಡಬೇಕಾದ ನಾಲ್ವರ ಹೆಸರು ಪರಿಷ್ಕರಣೆ ಮಾಡುವ ಜತೆಗೆ ಪಕ್ಷದ ಪದಾಧಿಕಾರಿಗಳ ಪಟ್ಟಿಯನ್ನೂ ಪರಿಷ್ಕರಿಸಲು ಮುಂದಾಗಿದೆ. ಹಾಗೆಯೇ ಕೆಪಿಸಿಸಿ ಸಾರಥ್ಯವನ್ನು ಯಾರಿಗೆ ನೀಡಿದರೂ ಸೂಕ್ತ ಎನ್ನುವ ವಿಚಾರವನ್ನೂ ರಾಜ್ಯ ನಾಯಕರು ಚರ್ಚಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸತೀಶ್ ಜಾರಕಿಹೊಳಿ ಮೇಲೆ ಒಲವು: ಈ ತಕ್ಷಣಕ್ಕೆ ಕೆಪಿಸಿಸಿ ಅಧ್ಯಕ್ಷರನ್ನು ಬದಲಿಸುವುದು ಅಷ್ಟೇನೂ ಸುಲಭದ ವಿಚಾರವಲ್ಲ. ಏಕೆಂದರೆ, ಇಲ್ಲಿ ಆಕಾಂಕ್ಷಿಗಳಲ್ಲೇ ಗೊಂದವಿದೆ. ಅಧ್ಯಕ್ಷ ಗಾದಿ ಮೇಲೆ ಸದ್ಯ ಸಚಿವರಾದ ಸತೀಶ್ ಜಾರಕಿಹೊಳಿ, ಎಚ್.ಸಿ. ಮಹಾದೇವಪ್ಪ, ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಕೆ.ಎಚ್. ಮುನಿಯಪ್ಪ ಹಾಗೂ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಅನೇಕರು ಕಣ್ಣಿಟ್ಟಿದ್ದಾರೆ. ಆದರೆ ಈ ಆಕಾಂಕ್ಷಿ ಸಚಿವರೆಲ್ಲಾ ಕೆಪಿಸಿಸಿ ಹುದ್ದೆ ಜತೆಗೆ ಮಂತ್ರಿ ಸ್ಥಾನವನ್ನೂ ಉಳಿಸಿಕೊಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಆದರೆ ಸತೀಶ್ ಜಾರಿಕಿಹೊಳಿ ಮಾತ್ರ ನನಗೆ ಕೆಪಿಸಿಸಿ ಹುದ್ದೆ ನೀಡಿದರೆ, ಸಚಿವ ಸ್ಥಾನ ತ್ಯಾಗ ಮಾಡಲು ಸಿದ್ಧ ಎಂದು ಪಕ್ಷದ ವರಿಷ್ಠರಿಗೆ ಸ್ಪಷ್ಟವಾಗಿ ಹೇಳಿ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೀಗಾಗಿ ಪಕ್ಷದ ವರಿಷ್ಟರು ಸಚಿವ ಸ್ಥಾನ ತ್ಯಾಗ ಮಾಡುವವರ ಕಡೆ ಒಲವು ತೋರಿಸಿದ್ದು, ಉಳಿದವರ ಬಗ್ಗೆ ಅಷ್ಟಾಗಿ ಆಸಕ್ತಿ ಮೂಡುತ್ತಿಲ್ಲ ಎನ್ನಲಾಗಿದೆ. ಅಷ್ಟಕ್ಕೂ ಕೆಪಿಸಿಸಿ ಅಧ್ಯಕ್ಷ ಹುದ್ದೆಗೆ ಪರಿಶಿಷ್ಟ ಪಂಗಡದಿಂದ ಈತನಕ ಯಾರೊಬ್ಬರೂ ನೇಮಕವಾಗಿಲ್ಲ. ಆದ್ದರಿಂದ ಮೊದಲ ಬಾರಿಗೆ ಪರಿಶಿಷ್ಟ ಪಂಗಡದವರಿಗೆ ನೀಡುವ ಮೂಲಕ ಆ ಸಮಾಜಕ್ಕೆ ಸಂದೇಶ ರವಾನಿಸಬೇಕೆನ್ನುವ ಆಲೋಚನೆ ವರಿಷ್ಠರದು ಎನ್ನಲಾಗಿದೆ. ಹಾಗೆಯೇ ಹಿಂದುಳಿದ ವರ್ಗದವರಿಗೆ ಮತ್ತು ಲಿಂಗಾಯತ ಸಮಾಜದವರಿಗೂ ನೀಡಬೇಕೆನ್ನುವ ಕೂಗಿದೆ. ಈ ನಿಟ್ಟಿನಲ್ಲಿ ನಿರ್ಧಾರ ಮಾಡಿದರೆ ಅದು ನಾಯಕತ್ವ ಬದಲಾವಣೆ ಚರ್ಚೆಗೆ ದಾರಿ ಮಾಡುತ್ತದೆ ಎಂದು ಪಕ್ಷದ ವರಿಷ್ಠರು ಸೂಕ್ಷ್ಮವಾಗಿ ಆಲೋಚನೆ ಮಾಡುತ್ತಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಇರಾನ್ ಪರಮಾಣು ಘಟಕ, ರಕ್ಷಣಾ ಕೇಂದ್ರ ಕಚೇರಿ ನಾಶ

← ಮೊದಲಪುಟದಿಂದ

150ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಅಲ್ಲದೇ, ಹತ್ತಾರು ಕಟ್ಟಡಗಳು ನಾಶವಾಗಿವೆ. ಇದಕ್ಕೆ ಪ್ರತಿಕಾರವಾಗಿ ಭಾನುವಾರ ಬೆಳಗ್ಗೆಯಿಂದಲೇ ಇಸ್ರೇಲ್, ಇರಾನ್ ವಿರುದ್ಧ ಮುಗಿಬಿದ್ದಿದೆ. ಪರಿಣಾಮ ಇರಾನ್‌ನ ವಿವಿಧೆಡೆ 10 ಜನರು ಸಾವಿಗೀಡಾಗಿದ್ದಾರೆ. ಇಸ್ರೇಲ್ ಮುಖ್ಯವಾಗಿ ಇರಾನ್‌ನ ಪ್ರಧಾನ ಪರಮಾಣು ತಾಣಗಳ ಮೇಲೆ ಗುರಿಯಿಟ್ಟು ದಾಳಿ ಮಾಡಿದೆ. ಇರಾನ್‌ನ ಕೇಂದ್ರ ಭಾಗದಲ್ಲಿರುವ ನಟಾಂಜ್ ಕೂಡ ದಾಳಿಗೊಳಗಾಗಿದೆ. ಇದು ದೇಶದ ಪ್ರಮುಖ ಯುರೇನಿಯಂ ಪುಷ್ಟೀಕರಣ ಸೌಲಭ್ಯವಾಗಿದೆ. ಈ ಘಟಕ ಹಲವು ಬಾರಿ ಅಂತಾರಾಷ್ಟ್ರೀಯ ಗಮನ ಸೆಳೆದ ಕೇಂದ್ರವಾಗಿದೆ. ಈ ಬಾರಿಯ ದಾಳಿಯಲ್ಲಿ ಈ ಘಟಕಕ್ಕೆ ಭಾಗಿ ಹಾನಿಯಾಗಿದೆ. ಕೋಮ್ ನಗರದ ಬಳಿಯ ಪರ್ವತದ ಪಾದದ ಬಳಿ ನಿರ್ಮಿಸಿದ ಫೋರ್ಡೋ ಪರಮಾಣು ಸೌಲಭ್ಯಕ್ಕೂ ಹಾನಿಯಾಗಿದೆ. ಪರಿಣಾಮ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಮ್ಯಾಕ್ಸರ್ ಟೆಕ್ನಾಲಜೀಸ್ ಬಿಡುಗಡೆ ಮಾಡಿದ ಉಪಗ್ರಹ ಚಿತ್ರಗಳು ಈ ಘಟಕದ ಹೆಚ್ಚಿನ ಭಾಗ ನಾಶವಾಗಿರುವುದನ್ನು ತೋರಿಸಿವೆ.

ಸಮಾಚಾರ ಸಣ್ಣದಲ್ಲ

ವಿದ್ಯುತ್ ಶಾಕ್: ಆನೆಮರಿ, ತಾಯಿ ಸಾವು

ಹಾಸನ: ವಿದ್ಯುತ್ ಶಾಕ್‌ನಿಂದ ಎರಡು ಕಾಡಾನೆಗಳು ಸಾವನ್ನಪ್ಪಿದ ಘಟನೆ ಸಕಲೇಶಪುರ ತಾಲೂಕಿನ ಗುಡ್ಡೆಬೆಟ್ಟ ಗ್ರಾಮದ ಬಳಿಯ ಎಬಿಸಿ ಎಸ್ಟೇಟ್‌ನಲ್ಲಿ ನಡೆದಿದೆ. ಆಹಾರ ಅರಸಿ, ಮರಿಯೊಂದಿಗೆ ಕಾಡಾನೆ ಕಾಫಿ ತೋಟಕ್ಕೆ ಬಂದಿತ್ತು. ಈ ವೇಳೆ, ಕಾಫಿ ತೋಟದಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ಗಾಳಿ ಮಳೆಗೆ ತುಂಡಾಗಿ ಬಿದ್ದಿದ್ದು, ತಂತಿಯನ್ನು ತುಳಿದು ಸಾವನ್ನಪ್ಪಿವೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಗುಡ್ಡಬೆಟ್ಟ ಎಬಿಸಿ ಎಸ್ಟೇಟ್ ಕಾರ್ಮಿಕ ತಿರುಮಲೈ ಹಾಗೂ ನಾಗರಾಜು ಎಂಬುವವರು ಪದೇಪದೇ ಕರೆಂಟ್ ಕೈಕೊಡುತ್ತಿದ್ದರಿಂದ ವಿದ್ಯುತ್ ತಂತಿ ಮೇಲೆ ಏನಾದರೂ ಬಿದ್ದಿರಬಹುದೆಂದು ಎಂದು ತಿಳಿದು ಭಾನುವಾರ ಬೆಳಗ್ಗೆ ತೋಟದೊಳಗೆ ತೆರಳಿದ್ದರು. ವಿದ್ಯುತ್ ತಂತಿ ಬಿದ್ದ ಜಾಗದಲ್ಲಿ ಬಾರದೇ ಇನ್ನೊಂದು ಮಾರ್ಗದಲ್ಲಿ ಬರುತ್ತಿದ್ದ ವೇಳೆ ಸುಟ್ಟ ವಾಸನೆ ಮೂಗಿಗೆ ಬಡಿದಿದ್ದರಿಂದ ಸುತ್ತಲೂ ಪರೀಕ್ಷಿಸಲಾಗಿ ಆನೆಗಳೆರಡೂ ಸತ್ತು ಬಿದ್ದಿರುವುದು ಕಂಡು ಬಂದಿದೆ.

ನಾಲೆಗೆ ಬಿದ್ದು ಎರಡು ವರ್ಷದ ಮಗು ಸಾವು

ಕಾರವಾರ: ಪೋಷಕರ ನಿರ್ಲಕ್ಷ್ಯದಿಂದ ಆಟವಾಡುತ್ತಿದ್ದ ಎರಡು ವರ್ಷದ ಹೆಣ್ಣುಮಗು ನಾಲೆಗೆ ಮಗು ಬಿದ್ದು ಸಾವು ಕಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಜಾಲಿ ಪಟ್ಟಣ ವ್ಯಾಪ್ತಿಯ ಆಝಾದ್ ನಗರದಲ್ಲಿ ನಡೆದಿದೆ. ತೌಸೀಫ್ ಮತ್ತು ಅರ್ಜು ದಂಪತಿಯ ಎರಡು ವರ್ಷದ ಹೆಣ್ಣುಮಗು ಶನಿವಾರ ಮಧ್ಯಾಹ್ನದ ವೇಳೆ ಮನೆಯ ಹೊರಗೆ ಆಟವಾಡುತಿದ್ದ ವೇಳೆ ಎದುರಿಗಿದ್ದ ಕಾಲುವೆಯೊಳಗೆ ಬಿದ್ದಿದೆ. ಸ್ಥಳೀಯರು ತಕ್ಷಣ ಮಗುವನ್ನು ರಕ್ಷಣೆ ಮಾಡುವ ಪ್ರಯತ್ನ ನಡೆಸಿದರೂ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಅಸುನೀಗಿದೆ. ಘಟನೆ ಕುರಿತು ಪೋಷಕರು ಇದುವರೆಗೂ ಠಾಣೆಗೆ ದೂರು ನೀಡಿಲ್ಲ. ಇದೀಗ ಸಿಸಿ ಕ್ಯಾಮೆರಾದ ವಿಡಿಯೊ ತುಣುಕು ಹೊರಬಿದ್ದಿದ್ದು ಘಟನೆ ಬೆಳಕಿಗೆ ಬಂದಿದೆ.

ಮಹಿಳೆಗೆ ಎಕ್ಕ ಚಿತ್ರ ತಂಡದ ಕಾರು ಡಿಕ್ಕಿ

ತುಮಕೂರು: ಕನ್ನಡದ ಚಿತ್ರನಟ ಯುವ ರಾಜ್‌ಕುಮಾರ್ ಅಭಿನಯದ 'ಎಕ್ಕ' ಚಿತ್ರತಂಡದ ಬೌನ್ಸರ್ ಇದ್ದ ಕಾರು ಮಹಿಳೆಯೊಬ್ಬರಿಗೆ ಡಿಕ್ಕಿ ಹೊಡೆದ ಘಟನೆ ಸಿದ್ದಗಂಗಾ ಮಠಕ್ಕೆ ಬಂದಿದ್ದ ವೇಳೆ ನಡೆದಿದೆ. ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ. ಬಳ್ಳಾರಿ ಮೂಲದ ಲಿಂಗಮ್ಮ ಎಂಬುವರ ಕಾಲಿಗೆ ಪೆಟ್ಟು ಬಿದ್ದಿದ್ದು, ತನ್ನನ್ನು ಆಸ್ಪತ್ರೆಗೆ ಕರೆದೊಯ್ಯುವಂತೆ ಮಹಿಳೆ ಗೋಳಾಡುತ್ತಿದ್ದರೂ ಗಮನಿಸದೇ ಚಿತ್ರತಂಡ ಸ್ಥಳದಿಂದ ಪರಾರಿಯಾಗಿದೆ. ಸಿದ್ದಗಂಗಾ ಮಠಕ್ಕೆ ಮಗುವನ್ನು ಬಿಟ್ಟು ಹೋಗಲು ಮಹಿಳೆ ಬಂದಿದ್ದರು. ಮಗುವನ್ನು ಶಾಲೆಗೆ ಬಿಟ್ಟು ವಾಪಾಸ್ ಆಗುತ್ತಿದ್ದಾಗ ಎಕ್ಕ ಚಿತ್ರತಂಡ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿತ್ತು. ಈ ಸಂದರ್ಭದಲ್ಲೇ ಬೌನ್ಸರ್ ಇದ್ದ ಕಾರು ಮಹಿಳೆಗೆ ಡಿಕ್ಕಿಯಾಗಿದೆ. ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಚಿತ್ರತಂಡದ ಜತೆ ನಟ ಯುವರಾಜ್ ಕುಮಾರ್ ಸಹ ಇದ್ದರು.

ಟ್ವೀಟೂ-ಖಾರಾ

ಈಶ್ವರ್ ಖಂಡ್ರೆ, ಸಚಿವ

ಅಹಮದಾಬಾದ್ ವಿಮಾನ ದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರವೇ ಹೊಣೆ ಹೊತ್ತು, ಕೇಂದ್ರ ವಿಮಾನಯಾನ ಖಾತೆ ಸಚಿವರಾದ ರಾಮ ಮೋಹನ್ ನಾಯ್ಡು ಅವರು ಕೂಡಲೇ ರಾಜೀನಾಮೆ ನೀಡಬೇಕು. ಇದು ಅತಿದೊಡ್ಡ ದುರಂತ. ಇಂತಹ ದುರಂತಗಳು ಮತ್ತೆ ನಡೆಯದಂತೆ ಸರಕಾರ ಕ್ರಮ ಜರುಗಿಸಬೇಕು.

ಮಾಲ್ಗುಡಿ ಕನ್ನಡಿಗ

ಬಾಯಿ ಬಿಟ್ಟು ಬಂಡಗೇಡಿ ಅನ್ನಿಸ್ಕೋಬೇಡಿ ಖಂಡ್ರೆ ಅವರೇ. ನೀವು, ನಿಮ್ಮ ಸಿಎಂ, ಎಲ್ರೂ ಮೋದಿನ ಬಯ್ದುಕೊಂಡು ಓಡಾಡಿದರೆ, ರಾಜ್ಯಕ್ಕೆ ಏನೂ ಸಿಗಲ್ಲ, ಬಾಯಿ ಬಡುಕರು ನೀವು.

ದೇವಿರ ಮನೆ ಬೆಟ್ಟದಲ್ಲಿ ಮತ್ತೆ ಗುಡ್ಡ ಕುಸಿತ | ಮಳೆಯಿಂದ ಕಾರು ಪಲ್ಟಿ, ಪ್ರಯಾಣಿಕರು ಹೈರಾಣ | ಜನ ಜೀವನ ಅಸ್ತವ್ಯಸ್ತ

ಕರಾವಳಿ, ಮಲೆನಾಡಲ್ಲಿ ಅಬ್ಬರದ ಮಳೆ

ಬೆಂಗಳೂರು: ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆಯಲ್ಲಿ ಭಾರೀ ಮಳೆ ಸುರಿದು ಹಲವಾರು ಅವಾಂತರಗಳು ಸೃಷ್ಟಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿಗರ ವಾಹನಗಳು ಅಪಘಾತಕ್ಕೀಡಾಗಿವೆ. ಕಾಲು ಜಾರಿ ನಾಲೆಗೆ ಬಿದ್ದು ಕಾರವಾರದಲ್ಲೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ.

ಧಾರಾಕಾರ ಮಳೆ, ಚುಮುಚುಮು ಚಳಿ, ಬೆಟ್ಟಗುಡ್ಡಗಳ ಚಾರಣ ಅನುಭವಿಸಲು ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸಿಗರ ದಂಡೇ ಹರಿದು ಬರುತ್ತಿದೆ. ಮಳೆಯಿಂದಾಗಿ ಪ್ರವಾಸಿಗರ ವಾಹನಗಳು ಅಪಘಾತಕ್ಕೀಡಾಗುತ್ತಿವೆ. ಚಂದ್ರದ್ರೋಣ ಪರ್ವತ ಶ್ರೇಣಿಯ ಕವಿಕಲ್ ಗಂಡಿ ಬಳಿ, ಮೂಡಿಗೆರೆ ತಾಲೂಕಿನ ರಾಮಣ್ಣನ ಗಂಡಿ ಬಳಿ ಅಪಘಾತಗಳು ಸಂಭವಿಸಿವೆ.

ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿ ಹೊಡೆದಿರುವ ಚಂದ್ರದ್ರೋಣ ಪರ್ವತ ಶ್ರೇಣಿಯ ಕವಿಕಲ್‌ಗಂಡಿ ಬಳಿ ಘಟನೆ ನಡೆದಿದೆ

ಕಿಲೋಮೀಟರ್ ಗಟ್ಟಲೇ ಟ್ರಾಫಿಕ್ ಜಾಮ್ ಉಂಟಾಗಿ ಪ್ರವಾಸಿಗರು ಪರದಾಡಿದ್ದಾರೆ. ಕಾರಿನಲ್ಲಿದ್ದ ಪ್ರವಾಸಿಗರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ರಸ್ತೆ ಮಧ್ಯೆ ಪಲ್ಟಿಯಾದ ಕಾರನ್ನು ತೆರವು ಮಾಡಿದ್ದಾರೆ.

ಕಾರುಗಳು ಮುಖಾಮುಖಿ ಡಿಕ್ಕಿ: ಭಾರೀ ಗಾಳಿ-ಮಳೆಗೆ ನಿಯಂತ್ರಣ ತಪ್ಪಿ ಎರಡು ಕಾರುಗಳು ಮುಖಾಮುಖಿ ಡಿಕ್ಕಿಯಾಗಿವೆ. ಮೂಡಿಗೆರೆ ತಾಲೂಕಿನ ರಾಮಣ್ಣನ ಗಂಡಿ ಬಳಿ ಘಟನೆ ನಡೆದಿದೆ. ಕಳೆದ ವಾರ ಎರಡು ಕಾರುಗಳು ಅಪಘಾತವಾಗಿ ಹೇಮಾವತಿ ಉಪ ನದಿಗೆ ಬಿದ್ದಿದ್ದ ಜಾಗ ಇದ್ದಾಗಿದ್ದು, ಈ ಮಾರ್ಗದಲ್ಲಿ ಮೇಲಿಂದ ಮೇಲೆ ಅಪಘಾತವಾಗುತ್ತಿವೆ ಎಂದು ಸ್ಥಳೀಯರು ಹೆದ್ದಾರಿ ಪ್ರಾಧಿಕಾರದ ವಿರುದ್ಧ ಕಿಡಿ ಕಾರುತಿದ್ದಾರೆ.

ಜಲಪಾತಗಳಿಗೆ ಜೀವ ಕಳೆ: ಪ್ರತಿನಿತ್ಯ ಸಾವಿರಾರು ಪ್ರವಾಸಿಗರನ್ನು ತನ್ನತ್ತ ಕೈಬೀಸಿ ಕರೆಯುವ ಜಲಪಾತಗಳು ಈಗ ಹಾಲ್ನೊರೆಯಂತೆ ಉಕ್ಕಿ ಹರಿಯಲು ಪ್ರಾರಂಭಿಸಿದೆ. ಜಿಲ್ಲೆಯಲ್ಲಿ ಅತ್ಯಂತ ಪ್ರಸಿದ್ಧಿ ಹಾಗೂ ಹೆಸರುವಾಸಿ ಸಿರಿಮನೆ ಜಲಪಾತ ಮಳೆಯಿಂದಾಗಿ ಮತ್ತೆ ಜೀವ ಕಳೆ ಪಡೆದಿದೆ. ಶೃಂಗೇರಿ ತಾಲೂಕಿನ ಕಿಗ್ಗಾ ಸಿರಿಮನೆ ಜಲಪಾತದಲ್ಲಿ ಉತ್ತಮ ಮಳೆಯಿಂದಾಗಿ ಜಲಪಾತದ ನೀರಿನ ಮಟ್ಟದಲ್ಲಿ ಏರಿಕೆ ಕಂಡಿದೆ. ಜಲಪಾತಗಳನ್ನು ನೋಡಲು ರಾಜ್ಯ, ಹೊರ ರಾಜ್ಯಗಳಿಂದ ಪ್ರವಾಸಿಗರು ಈ ಭಾಗಕ್ಕೆ ಆಗಮಿಸುತ್ತಿದ್ದಾರೆ.

ಇಂದು ಉಡುಪಿ ಜಿಲ್ಲೆಗೆ ರೆಡ್ ಅಲರ್ಟ್: ಭಾನುವಾರದಿಂದ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದ್ದು, ಇಂದು ಸಹಿತ ಉಡುಪಿ ಜಿಲ್ಲೆಯಾದ್ಯಂತ ರೆಡ್ ಅಲರ್ಟ್ ಮುಂದುವರಿದಿದೆ. ಗಾಳಿ ಸಹಿತ ಧಾರಕಾರ ಮಳೆ ಸುರಿಯುತ್ತಿರುವ ಹಿನ್ನೆಲೆ ಅಪಾಯದ ಮಟ್ಟ ಮೀರಿ ನದಿಗಳು ಹರಿಯುತ್ತಿವೆ. ನದಿ ಹಾಗೂ ಸಮುದ್ರ ತೀರಕ್ಕೆ ಹೋಗದಂತೆ ಜಿಲ್ಲಾಡಳಿತ ಮುನ್ಸೂಚನೆ ನೀಡಿದೆ.

ಕಾಲು ಜಾರಿ ನಾಲೆಗೆ ಬಿದ್ದು ವ್ಯಕ್ತಿ ಸಾವು:

ಧಾರಾಕಾರ ಮಳೆ ಹಿನ್ನೆಲೆ ಕೆಸರಿನಿಂದ ಕಾಲು ಜಾರಿ ನಾಲೆಗೆ ವ್ಯಕ್ತಿ ಬಿದ್ದು ಸಾವನ್ನಪ್ಪಿದ ಘಟನೆ ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಗುಳ್ಮೆ ಬೆಳಲಖಂಡ ಎಂಬಲ್ಲಿ ನಡೆದಿದೆ. ನಡೆದುಕೊಂಡು ಮನೆಗೆ ಹೋಗುತ್ತಿದ್ದ ಮಾದೇವ ನಾರಾಯಣ ದೇವಾಡಿಗ(50) ಕಾಲು ಜಾರಿಗೆ ನಾಲೆಗೆ ಬಿದ್ದು ಮೃತಪಟ್ಟಿದ್ದಾರೆ. ಈ ಸಂಬಂಧ ಭಟ್ಕಳ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಚ್ಚಿಹೋದ ಖಾನಾಪುರ ತಾಲೂಕಿನ ಕುಸಮಳಿ ಬಳಿಯ ಮಲಪ್ರಭಾ ನದಿ ತಾತ್ಕಾಲಿಕ ಸೇತುವೆ.

ದೇವಿರ ಮನೆ ಬೆಟ್ಟದಲ್ಲಿ ಹೆದ್ದಾರಿ ಮೇಲೆ ಗುಡ್ಡ ಕುಸಿದಿರುವುದು.

ಪಡೀಲ್‌ಜೋಕಟ್ಟೆ ಬಳಿ ರೈಲ್ವೆ ಹಳಿಗೆ ಮಣ್ಣು ಕುಸಿತ

ಭಾರಿ ಮಳೆಯಿಂದಾಗಿ ನಗರದ ಹೊರವಲಯದ ಪಡೀಲ್‌ಜೋಕಟ್ಟೆ ನಡುವೆ ರೈಲ್ವೆ ಹಳಿಗೆ ಮಣ್ಣು ಜರಿದು ಬಿದ್ದಿದೆ. ಇದರ ದುರಸ್ತಿ ಕಾರ್ಯ ನಡೆಯುತ್ತಿದ್ದು, ಮಂಗಳೂರು ಸೆಂಟ್ರಲ್ ಮತ್ತು ಮಂಗಳೂರು ಜಂಕ್ಷನ್ ನಿಲ್ದಾಣದಿಂದ ಹೊರಡುವ ಹಾಗೂ ಈ ಮಾರ್ಗದಲ್ಲಿ ಸಂಚರಿಸುವ ರೈಲುಗಳು ನಿಗದಿತ ಸಮಯಕ್ಕಿಂತ ತಡವಾಗಿ ರೈಲುಗಳು ಸಂಚರಿಸುತ್ತಿವೆ. ನೇತ್ರಾವತಿ ಎಕ್ಸ್‌ಪ್ರೆಸ್ (16345) ರೈಲು ತಡವಾಗಿ ಸಂಚರಿಸುತ್ತಿದೆ. ಯಾವುದಾದರೂ ತುರ್ತು ನೆರವಿನ ಅಗತ್ಯ ಇದ್ದಲ್ಲ ಎಕ್ಸ್ ಮಾಧ್ಯಮದ ಮೂಲಕ ನೆರವು ಕೋರಬಹುದು ಅಥವಾ 139 ಕರೆ ಮಾಡಬಹುದು. ಪ್ರಯಾಣಕ್ಕೆ ಮುನ್ನ ರಾಷ್ಟ್ರೀಯಯ ರೈಲು ವಿಚಾರಣಾ ವ್ಯವಸ್ಥೆಯನ್ನು ಗಮನಿಸುವಂತೆ ರೈಲ್ವೆ ಇಲಾಖೆ ಸಲಹೆ ನೀಡಿತ್ತು.

ಬೆಳಗಾವಿ-ಗೋವಾ ಸಂಪರ್ಕ ರಸ್ತೆ ಬಂದ್

ಮಲಪ್ರಭಾ ನದಿಗೆ ನಿರ್ಮಿಸಿದ್ದ ತಾತ್ಕಾಲಿಕ ಸೇತುವೆ ನೀರಿನ ರಭಸಕ್ಕೆ ಕೊಚ್ಚಿ ಹೋದ ಪರಿಣಾಮ ಬೆಳಗಾವಿ - ಗೋವಾ ಸಂಪರ್ಕ ರಸ್ತೆ ಸಂಪೂರ್ಣ ಬಂದ್ ಆಗಿದೆ.ಖಾನಾಪುರ ತಾಲೂಕಿನ ಕುಸಮಳಿ ಗ್ರಾಮದ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಾಮಗಾರಿ ನಡೆಯುತ್ತಿದೆ. ಸದ್ಯ ತಾತ್ಕಾಲಿಕವಾಗಿ ಬೃಹತ್ ಪೈಪ್ ನಿಂದ ಸೇತುವೆ ನಿರ್ಮಿಸಲಾಗಿತ್ತು. ನೀರಿನ ರಭಸಕ್ಕೆ ಸೇತುವೆ ಕೊಚ್ಚಿಕೊಂಡು ಹೋಗಿದೆ. ಚೋರ್ಲಾ ಮಾರ್ಗವಾಗಿ ಗೋವಾಗೆ ತೆರಳುವ ರಸ್ತೆ ಸಂಪೂರ್ಣ ಬಂದ್ ಆಗಿದ್ದು ಜನ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸದ್ಯ ಖಾನಾಪುರ ಮಾರ್ಗವಾಗಿ ರಾಮನಗರದಿಂದ ಗೋವಾಗೆ ತೆರಳಬಹುದು.

ಕುಮಟಾ-ಶಿರಸಿ ಸಂಚಾರ ಸ್ಥಗಿತ

ಉತ್ತರಕನ್ನಡ ಜಿಲ್ಲೆಯಲ್ಲಿ ಎಡೆಬಿಡದೇ ಮಳೆ ಸುರಿಯುತ್ತಿರುವ ಹಿನ್ನೆಲೆ ದೇವಿರ ಮನೆ ಬೆಟ್ಟದಲ್ಲಿ ಮತ್ತೆ ಗುಡ್ಡ ಕುಸಿತ ಆಗಿದೆ. ಶನಿವಾರ ಕುಸಿತ ಆಗಿದ್ದ ಗುಡ್ಡ ಭಾನುವಾರ ಮತ್ತೆ ಕುಸಿದಿದೆ. ಕುಮಟಾ-ಶಿರಸಿ ಸಂಪರ್ಕವನ್ನ ಕಲ್ಪಿಸುವ ಹೆದ್ದಾರಿ ಸಂಚಾರ ಸಂಪೂರ್ಣ ಬಂದ್ ಆಗಿತ್ತು. ಮಣ್ಣು ತೆರವುಗೊಳಿಸಿ ಶನಿವಾರ ಸಂಜೆ ಲಘು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಲಾಗಿತ್ತು. ಭಾನುವಾರ ಬೆಳಗಿನ ಜಾವ ಮತ್ತೆ ಅದೆ ಸ್ಥಳದಲ್ಲಿ ಗುಡ್ಡ ಕುಸಿದ ಹಿನ್ನೆಲೆ ಭಾನುವಾರ ಕುಮಟಾ-ಶಿರಸಿ ಸಂಚಾರ ಸಂಪೂರ್ಣ ಬಂದ್ ಮಾಡಲಾಗಿತ್ತು. ಅವೈಜ್ಞಾನಿಕ ಕಾಮಗಾರಿಯಿಂದ ಪದೆ ಪದೇ ಗುಡ್ಡ ಕುಸಿತ ಆಗುತ್ತಿದೆ ಎಂದು ಗುತ್ತಿಗೆದಾರರ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶೃಂಗೇರಿ-ಮಂಗಳೂರು ಸಂಚಾರ ಸ್ಥಗಿತ

ಭಾರೀ ಮಳೆ ಪರಿಣಾಮ ಶೃಂಗೇರಿ-ಮಂಗಳೂರು ಸಂಪರ್ಕ ಕಲ್ಪಿಸುವ ಹೈವೇ 169ರಲ್ಲಿ ನೆಮ್ಮಾರು ಗ್ರಾಮದ ಬಳಿ ಗುಡ್ಡ ಕುಸಿದಿದೆ. ಭಾರೀ ಪ್ರಮಾಣದಲ್ಲಿ ಗುಡ್ಡ ಕುಸಿದ ಪರಿಣಾಮ ಶೃಂಗೇರಿ-ಮಂಗಳೂರು ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಪೊಲೀಸ್, ಪಂಚಾಯಿತಿ ಅಧಿಕಾರಿಗಳು ಹಾಗೂ ಸ್ಥಳೀಯರು ಮಣ್ಣು ತೆರವು ಕಾರ್ಯಕ್ಕೆ ಮುಂದಾಗಿದ್ದಾರೆ. ಮಣ್ಣು ಕುಸಿಯದಂತೆ ರಸ್ತೆ ಬದಿಗೆ ಕಟ್ಟಿದ್ದ ಕಬ್ಬಿಣದ ತಡೆಗೋಡೆಗಳು ಕುಸಿದು ಬಿದ್ದಿದೆ. ಇನ್ನು ಅಲ್ಲಲ್ಲಿ ವಿದ್ಯುತ್ ಕಂಬಗಳು ಸಹಿತ ಉರುಳಿ ನೆಲಕ್ಕೆ ಬಿದ್ದಿವೆ.

ಬೆಣ್ಣೆಹಳ್ಳ ಪ್ರವಾಹದಿಂದ ಹಾನಿಗೀಡಾದ ನರಗುಂದ ಹಾಗೂ ರೋಣ ಭಾಗದ ಹಳ್ಳಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಶಾಸಕ ಸಿ.ಸಿ. ಪಾಟೀಲ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಚ್.ಕೆ ಪಾಟೀಲ್ ಬೆಣ್ಣೆಹಳ್ಳ ಪ್ರವಾಹ ವೀಕ್ಷಣೆ

ಗದಗ ತಾಲೂಕಿನ ಕುರ್ಲಗೇರಿ ಗ್ರಾಮಕ್ಕೆ ಭೇಟಿ ನೀಡಿದ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ್, ಬೆಣ್ಣೆಹಳ್ಳ ಪ್ರವಾಹ ಪೀಡಿತ ಪ್ರದೇಶ ವೀಕ್ಷಣೆ ಮಾಡಿದರು. ಈ ವೇಳೆ ಸಚಿವರ ಮುಂದೆ ಅಳಲು ತೋಡಿಕೊಂಡ ರೈತರು ಬೆಳೆಹಾನಿಗೆ ಸರಕಾರದಿಂದ ಶೀಘ್ರ ಪರಿಹಾರ ಕೊಡಿಸಲು ಮನವಿ ಮಾಡಿದರು. ಮಾಜಿ ಸಚಿವ ಸಿ.ಸಿ ಪಾಟೀಲ್, ಜಿಲ್ಲಾಧಿಕಾರಿ ಶ್ರೀಧರ್ ಸಿಎನ್, ಎಸ್ಪಿ ಬಿ.ಎಸ್ ನೇಮಗೌಡ ಸಾಥ್ ಇದ್ದರು.

ಸಿದ್ಧತೆ ಪರಿಶೀಲಿಸಿದ ಶಾಸಕ ಪ್ರದೀಪ್ ಈಶ್ವರ್ | ಚಿಕ್ಕಬಳ್ಳಾಪುರಕ್ಕೆ ಹೆಚ್ಚಿನ ಅನುದಾನ ನಿರೀಕ್ಷೆ

ನಂದಿ ಬೆಟ್ಟದಲ್ಲಿ ಜೂ.19ಕ್ಕೆ ಸಂಪುಟ ಸಭೆ

ಚಿಕ್ಕಬಳ್ಳಾಪುರ: ಜಿಲ್ಲೆಯ ನಂದಿಬೆಟ್ಟದಲ್ಲಿ ಜೂನ್ 19 ರಂದು ಸಚಿವ ಸಂಪುಟದ ಸಭೆ ನಡೆಯಲಿದ್ದು, ಭರತದಿಂದ ಸಿದ್ಧತೆಗಳು ನಡೆಯುತ್ತಿವೆ. ಭಾನುವಾರ ನಂದಿಬೆಟ್ಟಕ್ಕೆ ಭೇಟಿ ನೀಡಿದ ಚಿಕ್ಕಬಳ್ಳಾಪುರ ಶಾಸಕ ಈಶ್ವರ್ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದ ತಂಡ ಸಿದ್ಧತೆ ಕಾರ್ಯಗಳನ್ನು ಪರಿಶೀಲನೆ ನಡೆಸಿತು.

ಬಯಲು ಸೀಮೆಯ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಇದೇ ಮೊದಲ ಬಾರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ ನಡೆಯುತ್ತಿದೆ. ಪ್ರವಾಸಿಗರ ಮೆಚ್ಚಿನ ತಾಣ ನಂದಿಬೆಟ್ಟದಲ್ಲಿ ನಡೆಯಲಿರುವ ಸಚಿವ ಸಂಪುಟದ ಸಭೆ ಗಮನ ಸೆಳೆದಿದೆ. ಬೆಟ್ಟದಲ್ಲಿನ ಪ್ರವಾಸೋದ್ಯಮ ಇಲಾಖೆಯ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಮಯೂರ ಫೈನ್ ಟಾಪ್ ರೆಸ್ಟೋರೆಂಟ್‌ನಲ್ಲಿ ಸಭೆ ನಡೆಯಲಿದೆ.

ಜೂನ್ 19 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮೊದಲಿಗೆ ಭೋಗನಂದಿಶ್ವರ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಅನಂತರ ಸಿಎಂ ನೇತೃತವದಲ್ಲಿ ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ.

ನಂದಿಬೆಟ್ಟದಲ್ಲಿ ಜೂನ್ 19 ರಂದು ಸಚಿವ ಸಂಪುಟ ಸಭೆ ಹಿನ್ನೆಲೆ ಶಾಸಕ ಪ್ರದೀಪ್ ಈಶ್ವರ್ ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದ ತಂಡ ನಂದಿಬೆಟ್ಟದಲ್ಲಿ ಸಿದ್ಧತೆ ಪರಿಶೀಲನೆ ನಡೆಸಿತು.

3 ಜಿಲ್ಲೆಗಳಿಗೆ ಭರ್ಜರಿ ಅನುದಾನದ ನಿರೀಕ್ಷೆ

ಸ್ಥಳೀಯ ಶಾಸಕರಾದ ಪ್ರದೀಶ್ ಈಶ್ವರ್ ಮಾತನಾಡಿ, ಆ ಹಿಂದೆ ಯಾವತ್ತು ನಡೆಯದ ಸಚಿವ ಸಂಪುಟ ಸಭೆ ಇವತ್ತು ನಡೆಯುತ್ತಿರುವುದಕ್ಕೆ ನಾವು ಮುಖ್ಯಮಂತ್ರಿಗಳನ್ನು ಮನವೊಲೈಸುವಲ್ಲಿ ಯಶಸ್ವಿಯಾಗಿದ್ದೇವೆ. ಸಚಿವ ಸಂಪುಟ ಸಭೆಯಿಂದ ಇಲ್ಲಿನ ಮೂರು ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹೆಚ್ಚಿನ ಅನುದಾನ ಬರಲಿದೆ. ಈ ವೇಳೆ ನಮ್ಮ ಬೇಡಿಕೆಗಳನ್ನು ಮೂಂದಿಡಲಾಗುವುದು, 150 ಕೋಟಿ ಹೂವಿನ ಮಾರುಕಟ್ಟೆಗೆ, ಜಕ್ಕಲಮಡಗು ಡ್ಯಾಂ ಎತ್ತರವನ್ನು ಹೆಚ್ಚಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸಚಿವ ಸಂಪುಟದ ಮೂಂದಿಡಲಾಗುತ್ತದೆ ಎಂದರು.

ಜುಲೈ 1ರಿಂದ ಕಡ್ಡಾಯಗೊಳಿಸಲು ಸಜ್ಜಾಗಿರುವ ರಾಜ್ಯ ಸರಕಾರ

ವೈದ್ಯರಿಗೆ ಮೊಬೈಲ್ ಹಾಜರಾತಿ

ಬೆಂಗಳೂರು: ವೈದ್ಯರ ಹಾಜರಾತಿಗಿರುವ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಸರಕಾರ ಜುಲೈ 1ರಿಂದ ಮೊಬೈಲ್ ಹಾಜರಾತಿಯನ್ನು ಕಡ್ಡಾಯಗೊಳಿಸಲು ಮುಂದಾಗಿದೆ.

ಈ ಬಗ್ಗೆ ಮಾತನಾಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು, ರಾಜ್ಯದ ಎಲ್ಲಾ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳು ಜು.1ರಿಂದ ಮೊಬೈಲ್ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಹಲವು ದಿನಗಳಿಂದ ಈ ಬಗ್ಗೆ ಪ್ರಸ್ತಾವನೆಯಿತ್ತು. ಇದೀಗ ಅಂತಿಮ ಹಂತಕ್ಕೆ ಬಂದಿದ್ದು, ಕೊನೆಗೂ ಸರಕಾರಿ ಆದೇಶ ಹೊರಬಿದ್ದಿದೆ. ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸಿಗುವುದಿಲ್ಲ ಎಂಬ ದೂರಿಗೆ ಹಿತೈಷಿ ಹಾಡಲು ನೂತನ ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ.

ಪ್ರಸ್ತುತ ಬಳಸಲ್ಪಡುತ್ತಿರುವ ಹಾಜರಾತಿ ನಿರ್ವಹಣಾ ವ್ಯವಸ್ಥೆಯ ಹಾರ್ಡ್‌ವೇರ್, ಸಾಫ್ಟ್‌ವೇರ್‌ಗಳು ಆಧಾರ್ ಆಧಾರಿತ ಬಯೋಮೆಟ್ರಿಕ್ ಪ್ರಮಾಣಿಕರಣವನ್ನು ಅವಲಂಬಿಸಿದೆ. ಹಾಡ್‌ವೇರ್ ಸಾಧನಗಳಿಗೆ ಆಗಾಗ್ಗೆ ದುರಸ್ತಿ ಮತ್ತು ಆವರ್ತಕ ಬದಲಾವಣೆಗಳ ಅಗತ್ಯವಿದೆ. ಇದು ಗಣನೀಯ ವೆಚ್ಚಗಳಿಗೆ ಕಾರಣವಾಗಿತ್ತು. ಬಯೋಮೆಟ್ರಿಕ್ ಸಾಧನಗಳ ಸ್ಥಿರ ಸ್ವರೂಪದಿಂದ ಹಾಜರಾತಿ ಗುರುತಿಸುವಿಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಸೀಮಿತಗೊಳಿಸಿದೆ. ಕ್ಷೇತ್ರ ಸಂಬಂಧಿ ದೂರ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ಇದು ಸಹಕಾರಿಯಾಗಿರಲಿಲ್ಲ ಎಂದು ಹೇಳಿದರು.

ಇದೀಗ ಹೊಸ ಸೌಲಭ್ಯದಲ್ಲಿ ಮೊಬೈಲ್ ತಂತ್ರಾಂಶದ ಮೂಲಕ ಹಾಜರಾತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ರಾಜ್ಯದ 12 ಸಾವಿರ ಆರೋಗ್ಯ ಸಂಸ್ಥೆಗಳನ್ನೊಳಗೊಂಡು ಇದನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಆಡಳಿತದ ಚೌಕಟ್ಟಿನಲ್ಲಿ ಮೊಬೈಲ್ ಹಾಜರಾತಿ ವ್ಯವಸ್ಥೆಯಿದ್ದು, ಇನ್ನು ಮುಂದೆ ವೈದ್ಯರ ಕರಾರುವಕ್ಕಾದ ಲಭ್ಯತೆಯನ್ನು ಸರಕಾರ ಖಾತ್ರಿಪಡಿಸಲಿದೆ.

-ದಿನೇಶ್ ಗುಂಡೂರಾವ್, ಸಚಿವ

ಗಾಳಿ ಮಳೆಗೆ ಸೆಟ್ ಮಗುಚಿದೆ: ಹೊಂಬಾಳೆ ಫಿಲ್ಮ್ಸ್ ಸ್ಪಷ್ಟನೆ

ಕಾಂತಾರ ಶೂಟಿಂಗ್ ವೇಳೆ ಅವಘಡ ಸಂಭವಿಸಿಲ್ಲ

ಶಿವಮೊಗ್ಗ: ಕಾಂತಾರ ಚಾಪ್ಟರ್ 1 ಸಿನಿಮಾ ಶೂಟಿಂಗ್ ನಡೆಸಲು ಶಿಪ್ ಸೆಟ್ ನಿರ್ಮಾಣ ಮಾಡಿದ್ದೆವು. ಗಾಳಿ ಮಳೆಯಿಂದ ಸೆಟ್ ಮುಗುಚಿ ಹೋಗಿದೆ ಹೊರತು ಕಲಾವಿದರಿಗೆ ಏನೂ ಆಗಿಲ್ಲ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ.

ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆದರ್ಶ್ ಅವರು ಪ್ರತಿಕ್ರಿಯಿಸಿ, ಹೊಸನಗರ ತಾಲ್ಲೂಕಿನ ಯಡೂರು ಸಮೀಪದ ಮೇಲಿನ ಕೊಪ್ಪದ ಮಾಣಿ ಹಿನ್ನೀರಿನ ಪ್ರದೇಶದಲ್ಲಿ ಶೂಟಿಂಗ್ ಸಮಯದಲ್ಲಿ ಯಾವುದೇ ಅವಘಡ ಸಂಭವಿಸಿಲ್ಲ ಎಂದು ಸ್ಪಷ್ಟನೆ ನೀಡಿದರು.

ಸೆಟ್ ಹಾಕಿದ ಸ್ಥಳದಿಂದ ನಾವು ತುಂಬಾ ದೂರದಲ್ಲಿ ಚಿತ್ರೀಕರಣ ಮಾಡುತ್ತಿದ್ದೇವೆ. ನಮ್ಮ ತಂಡದಲ್ಲಿ ಯಾರಿಗೂ-ಯಾವುದೇ ಅನಾಹುತವಾಗಿಲ್ಲ. ಎಲ್ಲರೂ ಸುರಕ್ಷಿತವಾಗಿದ್ದು ಭಾನುವಾರವೂ ಸಹ ಚಿತ್ರೀಕರಣ ನಡೆದಿದೆ. ಜಲಾಶಯ ಪಕ್ಕದಲ್ಲಿ ಯಾವುದೇ ಚಿತ್ರಿಕರಣ ಮಾಡಿಲ್ಲ ಎಂದು ತಿಳಿಸಿದರು.

ಸುದ್ದಿಗಾರರೊಂದಿಗೆ ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆದರ್ಶ್ ಮಾತನಾಡಿದರು.

ಪೊಲೀಸ್ ಇಲಾಖೆ, ಪಂಚಾಯತ್, ಅರಣ್ಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳಿಂದ ಶೂಟಿಂಗ್ ನಡೆಸಲು ಅನುಮತಿ ಪಡೆಯಲಾಗಿದೆ ಎಂದು ಹೇಳಿದರು.

ಮೋದಿ ವಿಮಾನ ಎಂಜಿನ್ ಚೆಕ್ ಮಾಡೋಕೆ ಸಾಧ್ಯನಾ?

ಚಿಕ್ಕಬಳ್ಳಾಪುರ: ವಿಮಾನ ದುರಂತದಲ್ಲಿ ಪ್ರಧಾನಿಗಳ ಪಾತ್ರ ಏನಾದ್ರು ಇತ್ತಾ? ಪ್ರಧಾನಿ ಹೋಗಿ ಎಂಜಿನ್ ಚೆಕ್ ಮಾಡಲು ಸಾಧ್ಯನಾ? ಮಾಜಿ ಶಾಸಕ ಪಿ. ರಾಜೀವ್ ವಿಪಕ್ಷಗಳಿಗೆ ತಿರುಗೇಟು ನೀಡಿದ್ದಾರೆ.

ಅಹಮದಾಬಾದ್ ವಿಮಾನ ದುರಂತ ಪ್ರಕರಣದಲ್ಲಿ ಮೋದಿ ರಾಜೀನಾಮೆಗೆ ಆಗ್ರಹ ವಿಚಾರಕ್ಕೆ ಅವರು ಪ್ರತಿಕ್ರಿಯಿಸಿ, ಅಮಹದಾಬಾದ್ ವಿಮಾನ ದುರಂತಕ್ಕೆ ಇಡೀ ರಾಷ್ಟ್ರ ಕಂಬನಿ ಮಿಡಿಯುತ್ತಿದೆ. ಎಲ್ಲರಿಗೂ ನೋವಿದೆ. ಬೆಂಗಳೂರಿನ ಕಾಲ್ತುಳಿತ ಪ್ರಕರಣದಲ್ಲಿ ಸರಕಾರ, ಗೃಹ ಇಲಾಖೆ, ಇಂಟೆಲಿಜೆನ್ ನಿರ್ಲಕ್ಷ್ಯ ಇದೆ. ಬಂದೋಬಸ್ತ್ ಹೇಗೆ ಮಾಡಬೇಕು ಎಂಬ ಪೊಲೀಸ್ ಗೈಡ್‌ಲೈನ್ಸ್ ಇದೆ. ವಿಮಾನ ದುರಂತದಲ್ಲಿ ಪ್ರಧಾನಿಗಳ ಪಾತ್ರ ಏನಾದ್ರೂ ಇತ್ತಾ? ಪ್ರಧಾನಿ ಹೋಗಿ ಎಂಜಿನ್ ಚೆಕ್ ಮಾಡಲು ಸಾಧ್ಯನಾ..? ಅಂತ ಪ್ರಶ್ನೆ ಮಾಡಿದ್ದಾರೆ.

ಕಾಂಗ್ರೆಸ್‌ನವರು ರಾಜಕೀಯ ಹೊಣೆಗಾರಿಕೆಗೂ ಟೆಕ್ನಿಕಲ್ ವಿಂಗ್‌ಗೂ ವ್ಯತ್ಯಾಸ ತಿಳ್ಕೋಬೇಕಲ್ವಾ? ಇಲ್ಲವಾದಲ್ಲಿ ಯಾವ ರೀತಿ ನಾವ್ ನಗಬೇಕು ಹೇಳಿ? ತಮ್ಮ ತಪ್ಪನ್ನ ಒಪ್ಪಿಕೊಳ್ಳುವ ಬದ್ಧತೆ ತೋರಿಸಿ ಎಂದು ವಿಪಕ್ಷಗಳಿಗೆ ಕುಟುಕಿದ್ದಾರೆ.

ಆಧಾರ್ ದೃಢೀಕರಣ ಕಡ್ಡಾಯಗೊಳಿಸಿ ರಾಜ್ಯ ಸರಕಾರ ಆದೇಶ

ಡಯಾಲಿಸಿಸ್ ಸೇವೆಗೆ ಆಧಾರ್ ಕಡ್ಡಾಯ

ಬೆಂಗಳೂರು: ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆ ಪಡೆಯಲು ಆಧಾರ್ ದೃಢೀಕರಣವನ್ನು ಕಡ್ಡಾಯಗೊಳಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮ ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಇದರಲ್ಲಿ ಯಾವುದೇ ಡಿಬಿಟಿ ಹಣ ವರ್ಗಾವಣೆಗೆ ಆಧಾರ್ ಸಂಖ್ಯೆ ಅಗತ್ಯವಿರುವ ಹಿನ್ನೆಲೆಯಲ್ಲಿ ಡಯಾಲಿಸಿಸ್ ಸೇವೆಯ ಪ್ರಯೋಜನ ಪಡೆಯಲು ಬಯಸುವವರು ಆಧಾರ್ ದೃಢೀಕರಣಕ್ಕೆ ಒಳಗಾಗಬೇಕು ಎಂದು ತಿಳಿಸಿದೆ.

ಒಂದು ವೇಳೆ ಆಧಾರ್ ಇಲ್ಲದ ಕಾರಣ ಯಾವುದೇ ವ್ಯಕ್ತಿ, ವಯಸ್ಕ ಅಥವಾ ಮಗುವಿಗೆ ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ ಎಂದು ಸ್ಪಷ್ಟಪಡಿಸಿರುವ ರಾಜ್ಯ ಸರಕಾರ, ಇಂತಹ ವಿಶೇಷ ಸಮಯದಲ್ಲಿ ಇತರ ಗುರುತಿನ ದಾಖಲೆಗಳನ್ನು ಸ್ವೀಕರಿಸಲಾಗುತ್ತದೆ. ಇತರೆ ದಾಖಲೆಗಳ ಆಧಾರದ ಮೇಲೆ ಸೌಲಭ್ಯ ನೀಡಿದ ಸಂದರ್ಭದಲ್ಲಿ ಅದನ್ನು ದಾಖಲಿಸಲು ಪ್ರತ್ಯೇಕ ರಿಜಿಸ್ಟಾರ್ ನಿರ್ವಹಿಸಬೇಕು. ಅನುಷ್ಠಾನ ಏಜೆನ್ಸಿಯ ಮೂಲಕ ನಿಯಮಿತವಾಗಿ ಪರಿಶೀಲಿಸಿ ಲೆಕ್ಕಪರಿಶೋಧನೆ ಕೈಗೊಳ್ಳಬೇಕು ಎಂದು ಸ್ಪಷ್ಟಪಡಿಸಿದೆ.

ಯಾವುದೇ ವ್ಯಕ್ತಿ ಆಧಾರ್ ಹೊಂದಿಲ್ಲದಿದ್ದರೆ ಅಥವಾ ಈವರೆಗೆ ಆಧಾರ್‌ಗೆ ನೋಂದಣಿ ಆಗದಿದ್ದರೆ ಆಧಾರ್ ಕಾಯ್ದೆಯ ಪ್ರಕಾರ ಆಧಾರ್ ಪಡೆಯಲು ಅರ್ಹರಾಗಿದ್ದರೆ ಅವರು ಅರ್ಜಿ ಸಲ್ಲಿಸಬೇಕು. ಒಂದು ವೇಳೆ ಫಲಾನುಭವಿಗಳು ಮಕ್ಕಳಾಗಿದ್ದರೆ ತನ್ನ ತಂದೆ, ತಾಯಿ ಅಥವಾ ಪೋಷಕರ ಒಪ್ಪಿಗೆಗೆ ಒಳಪಟ್ಟು ಆಧಾರ್ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಒಂದೊಮ್ಮೆ ಅವರ ಸಮೀಪದಲ್ಲಿ ಆಧಾರ್ ನೋಂದಣಿ ಕೇಂದ್ರ ಇಲ್ಲದಿದ್ದರೆ ಇಲಾಖೆಯು ಯೋಜನೆ ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಯ ಮೂಲಕ ನೋಂದಣಿ ಕೇಂದ್ರದ ಸೌಲಭ್ಯವನ್ನು ಅನುಕೂಲಕರ ಸ್ಥಳಗಳಲ್ಲಿ ನೀಡಬೇಕು.

18 ವರ್ಷ ಮೇಲ್ಪಟ್ಟವರು ಹತ್ತು ದಾಖಲೆಗಳಲ್ಲಿ ಯಾವುದಾದರು ಒಂದು ಸಲ್ಲಿಸಲು ಆದೇಶ

5 ವರ್ಷದೊಳಗಿನ ಮಕ್ಕಳು ಆಧಾರ್ ದಾಖಲಾತಿ ಗುರುತಿನ ಚೀಟಿ ಅಥವಾ ಬಯೋಮೆಟ್ರಿಕ್ ನವೀಕರಣ ಗುರುತಿನ ಚೀಟಿ ನೀಡುವ ಷರತ್ತಿನೊಂದಿಗೆ ಜನನ ಪ್ರಮಾಣಪತ್ರ ಅಥವಾ ಸಕ್ಷಮ ಪ್ರಾಧಿಕಾರದಿಂದ ವಿತರಿಸಿರುವ ಜನನ ದಾಖಲೆ ಅಥವಾ ಶಾಲೆಯ ಮುಖ್ಯಸ್ಥರಿಂದ ಸಹಿ ಮಾಡಿರುವ ಶಾಲಾ ಗುರುತಿನ ಚೀಟಿ ನೀಡಬಹುದು. 18 ವರ್ಷ ಮೇಲಟ್ಟವರಾದರೆ ಆಧಾರ್ ಪಡೆಯಲು ನೋಂದಣಿ ಮಾಡಿರುವ ಎನ್ ರೋಲ್‌ಮೆಂಟ್ ಸಂಖ್ಯೆ ಚೀಟಿ ಹಾಗೂ ಈ ಭಾವಚಿತ್ರಹೊಂದಿರುವ ಬ್ಯಾಂಕ್ ಅಥವಾ ಅಂಚೆಕಚೇರಿ ಪಾಸ್‌ಬುಕ್, ಪ್ಯಾನ್, ಪಾಸ್‌ಪೋರ್ಟ್, ಪಡಿತರ ಚೀಟಿಯಂತಹ ಹತ್ತು ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬಹುದು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಮತ್ತೆ ಕವಿದ ಯುದ್ಧದ ಕಾರ್ಮೋಡ

ಒಂದು ಕಡೆ, ರಷ್ಯಾ ಮತ್ತು ಉಕ್ರೇನ್ ನಡುವಿನ ಹಣಾಹಣಿಯಿನ್ನೂ ನಿಂತಿಲ್ಲ, ಮತ್ತೊಂದು ಕಡೆ ಹಮಾಸ್ ಉಗ್ರರು ಮತ್ತು ಇಸ್ರೇಲ್ ನಡುವಿನ ಸಂಘರ್ಷಕ್ಕಿನ್ನೂ ತಾರ್ಕಿಕ ಅಂತ್ಯ ದಕ್ಕಿಲ್ಲ. ಅಷ್ಟರಲ್ಲಾಗಲೇ ಮತ್ತೊಂದು ಯುದ್ಧದ ಪೆಡಂಭೂತ ಧುತ್ತನೆ ಎದ್ದು ನಿಂತಿದೆ, ಅದು ತೀವ್ರ ಸ್ವರೂಪವನ್ನೇ ತಳೆದಿದೆ. ಇರಾನ್‌ನ ಪರಮಾಣು ಸ್ಥಾವರಗಳು ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನೆಯು ಶುಕ್ರವಾರ ಮುಂಜಾನೆ ನಡೆಸಿದ ಭಾರಿ ವೈಮಾನಿಕ ದಾಳಿಯಲ್ಲಿ 78 ಮಂದಿ ಅಸುನೀಗಿ, 320ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಇದರಿಂದಾಗಿ ಪ್ರತಿದಾಳಿಗೆ ಮುಂದಾದ ಇರಾನ್, ಇಸ್ರೇಲ್‌ನ ಕ್ಷಿಪಣಿ ನಿರೋಧಕ ಸಾಧನಗಳನ್ನು ನಿಷ್ಕ್ರಿಯಗೊಳಿಸಲು ಯತ್ನಿಸಿತು ಎಂಬುದು ಲಭ್ಯ ಸುದ್ದಿ. ಒಟ್ಟಿನಲ್ಲಿ ಉಭಯ ದೇಶಗಳ ನಡುವೆ ಈಗ ಕಾವೇರಿದ ವಾತಾವರಣ. ಇದಕ್ಕೆ ಪುಷ್ಟಿ ನೀಡುವಂತೆ ಇಸ್ರೇಲ್, 'ಧಾರ್ಮಿಕ ಕೇಂದ್ರಗಳಿರುವ ಜೆರುಸಲೇಂ ಮೇಲೆಯೇ ನಡೆಸುತ್ತಿರುವ ದಾಳಿಯನ್ನು ಇಸ್ರೇಲ್ ನಿಲ್ಲಿಸದಿದ್ದರೆ, ಇರಾನಿನ ಟೆಹರಾನ್ ನಗರವನ್ನು ಸಂಪೂರ್ಣ ಸುಟ್ಟು ಭಸ್ಮ ಮಾಡಲಾಗುವುದು' ಎಂದು ಅಬ್ಬರಿಸಿದೆ. ಮತ್ತೊಂದೆಡೆ ಇರಾನ್, 'ಇಸ್ರೇಲ್ ಮೇಲಿನ ನಮ್ಮ ಪ್ರತೀಕಾರದ ದಾಳಿಯನ್ನು ಹಿಮ್ಮೆಟ್ಟಿಸಲು ಅಮೆರಿಕ, ಬ್ರಿಟನ್, ಫ್ರಾನ್ಸ್ ದೇಶಗಳು ಒಂದೊಮ್ಮೆ ಯತ್ನಿಸಿದರೆ, ಈ ಮೂರೂ ದೇಶಗಳ ಪ್ರಾದೇಶಿಕ ಸೇನಾನೆಲೆಗಳ ಮೇಲೆ ದಾಳಿಮಾಡಲಾಗುವುದು' ಎಂದು ಬೆದರಿಕೆ ಹಾಕಿದೆ. ಅಲ್ಲಿಗೆ, ಶಾಂತಿ-ನೆಮ್ಮದಿಯನ್ನು ಕಾಯ್ದುಕೊಳ್ಳುವ ಆಶಯ ಯಾರಲ್ಲೂ ಕೆನೆಗಟ್ಟಿಲ್ಲ ಅಂತಾಯ್ತು. ವಿಶ್ವದ ವಿವಿಧೆಡೆಗಳಲ್ಲಿ ಹೀಗೆ ಯುದ್ಧದ ಕಾರ್ಮೋಡವು ಕವಿದುಬಿಟ್ಟರೆ, ಶಾಂತಿಪ್ರಿಯರು ನೆಮ್ಮದಿಯ ಆಶಾಕಿರಣವನ್ನು ಕಾಣುವುದಾದರೂ ಹೇಗೆ ಮತ್ತು ಎಲ್ಲಿಂದ? ಯಾವುದೇ ದೇಶಕ್ಕೆ ಮತ್ತೊಂದು ದೇಶದ ವಿರುದ್ಧ ಯುದ್ಧ ಮಾಡುವುದಕ್ಕೆ ಅದರದ್ದೇ ಆದ ಕಾರಣಗಳಿರಬಹುದು. ಆದರೆ ಹಾಗೆ ಶುರುಹಚ್ಚಿಕೊಂಡ ಯುದ್ಧವು ಮುಕ್ತಾಯವಾದ ನಂತರ, ಅದರಲ್ಲಿ ಗೆದ್ದ ಮತ್ತು ಸೋತ ಎರಡೂ ಬಣಗಳಿಗೂ ಆರ್ಥಿಕವಾಗಿ ಚೇತರಿಸಿಕೊಳ್ಳಲು ವರ್ಷಗಳೇ ಹಿಡಿಯುತ್ತವೆ ಎಂಬುದು ಕಹಿವಾಸ್ತವ. ಇದನ್ನು ಅರಿತುಬಿಟ್ಟರೆ, ಯುದ್ಧಕ್ಕೆ ತೊಡೆತಟ್ಟುವಂಥ ಹಂತಕ್ಕೆ ಯಾವ ದೇಶವೂ ಹೋಗುವುದಿಲ್ಲ.

ಸೊಂಪಾದಕೀಯ

ಎಂಜಿನಿಯರಿಂಗನ್ನಡ

ಬೆಂಗಳೂರಿನಲ್ಲಿ ಇತ್ತೀಚೆಗೆ ಎದ್ದು ಕಾಣುತ್ತಿರೋ ವಿಷಯ ಅಂದ್ರೆ 'ನಾನು ಕನ್ನಡಿಗ' ಎಂದು ಎದೆ ತಟ್ಟಿ ಹೇಳುವವರು ಮತ್ತು 'ನಾನ್-ಕನ್ನಡಿಗರ' ನಡುವಿನ ಸಂಘರ್ಷ. ಕರ್ನಾಟಕದಲ್ಲಿ ಬಂದು ಇದ್ದ ಮೇಲೆ, ಇಲ್ಲಿನ ಅನ್ನ ತಿಂದ ಮೇಲೆ ಕನ್ನಡ ಕಲಿಯಬೇಕು ಎಂಬುದು ಕನ್ನಡಿಗರ ಹಠವಾದರೆ, ಕನ್ನಡ ಕಲಿಯಲು ಆಸಕ್ತಿ ತೋರಿಸದ ವಲಸಿಗರು ಇನ್ನೊಂದು ಕಡೆ. ಈ ಕಾರಣದಿಂದಾಗಿ ಬೆಂಗಳೂರಿನಲ್ಲಿ ಹಲವು ಕಿರಿಕಿರಿಗಳು ಆಗುತ್ತಲೇ ಇರುತ್ತವೆ. ಈ ಉತ್ತರ ಭಾರತೀಯರ ಮತ್ತು ಆಟೋ ಚಾಲಕರ ನಡುವಿನ ವಾಗ್ವಾದಗಳಂತೂ ಕಾಮನ್. ಇತ್ತೀಚೆಗೆ ಆಟೋ ಚಾಲಕನೊಬ್ಬ ತನ್ನ ಆಟೋದಲ್ಲಿ ಕನ್ನಡ ಮಾತಾಡೋದು ಹೇಗೆ ಎಂಬ ಪಟ್ಟಿಯನ್ನು ಪ್ರದರ್ಶನ ಮಾಡಿದ್ದು ವೈರಲ್ ಆಗಿತ್ತು. ಅದರಿಂದ ಸಾಮಾಜಿಕ ಜಾಲತಾಣಗಳಲ್ಲಿ ಈತನ ಕನ್ನಡ ಪ್ರೇಮ ಪ್ರದರ್ಶನವೂ ಆಗಿತ್ತು. ಇದೆಲ್ಲ ಆಗ್ತಾ ಇರೋದು ಜೀವನ ಮಾಡೋಕೆ ಬೆಂಗಳೂರಿಗೆ ಬಂದರೂ ಕನ್ನಡ ಕಲಿಯಲ್ಲ ಅನ್ನೋ ವಲಸಿಗರ ವರಸೆಯಿಂದ. ಹಾಗಾಗಿ ಸರಕಾರವೇ ಆಟೋಮ್ಯಾಟಿಕ್ ಆಗಿ ಬೇಸಿಕ್ ಲೆವೆಲ್‌ನಲ್ಲಿ ಕನ್ನಡ ಕಲಿಸುವ ಕೆಲಸಕ್ಕೆ ಕೈ ಹಾಕಿತ್ತು. ಇದು ಸರಕಾರ ಕನ್ನಡಿಗರಿಗೆ ಕೊಡ್ತಾ ಇರೋ ಗಿಫ್ಟ್ ಅಂತಲೇ ಹೇಳಬಹುದು. ಕೆಲಸ ಸಿಕ್ಕಮೇಲೆ ಕನ್ನಡ ಕಲಿಯಿರಿ ಅಂದ್ರೆ ಮಾತು ಕೇಳದ ವಲಸಿಗರಿಗೆ ಈಗ ಓದುವ ಸಮಯದಲ್ಲೇ ಕನ್ನಡ ಕಲಿಸಲು ಮುಂದಾಗಿತ್ತು ಸರಕಾರ. ಐಟಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವ ಮುನ್ನ ವಲಸಿಗರಿಗೆ ಎಂಜಿನಿಯರಿಂಗ್ ಓದುವಾಗಲೇ ಕನ್ನಡ ಕಲಿಯುವ ಅನಿವಾರ್ಯತೆ. ಯಾಕಂದ್ರೆ, ಎಂಜಿನಿಯರಿಂಗ್ ಸಿಲಬಸ್‌ನಲ್ಲೇ ಈಗ ಕನ್ನಡ ಪಠ್ಯ ಸೇರಿಸುವ ಇರಾದೆ ಇತ್ತು. ಇದರಲ್ಲಿ ಕನ್ನಡ ಬರುವವರಿಗೆ ಒಂದು ಪಠ್ಯ, ಬಾರದಿರುವವರಿಗೆ ಇನ್ನೊಂದು ಪಠ್ಯ ಅಂತ ವಿಂಗಡನೆ ಮಾಡಲಾಗಿತ್ತು. ಕನ್ನಡ ತಿಳಿದವರಿಗೆ ಸಾಂಸ್ಕೃತಿಕ ಕನ್ನಡ ಮತ್ತು ಕನ್ನಡ ಬಾರದವರಿಗೆ ಬಳಕೆಯ ಕನ್ನಡ ಅಂತ ಎರಡು ವಿಭಾಗಗಳಲ್ಲಿ ಕನ್ನಡ ಕಲಿಸುವ ಉದ್ದೇಶ ಸರಕಾರದ್ದು. ಒಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕನ್ನಡ ಮೀಡಿಯಂ, ಇಂಗ್ಲಿಷ್ ಮೀಡಿಯಂ ಅನ್ನೋ ಗೊಂದಲಗಳ ನಡುವೆ ಈಗ ಎಂಜಿನಿಯರಿಂಗ್ ಮಟ್ಟದಲ್ಲೂ ಕನ್ನಡ ಕಲಿಸುವ ಕೆಲಸಕ್ಕೆ ಕೈ ಹಾಕಿ ಟೆಕ್ನಿಕಲ್ ಕೋರ್ಸ್‌ಗಳಲ್ಲೂ 'ಎಂಜಿನಿಯರಿಂಗನ್ನಡ' ರಿಂಗಣಿಸುವಂತೆ ಮಾಡುವ ಕೆಲಸ ಶುರು ಆಗಿತ್ತು. ಆದರೆ ಇದರ ಅನುಷ್ಠಾನ?

ಸಂಪಾದಕರ ಸದ್ಯಶೋಧನೆ

ಕೈಲಾಸಂ ಕುರಿತು

ಕೋರಾ' ವೆಬ್‌ಸೈಟಿನಲ್ಲಿ ಒಬ್ಬರು, 'ಟಿ.ಪಿ.ಕೈಲಾಸಂ ಅವರ ಬಗ್ಗೆ ಯಾರಾದರೂ ಒಂದು ಸಣ್ಣ ಪರಿಚಯ ಮಾಡಿ ಕೊಡುವಿರಾ?' ಎಂದು ಕೇಳಿದ್ದರು. ಅದಕ್ಕೆ ನಂದೀಶ್ ಎಚ್.ಎನ್. ಎಂಬುವವರು ಕೈಲಾಸಂ ವ್ಯಕ್ತಿಚಿತ್ರವನ್ನು ಆಪ್ತವಾಗಿ ಕಟ್ಟಿಕೊಟ್ಟಿದ್ದರು. ಅದನ್ನು ಓದಿದವರು ಕೈಲಾಸಂ ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳಬಹುದಾಗಿತ್ತು. ತ್ಯಾಗರಾಜ ಪರಮಶಿವ ಅಯ್ಯರ್ ಕೈಲಾಸಂ (ಕೈಲ್ Awesome) ಕನ್ನಡ ಮತ್ತು ಇಂಗ್ಲಿಷಿನಲ್ಲಿ ನಾಟಕ, ಕತೆ ಮತ್ತು ಕವನಗಳನ್ನು ಬರೆದ, 'ಕನ್ನಡಕ್ಕೊಬ್ಬನೇ ಕೈಲಾಸಂ', 'ಕನ್ನಡ ನಾಟಕ ಪ್ರಹಸನ ಪಿತಾಮಹ' ಇತ್ಯಾದಿ ಹೆಸರು ಪಡೆದ, ತಮಿಳು ಮನೆಮಾತಿನ ಒಬ್ಬ ಜಿಯಾಲಜಿಸ್ಟ್, ಒಬ್ಬ ಚುರುಕು ಬುದ್ಧಿಯ ಹಾಸ್ಯಗಾರ, ನಟ, ನಾಟಕಕಾರ, ಭಾಷಾಚತುರ ಮತ್ತು ಗ್ರಾಂಥಿಕ ಭಾಷೆ ತೊರೆದು ಆಡುಭಾಷೆಯಲ್ಲಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಬರೆದ, ಎಲ್ಲ ಸ್ಥಾಪಿತವಾದವುಗಳನ್ನು ಕಿತ್ತೆಸೆದ ಕ್ರಾಂತಿಕಾರಿ. ಕೈಲಾಸಂ 1884ರಲ್ಲಿ ಮೈಸೂರಲ್ಲಿ ಹುಟ್ಟಿ 1946ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ನೂರಾರು ವರ್ಷಗಳೇ ಕಳೆದರೂ ಅವರ ನಾಟಕಗಳು ಈಗಲೂ ಹೆಸರುವಾಸಿಯಾಗಿವೆ. ಅವರ ಜೋಕ್ಸ್ ಅಮರ! Wit, pun ಇವುಗಳ ಮಾಸ್ಟರ್ ಆಗಿದ್ದರು ಕೈಲಾಸಂ. ಅವರ ಕನ್ನಡದಲ್ಲಿ ಸಂಸ್ಕೃತದ ಬದಲು ಇಂಗ್ಲಿಷ್ ತುಂಬಾ ಸೇರಿಕೊಂಡು ಇರುತ್ತಿತ್ತು. 1945ರಲ್ಲಿ ಮದ್ರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಚಿಕ್ಕದಾಗಿ ಚೊಕ್ಕವಾಗಿ ಭಾಷಣ ಮಾಡಿ ಗಮನ ಸೆಳೆದಿದ್ದರು. ಒಮ್ಮೆ ರವೀಂದ್ರನಾಥ ಟಾಗೋರ್ ಬೆಂಗಳೂರಿಗೆ ಬಂದಿದ್ದಾಗ ಅವರ ಮುಂದೆ ತಮ್ಮ ನಾಟಕ 'ಟೊಳ್ಳು ಗಟ್ಟಿ' ಆಡಿ, ಭೇಷ್ ಅನ್ನಿಸಿಕೊಂಡಿದ್ದರು. ಗಾಂಧೀಜಿ ಬೆಂಗಳೂರಿಗೆ ಬಂದಾಗ, ಪಿಟೀಲು ಚೌಡಯ್ಯನವರ ಕಛೇರಿ ಏರ್ಪಡಿಸಿದ್ದರಂತೆ. ಯಾರವರು? ಅಂತ ಪಕ್ಕದಲ್ಲೇ ಕುಳಿತಿದ್ದ ಕೈಲಾಸಂ ಅವರನ್ನು ಗಾಂಧಿ ಕೇಳಿದಾಗ, 'ನೀವು ದೊಡ್ಡ ನಾನ್-ವಯಲನಿಸ್ಟ್, ಅವರು ಚೌಡಯ್ಯ ಅಂತ, ಪಕ್ಕಾ ವಯಲನಿಸ್ಟ್' ಅಂದ್ರಂತೆ ಕೈಲಾಸಂ! ಕೈಲಾಸಂ ಜಿಯಾಲಜಿಯ ಕಲಿಕೆಗೆ ಮೈಸೂರು ಮಹಾರಾಜರ ಸಹಾಯದಿಂದ ಇಂಗ್ಲೆಂಡಿಗೆ ಹೋದವರು ಅಲ್ಲಿನ ಇಂಗ್ಲಿಷಿನ ಎಲ್ಲ ತರಹದ ಆಡುನುಡಿಗಳನ್ನು ಸಲೀಸಾಗಿ ಮಾತಾಡಬಲ್ಲವರಾಗಿದ್ದರು. ಬರ್ನಾರ್ಡ್ ಷಾ ಅವರಿಂದ ತುಂಬಾ ಪ್ರಭಾವಿತರಾಗಿದ್ದರು. ಇಂಗ್ಲಿಷ್ ಹಾಡುಗಳ ಅದೇ ರಾಗದಲ್ಲಿ ನಿಂತಂತೆಯೇ ಕನ್ನಡದಲ್ಲಿ ಕವನಗಳನ್ನು ಕಟ್ಟಿ ಹಾಡಬಲ್ಲವರಾಗಿದ್ದರು. ಈ ರೀತಿ ಹುಟ್ಟಿದ ಹಾಡೇ 'ನಾನು ಕೋಳೀಕೆ ರಂಗ'! ಫುಟ್ಬಾಲ್ ಆಟದಲ್ಲಿ ಅವರೊಬ್ಬ ಉತ್ತಮ ಗೋಲ್ ಕೀಪರ್. ಜತೆಗೆ ಒಳ್ಳೆಯ ವ್ಯಾಯಾಮಪಟು. ರಾಯಲ್ ಜಿಯಾಲಜಿಕಲ್ ಸೊಸೈಟಿಯಿಂದ ಚಿನ್ನದ ಪದಕ ಪಡೆದು ಭಾರತಕ್ಕೆ ಮರಳಿ ಬಂದವರು ಅಗೆದು ಗುಡ್ಡೆ ಹಾಕಿದ್ದು ಅದಿರನ್ನಲ್ಲ, ಸಾಹಿತ್ಯವನ್ನು! ಕೈಲಾಸಂ ಅವರು ರಾತ್ರಿ ಹತ್ತು ಗಂಟೆ ಮೇಲೆ ಒಂದು ಕೊಳಕಾದ ಅಡ್ಡಾದಲ್ಲಿ (nook ಅಂತ ಕೈಲಾಸಂ ಕರೆಯುತ್ತಿದ್ದರು) ಗೆಳೆಯರ ಜತೆ ಸೇರಿಕೊಂಡು ಆಲ್ಕೋಹಾಲ್ ಕುಡೀತ ಸಿಗರೇಟು ಸೇದುತ್ತಾ, ಹೊಗೆ ಸುರುಳಿಯಲ್ಲಿ ಕೈಲಾಸಂ ಅಂತ ಬರೆಯುತ್ತಾ, ನಾಟಕ, ಕತೆ, ಕವನ, ಜೋಕುಗಳನ್ನು ಏರಿದ ಧ್ವನಿಯಲ್ಲಿ ಹಾವಭಾವ ಮಾಡಿಕೊಂಡು ಡಿಕ್ಟೇಟ್ ಮಾಡುತ್ತಿದ್ದರು. ಅವರ ಗೆಳೆಯರು ಅದನ್ನು ಹಾಳೆಗಳ ಮೇಲೆ ಇಳಿಸುತ್ತಿದ್ದರು. ಅಂಥ ಗೆಳೆಯರಲ್ಲಿ ಒಬ್ಬರು ಜಿ.ಪಿ.ರಾಜರತ್ನಂ! ಪಾಪ, ಕುಡುಕನ ಪದಗಳನ್ನು ಬರೆದ ರಾಜರತ್ನಂ ಅವರು ಏನನ್ನೂ ಕುಡಿಯುತ್ತಿರಲಿಲ್ಲ! ಕೆ.ವಿ.ಅಯ್ಯರ್ ಕೂಡ ಈ ಪಟಾಲಂ ಸದಸ್ಯರು. ಜಿಯಾಲಜಿ ಡಿಪಾರ್ಟ್‌ಮೆಂಟ್‌ಗೆ ಮಹಾ ನಿರ್ದೇಶಕ ಆಗಬೇಕು ಅಂತ ಆಸೆ ಇಟ್ಟುಕೊಂಡಿದ್ದ ಕೈಲಾಸಂ ಅಪ್ಪ ಹೈಕೋರ್ಟ್ ಜಡ್ಜ್ ಪರಮಶಿವ ಅಯ್ಯರ್, ಸರಕಾರಿ ಜಿಯಾಲಜಿಸ್ಟ್ ಕೆಲಸ ಬಿಟ್ಟು ನಾಟಕ, ಕತೆ ಅಂತ ಕುಡಿದುಕೊಂಡು, ಸೇದಿಕೊಂಡು ಹಾಳಾಗಿದ್ದ ಮಗನನ್ನ ತೊರೆದುಬಿಟ್ಟಿದ್ದರು! ಯಾರೋ ಒಬ್ಬರು, 'ನೀವು ಕನ್ನಡದ ಬರ್ನಾರ್ಡ್ ಷಾ' ಅಂದರಂತೆ. ಅದಕ್ಕೆ ಕೈಲಾಸಂ ಹೇಳಿದ್ದು- 'ಬರ್ನಾರ್ಡ್ ಷಾ ಐರಿಷ್, ನಾನು ಅಯ್ಯರಿಷ್!' ಒಮ್ಮೆ ರೈಲಿನಲ್ಲಿ ಗೆಳೆಯನ ಜತೆ ರಾತ್ರಿ ಪ್ರಯಾಣ ಆದ ಮೇಲೆ ಹೇಳಿದರಂತೆ- 'ಸೌಂಡ್ ಸ್ಲೀಪ್ ಎಲ್ಲಿ ಬಂತು, ನನಗೆ ಸೌಂಡ್, ಅವನಿಗೆ ಸ್ಲೀಪ್'.

ಮುಂದಿನ ವರ್ಷ ನಾನೇ ಸಿಎಂ ಆಗಿರ್ತೀನಲ್ಲ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕೆಲ ದಿನಗಳ ಹಿಂದೆ ಕರ್ನಾಟಕದ ಆರೆಸ್ಸೆಸ್ ಮುಖಂಡರೊಬ್ಬರನ್ನು ಸಂಪರ್ಕಿಸಿದ ಬಿಜೆಪಿಯ ವರಿಷ್ಠರು ಒಂದು ಗಂಭೀರ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿ ಕನ್ನಡಪರ ಧ್ವನಿ ತಾರಕಕ್ಕೇರುವ ಮುನ್ನ ಅದನ್ನು ಶಾಂತಗೊಳಿಸಿ ಎಂಬುದು ಅವರ ಮಾತು.

ಅಂದ ಹಾಗೆ, ಕರ್ನಾಟಕದಲ್ಲಿ ಐಟಿ-ಬಿಟಿ ಯುಗ ಆರಂಭವಾದ ನಂತರ ದೇಶದ ವಿವಿಧ ಭಾಗಗಳಿಂದ ಬಂದು ಜನ ನೆಲೆಯಾಗುತ್ತಿರುವುದು ಹೊಸ ವಿಷಯವೇನಲ್ಲ. ಆದರೆ ಪರಭಾಷಿಕರು ಹೆಚ್ಚಾದಂತೆ ಕರ್ನಾಟಕದ ಆರ್ಥಿಕ, ಸಾಮಾಜಿಕ ಚೌಕಟ್ಟು ಬದಲಾಗುತ್ತಾ ಇಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗುತ್ತಿದ್ದಾರೆ. ದಿನ ಕಳೆದಂತೆ ತಮ್ಮ ಶಕ್ತಿ ಕುಗ್ಗುತ್ತಿದೆ ಎಂಬ ಕನ್ನಡಿಗರ ಅಸಮಾಧಾನ ಸುನಾಮಿಯಂತೆ ಮೇಲೆದ್ದಿದೆ.

ಅಂದ ಹಾಗೆ, ಪರಭಾಷಿಕರ ಪ್ರಾಬಲ್ಯದ ಬಗ್ಗೆ ಕೂಗೆದ್ದಿರುವುದು ಇದೇ ಮೊದಲೇನಲ್ಲ. ಹಿಂದಿನಿಂದಲೂ ಇಂಥ ಕೂಗು, ಇದಕ್ಕೆ ಪೂರಕವಾಗಿ ಕನ್ನಡ ಪರ ಹೋರಾಟಗಳು ನಡೆಯುತ್ತಲೇ ಬಂದಿವೆ. ಆದರೆ ಐಟಿ-ಬಿಟಿ ಯುಗ ಶುರುವಾದ ನಂತರ ಈ ಕೂಗು ಮತ್ತಷ್ಟು ತಾರಕಕ್ಕೇರಿದೆಯಲ್ಲದೆ ಪರಭಾಷಿಕರ ಹೊಡೆತದಿಂದ ನಮ್ಮ ಆಸ್ಮಿತೆಗೇ ಗಂಡಾಂತರ ಬಂದಿದೆ ಎಂಬ ಭಾವನೆ ದಟ್ಟವಾಗಿ, ಕನ್ನಡಿಗರಲ್ಲಿ ಒಂದು ಅಗ್ರೆಸಿವ್ ಭಾವನೆ ಬೆಳೆದು ನಿಂತಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಏಷ್ಯಾದ ದೊಡ್ಡ ಮಾಲ್ ಒಂದರಲ್ಲಿ ರೈತನಿಗೆ ಅವಮಾನವಾದ ಘಟನೆ ಇರಬಹುದು, ತಮಿಳೇ ಕನ್ನಡದ ತಾಯಿ ಎಂಬರ್ಥದಲ್ಲಿ ನಟ ಕಮಲ್ ಹಾಸನ್ ಮಾತನಾಡಿದ ಎಪಿಸೋಡೇ ಇರಬಹುದು ಅಥವಾ ಎಲ್ಲೋ ಇದ್ದ ಕನ್ನಡಿಗರೊಬ್ಬರಿಗೆ ಅವಮಾನಿಸಿದ ಪ್ರಸಂಗ ಇರಬಹುದು. ಒಟ್ಟಿನಲ್ಲಿ ಇಂಥ ಪ್ರಕರಣಗಳು ವರದಿಯಾದ ಕೂಡಲೇ ಕನ್ನಡ ಪರ ಹೋರಾಟಗಾರರು ಬೀದಿಗಿಳಿಯುತ್ತಿದ್ದಾರೆ. ಅಷ್ಟೇ ಅಲ್ಲ, ಕನ್ನಡ ವಿರೋಧಿಗಳು ಅನ್ನಿಸಿಕೊಂಡವರು ಸುಸ್ತಾಗಿ ಹೋಗುವಂತೆ ಮಾಡುತ್ತಿದ್ದಾರೆ.

ಕನ್ನಡ ಪರ ಹೋರಾಟಗಳ ದಿಕ್ಕು ನೋಡಿದರೆ ಮುಂದಿನ ದಿನಗಳಲ್ಲಿ ಕನ್ನಡ ಆಸ್ಮಿತೆ ಎಂಬುದು ಮತ್ತಷ್ಟು ಪ್ರಬಲವಾಗಿ ಮಹಾರಾಷ್ಟ್ರ, ತಮಿಳುನಾಡಿನಂಥ ರಾಜ್ಯಗಳಲ್ಲಿ ಉದ್ಭವವಾದ ಪರಿಸ್ಥಿತಿ ಉಂಟಾಗಬಹುದು. ಅರ್ಥಾತ್, ಅಲ್ಲಿನ ರಾಜಕಾರಣದ ಮೇಲೆ ಆಯಾ ರಾಜ್ಯಗಳ ಭಾಷಾ ಆಸ್ಮಿತೆ ಕೆಲಸ ಮಾಡಿದಂತೆ ಕರ್ನಾಟಕದಲ್ಲೂ ಕೆಲಸ ಮಾಡಬಹುದು. ಮಹಾರಾಷ್ಟ್ರದಲ್ಲಿ ಶುರುವಾದ ಮರಾಠಾ ಆಸ್ಮಿತೆ ಅಲ್ಲಿ ಬಾಳ್ ಠಾಕ್ರೆಯಂಥ ಪವರ್‌ಫುಲ್ ನಾಯಕನನ್ನು ಸೃಷ್ಟಿಸಿ ದಶಕಗಳ ಕಾಲದಿಂದ ರಾಜಕಾರಣದ ಮೇಲೆ ಪ್ರಭಾವ ಬೀರಿತು. ತಮಿಳುನಾಡಿನಲ್ಲಿ ತಮಿಳು ಆಸ್ಮಿತೆ ಹೇಗೆ ಕೆಲಸ ಮಾಡುತ್ತಿದೆಯೆಂದರೆ ಡಿಎಂಕೆ, ಎಐಎಡಿಎಂಕೆಯೇ ಇರಲಿ, ಇನ್ಯಾವ ಪಕ್ಷಗಳೇ ಇರಲಿ, ತಮಿಳು ಆಸ್ಮಿತೆಯನ್ನು ಹೊದ್ದುಕೊಂಡೇ ಇರಬೇಕು. ನಾಳೆ ಕರ್ನಾಟಕದಲ್ಲಿ ಇಂಥ ಪರಿಸ್ಥಿತಿ ನೆಲೆಸಿದರೆ ದೊಡ್ಡ ಹೊಡೆತ ಬೀಳುವುದು ಬಿಜೆಪಿಗೆ. ಯಾಕೆಂದರೆ ಅದು ಹಿಂದಿ ಭಾಷಿಕರ ಪರ ಎಂಬ ಭಾವನೆ ಇರುವುದರಿಂದ ಸಹಜವಾಗಿಯೇ ಅದಕ್ಕೆ ಡ್ಯಾಮೇಜ್ ಆಗುತ್ತದೆ.

ಒಂದು ಅಂದಾಜಿನ ಪ್ರಕಾರ, ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ, ಕನ್ನಡ ಅಂತಲೇ ಮತ ಚಲಾಯಿಸುವ 15 ಪರ್ಸೆಂಟಿನಷ್ಟು ಮತಗಳು ಕನ್‌ಸಾಲಿಡೇಟ್ ಆಗಲಿವೆ ಮತ್ತು ಹಾಗೆ ಕನ್‌ಸಾಲಿಡೇಟ್ ಆಗುವ ಮತಗಳನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಹಂಚಿಕೊಳ್ಳಲಿವೆ. ಹಾಗೇನಾದರೂ ಆದರೆ ಒಂದು ಮಟ್ಟದಲ್ಲಿ ಬಿಜೆಪಿಗೆ ಹೊಡೆತ ಬೀಳುವುದು ನಿಶ್ಚಿತ. ಹೀಗಾಗಿ ಸನ್ನಿವೇಶವನ್ನು ನಿಭಾಯಿಸಲು ನಾವು ಹೊಸ ಮಾರ್ಗ ಅನುಸರಿಸಬೇಕು ಎಂಬುದು ಬಿಜೆಪಿ ವರಿಷ್ಠರ ಸಿಗ್ನಲ್ಲು. ಅದರ ಪ್ರಕಾರ ಮುಂದಿನ ದಿನಗಳಲ್ಲಿ ಕನ್ನಡಿಗ ವರ್ಸಸ್ ಪರಭಾಷಿಕ ಎಂಬ ಸಂಘರ್ಷದ ವಾತಾವರಣವನ್ನು ತಿಳಿಗೊಳಿಸಬೇಕು. ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗೆ ಪರಭಾಷಿಕರು ಗೌರವ ಕೊಡುವಂತೆ ಮಾಡಬೇಕು. ಇದಕ್ಕೆ ಪೂರಕವಾಗಿ ರಾಜ್ಯಾದ್ಯಂತ ತಂಡಗಳನ್ನು ರಚಿಸಿ ಪರಭಾಷಿಕರಿಗೆ ಕನ್ನಡ ಕಲಿಸುವ ಕೆಲಸ ಆರಂಭಿಸಬೇಕು. ಯಾವಾಗ ಇದು ಸಾಧ್ಯವಾಗುತ್ತದೋ, ಆಗ ಸಹಜವಾಗಿಯೇ ಕನ್ನಡ ವರ್ಸಸ್ ಪರಭಾಷಿಕ ಎಂಬ ಸಂಘರ್ಷ ಕಡಿಮೆಯಾಗಿ ಬಿಜೆಪಿಯ ಶಕ್ತಿ ಹಿಗ್ಗುತ್ತದೆ ಎಂಬುದು ವರಿಷ್ಠರ ಥಿಂಕಿಂಗು. ಇದನ್ನೇ ಅವರು ಕರ್ನಾಟಕದ ಆರೆಸ್ಸೆಸ್ ನಾಯಕರಿಗೆ ವಿವರಿಸಿದ್ದು. ಅದರ ಆಧಾರದ ಮೇಲೆ ಕನ್ನಡಿಗ ವರ್ಸಸ್ ಪರಭಾಷಿಕ ಸಂಘರ್ಷವನ್ನು ಕಡಿಮೆ ಮಾಡಲು ಪ್ರಾಥಮಿಕ ಕಸರತ್ತು ಆರಂಭವಾಗಿದೆ ಎಂಬುದು ಆರೆಸ್ಸೆಸ್ ಮೂಲಗಳ ಮಾತು.

ವಿಜಯೇಂದ್ರ ಪಟ್ಟಾಭಿಷೇಕ ಗ್ಯಾರಂಟಿ

ಈ ಮಧ್ಯೆ, ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಗೊಂದಲ ಆಗಸ್ಟ್ ವೇಳೆಗೆ ಬಗೆಹರಿಯಲಿದೆ. ಮೂಲಗಳ ಪ್ರಕಾರ, ಪಕ್ಷದ ಜಿಲ್ಲಾಧ್ಯಕ್ಷರುಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, 39 ಜಿಲ್ಲಾಧ್ಯಕ್ಷರ ಪೈಕಿ 35 ಮಂದಿ ವಿಜಯೇಂದ್ರ ಅವರ ಪರವಾಗಿ ನಿಲ್ಲಲಿದ್ದಾರೆ. ಹೀಗಾಗಿ ಚುನಾವಣೆ ನಡೆದರೂ ವಿಜಯೇಂದ್ರ ಅವರು ಗೆಲ್ಲುವುದು ನಿಶ್ಚಿತ. ಇದೇ ಕಾರಣಕ್ಕಾಗಿ ವಿಜಯೇಂದ್ರ ವಿರೋಧಿ ಪಾಳಯ ಪಕ್ಷಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಬದಲು ತಾತ್ವಿಕ ವಿರೋಧಕ್ಕೆ ಅಂಟಿಕೊಂಡಿದೆ.

ಇಷ್ಟಾದರೂ ಪಕ್ಷಾಧ್ಯಕ್ಷ ಸ್ಥಾನದ ವಿಷಯದಲ್ಲಿ ಡಿಫರೆಂಟ್ ಕಸರತ್ತುಗಳು ನಡೆಯುತ್ತಿದ್ದು, ಪಕ್ಷಾಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವ ವಿ.ಸೋಮಣ್ಣ ಮತ್ತು ಮಾಜಿ ಸಚಿವ ಮುರುಗೇಶ್ ನಿರಾಣಿ ಅವರೂ ಏಟು ಹಾಕಿದಂತಿದೆ. ಒಂದು ಮೂಲದ ಪ್ರಕಾರ, ಮುಂದಿನ ತಿಂಗಳು ಕರ್ನಾಟಕಕ್ಕೆ ಬರಲಿರುವ ಶಿವರಾಜ್ ಸಿಂಗ್ ಚೌಹಾಣ್ ಅವರು ಅಧಿಕೃತವಾಗಿ ವಿಜಯೇಂದ್ರ ಅವರನ್ನು ಅಧ್ಯಕ್ಷ ಪಟ್ಟದಲ್ಲಿ ಕೂರಿಸಿ ವಾಪಸಾಗಲಿದ್ದಾರೆ. ಆದರೆ ಆರು ತಿಂಗಳ ನಂತರ ಪಟ್ಟದಿಂದ ವಿಜಯೇಂದ್ರ ಅವರನ್ನಿಳಿಸಿ ವಿ.ಸೋಮಣ್ಣ ಅವರನ್ನು ತಂದು ಕೂರಿಸುವ ಕೆಲಸವಾಗಲಿದೆ. ಇದೇ ಮೂಲಗಳ ಪ್ರಕಾರ, ಈ ಕುರಿತು ಸೋಮಣ್ಣ ಅವರಿಗೆ ಪಕ್ಷದ ವರಿಷ್ಠರು ಭರವಸೆ ನೀಡಿದ್ದು ಇನ್ನು ಆರು ತಿಂಗಳು ಸುಮ್ಮನಿರಿ ಎಂದಿದ್ದಾರೆ.

ಇನ್ನು ಮಾಜಿ ಸಚಿವ ಮುರುಗೇಶ್ ನಿರಾಣಿ ಕೂಡಾ ಕಸರತ್ತು ನಡೆಸುತ್ತಿದ್ದು ಅವರಿಗೆ ಖುದ್ದು ಅಮಿತ್ ಶಾ ಅವರೇ ಭರವಸೆ ನೀಡಿದ್ದಾರಂತೆ. ಮುಂದಿನ ವರ್ಷದ ಶುರುವಿನಲ್ಲಿ ಕರ್ನಾಟಕ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯಲಿದೆ. ಆ ಸಂದರ್ಭದಲ್ಲಿ ನೀವೇ ಪಕ್ಷದ ರಾಜ್ಯಾಧ್ಯಕ್ಷರಾಗಲಿದ್ದೀರಿ ಅಂತ ಅಮಿತ್ ಶಾ ಪ್ರಾಮಿಸ್ಸು ಮಾಡಿದ್ದಾರಂತೆ.

ಮುಂದಿನ ವರ್ಷವೂ ನಾನೇ ಸಿಎಂ

ಈ ಮಧ್ಯೆ ರಾಜ್ಯ ವಿಧಾನ ಪರಿಷತ್ತಿಗೆ ಡಿ.ಜಿ.ಸಾಗರ್, ದಿನೇಶ್ ಅಮೀನ್ ಮಟ್ಟು, ರಮೇಶ್ ಬಾಬು ಮತ್ತು ಆರತಿ ಕೃಷ್ಣ ಅವರು ಆಯ್ಕೆಯಾಗುವುದು ಬಹುತೇಕ ನಿಶ್ಚಿತವಾಗಿದೆ. ಕಳೆದ ವಾರ ಸಿಎಂ ಸಿದ್ದರಾಮಯ್ಯ ದಿಲ್ಲಿಗೆ ಹೋಗಿದ್ದರಲ್ಲ? ಈ ಸಂದರ್ಭದಲ್ಲಿ ಸದರಿ ಪಟ್ಟಿಗೆ ಹೈಕಮಾಂಡ್ ತಡೆ ನೀಡಿದೆ ಎಂಬ ಸುದ್ದಿ ಹರಡಿತ್ತು. ಆದರೆ ಈಗಿನ ವರ್ತಮಾನದ ಪ್ರಕಾರ, ಈ ನಾಲ್ವರ ಹೆಸರುಗಳಿಗೆ ವರಿಷ್ಠರು ಒಪ್ಪಿಗೆ ಸೂಚಿಸಿದ್ದಾರೆ. ಆದರೆ ಇದ್ದುದರಲ್ಲಿ ರಮೇಶ್ ಬಾಬು ಮತ್ತು ಆರತಿ ಕೃಷ್ಣ ಅವರ ಸ್ಥಾನಗಳು ಮಾತ್ರ ಅದಲು-ಬದಲಾಗಿವೆ. ಹೇಗೆಂದರೆ ಈ ಮುಂಚೆ ಆರತಿಕೃಷ್ಣ ಅವರಿಗೆ ಸಿ.ಪಿ.ಯೋಗೇಶ್ವರ್ ತೆರವು ಮಾಡಿದ ಜಾಗಕ್ಕೆ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿತ್ತು. ಅರ್ಥಾತ್, ಆರತಿ ಕೃಷ್ಣ ಅವರಿಗೆ ಒಂದು ವರ್ಷದ ಕಾಲಾವಧಿ ಮಾತ್ರ ಸಿಗಲಿತ್ತು. ಆದರೆ ಈ ವಿಷಯ ಕನ್‌ಫರ್ಮ್ ಆಗುತ್ತಿದ್ದಂತೆಯೇ ಕಾಂಗ್ರೆಸ್ಸಿನ ಹಿರಿಯ ನಾಯಕ, ದಿವಂಗತ ರಾಜೀವ್ ಗಾಂಧಿಯವರ ಆಪ್ತ ಸ್ಯಾಮ್ ಪಿತ್ರೋಡಾ ಅವರು ಮಧ್ಯೆ ಪ್ರವೇಶಿಸಿ ಸೀನ್ ಬದಲಿಸಿದ್ದಾರೆ. ಅದರ ಪ್ರಕಾರ, ಈ ಹಿಂದೆ ಆರತಿಕೃಷ್ಣ ಅವರಿಗೆ ನಿಗದಿ ಮಾಡಿದ್ದ ಒಂದು ವರ್ಷದ ಪರಿಷತ್ ಸ್ಥಾನ ರಮೇಶ್ ಬಾಬು ಅವರಿಗೆ ಫಿಕ್ಸ್ ಆಗಿ, ರಮೇಶ್ ಬಾಬು ಅವರಿಗೆ ಫಿಕ್ಸ್ ಆಗಿದ್ದ ಆರು ವರ್ಷದ ಪರಿಷತ್ ಸ್ಥಾನ ಆರತಿ ಕೃಷ್ಣ ಅವರಿಗೆ ಫಿಕ್ಸ್ ಆಗಿದೆ.

ಈ ಬದಲಾವಣೆಯಿಂದ ಅಸಮಾಧಾನಗೊಂಡ ರಮೇಶ್ ಬಾಬು ಸಿಎಂ ಸಿದ್ದರಾಮಯ್ಯ ಅವರ ಬಳಿ ಹೋದರೆ, ''ಅದೇನು ಫಿಕ್ಸಾಗಿದೆಯೋ ಒಪ್ಕೊಳಿ ಬಾಬು. ಒಂದು ವರ್ಷದ ನಂತರವೂ ನಾನೇ ಸಿಎಂ ಆಗಿರ್ತೀನಲ್ಲ? ನಿಮ್ಮನ್ನು ಮತ್ತೆ ಕಂಟಿನ್ಯೂ ಮಾಡಿಸ್ತೀನಿ'' ಅಂತ ಪ್ರಾಮಿಸ್ಸು ಮಾಡಿದರಂತೆ.

ಕುಮಾರಣ್ಣನ ಲೇಟೆಸ್ಟು ಯೋಚನೆ

ಇನ್ನು ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಪಕ್ಷದ ಹಾಲಿ, ಮಾಜಿ ಶಾಸಕರ ಸಭೆಯಲ್ಲಿ ಪಾಲ್ಗೊಂಡ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒಂದು ವಿಷಯವನ್ನು ಒತ್ತಿ ಹೇಳಿದ್ದಾರಂತೆ. ಅದೆಂದರೆ ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ 33 ಪರ್ಸೆಂಟ್ ಮಹಿಳಾ ಮೀಸಲಾತಿ ಜಾರಿಗೆ ಬರುವುದು ಕನ್‌ಫರ್ಮ್ ಎಂಬುದು.

ಹೀಗೆ ವಿಧಾನಸಭೆ ಚುನಾವಣೆಯ ಹೊತ್ತಿಗೆ ಮಹಿಳಾ ಮೀಸಲಾತಿ ಜಾರಿಗೊಂಡರೆ ಎಪ್ಪತ್ತಕ್ಕೂ ಹೆಚ್ಚು ಮಂದಿ ಮಹಿಳೆಯರಿಗೆ ಪಕ್ಷ ಟಿಕೆಟ್ ಕೊಡಬೇಕಾಗುತ್ತದೆ. ಅಂದ ಹಾಗೆ, ಹೀಗೆ ಮಹಿಳಾ ಮೀಸಲಾತಿ ಜಾರಿಗೊಂಡರೆ ಅವರಿಗೆ ಯಾವ್ಯಾವ ಕ್ಷೇತ್ರಗಳು ಫಿಕ್ಸ್ ಆಗುತ್ತವೋ ಗೊತ್ತಿಲ್ಲ. ಆದರೆ ಹಾಗೆ ಫಿಕ್ಸಾಗುವ ಕಾಲಕ್ಕೆ ಪಕ್ಷ ಮಹಿಳಾ ಅಭ್ಯರ್ಥಿಗಳನ್ನು ಗುರುತಿಸಿರಬೇಕು. ಇಲ್ಲವಾದರೆ ಕೊನೆಯ ಕ್ಷಣದಲ್ಲಿ ಪರದಾಡುವ ಸ್ಥಿತಿ ಸೃಷ್ಟಿಯಾಗಬಹುದು ಎಂಬುದು ಕುಮಾರಸ್ವಾಮಿ ಅವರ ಯೋಚನೆ. ಹೀಗಾಗಿ ಈಗಿನಿಂದಲೇ ಮಹಿಳಾ ಅಭ್ಯರ್ಥಿಗಳನ್ನು ಗುರುತಿಸುವ ಕೆಲಸ ಶುರುವಾಗಲಿ ಎಂಬುದು ಕುಮಾರಸ್ವಾಮಿ ಮಾತು.

ಅಂದ ಹಾಗೆ, ಹಾಲಿ ವಿಧಾನಸಭೆಯ ಬಲಾಬಲ 224. ಈ ಸಂಖ್ಯೆಗೆ ಅನುಗುಣವಾಗಿ ಮಹಿಳಾ ಮೀಸಲಾತಿ ಜಾರಿಗೆ ಬಂದರೆ ರಾಜಕೀಯ ಪಕ್ಷಗಳು ತಲಾ 73ರಷ್ಟು ಮಹಿಳೆಯರಿಗೆ ಸೀಟು ಕೊಡಬೇಕು. 2028ರಲ್ಲಿ ಚುನಾವಣೆ ನಡೆದರೆ ಅಷ್ಟೊತ್ತಿಗೆ ಕ್ಷೇತ್ರ ಪುನರ್ವಿಂಗಡಣೆಯೂ ಆಗಬಹುದು. ಹಾಗೇನಾದರೂ ಆದರೆ ವಿಧಾನಸಭೆ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಿ ಅವರಿಗೆ 80ರಷ್ಟು ಸೀಟು ಕೊಡುವ ಅನಿವಾರ್ಯತೆ ಬರುತ್ತದೆ. ಆದರೆ ಪುನರ್ವಿಂಗಡಣೆಗೂ ಮುನ್ನ ಕರ್ನಾಟಕದ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆದರೆ?ಎಂಬುದು ಕುಮಾರಸ್ವಾಮಿ ಯೋಚನೆ. ಹೀಗಾಗಿ ಆದಷ್ಟು ಬೇಗ ಮಹಿಳಾ ಅಭ್ಯರ್ಥಿಗಳ ಶೋಧಕಾರ್ಯ ಮುಗಿಯಬೇಕು ಎಂಬುದು ಕುಮಾರಸ್ವಾಮಿ ಲೆಕ್ಕಾಚಾರ. ಅದನ್ನೇ ಕಳೆದ ಶುಕ್ರವಾರ ನಡೆದ ಸಭೆಯಲ್ಲಿ ಸೂಚ್ಯವಾಗಿ ಹೇಳಿದ ಅವರು ಅರ್ಹ ಲೇಡೀಸ್ ಕ್ಯಾಂಡಿಡೇಟುಗಳನ್ನು ಶೋಧಿಸುವ ಕೆಲಸಕ್ಕೆ ಚಾಲನೆ ನೀಡಿದ್ದಾರೆ.

ಲಾಸ್ಟ್ ಸಿಪ್: ಕಳೆದ ವಾರ ಬೆಂಗಳೂರಿನಲ್ಲಿ ನಡೆದ ವಿವಾಹ ಸಮಾರಂಭವೊಂದಕ್ಕೆ ಮಹಿಳಾ ಇನ್‌ಸ್ಪೆಕ್ಟರ್ ಒಬ್ಬರು ಸಿವಿಲ್ ಡ್ರೆಸ್ಸಿನಲ್ಲಿ ಹೋಗಿದ್ದರಂತೆ. ಈ ಸಂದರ್ಭದಲ್ಲಿ ಅತಿಥಿಗಳನ್ನು ಸ್ವಾಗತಿಸಲು ಮಹಾದ್ವಾರದಲ್ಲಿ ನಿಂತಿದ್ದ ಶಾಸಕರೊಬ್ಬರು ಗೊತ್ತಿಲ್ಲದೆ ಅವರನ್ನು ತಡೆದಿದ್ದಾರೆ. ಆದರೆ ಆ ಮಹಿಳಾ ಇನ್ಸ್‌ಪೆಕ್ಟರ್, ''ನನಗಿಲ್ಲಿ ಕೆಲಸವಿದೆ. ನಾನು ಒಳಹೋಗಲೇಬೇಕು'' ಎಂದಿದ್ದಾರೆ. ಹೀಗೆ ಒಳಗೆ ಹೋಗಲೇಬೇಕು ಎಂದು ಅವರು ಪಟ್ಟು ಹಿಡಿದಿದ್ದರಿಂದ ಸಿಟ್ಟಿಗೆದ್ದ ಶಾಸಕರು ಒಂದೇಟು ಹಾಕಿಯೇ ಬಿಟ್ಟಿದ್ದಾರೆ. ಯಾವಾಗ ಸಿವಿಲ್ ಡ್ರೆಸ್ಸಿನಲ್ಲಿದ್ದ ಮಹಿಳಾ ಇನ್‌ಸ್ಪೆಕ್ಟರ್‌ಗೆ ಆ ಶಾಸಕರು ಹೊಡೆದರೋ, ಅದನ್ನು ನೋಡಿ ಸ್ಥಳದಲ್ಲೇ ಇದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಕೆಂಡಾಮಂಡಲಗೊಂಡು ಆ ಶಾಸಕರ ವಿರುದ್ಧ ಮುಗಿಬಿದ್ದಿದ್ದಾರೆ. ಅಷ್ಟೇ ಅಲ್ಲ, ಆ ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್ ಕಡೆ ತಿರುಗಿ, ''ಮೇಡಂ, ಹೋಗಿ ಇವರ ವಿರುದ್ಧ ಒಂದು ಕಂಪ್ಲೇಂಟ್ ಕೊಡಿ. ನೋಡಿಯೇ ಬಿಡೋಣ'' ಎಂದಿದ್ದಾರೆ.

ಈ ಹಂತದಲ್ಲಿ ಶುರುವಾದ ಗೊಂದಲವನ್ನು ನೋಡಿದ ಪ್ರಮುಖ ನಾಯಕರೊಬ್ಬರು ಮಧ್ಯೆ ಪ್ರವೇಶಿಸಿದ್ದಲ್ಲದೆ jaat ಚಿತ್ರದ ಹೀರೋ ಸನ್ನಿ ಡಿಯೋಲ್ ಥರ ನಿಂತು, say sorry ಅಂತ ಆ ಶಾಸಕರಿಗೆ ಸೂಚಿಸಿದ್ದಾರೆ. ಅವರ ಸೂಚನೆಯಂತೆ ಶಾಸಕರು ಸಾರಿ ಕೇಳಿದ ಮೇಲೆ ಪ್ರಕರಣ ಅಂತ್ಯ ಕಂಡಿದೆ.

ಎದೆಯ ಹಣತೆ ಮತ್ತು ಬುಕರ್ ಪ್ರಶಸ್ತಿಯ ಸುತ್ತಮುತ್ತ...

ಅವಲೋಕನ

ಜನಮೇಜಯ ಉಮರ್ಜಿ

vveditoped@gmail.com

ಪಾತ್ರೆಯಲ್ಲಿನ ಕೆಲವೇ ಅಗುಳನ್ನು ಒಮ್ಮೆ ಹಿಸುಕಿನೋಡಿ 'ಅನ್ನ ಆಗಿದೆ' ಎನ್ನುವುದು ಎಲ್ಲ ವಿಷಯಗಳಿಗೂ ಅನ್ವಯವಾಗುವುದಿಲ್ಲ. ಹಾಗೆಯೇ ಕೆಲವು ಚಿಂತನೆ ಮತ್ತು ವಿಚಾರಗಳಿಗೆ ವಿಸ್ತೃತವಾದ ಚರ್ಚೆ ಹಾಗೂ ಅಭಿವ್ಯಕ್ತಿಗಳು ತಲಸ್ಪರ್ಶಿಯಾಗಿ ಬೇಕೆನಿಸುತ್ತವೆ. ಇಂಥ ಪರಿಪಾಕಗಳು ಒಳಿತು ಕೆಡಕುಗಳಾಚೆಗಿನ ಮತ್ತೊಂದು ಪ್ರಜ್ಞಾವಲಯವನ್ನು ಎಚ್ಚರಿಸುತ್ತವೆ ಎಂಬ ಹಿನ್ನೆಲೆಯಲ್ಲಿ ಕೆಲವು ಚಿಂತನೆಗಳನ್ನು ಮಾಡಬೇಕಾಗುತ್ತದೆ.

ಸಾಹಿತ್ಯ ಲೋಕದಲ್ಲಿ ಈಗ ಒಂದೇ ಪ್ರಶ್ನೆ- ಬುಕರ್ ಪ್ರಶಸ್ತಿ ಬಂದಿದ್ದಕ್ಕೆ ಅಭಿನಂದಿಸಿದವರು ಯಾರು? ಸುಮ್ಮನೆ ಇರುವವರು ಯಾರು? ಇತ್ತೀಚೆಗೆ ಧಾರವಾಡದ ಪ್ರತಿಷ್ಠಿತ ವಿದ್ಯಾಸಂಸ್ಥೆಯೊಂದರ ಚುನಾವಣೆಯಲ್ಲಿಯೂ ಹೀಗೇ ಆಯಿತು- 'ವಚನ ದರ್ಶನ' ಒಪ್ಪದವರು ವರ್ಸಸ್ ಸುಮ್ಮನೆ ಇರುವವರು- ಅಂತ. ಮಂಡ್ಯದ ಸಾಹಿತ್ಯ ಸಮ್ಮೇಳನದ ವೇಳೆಯಲ್ಲಿ ಬಾಡೂಟವೇ ಬೇಕಾದವರು ವರ್ಸಸ್ ಸುಮ್ಮನೇ ಇರುವವರು ಅಂತ ಇದ್ದರು. ಕೆಲ ಸೋಗಲಾಡಿಗಳಿಗೆ ವಿಭಜನೆಯಲ್ಲೇ ಆನಂದ- ಯಾವುದನ್ನೂ ಯಥಾರ್ಥವಾಗಿ ತೆಗೆದುಕೊಳ್ಳದೇ ನೇರವಾಗಿ ಗೆರೆ ಎಳೆದುಬಿಡುವುದು. 'ದಾಸ್ ಕ್ಯಾಪಿಟಲ್' ಕೃತಿಯಲ್ಲಿನ ಉಳ್ಳವರು ವರ್ಸಸ್ ಇಲ್ಲದವರು ಇದ್ದಂತೆ, ನಿಜಾರ್ಥದಲ್ಲಿ ಇಲ್ಲದವರ ಹೆಸರು ಬಳಸಿಕೊಂಡು ಉಳ್ಳವರಾಗುವುದು.

ಎಲ್ಲರೂ ಎಲ್ಲದಕ್ಕೆ ಪ್ರತಿಕ್ರಿಯೆ ಕೊಡಬೇಕು ಅಂತೇನಿಲ್ಲ, ಅದು ವೈಯಕ್ತಿಕ. ಮೊನ್ನೆ ಭೇಟಿಯಾದ ಸಾಹಿತಿಯೊಬ್ಬರು ''ನೀವು 'ಹಾರ್ಟ್‌ಲ್ಯಾಂಪ್' ಓದಿದಿರಾ?'' ಎಂದು ಕೇಳಿದರು. ''ಇಲ್ಲ'' ಎಂದೆ. ''ಪ್ರಶಸ್ತಿ ಬಗ್ಗೆ ನಿಮ್ಮ ಅಭಿಪ್ರಾಯ?'' ಎಂದರು, ''ಒಳ್ಳೆಯದಾಯಿತು'' ಎಂದೆ. ''ಆದರೆ ನೀವು ಬುಕರ್ ಪ್ರಶಸ್ತಿಯ ಬಗ್ಗೆ ಒಂದು ಪೋಸ್ಟ್ ಕೂಡ ಹಾಕಿಲ್ಲ, ನೀವು ವಿರೋಧಿಸುತ್ತೀರಾ?'' ಎಂದರು. ''ಇಲ್ಲ'' ಎಂದೆ. ''ಇಲ್ಲ, ನೀವು ಒಂದು ಕಡೆ ನಿಲ್ಲಲೇಬೇಕು. ನೀವು ಬುಕರ್ ಬೆಂಬಲಿಸುವವರಾ ಅಥವಾ ವಿರೋಧಿಸುವವರಾ?'' ಎಂದು ಮತ್ತೆ ಕೇಳಿದರು. ಅದಕ್ಕೆ, ''ನಾನು ಎರಡೂ ಅಲ್ಲ'' ಅಂದೆ. ''ಹಾಗಾದ್ರೆ ನಿಮಗೆ ಅಸಮಾಧಾನ ಇದೆಯಾ?'' ಎಂದು ಕೇಳಿದರು. ''ಅಸಮಾಧಾನ ಇಲ್ಲ, ಹಲವು ವಿಚಾರಗಳಲ್ಲಿ, ನಿಲುವುಗಳಲ್ಲಿ ಸಹಮತವಿಲ್ಲ'' ಎಂದೆ. ಹಿಂದೆ ಸಾಹಿತಿಯೊಬ್ಬರಿಗೆ ಪ್ರಶಸ್ತಿ ಬಂದಾಗ, ವೃದ್ಧ ಸಾಕ್ಷಿಪ್ರಜ್ಞೆಯೊಬ್ಬರ ಅಭಿಪ್ರಾಯವನ್ನು ಪತ್ರಕರ್ತರು ಕೇಳಿದಾಗ, ''ಅವರು ಕೊಟ್ಟಿದ್ದಾರೆ, ಇವರು ತಗೊಂಡಿದ್ದಾರೆ'' ಎಂದರಂತೆ. ಇನ್ನೊಬ್ಬರು, ''ಅವರಿಗೆ ಬಂದರೆ ನನಗೇ ಬಂದಂತೆ ಅಲ್ಲವೇ?'' ಎಂದರಂತೆ. ಪ್ರತಿಕ್ರಿಯೆಗೂ ಹಲವು ಅರ್ಥಗಳಿರುತ್ತವೆ, ಗ್ರಹಿಕೆಯಲ್ಲಿಯೂ ಹಲವು ವ್ಯತ್ಯಾಸಗಳಿರಬಹುದು. ಆದರೆ ಇದು ಚರ್ಚೆಯ ವಸ್ತುವಲ್ಲ, ಒಂದರ ಪಕ್ಷ ತೆಗೆದುಕೊಳ್ಳುವುದೇ ಸಾಹಿತ್ಯದ ಕೆಲಸವಾ ಎಂಬುದೇ ತಕರಾರು.

ನಾಡಿನ ಬುದ್ಧಿಜೀವಿಗಳೆಂದು ಕರೆಸಿಕೊಳ್ಳುವ, ಎಲ್ಲದಕ್ಕೂ ಬಂದು ಪ್ರತಿಕ್ರಿಯೆ ಕೊಡುವ ಹಲವರು, 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಕುರಿತು ಒಂದೂ ಮಾತನ್ನಾಡಿಲ್ಲ. 'ಪಹಲ್ಗಾಮ್‌ನಲ್ಲಿ ಕೊಲುವವನಿಗೆ ಧರ್ಮವುಂಟೇ ಅಯ್ಯಾ?' ಎಂದು ಕೇಳಿದವರೂ ಇದ್ದಾರೆ, ಸೈನಿಕರನ್ನೇ ಸಂಶಯದಿಂದ ನೋಡಿದವರೂ ಇದ್ದಾರೆ. ಇವರನ್ನು ಏನೆನ್ನಬೇಕು? ಆರ್‌ಸಿಬಿ ಕಪ್ ಚುಕ್ಕೆ ಸರಕಾರದ ವೈಫಲ್ಯ ಎಂದು ಇವರ‍್ಯಾರಾದರೂ ಹೇಳಿದ್ದಾರಾ? ಹೇಳಿಲ್ಲ. ಹೀಗಾಗಿ ಪ್ರಸಾದಿಗಳು ವರ್ಸಸ್ ಪ್ರಾಮಾಣಿಕರು ಎನ್ನಬೇಕೇ? ಕಮಲ್ ಹಾಸನ್‌ರ ಉದ್ಧಟತನವನ್ನು ಖಂಡಿಸದೇ ಕೆಲ ಅರಿವು ಮರೆವುಗಳು ಕೇವಲ ಲಿಪಿಯ ಮೂಲಕ ಭಾಷಾ ಕುಟುಂಬವನ್ನು ಅದರ ಪ್ರಾಚೀನತೆಯನ್ನು ಅಳೆಯಲು ಹೋದರು, ಸಂಸ್ಕೃತ ದ್ವೇಷಕ್ಕೆ ತಿರುಗಿಸಿ ಪ್ರತಿಭಟನೆಯನ್ನು ಠುಸ್ ಮಾಡಿದರು. ಇವರಿಗೆ ಕನ್ನಡ ಕಲಿಗಳು ಎನ್ನಬೇಕೇ? ಎಲ್ಲವೂ ಸಾರ್ವಜನಿಕ ವಲಯದಲ್ಲಿದೆ, ಅದನ್ನು ಜನರಿಗೇ ಬಿಡುವುದು ಒಳಿತು.

ಸಾಹಿತ್ಯವೆಂದರೆ ಹಿತದಿಂದ ಕೂಡಿದ್ದು. ಸಾಹಿತ್ಯದ ಲಾಭವೇ ಆನಂದ. ಅದು ರಸಗ್ರಹಣದಿಂದ ಸಾಧ್ಯ. ಸಾಹಿತ್ಯವು ಬೆಳಕೇ ವಿನಾ, ಆಯುಧವಲ್ಲ. ಸಂಘರ್ಷವು ಸಾಹಿತ್ಯದ ಕೆಲಸವಲ್ಲ; ಪರಿವರ್ತನೆ, ಪ್ರೇರಣೆಗಳು ಅದರ ಉಪಲಾಭಗಳು ಎನ್ನಬಹುದೇನೋ. ಹಿಂದೆ ಶತಕೋಟಿ ರಾಜರುಗಳು ಆಳಿಹೋದರೂ ಅವರ ಹೆಸರು ಉಳಿದಿಲ್ಲ; ಯಾರದಾದರೂ ಹೆಸರು ಉಳಿದಿದ್ದರೆ ಅದು ಸಾಹಿತ್ಯದಿಂದ. ವ್ಯಾಸ-ವಾಲ್ಮೀಕಿಗಳ, ಕುವೆಂಪು-ಬೇಂದ್ರೆ-ಅಡಿಗ-ಗುಂಡಪ್ಪ-ಭೈರಪ್ಪ ಮುಂತಾದವರ ಕೃತಿಗಳು ಆನಂದದಾಯಕ, ಹೀಗಾಗಿ ಅಜರಾಮರ. ನಾವು ಪಶ್ಚಿಮಕ್ಕೆ ಹೊರಳಿದೆವು, ಪೂರ್ವವ ಮರೆತೆವು. ಹೀಗಾಗಿ ಉತ್ತರ ಕಾಣದ ಹಲವು ಪ್ರಶ್ನೆಗಳು ನಮ್ಮ ಮುಂದಿವೆ. ಕಾರಣ ಏನೆಂದು ಪ್ರದಕ್ಷಿಣೆ ಹಾಕಿ ಬಂದರೆ, ಸ್ವಂತಿಕೆ ಅಥವಾ ಸತ್ವದ ಮರೆವೇ ಅದರ ಮೂಲವೆಂಬುದು ಸ್ಪಷ್ಟ.

ಭಾರತದ ಸತ್ವ ಇರುವುದೇ ಇಲ್ಲಿನ ಸನಾತನವಾದ ಸಾಹಿತ್ಯದಲ್ಲಿ. ರಾಮಾಯಣ-ಮಹಾಭಾರತ ಎಂಬ ಎರಡು ಮಹಾಕಾವ್ಯಗಳು ಐತಿಹಾಸಿಕ. ಕನ್ನಡದಲ್ಲಿ ಮುನ್ನೂರು ರಾಮಾಯಣಗಳು ಬಂದಿವೆ, ಮಾನವೀಯ ಚಿಂತನೆಯ ಆಳವಾದ ಬೇರುಗಳು ಭಾರತೀಯ ಸಾಹಿತ್ಯದಲ್ಲಿ ಅಡಗಿವೆ. ಇಡೀ ಪ್ರಪಂಚಕ್ಕೆ ತಿಳಿದ ಸತ್ಯ ಇದು. ಇಲ್ಲಿ ಸಾಹಿತ್ಯವನ್ನು ಪೋಷಿಸಿಕೊಂಡು ಬಂದದ್ದು ದಾರ್ಶನಿಕ ಸಂಸ್ಕೃತಿ. 'ರವಿ ಕಾಣದ್ದನ್ನು ಕವಿ ಕಂಡ' ಅಂದದ್ದು ಅದಕ್ಕೇನೇ. ಆದರೆ ಇಂದು ತಥಾಕಥಿತ ಮುಖ್ಯವಾಹಿನಿಯ ಸಾಹಿತ್ಯವು, 'ನಾ ನಿನಗೆ ನೀ ನನಗೆ, ನಾನೂ ನೀನೂ ಲಾಬಿಗೆ, ಲೈಬ್ರರಿಗೆ, ಪ್ರಶಸ್ತಿಗೆ' ಎನ್ನುವಂತಾಗಿದೆ. 'ಇದು ನನ್ನದಲ್ಲ' ಎಂದು ತೀರ್ಮಾನಿಸಿ ಜನರು ಹತ್ತಿರ ಸುಳಿಯುತ್ತಿಲ್ಲ. ಜನರು ಕೊಂಡು ಓದುವ ಸಾಹಿತ್ಯವನ್ನು ಇವರು ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ಸಾಹಿತ್ಯದ 'ಸ್ವತ್ವ'ವು ಟೌನ್‌ಹಾಲ್ ಪ್ರತಿಭಟನೆಗಳಲ್ಲಿ ಇಲ್ಲ, ದತ್ತಪೀಠದ ವಿರುದ್ಧದ ಹೋರಾಟದಲ್ಲಿಯೂ ಇಲ್ಲ. ಕಳೆದ 50 ವರ್ಷಗಳಲ್ಲಿ 'ಸ್ವತ್ವ'ಯುತ ಸಾಹಿತ್ಯ ಎಷ್ಟು ಬಂದಿದೆ, ಅಕಡೆಮಿಕ್ ಮಾನದಂಡಗಳ ಮುಖ್ಯವಾಹಿನಿಯಲ್ಲಿ ಎಷ್ಟು ಉಳಿದಿದೆ? ಎಂದು ಪ್ರಶ್ನಿಸಿದರೆ ಉತ್ತರ ನಿರಾಶಾದಾಯಕವಾಗಿದೆ.

ಪಾಶ್ಚಾತ್ಯ ಹಿತಾಸಕ್ತಿಗೆ ಬರೆಯುವ ಜೀವಪರರು ಇಲ್ಲಿದ್ದಾರೆ. ಅಸಲಿಗೆ, ಪ್ರಶಸ್ತಿ ಗಳಿಸಿದ ಹಾದಿಯಲ್ಲಿರುವ ವ್ಯಕ್ತಿ, ವಸ್ತು, ವಿಷಯಗಳನ್ನು ನೋಡಿದಾಗ ಬಹುಪಾಲು ಅಂಶಗಳು ಇದೇ ರೀತಿಯವು- 'ಭಾರತದಲ್ಲಿ ಎಲ್ಲವೂ ಸರಿಯಿಲ್ಲ. ಹಿಂದೂ ಧರ್ಮ ಮಾತ್ರ ಜಾತಿಪೂರಿತವಾಗಿದೆ ಮತ್ತು ಶೋಷಣೆಯಿಂದ ಕೂಡಿದೆ. ರಾಷ್ಟ್ರೀಯತೆಯು ಅಪಾಯಕಾರಿ. ಆಧುನಿಕತೆಯೆಂದರೆ ಪಾಶ್ಚಾತ್ಯೀಕರಣ. ಭಾರತದ 'ಸ್ವತ್ವ' ಅಧ್ಯಾತ್ಮದಲ್ಲಿಲ್ಲ. ಆಧ್ಯಾತ್ಮಿಕ ಸಾಹಿತ್ಯ ಸಾಹಿತ್ಯವಲ್ಲ. ಲಿಂಗ, ವರ್ಗ, ಬಣ್ಣ ಭೇದಗಳು ಮಾತ್ರ ಸಾಹಿತ್ಯದ ವಸ್ತುಗಳು. ಪರಿಹಾರ ನೀಡುವ ಸಾಹಿತ್ಯಕ್ಕೆ ಪ್ರಶಸ್ತಿಯಿಲ್ಲ, ಸಮಸ್ಯೆಗಳನ್ನು ಜೀವಂತ ಇಡುವುದಕ್ಕೆ ಮಾತ್ರ ಪ್ರಶಸ್ತಿ'.

ಇಲ್ಲಿಯ ಯೋಗ, ಅಧ್ಯಾತ್ಮ, ವೈದ್ಯಶಾಸ್ತ್ರದಂಥ, ಪ್ರತಿಫಲಾಪೇಕ್ಷೆಯಿಲ್ಲದೆ ಪ್ರವರ್ತಿಸಿದ ಸಂತರ ಮತ್ತು ಋಷಿಗಳ ಕಥೆಗಳಿಗೆ, ಸಾವಿರ ವರ್ಷ ಸ್ವರಾಜ್ಯಕ್ಕಾಗಿ ಹೋರಾಡಿದ ವೀರಮಣಿಗಳ ಹಾಡುಗಳಿಗೆ, ಕಲಾವಿದರ, ಶಿಲ್ಪಿಗಳ, ದೇವಾಲಯ ಕಟ್ಟಿದ ಮಹನೀಯರ ಕಾದಂಬರಿಗಳಿಗೆ ಎಂದಾದರೂ ಇಂಥ ಪ್ರಶಸ್ತಿ ಬಂದದ್ದು ನೋಡಿದ್ದೇವೆಯೇ? ವಸಾಹತುಶಾಹಿ ದ್ವಾರಪಾಲಕರು ಇವುಗಳನ್ನು ಮೊದಲ ಬಾಗಿಲಿಗೇ ಹೋಗಲು ಬಿಡುವುದಿಲ್ಲ. 'ಸ್ವತ್ವ'ವೇ ಇಲ್ಲ, ಅದು ಜೋಡಿಸುವುದಿಲ್ಲ ಎಂದಾದ ಮೇಲೆ ಸಾಮಾನ್ಯ ಜನರು ಸಹ ಇವುಗಳಿಗೆ 'ಕ್ಯಾರೇ' ಎನ್ನುವುದಿಲ್ಲ.

ಭಾರತೀಯತೆಯನ್ನು ಗೌರವಿಸುವ ಜಾಗತಿಕ ಮಟ್ಟದ ಸಾಹಿತ್ಯ ಪ್ರಶಸ್ತಿಗಳನ್ನು ಭಾರತೀಯರೇ ಸ್ಥಾಪಿಸಬೇಕಾದ ಅಗತ್ಯವಿದೆ. ಭಾರತೀಯ ಧರ್ಮ, ಭಾರತೀಯತೆ ಮತ್ತು ಆಧ್ಯಾತ್ಮಿಕ ವಾಸ್ತವಿಕತೆಯನ್ನು ಹೇಳುವ ಉತ್ಕೃಷ್ಟ ಕಥನತಂತ್ರಗಳು ಬೇರೂರಿರುವ ಸಾಹಿತ್ಯವನ್ನು ಗೌರವಿಸುವ ಬಹುಮಾನಗಳು ಬೇಕಾಗಿವೆ. ವಚನಗಳು ಸೇರಿದಂತೆ ಇಲ್ಲಿನ ಅಪೂರ್ವ ಭಕ್ತಿ ಸಾಹಿತ್ಯವು ಜಾಗತಿಕವಾಗಿ ಅನುವಾದಗೊಂಡು ಪ್ರಸಾರವಾಗಿರುವ ಸಾಹಿತ್ಯಕ್ಕೆ ಪ್ರಶಸ್ತಿಗಳು ಬರಬೇಕು. ಇಂಗ್ಲಿಷ್ ಏಕಸ್ವಾಮ್ಯ ಮತ್ತು ವ್ಯಾಮೋಹ ಎರಡನ್ನೂ ಹೊಡೆದುಹಾಕಬೇಕಾಗಿದೆ.

ಭಾರತವು ಸಾವಿರ ವರ್ಷಗಳ ಗುಲಾಮಿತನದಿಂದ ಹೊರಬಂದಿದ್ದರೂ, ಸಾಹಿತ್ಯ ಕ್ಷೇತ್ರದಲ್ಲಿ ವಸಾಹತುಶಾಹಿ ಇನ್ನೂ ಉಳಿದಿದೆ. ಪ್ರಶಸ್ತಿಗಾಗಿನ ಬರಹ, ಸುಪಾರಿ ಬರಹ, ವ್ಯಾಪಾರಿ ಬರಹಗಳ ಭರಾಟೆಯಲ್ಲಿ ತನ್ನತನವೇ ಮಾಯವಾಗಿದೆ. ಟೀಕುಗಳಿಂದ ಉಳಿದುಬಂದ ಭಾರತದ ಸಾಹಿತ್ಯ 'ಸತ್ವ' ಮತ್ತು 'ಸ್ವತ್ವ', ಇಂದು 'ಇಸಂ'ಗಳು ಎಂಬ ಗೌಡಕಿಗೆ ನಲುಗಿವೆ. ಶ್ರೇಷ್ಠ ಸಾಹಿತ್ಯವೆಂದರೆ ಗಾಯಗಳನ್ನು ಕೆರೆದು ತೋರುವುದಲ್ಲ, ಕಾರಣಗಳನ್ನು ತಪ್ಪಾಗಿ ಅರ್ಥೈಸುವುದಲ್ಲ. ಸಾಹಿತ್ಯವೆಂದರೆ ಸಂತೋಷ ತರುವುದು, ಸಂತೋಷ ಹಂಚುವುದು. ಸಾಹಿತ್ಯವನ್ನು ದರ್ಶನವನ್ನಾಗಿಸುವ, ಕವಿಯನ್ನು ಋಷಿಯಾಗಿಸುವ, ಒಟ್ಟಿನಲ್ಲಿ ಋಷಿಯಾಗಿಡಬೇಕಾದ ಸಾಹಿತ್ಯವೆಂಬ ಮಾಧ್ಯಮ ಕವಲು ಕವಲಾಗಿದೆ. ಎದೆಯಲ್ಲಿ ಸಂಘರ್ಷದ ಉರಿಯ ಬದಲು ಸಾಮರಸ್ಯದ ಜ್ಯೋತಿ ಬೆಳಗುವ ಸಾಹಿತ್ಯಕ್ಕೆ ಜೈ ಎನ್ನಬೇಕಾಗಿದೆ.

(ಲೇಖಕರು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಗತ್ತು ವಿನಾಶದತ್ತ..?!

ಬೆಂಗಳೂರಿನಲ್ಲಿ ಕಾಲ್ತುಳಿತಕ್ಕೆ ಕಾರಣವಾಗುವಷ್ಟು ಭಾರಿ ಸಂಖ್ಯೆಯ ಜನರನ್ನು ಸೇರಿಸುವಲ್ಲಿ ಸಾಮಾಜಿಕ ಜಾಲತಾಣಗಳ ಪಾತ್ರವನ್ನೂ ಅಲ್ಲಗಳೆಯಲಾಗದು. ಅಹಮದಾಬಾದ್ ದುರಂತಕ್ಕೆ ವಿಮಾನದ ತಾಂತ್ರಿಕ ದೋಷ ಕಾರಣವಾಗಿರುವ ಸಾಧ್ಯತೆ ಇದೆ. ಇರಾನಿನ ಅಣು ಸೌಕರ್ಯಗಳನ್ನು ಗುರಿಯಾಗಿಟ್ಟುಕೊಂಡು ಇಸ್ರೇಲ್ ನಡೆಸಿರುವ ದಾಳಿಯು ಮೂರನೇ ಮಹಾಯುದ್ಧಕ್ಕೆ ಮುನ್ನುಡಿಯಾದೀತು.

ಇದನ್ನೆಲ್ಲ ಗಮನಿಸಿದರೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂದುವರಿಯುತ್ತ ಹೋದಂತೆ ಜಗತ್ತು ಇಷ್ಟಿಷ್ಟೇ ವಿನಾಶದೆಡೆಗೆ ಸಾಗುತ್ತಿದೆ ಎಂಬ ಆತಂಕ ಮೂಡುತ್ತದೆಯಲ್ಲವೇ? ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಭಾಯಿಸುವಲ್ಲಿ ಮತ್ತು ರೋಗ-ರುಜಿನಗಳನ್ನು ನಿವಾರಿಸುವಲ್ಲಿ ವಿಜ್ಞಾನ-ತಂತ್ರಜ್ಞಾನಗಳ ಕೊಡುಗೆ ಅಪಾರ ಎಂಬುದನ್ನು ಒಪ್ಪುತ್ತಲೇ, ಜನಸಂಖ್ಯೆಯ ಹೆಚ್ಚಳ ಸ್ವಯಂಕೃತ ಎಂಬ ಸತ್ಯವನ್ನೂ, ರೋಗ-ರುಜಿನಗಳ ಹೆಚ್ಚಳದಲ್ಲಿ ವಿಜ್ಞಾನದ ಕೊಡುಗೆಯೂ ಇದೆ ಎಂಬ ವಾಸ್ತವವನ್ನೂ, ಮಾತ್ರವಲ್ಲ, ವಿಜ್ಞಾನ-ತಂತ್ರಜ್ಞಾನಗಳು ಮಾನಸಿಕ ಕ್ಷೋಭೆ-ಅಸ್ವಾಸ್ಥ್ಯಗಳನ್ನು ಹೆಚ್ಚಿಸುತ್ತಿವೆ ಎಂಬ ತಥ್ಯವನ್ನೂ, ಯಾಂತ್ರಿಕ ಬುದ್ಧಿಮತ್ತೆಯು ಮನುಷ್ಯನನ್ನು ಮಾನಸಿಕವಾಗಿ ತನ್ನ ಗುಲಾಮನನ್ನಾಗಿ ಪರಿವರ್ತಿಸತೊಡಗಿದೆ ಎಂಬ ನಿಜಸಂಗತಿಯನ್ನೂ ನಾವು ಒಪ್ಪಿಕೊಳ್ಳಬೇಕು ತಾನೆ? ಈ ಎಲ್ಲ ವಿಷಮ ಸ್ಥಿತಿಗಳೂ ಹೀಗೇ ಉಲ್ಬಣಿಸುತ್ತ ಸಾಗಿದಾಗ ಕೊನೆಗೆ ನಿವ್ವಳವಾಗಿ ಜಗತ್ತಿಗೆ ಸುಖ, ಭದ್ರತೆಗಳ ಬದಲು ಆತಂಕ, ಅಭದ್ರತೆ, ವಿನಾಶ ಇವುಗಳೇ ಲಭ್ಯ!

ಜೀವನವಿಡೀ ಪರಿಸರದೊಡನೆ ಒಂದಾಗಿ ಹೊಂದಿಕೊಂಡು ಬಾಳುತ್ತಿದ್ದ ತಥಾಕಥಿತ ಹಿಂದುಳಿದ ಮಾನವನ ಜೀವನವೇ ನೆಮ್ಮದಿದಾಯಕವೂ ಸುಖಕರವೂ ಆಗಿತ್ತೆಂದು ಈಗ ನಮಗೆ ಅನಿಸುತ್ತಿದೆಯಲ್ಲವೇ? ಯಂತ್ರಗಳ ದಾಸ್ಯಕ್ಕೆ ಒಳಪಡದ, ಆಧುನಿಕತೆಯ ಅನಿಷ್ಟಗಳನ್ನು ಹೊಂದಿರದ ಆದರ್ಶ-ಸುಖೀ ಸಮಾಜವಾಗಿ ಗಾಂಧೀಜಿ ಬಣ್ಣಿಸಿ ಪ್ರತಿಪಾದಿಸಿದ 'ಹಿಂದ್ ಸ್ವರಾಜ್' ಇಂದಿಗೂ, ಮುಂದೂ ಪ್ರಸ್ತುತವೆನಿಸುತ್ತಿಲ್ಲವೇ?

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಲಾಭ ಜನರಿಗೆ ಸಿಗಲಿ

ಸೂರ್ಯಕಾಂತಿ, ಸೋಯಾಬೀನ್ ಮತ್ತು ತಾಳೆ ಎಣ್ಣೆಗಳಂಥ ಸಂಸ್ಕರಿಸಿದ ಖಾದ್ಯತೈಲಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಇತ್ತೀಚೆಗೆ ಕೇಂದ್ರ ಸರಕಾರವು ಶೇ.20ರಿಂದ ಶೇ.10ಕ್ಕೆ ಇಳಿಸಿದೆ. ಇದರ ಪರಿಣಾಮವಾಗಿ ಖಾದ್ಯತೈಲಗಳ ಮಾರಾಟದ ಬೆಲೆ ಕಡಿಮೆ ಆಗಲೇಬೇಕು. ಒಂದು ಅಂದಾಜಿನ ಪ್ರಕಾರ, ಸಂಸ್ಕರಿಸಿದ ತಾಳೆ ಎಣ್ಣೆಯ ಬೆಲೆ ಲೀಟರ್‌ಗೆ 8-9 ರುಪಾಯಿಯಷ್ಟು, ಸೂರ್ಯಕಾಂತಿ ಮತ್ತು ಸೋಯಾಬೀನ್ ಎಣ್ಣೆಗಳ ಬೆಲೆ ಲೀಟರ್‌ಗೆ 12-15 ರುಪಾಯಿಯಷ್ಟು ಕಡಿಮೆಯಾಗಬಹುದು.

ದೇಶೀಯ ಸಂಸ್ಕರಣಾ ಉದ್ಯಮವನ್ನು ಉತ್ತೇಜಿಸುವಲ್ಲಿ, ಸ್ಥಳೀಯ ವ್ಯವಹಾರಗಳನ್ನು ಬೆಂಬಲಿಸುವಲ್ಲಿ ಮತ್ತು ರೈತರಿಗೆ ನ್ಯಾಯಯುತ ಬೆಲೆಗಳನ್ನು ಖಚಿತಪಡಿಸುವಲ್ಲಿ ಈ ನೀತಿಯು ಪ್ರಯೋಜನಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ಆದಾಗ್ಯೂ, ಈ ನೀತಿಯ ಪ್ರಯೋಜನಗಳು ಸಾಮಾನ್ಯ ಜನರನ್ನು ತಲುಪಬೇಕಾದರೆ, ಅದರ ಮೇಲ್ವಿಚಾರಣೆ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಸರಕಾರವು ಖಾತ್ರಿಪಡಿಸಿಕೊಳ್ಳಬೇಕು. ಮಧ್ಯವರ್ತಿಗಳು ಅಥವಾ ಚಿಲ್ಲರೆ ವ್ಯಾಪಾರಿಗಳು ಇದರ ಪ್ರಯೋಜನಗಳನ್ನು ಬಳಸಿಕೊಳ್ಳದಂತೆ ತಡೆಯುವುದು ಬಹಳ ಮುಖ್ಯ. ಆದ್ದರಿಂದ, ಪಾರದರ್ಶಕ ಬೆಲೆ ನಿಗದಿ ಮತ್ತು ಕಟ್ಟುನಿಟ್ಟಾದ ಅನುಸರಣೆಯ ಮೇಲ್ವಿಚಾರಣೆ ಅತ್ಯಗತ್ಯ. ಖಾದ್ಯ ತೈಲಗಳ ಬೆಲೆ ಇಳಿಕೆಯ ಸಂಪೂರ್ಣ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸುವಂತೆ ಗ್ರಾಹಕ ವ್ಯವಹಾರಗಳ ಸಚಿವಾಲಯವು, ಖಾದ್ಯತೈಲ ಸಂಘಗಳು ಮತ್ತು ಉದ್ಯಮವನ್ನು ಆಗ್ರಹಿಸಿದರೆ ಒಳಿತು.

- ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಸಂಕ್ಷಿಪ್ತ ಚಿತ್ರಣ

ಶಿಶಿರಕಾಲ' ಅಂಕಣವು (ಜೂನ್ 13) ರಾಜಕಾರಣಿಗಳ ಹಗ್ಗಜಗ್ಗಾಟದ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೊಟ್ಟಂತಿದೆ. ಒಮ್ಮೆ ರಾಜಕೀಯವನ್ನು ಪ್ರವೇಶಿಸಿದವರು, ಏನೇ ಆದರೂ, ಎಂಥದೇ ಪರಿಸ್ಥಿತಿ ಬಂದರೂ, ಇನ್ನೇನು ಯಮಧರ್ಮರಾಯ ಹಗ್ಗ ಹಿಡಿದು ನಿಂತಿದ್ದಾನೆ ಎನ್ನುವಾಗಲೂ ರಾಜಕಾರಣವನ್ನು ಮಾತ್ರ ಬಿಡಲೊಲ್ಲರು ಎಂಬುದು ಸತ್ಯ.

ಇವರಿಗೆ ವಯಸ್ಸಿನ ಹಂಗೂ ಇರದು, ಯಾರು ಏನಂದುಕೊಂಡಾರು ಎಂಬ ಗೊಡವೆಯೂ ಇರದು. ರಾಜಕೀಯ/ಅಧಿಕಾರದ ಸುತ್ತ ಸದಾ ಗಿರಕಿ ಹೊಡೆಯುತ್ತಿ ರುವುದು ಇವರ ಜಾಯಮಾನ. ಒಮ್ಮೆ 'ರಾಜಕಾರಣಿ' ಎಂಬ ಹಣೆಪಟ್ಟಿ ಲಗತ್ತಿಸಿಕೊಂಡ ಮೇಲೆ ಅನುಯಾಯಿಗಳಿಗೇನೂ ಕೊರತೆಯಾಗದು, ಸದಾ ಜನಜಂಗುಳಿ. ಅವರು ಜೈಕಾರ ಕೂಗಿದ್ದು, ಇವರು ಹೇಳಿದ್ದು, ಮಾಡಿದ್ದು, ಮೂಸಿದ್ದು, ಉಂಡಿದ್ದು, ಬಿಟ್ಟಿದ್ದು ಎಲ್ಲವೂ ಸುದ್ದಿ! ಅಂಥವರ 'ರದ್ದಿ'ಯೂ ಸುದ್ದಿಯ ಸರಕೇ! ಇದು ವಿಶ್ವದೆಲ್ಲೆಡೆಯ ಚಿತ್ರಣವಾದರೂ ನಮ್ಮ ದೇಶದಲ್ಲಿ ತುಸು ಜಾಸ್ತಿ.

'ರಾಜಕಾರಣವೇ ಸರಿಯಿಲ್ಲ' ಎನ್ನುತ್ತ, ಹೋದಲ್ಲಿ-ಬಂದಲ್ಲಿ-ಕುಳಿತಲ್ಲಿ ಅಷ್ಟೇಕೆ ನಿದ್ರೆಯಲ್ಲೂ ರಾಜಕೀಯದ ಕನಸನ್ನೇ ಕಾಣುತ್ತಿರುವವರು ನಮ್ಮ ರಾಜಕಾರಣಿಗಳು. ಅಧಿಕಾರದಲ್ಲಿದ್ದಾಗ ಇವರಿಗೆ ಎಷ್ಟು ಮಾನ್ಯತೆ ಇರುತ್ತದೋ, ಅದು ಕೈಬಿಟ್ಟ ಮೇಲೂ 'ಮಾಜಿ' ಹೆಸರಿನಲ್ಲಿ ಬಹುತೇಕ ಸೌಲಭ್ಯಗಳನ್ನು ಅನುಭವಿಸುತ್ತಾರೆ. ಎಲ್ಲಾದರೂ ಒಂದು ಚೂರು ಕಡಿಮೆಯಾದರೂ ಬಹುದೊಡ್ಡ ರಾದ್ಧಾಂತ ಮಾಡುತ್ತಾರೆ. ತಮಗೆ ಗನ್‌ಮ್ಯಾನ್ ಕೊಟ್ಟಿಲ್ಲವೆಂದು ಮಾಜಿ ಶಾಸಕರೊಬ್ಬರು ದೂರು ಕಳಿಸಿದ್ದು ಇದಕ್ಕೆ ತಾಜಾ ಉದಾಹರಣೆ.

ಇಂಥ ಚಿತ್ರಣವನ್ನು ಕಂಡ ನಮ್ಮಂಥವರಿಗೆ 'ಶಿಶಿರಕಾಲ' ಅಂಕಣ ಬರಹವು ಕೊಂಚ ವಿಭಿನ್ನ ಅನುಭವವನ್ನು ನೀಡುತ್ತದೆ. ಕಾರಣ, ಅಂಕಣಕಾರ ಶಿಶಿರ್ ಹೆಗಡೆಯವರು ಅಮೆರಿಕದ ಮಾಜಿ ರಾಷ್ಟ್ರಪತಿಯವರ ಉದಾಹರಣೆಯನ್ನು ಕೊಟ್ಟು, ಅವರು ರಾಜಕೀಯದಿಂದ ನಿವೃತ್ತಿ ಹೊಂದಿ ತಮ್ಮ ಮೂಲನೆಲೆಗೆ ಹೋಗಿ ಸರಳ ಬದುಕು ಸಾಗಿಸಿದ ಪರಿಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಇದು ನಮ್ಮ ದೇಶದಲ್ಲಿ ಸಾಧ್ಯವೇ? ಅಧಿಕಾರಾವಧಿ ಮುಗಿದ ನಂತರವೂ ಸರಕಾರಿ ನಿವಾಸವನ್ನು ಖಾಲಿಮಾಡದೆ, ಹಲವು ಕಾರಣಗಳನ್ನು ನೀಡಿ ವರ್ಷಗಟ್ಟಲೆ ಅಲ್ಲೇ ಉಳಿದು, ನಂತರ ಒತ್ತಾಯಪೂರ್ವಕವಾಗಿ ಜಾಗವನ್ನು ಖಾಲಿಮಾಡಬೇಕಾಗಿ ಬಂದ ರಾಜಕಾರಣಿಗಳೂ ನಮ್ಮಲ್ಲಿದ್ದಾರೆ. ನಮ್ಮ 'ರಾಜಕಾರಣಿ' ಎಂದರೆ, ಅದೇನೋ ವಿಶಿಷ್ಟ ಸ್ಥಾನವನ್ನು ಅಲಂಕರಿಸುವ ಹಕ್ಕುಳ್ಳವರು ಎಂಬ ಭಾವನೆ ಲಾಗಾಯ್ತಿನಿಂದಲೂ ಇದೆ. ಹೀಗಾಗಿ, ಇಂದು ರಾಜಕಾರಣದ ಪ್ರವೇಶಕ್ಕೆ ಎಲ್ಲಿಲ್ಲದ ನೂಕುನುಗ್ಗಲು! ಹೇಗಾದರೂ ಮಾಡಿ, ಗ್ರಾಮ ಪಂಚಾಯತಿ ಚುನಾವಣೆಯಲ್ಲಾದರೂ ಸ್ಪರ್ಧಿಸಿ ಗೆದ್ದು, ಸಾಮಾನ್ಯ ಸದಸ್ಯ ಎನಿಸಿಕೊಂಡು, ಮುಂದೆ ಒಂದೊಂದೇ ಮೆಟ್ಟಿಲು ಏರುತ್ತಾ ಶಾಸಕ, ಸಂಸದ, ಸಚಿವ ಎನಿಸಿಕೊಂಡವರ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟು ಸಿಗುತ್ತವೆ.

ಹಾಗಂತ ಈ ಕ್ಷೇತ್ರಕ್ಕೆ ಬರಲು ನಿಗದಿತ ಶಿಕ್ಷಣ, ವಿಶೇಷ ಪದವಿ, ಪ್ರಮಾಣ ಪತ್ರ ಇವ್ಯಾವುದೂ ಬೇಕಾಗಿಯೇ ಇಲ್ಲ; 'ರಾಜಕೀಯ'ವನ್ನು ಮಾಡಲು ಬಂದರೆ ಸಾಕು. ಮುಂದಿನದೆಲ್ಲ ತನ್ನಿಂದ ತಾನೇ ಸಲೀಸಾಗಿ ನಡೆಯುತ್ತಿರುತ್ತದೆ!

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಜೀವನ ಶೆಟ್ಟಿ, ಕುಂದಾಪುರ**
  ಭಟ್ರೇ, ಬೆಳಗಾಗುತ್ತಲೇ 'ಪೂಜಿಸಲೆಂದೇ ಹೂವನು ತಂದೆ..' ಎಂದು ಹಾಡುತ್ತಾಳಲ್ಲ?
  – **ಅದಾದ ನಂತರ ಇಡೀ ದಿನ ಏನಾಯ್ತು ಅಂತ ಹೇಳಲು ಮರೆಯಬೇಡ!**

- **ಕಾರ್ತಿಕ, (ಇಮೇಲ್ ಮೂಲಕ)**
  ಭಟ್ರೇ, ಮೊನ್ನೆಯ ದುರಂತದ ಬಳಿಕ ವಿಮಾನ ಪ್ರಯಾಣ ಅಂದ್ರೆ ಭಯ ಆಗುತ್ತದಲ್ಲ?
  – **ಹೆರಿಗೆ ನಂತರ ಇನ್ನು ಬಸಿರಾಗಬಾರದು ಎಂದು ಅನಿಸಿದಂತೆ!**

- **ಸುವರ್ಣ ನಾಗರಾಜ, ರಾಜಾಜಿನಗರ**
  ಭಟ್ರೇ, ಕನ್ನಡ ಸಾಹಿತ್ಯ ಲೋಕ ಬರಡಾಗುತ್ತಿದೆಯಲ್ಲ?
  – **ಬರಡಲ್ಲ ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷರ ಬುರುಡೆಯಂತಾಗಿದೆ!**

- **ಕೃಷ್ಣ ಜಲನಾರು, (ಇಮೇಲ್ ಮೂಲಕ)**
  ಭಟ್ರೇ, ಪತ್ರ ಬರೆದು ಎರಡು ತಿಂಗಳುಗಳಾದವು, ಇನ್ನೂ ಆಕೆ ಉತ್ತರ ಬರೆದಿಲ್ಲವಲ್ಲ?
  – **ವಾಸಿ, ಸದ್ಯ ನಿನ್ನ ಹುಡುಕಿ ಬಡಿದಿಲ್ಲವಲ್ಲ?!**

- **ರಾಜೇಶ್ವರಿ ಕಲ್ಯಾಣ, ಬೆಂಗಳೂರು**
  ಭಟ್ರೇ, ಪ್ರೀತಿಯಲ್ಲಿ ಬರೀ ಬೇಸರವೇ ತುಂಬಿದೆಯಲ್ಲ?
  – **ರವಿಚಂದ್ರನ್ ಕೇಳಿದರೆ, 'ಪ್ರೀತಿಯಲ್ಲಿ ಇರೋ ಸುಖ ಗೊತ್ತೇ ಇರಲಿಲ್ಲ' ಎನ್ನಬಹುದು!**

- **ಪಾಲನೇತ್ರ, ಕಡೂರು**
  ಭಟ್ರೇ, ಹುಡುಗಿಯ ಕೋಪ ಎಷ್ಟು ಮೈಲು?
  – **ಮಾಲ್ ತನಕ ಅಷ್ಟೇ!**

- **ವಿ.ಗಿರಿಜಾಶಂಕರ ಮೂರ್ತಿ, ಹಿರಿಯೂರು**
  ಭಟ್ರೇ, ಕೆಲವರು ಅಧಿಕಾರ ಸಿಕ್ಕ ಬಳಿಕ ತಮ್ಮ ಸಿದ್ಧಾಂತ ಬದಲಿಸಿಕೊಳ್ತಾರಲ್ಲ?
  – **ಅವರು ಸಿದ್ಧಾಂತ ಅಂದ್ರೆ, ಕಾಚಾ ಎಂದು ಭಾವಿಸಿರುತ್ತಾರೆ!**

- **ವಿನಾಯಕ ಸಿ.ಜೋಶಿ, ಉಡುಪಿ**
  ಭಟ್ರೇ, ವಿದೇಶಗಳಲ್ಲಿ ನಮ್ಮ ವಾಸ್ತು ಅನ್ವಯ ಆಗುವುದಿಲ್ಲ ಅಂತಾರಲ್ಲ?
  – **ಸೋಮಯಾಜಿಗಳಂತೂ ಅನ್ವಯ ಆಗ್ತಾರೆ!**

- **ಸುರೇಂದ್ರ ಬಾನೂರು, ಚಿಕ್ಕಮಗಳೂರು**
  ಭಟ್ರೇ, ನಿದ್ದೆ ಬಂದವನಿಗೆ ತಲೆದಿಂಬು ಬೇಡವಂತೆ?
  – **ಅದರಲ್ಲೂ ಎಣ್ಣೆ ಹೊಡೆದವರಿಗೆ ಹಾಸಿಗೆಯೂ ಬೇಡ !**

- **ರತ್ನಾಕರ ಹಿಪ್ಪಿ, ಬೆಂಗಳೂರು**
  ಭಟ್ರೇ, ಊಟದ ಬದಲಿಗೆ ಏನು ಕೊಡಲಿ ಅಂತ ಕೇಳಿದರೆ ಏನು ಹೇಳಲಿ?
  – **ಪ್ರವಾಸಿ ಪ್ರಪಂಚ!!**

- **ರೋಹಿತ್ ಮಹಿಷಿ, ತಿಂಡ್ಲು**
  ಭಟ್ರೇ, ಅವಳನ್ನು ಕಂಡರೆ ಇಷ್ಟ ಇಲ್ಲ, ಆದರೆ ರಕ್ತಾಕ್ಷರಗಳಲ್ಲಿ ಪ್ರೇಮ ನಿವೇದನೆ ಮಾಡ್ತೀನಿ ಅಂತಾಳಲ್ಲ?
  – **ಒತ್ತಕ್ಷರ ಸರಿಯಿಲ್ಲ ಅಂತ ರಿಜೆಕ್ಟ್ ಮಾಡ್ತೀಯಾ ನೋಡು!**

ಏರ್ ಇಂಡಿಯಾ, ಫೇರ್ ಇಂಡಿಯಾ ಆಗುವುದು ಯಾವಾಗ?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ವಿಮಾನದ ಮುಂದೆ ಇರುವ ಫ್ಯಾನ್ ತಿರುಗುವಷ್ಟೂ ಹೊತ್ತು ಪೈಲಟ್ ತಣ್ಣಗಿರುತ್ತಾನೆ. ಒಮ್ಮೆ ಅದು ತಿರುಗುವುದು ನಿಂತರೆ ಆತ ಬೆವರುತ್ತಾನೆ' ಎನ್ನುವ ಮಾತಿದೆ. ಆದರೆ ಮೊನ್ನೆ ಅಹಮದಾಬಾದ್‌ನಿಂದ ಲಂಡನ್‌ಗೆ ಹೋಗಬೇಕಾಗಿದ್ದ ವಿಮಾನದ ಫ್ಯಾನ್ ತಿರುಗುತ್ತಿತ್ತೋ, ನಿಂತಿತ್ತೋ ಎಂಬುದು ಗೊತ್ತಾಗುವುದರ ಒಳಗೆ ಎಲ್ಲವೂ ಮುಗಿದುಹೋಗಿತ್ತು. ಭೂಮಿ ಬಿಟ್ಟು ಬಾನಿಗೆ ನೆಗೆದು ನಿಮಿಷವಾಗುವುದರ ಒಳಗೆ ವಿಮಾನ ಭಸ್ಮವಾಗಿತ್ತು. ಪೈಲಟ್ ಬೆವರುವುದಕ್ಕಿಂತ ಮೊದಲೇ ಪ್ರಯಾಣಿಕರೂ ಬೆಂಕಿಯಲ್ಲಿ ಬೆಂದುಹೋದರು. ನೀವು ಲಂಡನ್ನಿಗೇ ಹೊರಡಿ, ಆಕಾಶಕ್ಕೇ ಹಾರಿ, ಕಾಲ ಬಂದಾಗ ತಾನು ಮಾತ್ರ ಬೆನ್ನು ಬಿಡುವುದಿಲ್ಲ ಎಂದು ಕಾಲ ಮತ್ತೊಮ್ಮೆ ನೆನಪಿಸಿಕೊಟ್ಟಿದ್ದಾನೆ. ಸದ್ಯ ಯಮನ ವಿರುದ್ಧ ನಾವು ಮಾಡಲು ಸಾಧ್ಯವಾಗಬಹುದಾದದ್ದು ಎಂದರೆ, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಮಾತ್ರ.

ವಿಮಾನ ಅಪಘಾತಕ್ಕೆ ಪ್ರಮುಖವಾಗಿ ಮೂರು ಕಾರಣಗಳು. ಒಂದು ಮನುಷ್ಯ ಮಾಡುವ ತಪ್ಪಿನಿಂದ ನಡೆಯುವುದು, ಇನ್ನೊಂದು ತಂತ್ರಜ್ಞಾನದ ತೊಡಕಿನಿಂದ ಸಂಭವಿಸುವುದು, ಮತ್ತೊಂದು ಹವಾಮಾನದ ವೈಪರೀತ್ಯದಿಂದ ಆಗುವುದು. ಪೈಲಟ್‌ಗಳ ತಪ್ಪಿನಿಂದ ಶೇ.50ಕ್ಕೂ ಹೆಚ್ಚು ವಿಮಾನ ಅಪಘಾತಗಳು ಸಂಭವಿಸಿದರೆ, ಶೇ.25ರಷ್ಟು ತಂತ್ರಜ್ಞಾನ, ಶೇ.12ರಷ್ಟು ಹವಾಮಾನದಿಂದಾಗಿ ಅಪಘಾತ ಸಂಭವಿಸುತ್ತದೆ ಎಂದು ವರದಿ ಹೇಳುತ್ತದೆ. ಮೊನ್ನೆಯ ಅಪಘಾತ ಪೈಲಟ್‌ಗಳ ತಪ್ಪಿನಿಂದ ಆದದ್ದೇ? ತಂತ್ರಜ್ಞಾನದ ವಿಫಲತೆಯಿಂದ ಆದದ್ದೇ? ಇನ್ನೂ ತಿಳಿಯಬೇಕಾಗಿದೆ. ಮೊನ್ನೆಯ ಘಟನೆಗೆ ಹವಾಮಾನ ಕಾರಣವಲ್ಲ ಎನ್ನುವುದು ಯಾರ ಕಣ್ಣಿಗಾದರೂ ಕಾಣುವಷ್ಟು ಸ್ಪಷ್ಟವಾಗಿದೆ. ಇನ್ನು ಪೈಲಟ್‌ಗಳ ತಪ್ಪಿನಿಂದ ಆಗಿದೆಯೇ ಎಂದರೆ, ಆ ವಿಮಾನದಲ್ಲಿದ್ದ ಇಬ್ಬರ ಪೈಕಿ, ಒಬ್ಬ ಪೈಲಟ್‌ಗೆ ಎಂಟು ಸಾವಿರಕ್ಕೂ ಹೆಚ್ಚು ತಾಸು ವಿಮಾನ ಹಾರಿಸಿದ ಅನುಭವವಿದ್ದರೆ, ಜತೆಯಲ್ಲಿದ್ದ ಪೈಲಟ್‌ಗೆ ಒಂದು ಸಾವಿರಕ್ಕೂ ಹೆಚ್ಚು ಗಂಟೆ ವಿಮಾನ ಹಾರಿಸಿದ ಅನುಭವವಿತ್ತು. ಆದ್ದರಿಂದ, ಆ ಕಾರಣವೂ ಇರಲಿಕ್ಕಿಲ್ಲ ಎಂದೇ ಅನಿಸುತ್ತದೆ. ಇನ್ನು ಉಳಿದಿರುವುದು ತಂತ್ರಜ್ಞಾನ ಮಾತ್ರ. ವಿಮಾನ 16 ಗಂಟೆಗಳಿಗಿಂತಲೂ ಹೆಚ್ಚು ಹಾರಾಡಿ ಬಂದಿತ್ತು, ಪುನಃ ಅದನ್ನು ಹಾರಾಟಕ್ಕೆ ಅಣಿಗೊಳಿಸಲಾಯಿತು, ವಿಮಾನದ ಎಂಜಿನ್ ನಿಂತುಹೋಯಿತು, ವಿಮಾನದ ಪೆಟ್ರೋಲ್ ಟ್ಯಾಂಕಿನಲ್ಲಿ ಒಂದೂವರೆ ಲಕ್ಷ ಲೀಟರ್‌ಗಿಂತಲೂ ಹೆಚ್ಚು ಪೆಟ್ರೋಲ್ ಇತ್ತು ಇತ್ಯಾದಿ ವರದಿಗಳು ಬರುತ್ತಿದ್ದರೂ ನಿಜವಾದ ಕಾರಣ ಇನ್ನು ಮುಂದೆ ತಿಳಿಯಬೇಕು. ಒಂದು ವಿಮಾನದಲ್ಲಿ ಎರಡು ಎಂಜಿನ್ ಇರುತ್ತವೆ, ಇತ್ತೀಚೆಗೆ ಏರ್‌ಬಸ್ ತಯಾರಿಸುತ್ತಿರುವ ವಿಮಾನದಲ್ಲಿ ನಾಲ್ಕು ಎಂಜಿನ್ ಅಳವಡಿಸಲಾಗುತ್ತಿದೆ. ಅಂಥದ್ದರಲ್ಲಿ ಎರಡೂ ಎಂಜಿನ್ ಒಟ್ಟಿಗೇ ನಿಂತುಹೋದವೇ? ಅದೂ ಟೇಕ್ ಆಫ್ ಆದ ನಿಮಿಷದ ಒಳಗೆ? ಈ ನಡುವೆ 'ವಿಮಾನದಲ್ಲಿ ವಿದ್ಯುತ್ ಸಂಪರ್ಕ ನಿಂತುಹೋಗಿದೆ, ಮೇಲೆ ಏರಲು ಆಗುತ್ತಿಲ್ಲ' ಎಂದು ಪೈಲಟ್ ಸಂದೇಶ ಕಳಿಸಿದ್ದ ಎಂದೂ ಕೇಳಿಬರುತ್ತಿದೆ. ಏನೇ ಆದರೂ ಅಪಘಾತವಂತೂ ಆಗಿದೆ. ಅದೂ ಏರ್ ಇಂಡಿಯಾ ಸಂಸ್ಥೆಯ ವಿಮಾನದ್ದೇ ಆಗಿದೆ. ಯಾಕೋ ಏನೋ ಬಹಳ ವರ್ಷಗಳಿಂದ ಏರ್ ಇಂಡಿಯಾ ಸಂಸ್ಥೆಗೂ ಒಳ್ಳೆಯ ಹೆಸರಿಗೂ ಒಂದಕ್ಕೊಂದು ಆಗಿಬರುತ್ತಿಲ್ಲ ಎನ್ನುವುದಂತೂ ಸತ್ಯ.

2014ರಲ್ಲಿ ಮಲೇಷಿಯನ್ ಏರ್‌ಲೈನ್ಸ್ ಕಾಣೆಯಾದ ವಿಷಯ ನಿಮಗೆ ತಿಳಿದಿರಬಹುದು. ಅದೇ ಏರ್‌ಲೈನ್ಸ್‌ನ ವಿಮಾನ ರಷ್ಯಾದ ಮಿಸೈಲ್‌ಗೆ ಬಲಿಯಾಗಿ ಸುಮಾರು ಮುನ್ನೂರು ಜನ ಪ್ರಾಣ ಕಳೆದುಕೊಂಡದ್ದು ನಿಮಗೆ ಗೊತ್ತಿರಬಹುದು. ಐದು ವರ್ಷದ ಹಿಂದೆ, ಏರ್ ಜಮೈಕ ವಿಮಾನವೊಂದು ಅಪಘಾತಕ್ಕೆ ಒಳಗಾದ ಕಾರಣ ಇಡೀ ಸಂಸ್ಥೆಯೇ ಮುಚ್ಚಿಹೋದ ವಿಷಯವನ್ನೂ ನೀವು ಕೇಳಿರಬಹುದು. ಇದನ್ನೆಲ್ಲ ನೋಡಿದಾಗ ಏರ್ ಇಂಡಿಯಾ ಸಂಸ್ಥೆಯ ಭವಿಷ್ಯ ಏನು ಎಂಬುದು ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗುತ್ತದೆ. ಹಾಗಾದರೆ ಈ ಮೊದಲು ವಿಮಾನ ಅಪಘಾತಗಳು ನಡೆದೇ ಇಲ್ಲವೇ? ಕಳೆದ 50 ವರ್ಷದಲ್ಲಿ 50,000ಕ್ಕೂ ಹೆಚ್ಚು ಜನ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ. 40,000ಕ್ಕೂ ಹೆಚ್ಚು ಜನ ಗಾಯಾಳುಗಳಾಗಿದ್ದಾರೆ. ಒಂದು ವಿಮಾನದ ಆಯುಷ್ಯ 30 ವರ್ಷಗಳು ಎಂದು ಹೇಳುತ್ತಾರೆ. ಅದೇ ಹೌದಾದರೆ, ಮೊನ್ನೆ ಅಪಘಾತಕ್ಕೆ ಒಳಗಾದ ವಿಮಾನ ಇನ್ನೂ ಅರ್ಧ ಆಯುಷ್ಯವನ್ನೂ ಮುಗಿಸಿರಲಿಲ್ಲ. ಆದರೆ, ಏರ್ ಇಂಡಿಯಾದ ವಿಮಾನ ಅಪಘಾತಕ್ಕೊಳಗಾದಷ್ಟು, ತಾಂತ್ರಿಕ ದೋಷಕ್ಕೆ ಒಳಪಟ್ಟಷ್ಟು ಬೇರೆ ಯಾವುದೇ ಸಂಸ್ಥೆಯ ವಿಮಾನವೂ ಇರಲಿಕ್ಕಿಲ್ಲ. ಇದು ನಿಜವಾಗಿಯೂ ಚಿಂತೆಯ ವಿಚಾರ. ಇದಕ್ಕೆ ಕಾರಣ ಮತ್ತು ಪರಿಹಾರ ಕಂಡುಕೊಳ್ಳುವುದು ಅನಿವಾರ್ಯವೂ ಹೌದು, ಸದ್ಯಕ್ಕೆ ಅವಶ್ಯಕವೂ ಹೌದು. ಏಕೆಂದರೆ ಏರ್ ಇಂಡಿಯಾ ಕೇವಲ ಒಂದು ಸಂಸ್ಥೆಯ ವಿಮಾನವಲ್ಲ, ಭಾರತದ 'ನ್ಯಾಷನಲ್ ಕ್ಯಾರಿಯರ್'! ಏರ್ ಇಂಡಿಯಾ 'ಫೇರ್ ಇಂಡಿಯಾ' ಆಗುವುದು ಯಾವಾಗ? ನಾನು fare (ದರ) ಬಗ್ಗೆ ಹೇಳುತ್ತಿಲ್ಲ, fair (ಒಳಿತು) ಬಗ್ಗೆ ಹೇಳುತ್ತಿದ್ದೇನೆ.

ಕಾಲ್ತುಳಿತದಲ್ಲಿ ಮೃತಪಟ್ಟರೆ ಹತ್ತು ಲಕ್ಷ, ಬಸ್ ಅಪಘಾತದಲ್ಲಿ ಮೃತಪಟ್ಟರೆ ಐದು ಲಕ್ಷ, ರೇಲ್ವೆ ಅವಘಡದಲ್ಲಾದರೆ ಇಪ್ಪತ್ತು ಲಕ್ಷ, ಯಾವುದೋ ಸೇತುವೆ ಬಿದ್ದುಹೋದರೆ, ಅಗ್ನಿ ಅವಘಡಕ್ಕೆ ಸಿಕ್ಕಿ ಸತ್ತರೆ, ಮಳೆ, ಗಾಳಿ ಇತ್ಯಾದಿ ನೈಸರ್ಗಿಕ ವಿಕೋಪಕ್ಕೆ ಬಲಿಯಾದರೆ ಇಂತಿಷ್ಟು ಲಕ್ಷ, ಆದರೆ ವಿಮಾನ ಅಪಘಾತದಲ್ಲಿ ಸತ್ತವರ ಮನೆಯವರಿಗೆ ಕೋಟಿ ಲೆಕ್ಕದಲ್ಲಿ ಪರಿಹಾರ ಯಾಕೆ? ಎಂಬ ಪ್ರಶ್ನೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ''ಉಳಿದವರ ಜೀವಕ್ಕಿಂತ ವಿಮಾನದಲ್ಲಿ ಕುಳಿತವರ ಅಥವಾ ಹಾರಾಡುವವರ ಜೀವದ ಬೆಲೆ ಹೆಚ್ಚೇ?'' ಎಂಬ ಪ್ರಶ್ನೆಗಳೂ ಕೇಳಿಬರುತ್ತಿವೆ. ಅದು ಸಹಜವೇ ಬಿಡಿ. ಯಾವುದೇ ಜೀವಕ್ಕಾದರೂ ಬೆಲೆ ಕಟ್ಟಲು ಸಾಧ್ಯವಿಲ್ಲ. ಅದರಲ್ಲಿ ತೊಂಬತ್ತು ವರ್ಷದ, ಇಂದೋ ನಾಳೆಯೋ ಲೋಕ ತ್ಯಜಿಸಬಹುದಾದ ವೃದ್ಧರೇ ಇರಬಹುದು ಅಥವಾ ಮೂರು ತಿಂಗಳಿನ, ಇನ್ನೂ ಜಗತ್ತನ್ನು ಕಾಣಬೇಕಾದ ಶಿಶುವೇ ಇರಬಹುದು. ಇಂತಿಷ್ಟು ವಯಸ್ಸಿನ ಜೀವಕ್ಕೆ ಅಥವಾ ಇಂಥಲ್ಲಿ ಬದುಕುವ ಜೀವಕ್ಕೆ ಇಂತಿಷ್ಟೇ ಬೆಲೆ ಎಂದು ಹೇಳುವ ಯಾವುದೇ ಮಾಪನ ಇದುವರೆಗೆ ಭೂಮಿಯ ಯಾವ ಭಾಗದಲ್ಲೂ ಇಲ್ಲ. ಆದರೆ ವಿಮಾನ ಅಪಘಾತದಲ್ಲಿ ಸತ್ತರೆ ಲೆಕ್ಕಾಚಾರ ಬೇರೆ. ಸತ್ತವರ ಸಂಬಂಧಿಗಳಿಗೆ ಸುಮಾರು ಒಂದೂವರೆ ಕೋಟಿ ರುಪಾಯಿಗಳ ಪರಿಹಾರವನ್ನು ಪಾವತಿಸಲೇ ಬೇಕಾಗುತ್ತದೆ. ಇದಕ್ಕೆ ಕಾರಣ, 1999ರ 'ಮಾನ್ಟ್ರಿಯಲ್ ಕನ್ವೆನ್ಷನ್'. ICAO (ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ) ಒಪ್ಪಂದದ ಪ್ರಕಾರ, ವಿಮಾನ ಅಪಘಾತದಲ್ಲಿ ಬಲಿಯಾದವರ ಕುಟುಂಬಕ್ಕೆ ಒಂದೂವರೆ ಕೋಟಿ ರುಪಾಯಿಗಳ ಪರಿಹಾರವನ್ನು ಪಾವತಿಸಬೇಕಾಗುತ್ತದೆ. ವಿಮಾನದ ನಷ್ಟಕ್ಕೆ ವಿಮಾ ಕಂಪನಿಗಳಿಂದ ಸಾಕಷ್ಟು ಪರಿಹಾರವನ್ನು ಕಂಪನಿಗಳು ಪಡೆಯುತ್ತವೆ. ವಿಮಾನಯಾನ ಸಂಸ್ಥೆಯು ಪ್ರಯಾಣಿಕರಿಗೆ ಆರಂಭಿಕವಾಗಿ ಅಥವಾ ಮಧ್ಯಂತರವಾಗಿ ಒಂದಷ್ಟು ಪರಿಹಾರವನ್ನು ಘೋಷಿಸಿದರೂ, ಅಂತಿಮ ಪರಿಹಾರದ ಮೊತ್ತವಾಗಿ ಒಂದೂವರೆ ಕೋಟಿ ರುಪಾಯಿ ಕೊಡಲೇಬೇಕಾಗುತ್ತದೆ. ಇಂಥ ಒಂದು ಒಪ್ಪಂದಕ್ಕೆ ಭಾರತ 2009ರಲ್ಲಿ ಸಹಿ ಹಾಕಿತ್ತು. ಇದು ಕೂಡ ಸುಮ್ಮನೆ ಬಾಯಿಗೆ ಬಂದಂತೆ ಹೇಳುವ ಲೆಕ್ಕವಲ್ಲ, ಇದಕ್ಕೆ SDR (ಸ್ಪೆಷಲ್ ಡ್ರಾಯಿಂಗ್ ರೈಟ್) ಗಳನ್ನು ಬಳಸಿಕೊಂಡು ಪರಿಹಾರದ ಮೊತ್ತವನ್ನು ಲೆಕ್ಕ ಹಾಕಲಾಗುತ್ತದೆ. ಇದರ ಪ್ರಕಾರ, ಒಂದು SDRಗೆ 1.33 ಅಮೆರಿಕನ್ ಡಾಲರ್‌ಗಳನ್ನು ಪರಿಹಾರವಾಗಿ ಕೊಡಬೇಕಾಗುತ್ತದೆ. 2024 ರ ಅಂತ್ಯದ ವೇಳೆಗೆ SDR ಸುಮಾರು ಒಂದು ಲಕ್ಷದ ಮೂವತ್ತು ಸಾವಿರ ದಷ್ಟಿತ್ತು. ಇದೇ ಲೆಕ್ಕವನ್ನು ಹಿಡಿದು ಹೊರಟರೆ, ಮೊನ್ನೆ ನಡೆದ ವಿಮಾನ ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಮನೆಯವರಿಗೆ ಅಥವಾ ಸಂಬಂಧಿಕರಿಗೆ ಸುಮಾರು ಮುನ್ನೂರ ಅರವತ್ತು ಕೋಟಿ ರುಪಾಯಿಗಳನ್ನು ನೀಡಬೇಕಾಗುತ್ತದೆ.

ಆದರೆ ಇದು ಅಷ್ಟಕ್ಕೇ ನಿಲ್ಲುವುದಿಲ್ಲ, ಏಕೆಂದರೆ ಮೊನ್ನೆ ವಿಮಾನ ಅಪಘಾತವಾದಾಗ ಕಟ್ಟಡಗಳು, ಇನ್ನೂ ಕೆಲವು ಪ್ರಾಣಹಾನಿಯೂ ಆಗಿದೆ. ಅಂತೆಯೇ ಕೆಲವು ಗಾಯಾಳುಗಳು ಆಸ್ಪತ್ರೆಯಲ್ಲಿದ್ದಾರೆ. ಇಲ್ಲಿ ಮೂರನೇ ವ್ಯಕ್ತಿಯ, ಆಸ್ತಿ ಹಾನಿಯ ಹೊಣೆಗಾರಿಕೆಯೂ ವಿಮಾನ ಸಂಸ್ಥೆಯ ಜವಾಬ್ದಾರಿಯಾಗುತ್ತದೆ. ಅದು ಎಷ್ಟು, ಏನು ಎಂಬುದು ಇನ್ನೂ ನಿರ್ಧಾರವಾಗಬೇಕು. ಏರ್ ಇಂಡಿಯಾ ಸಂಸ್ಥೆ ಇದೇ ಏಪ್ರಿಲ್ ಒಂದನೇ ತಾರೀಖಿನಂದು ಬಹುರಾಷ್ಟ್ರೀಯ AIG ಸಂಸ್ಥೆಯೊಂದಿಗೆ ಇಪ್ಪತ್ತು ಬಿಲಿಯನ್ ಡಾಲರ್ (ಸುಮಾರು ಒಂದು ಲಕ್ಷದ ಎಪ್ಪತ್ತು ಸಾವಿರ ಕೋಟಿ ರೂಪಾಯಿ) ವಿಮೆಯ ಪಾಲಿಸಿಯನ್ನು ನವೀಕರಿಸಿತ್ತು. ಆದ್ದರಿಂದ ಇಲ್ಲಿ ಏರ್ ಇಂಡಿಯಾಕ್ಕೆ ಹಣದ ಪೆಟ್ಟು ಬೀಳುವುದಿಲ್ಲ, ಆದರೆ ಹೆಸರಿಗೆ ಅಂಟುವ ಕಳಂಕ ತೊಳೆದುಕೊಳ್ಳುವುದು ಹೇಗೆ? ಈ ಗ' ಲ ೂ ಹೇಳುತ್ತೇನೆ, ರಸ್ತೆ, ರೈಲು, ಜಲ ಈ ಎಲ್ಲಾ ಸಾರಿಗೆ ಸಂಪರ್ಕಗಳಿಗಿಂತಲೂ ವಿಮಾನ ಹೆಚ್ಚು ಸುರಕ್ಷಿತ. ಅಷ್ಟೇ ಅಲ್ಲ, ನನಗಂತೂ ವಿಮಾನ ಮನುಷ್ಯನ ಬದುಕಿಗೆ ಸ್ಫೂರ್ತಿಯಾಗಿಯೇ ಕಾಣುತ್ತದೆ. 'ನಾವು ಎಣಿಸಿದಂತೆ ಏನೂ ಆಗುತ್ತಿಲ್ಲ, ಇಲ್ಲಿ ಪ್ರತಿಯೊಂದು ಹೆಜ್ಜೆಗೂ ಅಡೆತಡೆಗಳಿವೆ, ನಾವು ಮಾಡುವ ಕಾರ್ಯದಲ್ಲಿ ಸಾಕಷ್ಟು ಕಂಟಕಗಳು ಎದುರಾಗುತ್ತವೆ' ಎಂದು ಅನಿಸಿದರೆ, ಒಮ್ಮೆ ವಿಮಾನವನ್ನು ನೆನಪಿಸಿಕೊಂಡರೆ ಸಾಕು. ನೋಡಿ, ಒಂದು ವಿಮಾನ ತಯಾರಿಸಲು ಒಂದು ಸಾವಿರಕ್ಕೂ ಹೆಚ್ಚು ಎಂಜಿನಿಯರ್‌ಗಳು ಕೆಲಸ ಮಾಡುತ್ತಾರೆ. ಎರಡು ಸಾವಿರಕ್ಕೂ ಹೆಚ್ಚು ಉಳಿದ ತಾಂತ್ರಿಕ ಸಿಬ್ಬಂದಿ ವರ್ಗ ಕೆಲಸ ಮಾಡುತ್ತದೆ. ವಿಮಾನದ ಒಂದೊಂದು ಭಾಗ ಒಂದೊಂದು ಕಡೆ ತಯಾರಾಗುತ್ತದೆ, ಇವನ್ನೆಲ್ಲ ಜೋಡಿಸಲು ಲಕ್ಷಗಟ್ಟಲೆ ರಿವೆಟ್ ಬಳಸಲಾಗುತ್ತದೆ. 'ಎ-350' ಮಾದರಿಯ ಒಂದು ವಿಮಾನದಲ್ಲಿ ಸುಮಾರು 25 ಲಕ್ಷ ರಿವೆಟ್ ಮತ್ತು ಸ್ಕ್ರೂ ಬಳಸುತ್ತಾರೆ. ಎಂಜಿನ್ ತಯಾರಿಸುವುದರಿಂದ ಹಿಡಿದು, ಗಾಜು ತಯಾರಿಸುವುದು, ಕ್ಯಾಬಿನೆಟ್ ತಯಾರಿಸುವುದು, ಹೀಗೆ ಒಟ್ಟೂ ಒಂಬತ್ತು ವಿಭಾಗದ ಜನರು ಒಟ್ಟಿಗೇ ಒಂದು ವಿಮಾನ ಕಟ್ಟುವ ಕೆಲಸದಲ್ಲಿ ತೊಡಗುತ್ತಾರೆ. ಒಂದು ವಿಮಾನ ತಯಾರಿಸಲು ಸುಮಾರು ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಪೂರೈಕೆದಾರರು ಸರಕು ತಯಾರಿಸಿ ಕಳುಹಿಸುತ್ತಾರೆ. ನೂರರಿಂದ ನೂರೈವತ್ತು ಅಡಿ ಉದ್ದವಿರುವ ಒಂದು ವಿಮಾನದಲ್ಲಿ ಹೆಚ್ಚು ಕಮ್ಮಿ ಹನ್ನೆರಡು ಕಿಲೋಮೀಟರ್‌ನಷ್ಟು ಇಲೆಕ್ಟ್ರಿಕಲ್ ವೈರಿಂಗ್ ಇರುತ್ತದೆ. ಒಂದು ವಿಮಾನಕ್ಕೆ ಬಣ್ಣ ಬಳಿಯಬೇಕು ಎಂದರೆ ಒಂದು ಟನ್ ಪೇಂಟ್ ಬೇಕಾಗುತ್ತದೆ. ಬಣ್ಣ ಬಡಿಯಲು ಸುಮಾರು ಹದಿನೈದು ದಿನ ಬೇಕಾಗುತ್ತದೆ. ಅಂದರೆ ಸುಮಾರು ಹನ್ನೆರಡರಿಂದ ಹದಿನೈದು ಜನರ ತೂಕದಷ್ಟು ಬಣ್ಣವೇ ಬೇಕು!

ಒಂದು ವಿಮಾನ ತಯಾರಿಸಲು ಎಂಟರಿಂದ ಒಂಬತ್ತು ತಿಂಗಳು ಸಮಯ ಬೇಕಾಗುತ್ತದೆ. ಸುಮಾರು ಒಂಬತ್ತು ತಿಂಗಳ ನಂತರ ಒಂದು ವಿಮಾನದ ಹೆರಿಗೆ ಆಗುತ್ತದೆ. ಹುಟ್ಟಿದ ಮಗು ಒಮ್ಮೆಲೆ ನಡೆಯುವುದಿಲ್ಲ, ಓಡುವುದಿಲ್ಲ. ಮೊದಲು ಬೋರಲು ಮಲಗುತ್ತದೆ, ನಂತರ ಅಂಬೆಗಾಲಿಡುತ್ತದೆ, ಆಮೇಲೆ ನಿಧಾನವಾಗಿ ಕೈ ಹಿಡಿದು, ಗೋಡೆ ಹಿಡಿದು ನಡೆಯುತ್ತದೆ. ನಂತರವೇ ಓಡುತ್ತದೆ. ಹಾಗೆಯೇ ಕಾರ್ಖಾನೆಯಿಂದ ತಯಾರಾಗಿ ಹೊರಬಂದ ವಿಮಾನ ಕೂಡ ಒಮ್ಮೆಲೇ ಪ್ರಯಾಣಿಕರನ್ನು ಹೊತ್ತು ಹಾರುವುದಿಲ್ಲ. ವಿಮಾನ ತಯಾರಿಸಿದ ಸಂಸ್ಥೆಯವರು ಖರೀದಿಸಿದ ಸಂಸ್ಥೆಯವರಿಗೆ ಪ್ರತಿನಿತ್ಯ ಮೂರು ಗಂಟೆಗಳ ಕಾಲ ಒಂದು ವಾರದವರೆಗೆ ಆ ವಿಮಾನದ ಕುರಿತಾಗಿ ತರಬೇತಿ ನೀಡುತ್ತಾರೆ. ಅದರ ವಿಶೇಷತೆ, ತಂತ್ರಜ್ಞಾನವನ್ನು ತಿಳಿಸಿಕೊಡುತ್ತಾರೆ. ಆ ನಂತರವೇ ಅದು ಪ್ರಯಾಣಿಕರನ್ನು ಹೊತ್ತೊಯ್ಯಲು ಸಿದ್ಧವಾದಂತೆ. ವಿಮಾನವೆಂದರೆ, ಅಲ್ಲಿ ನಿಖರತೆ, ಖಚಿತತೆ, ಕಾರ್ಯದಕ್ಷತೆ, ಎಲ್ಲವೂ ನೂರಕ್ಕೆ ನೂರರಷ್ಟಿರಬೇಕು. ಒಂದಿಂಚೂ ಆಚೆ ಈಚೆ ಆಗುವಂತಿಲ್ಲ. ಅಷ್ಟು ಇರುವುದರಿಂದಲೇ, ಪ್ರತಿನಿತ್ಯ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ವಿಮಾನ ಆಕಾಶದಲ್ಲಿ ಹಾರಾಡುತ್ತಿರುತ್ತವೆ. ಅವೆಲ್ಲವೂ ಮಳೆ, ಮೋಡ, ಬಿರುಗಾಳಿ ಇತ್ಯಾದಿ ಹವಾಮಾನ ವೈಪರೀತ್ಯಗಳನ್ನು ಎದುರಿಸಿ ಸಾಗುತ್ತವೆ. ಕೆಲವೊಮ್ಮೆ ಹಕ್ಕಿ ಬಂದು ಅಪ್ಪಳಿಸುವುದೂ, ಆಲಿಕಲ್ಲು ಬಡಿಯುವುದೂ ಇರುತ್ತವೆ. ಎಲ್ಲವನ್ನೂ ಎದುರಿಸಿ ತಲುಪಬೇಕಾದ ಗುರಿಯನ್ನು ವಿಮಾನ ತಲುಪುತ್ತದೆ. ತಂತ್ರಜ್ಞಾನ, ನಿಖರತೆ, ಖಚಿತತೆ ಎಲ್ಲವೂ ಒಟ್ಟಾಗಿ ಸೇರಿದಾಗ ಮಾತ್ರ ಇದು ಸಾಧ್ಯ. ಇಲ್ಲವಾದರೆ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಆಕಾಶದಲ್ಲಿ ಹಾರುವ ವಿಮಾನಗಳು ತರಗೆಲೆಯಂತೆ ಪಟಪಟನೆ ಧರೆಗೆ ಉದುರಿ ಬೀಳಬೇಕಿತ್ತು.

ಈಗ ಮನುಷ್ಯನನ್ನು ನೋಡಿ, ಹುಟ್ಟಿದಾಗಿನಿಂದ ಬೆಳೆಯುವವರೆಗೆ ನೂರಾರು ವ್ಯಕ್ತಿಗಳು ನಮ್ಮ ಮೇಲೆ ಪ್ರಭಾವ ಬೀರುತ್ತಾರೆ. ನಮ್ಮ ಅಕ್ಕ ಪಕ್ಕದ ವಾತಾವರಣ, ಪರಿಸರ ನಮ್ಮನ್ನು ಆವರಿಸಿಕೊಳ್ಳುತ್ತವೆ. ಸಾವಿರಾರು ವಿಚಾರಗಳನ್ನು ನಾವು ಗ್ರಹಿಸುತ್ತೇವೆ, ನಮ್ಮೊಳಗೆ ಇಳಿಸಿಕೊಳ್ಳುತ್ತೇವೆ. ಶಿಕ್ಷಣ ಮುಗಿಸಿ ಮುಂದಿನ ಬದುಕನ್ನು ಕಟ್ಟಿಕೊಳ್ಳಲು ಜಗತ್ತಿನೊಂದಿಗೆ ಪೈಪೋಟಿಗೆ ಜಿಗಿಯುತ್ತೇವೆ. ಮನುಷ್ಯನಿಗೂ ಸಾಕಷ್ಟು ಸಮಸ್ಯೆಗಳು ಎದುರಾಗುತ್ತವೆ. ಸಮಸ್ಯೆ ಇಲ್ಲದ ಒಬ್ಬನೇ ಒಬ್ಬ ಮನುಷ್ಯ ಈ ಪ್ರಪಂಚದಲ್ಲಿ ಇರಲಿಕ್ಕಿಲ್ಲ. ಅವುಗಳ ಗಾತ್ರದಲ್ಲಿ, ಪ್ರಮಾಣದಲ್ಲಿ ಹೆಚ್ಚು ಕಮ್ಮಿ ಇರಬಹುದಷ್ಟೇ. ಕೆಲವರಿಗೆ ಸಮಸ್ಯೆ ಅರ್ಥ ಆಗದೇ ಇರಬಹುದು, ಅದು ಬೇರೆ ವಿಷಯ.

ಎದುರಿನಿಂದ ನೂರಾರು ಕಿಲೋಮೀಟರ್ ವೇಗದಲ್ಲಿ ಬೀಸುವ ಗಾಳಿಯನ್ನು ಭೇದಿಸಿಕೊಂಡು ವಿಮಾನ ಮುನ್ನುಗ್ಗುವಂತೆ ಮನುಷ್ಯನ ಬದುಕಿನಲ್ಲಿ ಬರುವ ಕಷ್ಟಗಳಿಗೂ ಜಗ್ಗದೆ ಮುನ್ನುಗ್ಗಬೇಕು ಎನ್ನುವುದಕ್ಕೆ ವಿಮಾನ ಒಂದು ಒಳ್ಳೆಯ ಉದಾಹರಣೆ. ಆಗೊಮ್ಮೆ ಈಗೊಮ್ಮೆ ಆಯತಪ್ಪಿ ಒಂದೋ ಎರಡೋ ಅಪಘಾತಗಳಾಗುತ್ತವೆ. ಅಪಘಾತ ತಪ್ಪಿಸಿ ಹಾರಾಟ ಮುಂದುವರಿಸಬೇಕೇ ವಿನಾ ಹಾರಾಟ ನಿಲ್ಲಿಸಬಾರದು. ಏರ್ ಇಂಡಿಯಾ ಆದರೂ ಸರಿ, ಮನುಷ್ಯ ಆದರೂ ಸರಿ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಎಲ್ಲಾ ಇದ್ದೂ ಏನೂ ಆಗ್ಲಿಲ್ಲ..!

ಇದು ತಮಿಳುನಾಡಿನ ಮಧುರೈನಿಂದ ಹಾರಿಬಂದಿರುವ ಸುದ್ದಿ. ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಪಕ್ಷದ ನಾಯಕರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ಭಾರಿ ಸಮಾವೇಶವೊಂದನ್ನು ಅಲ್ಲಿ ಆಯೋಜಿಸಲಾಗಿತ್ತಂತೆ. ಇಂಥ ಘಟಾನುಘಟಿಗಳು ಒಂದೆಡೆ ಜಮಾವಣೆಯಾಗುತ್ತಾರೆ ಎಂದರೆ ಅದು ಪಕ್ಕಾ 'ರಾಜಕೀಯ ಸಭೆ' ಆಗಬೇಕಲ್ಲವೇ? ಆದರೆ ಹಾಗಾಗುವುದಕ್ಕೆ ಬದಲು ಅದು ಕಾಲುಭಾಗ ರಾಜಕೀಯ ಸಭೆ, ಮುಕ್ಕಾಲುಭಾಗ 'ಆಹಾರೋತ್ಸವ'ವಾಗಿ ಬದಲಾಗಿಬಿಟ್ಟಿತಂತೆ!



ಪಕ್ಷದ ಅಧಿನಾಯಕ ಮತ್ತು ರಾಜ್ಯದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಈ ಸಭೆಯ ನೇತೃತ್ವ ವಹಿಸಿ ಚೆನ್ನಾಗಿಯೇ ನಡೆಸಿದರಂತೆ; ಇದಕ್ಕೂ ಮೊದಲು ಅವರು ರೋಡ್‌ಷೋನಲ್ಲಿ ಉತ್ಸಾಹಭರಿತರಾಗಿ ಪಾಲ್ಗೊಂಡು ಬರೋಬ್ಬರಿ 19 ಕಿಲೋಮೀಟರ್‌ನಷ್ಟು ನಡೆದುಕೊಂಡು ಬಂದರಂತೆ ಹಾಗೂ ಅದರ ನಡುವೆಯೇ ಬಹಳ ವರ್ಷಗಳ ನಂತರ ತಮ್ಮ ಸೋದರ ಎಂ.ಕೆ.ಅಳಗಿರಿಯವರ ನೆಲೆಗೂ ಒಂದು 'ಫ್ಲೈಯಿಂಗ್ ವಿಸಿಟ್' ಕೊಟ್ಟರಂತೆ. ಅವರು ಇಷ್ಟೆಲ್ಲಾ ಕಸರತ್ತುಗಳನ್ನು ಮಾಡಿಕೊಂಡು ಬರುವಷ್ಟರಲ್ಲಿ, ಸಮಾವೇಶದ ತಾಣದಲ್ಲಿ ಜಮೆಯಾಗಿದ್ದ ಪಕ್ಷದ ಎಲ್ಲ ಸ್ತರದ ಸದಸ್ಯರಿಗೆ ಪುಷ್ಕಳವಾಗಿ ಊಟೋಪಚಾರವನ್ನು ನೀಡಲಾಯಿತಂತೆ; ಬಿರಿಯಾನಿ, ಮಟನ್, ಮೀನು, ಸೀಗಡಿ ಮೀನು ಹೀಗೆ ಬಗೆಬಗೆಯಾದ ಭಕ್ಷ್ಯ-ಭೋಜ್ಯಗಳು ಈ ಔತಣದಲ್ಲಿ ಸೇರಿದ್ದವಂತೆ. ತಮಾಷೆಯೆಂದರೆ, ಒಂದೆಡೆ ಊಟವು ಹೀಗೆ 'ರುಚಿಕಟ್ಟು' ಆಗಿದ್ದರೆ, ಮತ್ತೊಂದೆಡೆ ಸಭೆಯ ರಾಜಕೀಯ ನಡಾವಳಿಗಳಲ್ಲಿ ರುಚಿ 'ಕಟ್' ಆಗಿತ್ತಂತೆ. ಹೀಗಾಗಿ ಸಮಾವೇಶದಲ್ಲಿ ಪಾಲ್ಗೊಂಡಿದ್ದವರಿಗೆ ರಾಜಕೀಯವಾಗಿ ಅದು 'ಸಪ್ಪೆ ಸಪ್ಪೆ' ಎನಿಸಿತಂತೆ.

ರಾಜಕೀಯ ಪಂಡಿತರು ಹೇಳುವ ಪ್ರಕಾರ, ಈ ಸಮಾವೇಶದಲ್ಲಿ ಸಿಎಂ ಸ್ಟಾಲಿನ್‌ರ ಪುತ್ರ ಹಾಗೂ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರನ್ನು ಮುಂಚೂಣಿಗೆ ತರುವ ಮಾತುಗಳು ಹೊಮ್ಮುತ್ತವೆ ಹಾಗೂ ಸಂಘಟನೆಯ ರಚನಾ ಸ್ವರೂಪದಲ್ಲಿ ಒಂದಷ್ಟು ಬದಲಾವಣೆಗಳಾಗಲಿವೆ ಎಂದೇ ಬಹುತೇಕರು ನಿರೀಕ್ಷಿಸಿದ್ದರಂತೆ. ಆದರೆ ಅಂಥದ್ದೇನೂ ಆಗದೆ ಕೆಲ 'ರಾಜಕೀಯಾಸಕ್ತರು' ನಿರಾಶರಾಗಬೇಕಾಗಿ ಬಂತಂತೆ. 'ಹೋಗಲಿಬಿಡಿ, ಕಡೇ ಪಕ್ಷ ಬಾಯಿ ಚಪ್ಪರಿಸುವಂಥ ರಸದೌತಣವಾದರೂ ಸಿಕ್ಕಿತಲ್ಲಾ..' ಎಂದು ಇಂಥವರಲ್ಲಿ ಕೆಲವರು ಉದ್ಗರಿಸಿ 'ಢರ್' ಎಂದು ತೇಗಿದರಂತೆ!

ನಾರಾಯಣ ನಾರಾಯಣ!

ಇತ್ತೀಚಿನ ವರ್ಷಗಳಲ್ಲಿ, ಕಲಬೆರಕೆ/ಕಳಪೆ ಆಹಾರದ ಸೇವನೆಯಿಂದಾಗಿ ಐವರಲ್ಲಿ ಒಬ್ಬರಿಗೆ ಬೊಜ್ಜಿನ ಸಮಸ್ಯೆ ಅಮರಿಕೊಳ್ಳುತ್ತಿದೆಯಂತೆ. ಮಾತ್ರವಲ್ಲ, ಕಳಪೆ ಆಹಾರದ ಮಾರಾಟದಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ ಸಿಕ್ಕಿದೆಯಂತೆ. ಸರಿಹೋಯ್ತು ಬಿಡಿ! ಅಕ್ಕಪಕ್ಕದವರು ಯಾರಾದ್ರೂ ಜೋರಾಗಿ ಅಬ್ಬರಿಸಿ, ''ಯಾಕೋ? ತಿಂದು ಕೊಬ್ಬು ಜಾಸ್ತಿಯಾಯ್ತಾ?'' ಅಂತ ಕೇಳಿದ್ರೆ, ''ಹೌದು'' ಅಂತ ಹೇಳೋಕ್ಕೆ ನಮ್ ಜನಕ್ಕೆ ಒಂದು ಕಾರಣವಾದ್ರೂ ಸಿಕ್ತು ಅಂತ ಸಮಾಧಾನಪಟ್ಟುಕೊಳ್ಳೋಣ!!

ಭಾರತವು ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುತ್ತಿರುವುದು ಹೇಗೆ?

ಭಾರತದಲ್ಲಾದ ತೆರಿಗೆ ಸುಧಾರಣೆ, ಕೇಂದ್ರ ಮಟ್ಟದಲ್ಲಿ ಕಡಿಮೆಯಾದ ಭ್ರಷ್ಟಾಚಾರ, ರಾಜಕೀಯ ಇಚ್ಛಾಶಕ್ತಿ, ಡಿಜಿಟಲ್ ಇಂಡಿಯಾ ಮೂಲಕ ಫಲಾನುಭವಿಗಳಿಗೆ ಸಹಾಯಧನದ ನೇರ ಹಸ್ತಾಂತರ, ಮೂಲಭೂತ ಸೌಕರ್ಯಗಳಲ್ಲಾದ ಭಾರಿ ಅಭಿವೃದ್ಧಿ, ಓಬೀರಾಯನ ಕಾಲದ ಕಾನೂನುಗಳ ಸುಧಾರಣೆ, ಸ್ಟಾರ್ಟ್-ಅಪ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಉಪಕ್ರಮಗಳು ಭಾರತವನ್ನಿಂದು ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಯನ್ನಾಗಿ ರೂಪಿಸಿವೆ.

ವಿತ್ತಲೋಕ

ಗಣೇಶ್ ಭಟ್ ವಾರಾಣಸಿ
vveditoped@gmail.com

ಕೆನಡಾ ದೇಶದ ಪ್ರಧಾನಿ ಮಾರ್ಕ್ ಕಾನಿ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೆ ಇತ್ತೀಚೆಗೆ ಕರೆಮಾಡಿ, ಜೂನ್ 15ರಿಂದ 17ರವರೆಗೆ ಕೆನಡಾದ ಅಲ್ಬರ್ಟ್ ಕೆನಾನಸ್ಕಿಸ್‌ನಲ್ಲಿ ನಡೆಯಲಿರುವ ಜಿ-7 ರಾಷ್ಟ್ರಗಳ ನಾಯಕರ ಶೃಂಗಸಭೆಗೆ ಆಹ್ವಾನಿಸಿದರು. ಮಾರ್ಕ್ ಕಾನಿಗಿಂತ ಮೊದಲು ಕೆನಡಾದ ಪ್ರಧಾನಿಯಾಗಿದ್ದ ಜಸ್ಟಿನ್ ಟ್ರೂಡೋ ಅವರು ಪ್ರತ್ಯೇಕತಾವಾದಿ ಖಲಿಸ್ತಾನಿ ಉಗ್ರರ ಪರವಾಗಿ ನಿಂತುದರಿಂದ ಭಾರತ ಮತ್ತು ಕೆನಡಾಗಳ ನಡುವಿನ ಸಂಬಂಧ ಹದಗೆಟ್ಟಿತ್ತು.

2023ರಲ್ಲಿ ಕೆನಡಾದಲ್ಲಿ ಖಲಿಸ್ತಾನಿ ಉಗ್ರ ಹರ್‌ದೀಪ್ ಸಿಂಗ್ ನಿಜ್ಜರ್‌ನ ಹತ್ಯೆಯ ಆರೋಪವನ್ನು ಜಸ್ಟಿನ್ ಟ್ರೂಡೋ ನೇರವಾಗಿ ಭಾರತದ ಮೇಲೆ ಹೊರಿಸಿದ ನಂತರವಂತೂ, ಭಾರತ ಮತ್ತು ಕೆನಡಾ ದೇಶಗಳು ರಾಜಕೀಯ ಸಂಬಂಧಗಳನ್ನೇ ಕಡಿದುಕೊಂಡು ಪರಸ್ಪರರ ರಾಯಭಾರಿಗಳನ್ನು ಉಚ್ಚಾಟಿಸಿದ್ದವು. ನಂತರದ ದಿನಗಳಲ್ಲಿ, ಕೆನಡಾದಲ್ಲಾದ ರಾಜಕೀಯ ಬೆಳವಣಿಗೆಯಿಂದಾಗಿ ಪ್ರಧಾನಿ ಸ್ಥಾನಕ್ಕೆ ಜಸ್ಟಿನ್ ಟ್ರೂಡೋ ರಾಜೀನಾಮೆ ಕೊಡಬೇಕಾಯಿತು. ನಂತರ ಪ್ರಧಾನಿಯಾಗಿ ಆಯ್ಕೆಯಾದ ಮಾರ್ಕ್ ಕಾನಿ ಇದೀಗ ಜಿ-7 ಶೃಂಗಸಭೆಗೆ ಭಾರತವನ್ನು ಆಮಂತ್ರಿಸಿದ್ದಾರೆ. ನಿಜ್ಜರ್ ಹತ್ಯೆ ಪ್ರಕರಣವನ್ನು ಕೆದಕಿದ ಕೆನಡಾದ ಪತ್ರಕರ್ತರು, ''ಮೋದಿಯವರಿಗೇಕೆ ಹೀಗೆ ಆಹ್ವಾನ ಕೊಟ್ಟಿರಿ?'' ಎಂದು ಪ್ರಶ್ನಿಸಿದಾಗ ಮಾರ್ಕ್ ಕಾನಿಯವರು, ''ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯಿರುವ ಭಾರತವು ಜಾಗತಿಕವಾಗಿ 5ನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಿದ್ದು, ಜಾಗತಿಕ ಪೂರೈಕೆಯ ಸರಪಣಿಯ ಹೃದಯದಂತಿದೆ. ಹೀಗಾಗಿ ಇಂಥ ನಿರ್ದಿಷ್ಟ ಪ್ರದೇಶಗಳನ್ನು ಶೃಂಗಸಭೆಯ ಮಾತುಕತೆಗಳಲ್ಲಿ ಒಳಗೊಳಿಸುವುದು ಅನಿವಾರ್ಯ'' ಎಂದುತ್ತರಿಸಿದರು. ಇಂದಿನ ದಿನಗಳಲ್ಲಿ ಭಾರತವು ಜಗತ್ತಿಗೆ ಎಷ್ಟು ಅನಿವಾರ್ಯವಾಗಿದೆ ಎಂಬುದು ಇದರಿಂದ ಅರ್ಥವಾಗುತ್ತದೆ.

2014ರಲ್ಲಿ, ಜಾಗತಿಕ ಆರ್ಥಿಕ ಬಲಾಢ್ಯ ದೇಶಗಳ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದ್ದ ಭಾರತವು ಕಳೆದ 11 ವರ್ಷಗಳಲ್ಲಿ ಕ್ಷಿಪ್ರ ಆರ್ಥಿಕ ಪ್ರಗತಿಯನ್ನು ಸಾಧಿಸಿ, ರಷ್ಯಾ, ಬ್ರೆಜಿಲ್, ಇಟಲಿ, ಫ್ರಾನ್ಸ್, ಇಂಗ್ಲೆಂಡ್‌ಗಳನ್ನು ಹಿಂದಿಕ್ಕಿ ಹಾಗೂ ಈಗ ಜಪಾನ್ ಅನ್ನೂ ದಾಟಿ ನಾಲ್ಕನೇ ಸ್ಥಾನಕ್ಕೆ ಏರಲಿದೆ. 2024-25ರಲ್ಲಿ ಶೇ.6.5ರಷ್ಟು ಆರ್ಥಿಕ ಬೆಳವಣಿಗೆಯನ್ನು ಸಾಧಿಸಿರುವ ಭಾರತವು, ಜಗತ್ತಿನ ಅತಿವೇಗವಾಗಿ ಬೆಳೆಯುತ್ತಿರುವ ಜಿಡಿಪಿಯಾಗಿ ಹೊರಹೊಮ್ಮಿದೆ. ಮುಂದಿನ ವರ್ಷಗಳಲ್ಲೂ ಭಾರತವು ಇದೇ ವೇಗವನ್ನು ಕಾಯ್ದುಕೊಳ್ಳಲಿದೆ ಎಂದು ಅಂದಾಜಿಸಲಾಗಿದೆ. 2025-26ರ ಆರ್ಥಿಕ ವರ್ಷಾಂತ್ಯಕ್ಕೆ ಭಾರತದ ಒಟ್ಟು ದೇಶೀಯ ಉತ್ಪಾದನೆಯ ಮೌಲ್ಯ (ಜಿಡಿಪಿ) 4.187 ಲಕ್ಷ ಕೋಟಿ ಡಾಲರ್‌ಗೆ ಏರಲಿದೆ. 2013-14ರಲ್ಲಿ ಭಾರತದ ಜಿಡಿಪಿ ಮೌಲ್ಯವು 1.86 ಟ್ರಿಲಿಯನ್ ಡಾಲರ್‌ನಷ್ಟಿತ್ತು. 2014ರಲ್ಲಿ ಅಸ್ಥಿರ ಆರ್ಥಿಕತೆಯುಳ್ಳ 'ಫ್ರಾಜೈಲ್ 5' ರಾಷ್ಟ್ರಗಳ ಪಟ್ಟಿಯಲ್ಲಿದ್ದ ಭಾರತವು, 2027ರಲ್ಲಿ ಜರ್ಮನಿಯನ್ನು ಹಿಂದಿಕ್ಕಿ ಜಾಗತಿಕವಾಗಿ ಮೂರನೆಯ ಅತಿದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಭಾರತದಲ್ಲಾದ ಈ ಆರ್ಥಿಕ ಪ್ರಗತಿಯು ಆಕಸ್ಮಿಕವಲ್ಲ. ಇದರ ಹಿಂದೆ ಸರಕಾರವು ತೆಗೆದುಕೊಂಡ ಯೋಜನಾಬದ್ಧ ಹೆಜ್ಜೆಗಳಿವೆ. ಭಾರತದಲ್ಲಾದ ತೆರಿಗೆ ಸುಧಾರಣೆ, ಕೇಂದ್ರ ಮಟ್ಟದಲ್ಲಿ ಕಡಿಮೆಯಾದ ಭ್ರಷ್ಟಾಚಾರ, ರಾಜಕೀಯ ಇಚ್ಛಾಶಕ್ತಿ, ಡಿಜಿಟಲ್ ಇಂಡಿಯಾ ಮೂಲಕ ಫಲಾನುಭವಿಗಳಿಗೆ ಸಹಾಯಧನದ ನೇರ ಹಸ್ತಾಂತರ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್- ಡಿಬಿಟಿ), ಮೂಲಭೂತ ಸೌಕರ್ಯಗಳಲ್ಲಾದ ಭಾರಿ ಅಭಿವೃದ್ಧಿ, ಓಬೀರಾಯನ ಕಾಲದ ಕಾನೂನುಗಳ ಸುಧಾರಣೆ, ಸ್ಟಾರ್ಟ್-ಅಪ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಉಪಕ್ರಮಗಳು, ಉತ್ಪಾದನಾಧಾರಿತ ಪ್ರೋತ್ಸಾಹಧನ (ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್), ಪ್ರಾದೇಶಿಕ ಸಮಾನತೆ, ಅಂತಾರಾಷ್ಟ್ರೀಯ ಸಂಬಂಧಗಳಲ್ಲಾದ ಸುಧಾರಣಾ ಕ್ರಮಗಳು, ಹೆಚ್ಚಾದ ವಿದೇಶಿ ನೇರ ಹೂಡಿಕೆಗಳು ಮೊದಲಾದ ಸಕಾರಾತ್ಮಕ ನಡೆಗಳು ಭಾರತವನ್ನಿಂದು ಜಾಗತಿಕವಾಗಿ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿಯನ್ನಾಗಿ ರೂಪಿಸಿವೆ.

ತೆರಿಗೆ ವ್ಯವಸ್ಥೆಯಲ್ಲಾದ ಸುಧಾರಣೆಯು ಭಾರತದ ಆರ್ಥಿಕತೆಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು. ವಾಣಿಜ್ಯ ತೆರಿಗೆಯಡಿಯಲ್ಲಿ ವ್ಯಾಟ್, ಕಸ್ಟಮ್ ಡ್ಯೂಟಿ, ಎಕ್ಸೈಸ್ ಡ್ಯೂಟಿ, ಅಂತಾರಾಜ್ಯ ತೆರಿಗೆ, ಆಕ್ಟ್ರಾಯ್ ತೆರಿಗೆ, ಸೆಸ್ ಹೀಗೆ ಹತ್ತು ಹಲವು ತೆರಿಗೆಗಳು ಸೇರಿಕೊಂಡು ಇಡೀ ವ್ಯವಸ್ಥೆಯನ್ನು ಜಟಿಲಗೊಳಿಸಿದ್ದವು. ಇದನ್ನು 'ಟ್ಯಾಕ್ಸ್ ಟೆರರಿಸಂ' ಎನ್ನಲಾಗುತ್ತಿತ್ತು. ತೆರಿಗೆಯ ವಿವಿಧ ಹಂತಗಳಲ್ಲಿ ಸೋರಿಕೆಯಾಗುವುದರೊಂದಿಗೆ ಉತ್ಪಾದಕರು, ಪೂರೈಕೆದಾರರು ಮತ್ತು ಗ್ರಾಹಕರನ್ನು ಈ ಎಲ್ಲಾ ತೆರಿಗೆಗಳು ಕಾಡುತ್ತಿದ್ದವು. ಇಂಥ ವಿವಿಧ ತೆರಿಗೆಗಳನ್ನು ತೆಗೆದುಹಾಕಿ ನಾಲ್ಕು ಸ್ತರಗಳಲ್ಲಿ ಜಾರಿಗೆ ತಂದ ಏಕರೂಪದ ಜಿಎಸ್‌ಟಿ ಪದ್ಧತಿಯು ವಾಣಿಜ್ಯ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿ ಉತ್ಪಾದನೆ, ವ್ಯಾಪಾರಗಳನ್ನು ಸುಗಮಗೊಳಿಸಿತು. ಅದೇ ರೀತಿ, ಗ್ರಾಹಕನ ಮೇಲಿನ ಭಾರವನ್ನೂ ಜಿಎಸ್‌ಟಿ ಪದ್ಧತಿಯು ಇಳಿಸಿದೆ. 2019ರಲ್ಲಿ ನಡೆಸಲಾದ ಅಧ್ಯಯನವೊಂದು, 'ಹಿಂದಿನ ವಾಣಿಜ್ಯ ತೆರಿಗೆ ವ್ಯವಸ್ಥೆಗೆ ಹೋಲಿಸಿದರೆ ಜಿಎಸ್‌ಟಿ ವ್ಯವಸ್ಥೆಯಲ್ಲಿ ಪ್ರತಿ ತಿಂಗಳು ಗ್ರಾಹಕನಿಗೆ 320 ರುಪಾಯಿಗಳ ಉಳಿತಾಯವಾಗುತ್ತದೆ' ಎಂದಿದೆ. ಅದೇ ರೀತಿ, ಜಿಎಸ್‌ಟಿ ಪದ್ಧತಿಯಿಂದ ತೆರಿಗೆ ಸೋರಿಕೆ ತುಂಬಾ ಕಡಿಮೆಯಾಗಿದೆ. ಜಿಎಸ್‌ಟಿ ಆರಂಭವಾದ 2017-18ರಲ್ಲಿ ಮಾಸಿಕ ಸಂಗ್ರಹದ ಸರಾಸರಿಯು ಸುಮಾರು 90 ಸಾವಿರ ಕೋಟಿ ರುಪಾಯಿಗಳಾಗಿದ್ದರೆ, 2024-25ಕ್ಕೆ ಆ ಮೊತ್ತ ದ್ವಿಗುಣಗೊಂಡು 1.84 ಲಕ್ಷ ಕೋಟಿ ರುಪಾಯಿಗಳಿಗೇರಿದೆ. ಈ ಮೊತ್ತವು ಈ ವರ್ಷದಲ್ಲಿ 2 ಲಕ್ಷ ಕೋಟಿಯನ್ನು ದಾಟಲಿದೆ. ಹೆಚ್ಚು ತೆರಿಗೆ ಸಂಗ್ರಹವಾದಷ್ಟೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸರಕಾರಕ್ಕೆ ಹೆಚ್ಚು ಸಂಪನ್ಮೂಲ ಸಿಗುತ್ತದೆ.

ಭಾರತದಲ್ಲಿ ಹೂಡಿಕೆಯ ವಾತಾವರಣವನ್ನು ಉತ್ತಮಗೊಳಿಸಲಾಗಿದೆ. 'ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್'ನಲ್ಲಿ ಭಾರತವು ತನ್ನ ಸ್ಥಾನವನ್ನು ಸುಧಾರಿಸುತ್ತಾ ಬಂದಿದೆ. ದೇಶದಲ್ಲಿದ್ದ ಹಲವು ಹಳೆಯ ಕಾನೂನುಗಳು, ಉದ್ಯಮ ಸ್ಥಾಪನೆಗೆ ಮತ್ತು ಹೂಡಿಕೆಗಳಿಗೆ ಅಡ್ಡಿಮಾಡುತ್ತಿದ್ದವು. ಆ ಕಾನೂನುಗಳನ್ನು ತೆಗೆದುಹಾಕಿ ಹಾದಿಯನ್ನು ಸುಗಮಗೊಳಿಸಲಾಗಿದೆ. ಹಲವು ಕ್ಷೇತ್ರಗಳಲ್ಲಿ ಶೇ.100ರಷ್ಟು ವಿದೇಶಿ ನೇರ ಹೂಡಿಕೆಗೆ ಅನುಮತಿಸಲಾಗಿದೆ. ಇದರಿಂದಾಗಿ ಭಾರತದಲ್ಲಿ ಹೂಡಿಕೆಗಳ ಜತೆಜತೆಗೆ ಉದ್ಯಮಾವಕಾಶಗಳು ಗಣನೀಯವಾಗಿ ಹೆಚ್ಚಾಗಿವೆ. ಕಳೆದ 11 ವರ್ಷಗಳಲ್ಲಿ ಭಾರತದಲ್ಲಿ 769 ಶತಕೋಟಿ ಡಾಲರ್‌ಗಳಷ್ಟು ವಿದೇಶಿ ನೇರ ಹೂಡಿಕೆಯಾಗಿದೆ. 2004ರಿಂದ 2014ರವರೆಗಿನ ಅವಧಿಯೊಡನೆ ಹೋಲಿಸಿದಾಗ, 2014-2024ರ ಅವಧಿಯಲ್ಲಿ ಭಾರತದಲ್ಲಾದ ವಿದೇಶಿ ಹೂಡಿಕೆಯ ಪ್ರಮಾಣ ದ್ವಿಗುಣಗೊಂಡಿದೆ ಮತ್ತು 2024-25ರಲ್ಲಿ ಇದು 81 ಶತಕೋಟಿ ಡಾಲರ್‌ಗಳಷ್ಟು ಪ್ರಮಾಣಕ್ಕೆ ಮುಟ್ಟಿದೆ. ಹೆಚ್ಚಾದ ವಿದೇಶಿ ಹೂಡಿಕೆಯಿಂದಾಗಿ ಕೈಗಾರಿಕೆಗಳು, ರಫ್ತು ಪ್ರಮಾಣ, ಉದ್ಯೋಗಾವಕಾಶಗಳು ಹೆಚ್ಚಾದವು ಹಾಗೂ ದೇಶದ ಆದಾಯವೂ ಹೆಚ್ಚಿತು.

ಮೂಲಭೂತ ಸೌಕರ್ಯಗಳಲ್ಲಾದ ಅಭಿವೃದ್ಧಿಯು ವಿವಿಧ ನೆಲೆಗಟ್ಟಿನಲ್ಲಿ ದೇಶದ ಸ್ಥಿತಿಯನ್ನು ಮೇಲಕ್ಕೆತ್ತಿದೆ. ದೇಶದ ಪ್ರತಿ ಮನೆಗೂ ವಿದ್ಯುತ್ ಮತ್ತು ಅಡುಗೆ ಅನಿಲದ ಸಂಪರ್ಕವನ್ನು ಕೊಡಲಾಗಿದೆ. ಈಗ ಪ್ರತಿ ಮನೆಗೂ ಕೊಳಾಯಿ ಮೂಲಕ ನೀರಿನ ಸಂಪರ್ಕವನ್ನು ಕೊಡಲಾಗುತ್ತಿದೆ. ದೇಶದ ಉದ್ದಗಲಕ್ಕೂ ದಶಪಥ, ಷಟ್ಪಥ ಹೈವೇ, ಎಕ್ಸ್‌ಪ್ರೆಸ್ ವೇಗಳು ನಿರ್ಮಾಣವಾಗುತ್ತಿವೆ. ವಿಭಿನ್ನ ಸ್ತರದ ನಗರಗಳಿಗೆ ಮೆಟ್ರೋ ರೈಲು ಸಂಪರ್ಕವನ್ನು ಒದಗಿಸಲಾಗುತ್ತಿದೆ. ನಾಗರಿಕ ವಿಮಾನ ನಿಲ್ದಾಣಗಳ ಸಂಖ್ಯೆಯು ದ್ವಿಗುಣಗೊಂಡು 140ಕ್ಕೆ ಮುಟ್ಟಿವೆ. ವಿದ್ಯುತ್ ಉತ್ಪಾದನೆಯಲ್ಲಾಗಿರುವ ಹೆಚ್ಚಳವು ನಾಗರಿಕರ ಮತ್ತು ಕೈಗಾರಿಕಾ ವಲಯದ ಬೇಡಿಕೆಯನ್ನು ಈಡೇರಿಸುತ್ತಿದೆ. ಸ್ವಾತಂತ್ರ್ಯ ನಂತರದಿಂದ 2014ರವರೆಗೆ ದೇಶದಲ್ಲಿನ ಮೂಲಭೂತ ಸೌಕರ್ಯ ನಿರ್ಮಾಣಕ್ಕೆ ಸರಕಾರಗಳು ವ್ಯಯಿಸಿದ ಹಣಕ್ಕಿಂತ ಹೆಚ್ಚು ಮೊತ್ತವನ್ನು 2014-2025ರ ಅವಧಿಯಲ್ಲಿ ಈ ಬಾಬತ್ತಿಗೆ ವಿನಿಯೋಗಿಸಲಾಗಿದೆ ಮತ್ತು 2024-25ರ ವರ್ಷದಲ್ಲಿ 11 ಲಕ್ಷ ಕೋಟಿ ರುಪಾಯಿಗಳನ್ನು ಈ ವಲಯಕ್ಕೆ ವ್ಯಯಿಸಲಾಗುತ್ತಿದೆ.

'ಮೇಕ್ ಇನ್ ಇಂಡಿಯಾ' ಉಪಕ್ರಮವು ಭಾರತದ ಆರ್ಥಿಕತೆಯನ್ನು ಮೇಲಕ್ಕೆತ್ತಿದ ಪ್ರಮುಖ ಯೋಜನೆಯಾಗಿದೆ. ದೇಶದಲ್ಲಿ ಹೂಡಿಕೆ ಮಾಡಿ ಉತ್ಪಾದನೆಯಲ್ಲಿ ತೊಡಗುವ ಎಲ್ಲ ಉದ್ಯಮಗಳನ್ನು ಸರಕಾರವು ಪ್ರೋತ್ಸಾಹಿಸುತ್ತಿದೆ. ಉತ್ಪಾದನಾಧಾರಿತ ಪ್ರೋತ್ಸಾಹಧನವಾಗಿ ಸರಕಾರವು ಉತ್ಪಾದಕರಿಗೆ 26 ಬಿಲಿಯನ್ ಡಾಲರ್‌ನಷ್ಟು ಹಣವನ್ನು ನೀಡುತ್ತಿದೆ. 'ಮೇಕ್ ಇನ್ ಇಂಡಿಯಾ' ಉಪಕ್ರಮದಡಿ ಭಾರತವಿಂದು ಜಾಗತಿಕವಾಗಿ 2ನೇ ಅತಿ ದೊಡ್ಡ ಮೊಬೈಲ್ ಫೋನ್ ಉತ್ಪಾದಕ ಮತ್ತು ನಿರ್ಯಾತ ರಾಷ್ಟ್ರವಾಗಿ ಹೊರಹೊಮ್ಮಿದೆ. ರಕ್ಷಣಾ ಕ್ಷೇತ್ರದ ಉಪಕರಣಗಳಿಗಾಗಿ ಒಂದು ಕಾಲಕ್ಕೆ ವಿದೇಶಗಳನ್ನು ನೆಚ್ಚಿದ್ದ ಭಾರತವಿಂದು, ತನಗೆ ಅಗತ್ಯವಿರುವ ಶೇ.70ರಷ್ಟು ರಕ್ಷಣೋಪಕರಣಗಳನ್ನು ಸ್ವತಃ ಉತ್ಪಾದಿಸುತ್ತಿರುವುದರ ಜತೆಗೆ ವಿದೇಶಗಳಿಗೂ ರಫ್ತು ಮಾಡುತ್ತಿದೆ. ಇಲೆಕ್ಟ್ರಾನಿಕ್-ಆಟೋಮೊಬೈಲ್ ಉಪಕರಣಗಳು, ಸಿದ್ಧ ಉಡುಪುಗಳು, ಉಕ್ಕು, ಔಷಧಗಳು ಭಾರತದಿಂದ ವಿದೇಶಗಳಿಗೆ ರಫ್ತಾಗುತ್ತಿವೆ. ಇದೀಗ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಭಾರತವು ದಾಪುಗಾಲಿಡುತ್ತಿದ್ದು, ಇದುವರೆಗೆ ದೇಶದಲ್ಲಿ ಟಾಟಾ, ವೇದಾಂತ, ಫಾಕ್ಸ್ ಕಾನ್ ಮೊದಲಾದ ಬೃಹತ್ ಸಂಸ್ಥೆಗಳು ಸೆಮಿಕಂಡಕ್ಟರ್ ತಯಾರಿಕಾ ಘಟಕಗಳನ್ನು ತೆರೆದಿವೆ. 50ಕ್ಕೂ ಹೆಚ್ಚು ಸ್ಟಾರ್ಟ್-ಅಪ್ ಕಂಪನಿಗಳೂ ಈ ತಯಾರಿಕಾ ವಲಯದಲ್ಲಿ ತೊಡಗಿಸಿಕೊಂಡಿವೆ. ಇವುಗಳಿಗೆ ಪೂರಕವಾಗಿ ಸರಕಾರವು 76 ಸಾವಿರ ಕೋಟಿ ರುಪಾಯಿಗಳಷ್ಟು ಉತ್ಪಾದನಾಧಾರಿತ ಪ್ರೋತ್ಸಾಹಧನವನ್ನು ಕೊಡುತ್ತಿದೆ. 'ಮೇಕ್ ಇನ್ ಇಂಡಿಯಾ' ಉಪಕ್ರಮವು ಭಾರತದ ಆರ್ಥಿಕತೆಯನ್ನು ಬಲಪಡಿಸಿದ್ದು ಮಾತ್ರವಲ್ಲದೆ ಕೋಟ್ಯಂತರ ಜನರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿದೆ.

ಬ್ಯಾಂಕುಗಳ ಮತ್ತು ಸರಕಾರಗಳಿಂದ ನಡೆಸಲ್ಪಡುವ ಸಾರ್ವಜನಿಕ ಉದ್ಯಮಗಳ ಉತ್ಪಾದಕತೆಯು ಕಳೆದ 11 ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಿದೆ. ಸಾರ್ವಜನಿಕ ವಲಯದ ಒಎನ್‌ಜಿಸಿ, ಐಒಸಿ, ಎಲ್ಐಸಿ, ಎಚ್ಎಎಲ್, ಕೋಲ್ ಇಂಡಿಯಾ ಮುಂತಾದ ಸಂಸ್ಥೆಗಳು 2024-25ರಲ್ಲಿ 5 ಲಕ್ಷ ಕೋಟಿ ರು. ಲಾಭ ಮಾಡಿವೆ. ಇದೇ ರೀತಿಯಲ್ಲಿ, ಸಾರ್ವಜನಿಕ ವಲಯದ ಬ್ಯಾಂಕುಗಳು 2013-14ರಲ್ಲಿ 37 ಸಾವಿರ ಕೋಟಿ ರು. ಲಾಭವನ್ನು ಗಳಿಸಿದ್ದರೆ, 2024-25ರಲ್ಲಿ ಈ ಮೊತ್ತವು 1.78 ಲಕ್ಷ ಕೋಟಿ ರು.ಗಳಿಗೇರಿದೆ. 10 ಲಕ್ಷ ಕೋಟಿ ರುಪಾಯಿಗಳಿಗೂ ಹೆಚ್ಚಿನ ಮೊತ್ತದ 'ಕೆಟ್ಟ ಸಾಲಗಳು', 2016ರಲ್ಲಿ ಭಾರತ ಸರಕಾರವು ಜಾರಿಗೆ ತಂದ 'ಇನ್‌ಸಾಲ್ವೆನ್ಸಿ ಹಾಗೂ ಬ್ಯಾಂಕ್ರಪ್ಟಸಿ ಕಾನೂನು' ಮತ್ತು ಇತರ ವಿಧಿಬದ್ಧ ಕ್ರಮಗಳ ಮೂಲಕ ವಸೂಲಿಯಾಗಿ, ಸಾರ್ವಜನಿಕ ವಲಯ ಹಾಗೂ ಖಾಸಗಿ ಬ್ಯಾಂಕುಗಳ ಆರ್ಥಿಕ ಸ್ವಾಸ್ಥ್ಯವು ಪುನಶ್ಚೇತನಗೊಂಡಿದೆ.

ಜನಧನ್ ಬ್ಯಾಂಕ್ ಖಾತೆ, ಆಧಾರ್ ನಂಬರ್ ಹಾಗೂ ಫಲಾನುಭವಿಗಳ ಮೊಬೈಲ್ ನಂಬರ್‌ಗಳನ್ನು ಬೆಸೆದ 'ಜೆಎಎಂ' ವ್ಯವಸ್ಥೆಯಡಿ ಸರಕಾರವು ಕೊಡಮಾಡಿದ ಸಹಾಯಧನವು ಫಲಾನುಭವಿಗಳನ್ನು ನೇರವಾಗಿ ಸೇರಿ, ಸುಮಾರು 3.5 ಲಕ್ಷ ಕೋಟಿ ರುಪಾಯಿಗಳಷ್ಟು ಹಣವು ಸೋರಿಹೋಗುವುದು ನಿಂತಿದೆ. 'ಡಿಜಿಟಲ್ ಇಂಡಿಯಾ' ಅಡಿಯಲ್ಲಿ ನಡೆಯುತ್ತಿರುವ ಯುಪಿಐ ವಹಿವಾಟುಗಳು ಜಗತ್ತಿಗೇ ಮಾದರಿಯಾಗಿವೆ. 'ಸ್ಟಾರ್ಟ್ ಅಪ್ ಇಂಡಿಯಾ' ಯೋಜನೆಯ ಅಡಿಯಲ್ಲಿ ರೂಪುಗೊಂಡ ಒಂದೂವರೆ ಲಕ್ಷಕ್ಕೂ ಹೆಚ್ಚಿನ ನವೋದ್ಯಮಗಳು ಲಕ್ಷಾಂತರ ಮಂದಿಗೆ ಉದ್ಯೋಗಗಳನ್ನು ಕೊಟ್ಟಿರುವುದು ಮಾತ್ರವಲ್ಲದೆ, ದೇಶದ ಆದಾಯವನ್ನೂ ಹೆಚ್ಚಿಸಿವೆ. ಪ್ರಸ್ತುತ ದೇಶದಲ್ಲಿ 122 'ಯುನಿಕಾರ್ನ್ ಸ್ಟಾರ್ಟಪ್'ಗಳಿವೆ (ಇವು ಶತಕೋಟಿ ಡಾಲರ್ ಮೌಲ್ಯವನ್ನು ಮೀರಿದಂಥವು). ಇವುಗಳ ಒಟ್ಟು ಮೌಲ್ಯ 385 ಶತಕೋಟಿ ಡಾಲರ್‌ಗಳನ್ನು ಮೀರುತ್ತದೆ.

ಯುವಜನರನ್ನು ಉದ್ಯಮಶೀಲರನ್ನಾಗಿಸಲು ಕೊಡಮಾಡಿದ ಮುದ್ರಾ ಸಾಲ, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಉದ್ಯಮಿಗಳಿಗೆ ಕೊಡಲಾದ ಆರ್ಥಿಕ ಬೆಂಬಲದ 'ಸ್ಟ್ಯಾಂಡ್ ಅಪ್ ಇಂಡಿಯಾ' ಯೋಜನೆ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಸ್ತರದ ಉದ್ಯಮಗಳಿಗೆ ಸರಕಾರವು ನೀಡಿದ ಆರ್ಥಿಕ ಪುನಶ್ಚೇತನ ಕಾರ್ಯಕ್ರಮಗಳು ದೇಶದ ಜನರ ಆರ್ಥಿಕತೆಯನ್ನು ಮೇಲೆತ್ತುವಲ್ಲಿ ಸಹಕಾರಿಯಾಗಿವೆ. ಕಳೆದ 11 ವರ್ಷಗಳಲ್ಲಿ ಭಾರತದ 27 ಕೋಟಿ ಜನರು ತೀವ್ರ ಬಡತನದ ಮಟ್ಟದಿಂದ ಹೊರಬಂದಿದ್ದಾರೆ ಎಂದು ವಿಶ್ವಬ್ಯಾಂಕ್ ಹೇಳಿದೆ. 2011-12ರಲ್ಲಿ ದೇಶದ ಶೇ.27.1ರಷ್ಟು ಜನರು ಬಡತನ ರೇಖೆಯ ಕೆಳಗಿದ್ದರೆ, ಈಗ ಆ ಪ್ರಮಾಣ ಶೇ.5.3ಕ್ಕೆ ಇಳಿದಿದೆ. 2013-14ರಲ್ಲಿ ಭಾರತೀಯರ ತಲಾ ಆದಾಯವು 75,000 ರುಪಾಯಿಗಳಾಗಿದ್ದರೆ, ಇಂದು ಅದು 2.44 ಲಕ್ಷ ರು.ಗೆ ಏರಿದೆ. ಇವು ಭಾರತದ ಆರ್ಥಿಕ ಪ್ರಗತಿಯ ಯಶೋಗಾಥೆಗಳಾಗಿವೆ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:153

ಸಮಾಚಾರ ಸಣ್ಣದಲ್ಲ

ಗೋದಾವರಿ ನದಿ: 5 ಯುವಕರ ಸಾವು

ಕರೀಂನಗರ: ತೆಲಂಗಾಣದ ಕರೀಂ ನಗರದ ಬಸರಾ ಬಳಿ ಹರಿಯುತ್ತಿರುವ ಗೋದಾವರಿ ನದಿಯಲ್ಲಿ ಐವರು ಯುವಕರು ಭಾನುವಾರ ಮುಳುಗಿ ಸಾವನ್ನಪ್ಪಿದ್ದಾರೆ. ಯುವಕರು ಸ್ನೇಹಿತರ ಜತೆಗೂಡಿ ಪ್ರಸಿದ್ಧ ಜ್ಞಾನ ಸರಸ್ವತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಹೈದರಾಬಾದಿನಿಂದ ಬಸರಾಕ್ಕೆ ಬಂದಿದ್ದರು. ದೇವಾಲಯಕ್ಕೆ ತೆರಳುವ ಮುನ್ನ ಸ್ನಾನ ಮಾಡಲು ಯುವಕರು ನದಿಗಿಳಿದಾಗ ದಿಢೀರ್ ಎಂಬಂತೆ ನೀರಿನ ಮಟ್ಟ ಹೆಚ್ಚಿದ್ದರಿಂದ ಯುವಕರು ಕೊಚ್ಚಿಕೊಂಡು ಹೋಗಿದ್ದಾರೆ. ರಕ್ಷಣಾ ತಂಡಗಳು ಕರೆಸಿ ಐವರ ಮೃತದೇಹಗಳನ್ನು ಹೊರತೆಗೆಸಿ ಮರಣೋತ್ತರ ಪರೀಕ್ಷೆಗೆ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ ಎಂದು ಎಎಸ್‌ಪಿ ಅವಿನಾಶ್ ಕುಮಾರ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಅಪ್ಪ-ಅಮ್ಮ, ಇಬ್ಬರು ಪುತ್ರಿ ಸಿಡಿಲಿಗೆ ಬಲಿ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯ ಗ್ರಾಮವೊಂದರಲ್ಲಿ ಮನೆಯಲ್ಲಿ ಮಲಗಿದ್ದ ದಂಪತಿ ಮತ್ತು ಇಬ್ಬರು ಅವಳಿ ಹೆಣ್ಣು ಮಕ್ಕಳು ಪ್ರಬಲ ಸಿಡಿಲಿನ ಆಘಾತಕ್ಕೆ ಒಳಗಾಗಿ ಸಾವಿಗೀಡಾದರು. ಜಿಲ್ಲೆಯ ಬಾರಾ ತಹಸಿಲ್‌ನ ಹಲ್ಲಾಬೋರ್ ಸೋನ್‌ಬರ್ಸಾ ನಿವಾಸಿ ವೀರೇಂದ್ರ ವನವಾಸಿ, ಪತ್ನಿ ಪಾರ್ವತಿ ಮತ್ತು ಅವಳಿ ಹೆಣ್ಣುಮಕ್ಕಳಾದ ರಾಧಾ ಮತ್ತು ಕರಿಷ್ಮಾ ಮೃತರು. ಶನಿವಾರ ತಡರಾತ್ರಿ 12ರ ವೇಳೆ ದೊಡ್ಡದಾದ ಸಿಡಿಲು ಅಪ್ಪಳಿಸಿದ್ದರಿಂದ ಗುಡಿಸಲಿಗೆ ಬೆಂಕಿ ಹೊತ್ತಿ ಕೊಂಡಿದೆ. ಗುಡಿಸಿಲಿನ ಒಳಗೆ ನಿದ್ರೆಯಲ್ಲಿದ್ದ ನಾಲ್ವರೂ ಸಜೀವ ದಹನವಾಗಿದ್ದಾರೆ. ಸಿಡಿಲಿನ ಆರ್ಭಟಕ್ಕೆ ದಿಗಿಲುಗೊಂಡು ಹೊರಗೋಡಿ ಬಂದ ನೆರೆಹೊರೆಯವರು, ಪಕ್ಕದಲ್ಲಿದ್ದ ಗುಡಿಸಲು ಹೊತ್ತಿ ಉರಿಯುತ್ತಿರುವುದನ್ನು ಕಂಡು ತಕ್ಷಣವೇ ಬೆಂಕಿಯನ್ನು ನಂದಿಸಲು ಯತ್ನಿಸಿದ್ದಾರೆ. ಆದರೆ ಅಷ್ಟರಲ್ಲಾಗಲೇ ಕುಟುಂಬದ ನಾಲ್ವರೂ ಸುಟ್ಟು ಅಸ್ಥಿಪಂಜರಗಳಾಗಿದ್ದರು. ಪೊಲೀಸರು ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಮೊಬೈಲ್ ಟವರ್ ಬಿರುಗಾಳಿಗೆ ಧರೆಗೆ

ದೆಹಲಿ: ರಾಷ್ಟ್ರ ರಾಜಧಾನಿ ನಗರದಲ್ಲಿ ಭಾನುವಾರ ಬಿರು ಗಾಳಿ ಸಹಿತ ಭಾರೀ ಮಳೆಯಾಗಿದ್ದು, ಬಿರುಗಾಳಿಯ ರಭಸಕ್ಕೆ ದಕ್ಷಿಣ ದೆಹಲಿಯಲ್ಲಿನ ಸಫ್ದರ್ ಜಂಗ್ ಎನ್‌ಕ್ಲೇವ್‌ನಲ್ಲಿರುವ 100 ಅಡಿಗಳಷ್ಟು ಎತ್ತರದ ಮೊಬೈಲ್ ಸಿಗ್ನಲ್ ಗೋಪುರ ಬುಡದಲ್ಲಿ ಕತ್ತರಿಸಿಹೋದಂತೆ ನೆಲಕ್ಕುರುಳಿದೆ. ಭಾನುವಾರ ಮುಂಜಾನೆ 4ರ ವೇಳೆ ಘಟನೆ ನಡೆದಿದೆ. ಅಲ್ಲದೇ, ಪಕ್ಕದಲ್ಲಿದ್ದ ಉದ್ಯಾನವನದ ಮೇಲೆ ಗೋಪುರ ಉರುಳಿದೆ. ನಸುಕಿನ ಸಮಯವಾದ್ದರಿಂದ ಜನ ಸಂಚಾರವಿರಲಿಲ್ಲ. ಹಾಗಾಗಿ ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಜಿಪ್‌ಲೈನ್ ಕಡಿತ: ಯುವತಿ ಕಂದಕಕ್ಕೆ

ಮನಾಲಿ: ಹಿಮಾಚಲ ಪ್ರದೇಶದ ಮನಾಲಿ ದೇಶದ ಪ್ರಮುಖ ಪ್ರವಾಸಿ ತಾಣದಲ್ಲಿ ಜಿಪ್‌ಲೈನ್ ಹಗ್ಗ ಹಠಾತ್ ತುಂಡಾಗಿದ್ದರಿಂದ ಪ್ರವಾಸಿ ಯುವತಿಯೊಬ್ಬರು ಕಂದಕಕ್ಕೆ ಬಿದ್ದಿದ್ದಾರೆ. ಪ್ರವಾಸಕ್ಕೆಂದು ಬಂದಿದ್ದ ಮಹಾರಾಷ್ಟ್ರದ ನಾಗಪುರದ ಕುಟುಂಬದ ಸದಸ್ಯೆ ತ್ರಿಶಾ, 30 ಅಡಿಗಳಷ್ಟು ಆಳದ ಕಂದಕಕ್ಕೆ ಬಿದ್ದಿದ್ದರಿಂದ ತೀವ್ರ ಗಾಯಗಳಾಗಿವೆ. ಅವರನ್ನು ಮನಾಲಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಚಂಡೀಗಢದ ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ತ್ರಿಶಾ ಬಿಜ್ಲೆ ಜಿಪ್‌ಲೈನ್ ಕೇಬಲ್‌ನಲ್ಲಿ ಒಂದು ದಡದಿಂದ ಇನ್ನೊಂದು ದಡದತ್ತ ತೆರಳುತ್ತಿದ್ದಾಗ ಕೇಬಲ್ ತುಂಡಾಯಿತು. 30 ಅಡಿ ಆಳಕ್ಕೆ ಬಿದ್ದು ತ್ರಿಶಾ ಗಾಯಗೊಂಡಳು. ಈ ಘಟನೆ ಪ್ರವಾಸಿ ತಾಣಗಳಲ್ಲಿನ ಸುರಕ್ಷತೆ ಬಗ್ಗೆ ಕಳವಳ ಹುಟ್ಟುಹಾಕಿದೆ ಎಂದು ತ್ರಿಶಾ ಕುಟುಂಬವರ್ಗದವರು ಆತಂಕ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯಲ್ಲಿನ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಕುಟುಂಬಸ್ಥರ ಆರೋಪಿಸಿದ್ದಾರೆ.

{ಜೈರಾಮ್ ರಮೇಶ್ } ಕಾಂಗ್ರೆಸ್ ನಾಯಕ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿದೇಶಿ ಪ್ರವಾಸಗಳಲ್ಲಿ ಬಲು ಆಸಕ್ತಿ. ಅವರ ಎಲ್ಲಾ ಶಕ್ತಿ, ಉತ್ಸಾಹ ಮತ್ತು ಕಾತರತೆ(3 ಇ) ವಿದೇಶ ಯಾತ್ರಗಷ್ಟೇ ಸೀಮಿತವಾಗಿದೆ. ಆದರೆ, ನಿರಂತರ ನೋವಿನಲ್ಲಿರುವ ಮಣಿಪುರದ ಜನರ ಬಳಿ ಹೋಗಲು ಸಹಾನುಭೂತಿ(4ನೇ ಇ) ಏಕೆ ಇಲ್ಲ. ಮಣಿಪುರ ಜನರ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯವೇಕೆ?



ಶನಿವಾರ ಇಡೀ ರಾತ್ರಿ, ಹೊಸ ಬಗೆ ಕ್ಷಿಪಣಿಗಳಿಂದ ಇಸ್ರೇಲ್‌ನ ವಿವಿಧ ನಗರಗಳ ಮೇಲೆ ಇರಾನ್ ದಾಳಿ | ಹಲವು ಕಟ್ಟಡ ಧ್ವಂಸ, 180 ಮಂದಿಗೆ ಗಾಯ |
ಇರಾನ್‌ನ ಇಂಧನ ಘಟಕಗಳು, ಅಣ್ವಸ್ತ್ರ ಸಂಗ್ರಹಾಗಾರಗಳನ್ನು ಗುರಿಯಾಗಿಸಿ ಇಸ್ರೇಲ್ ಪ್ರಬಲ ದಾಳಿ | ಹಲವು ಇಂಧನ ಘಟಕಗಳು, ಕಟ್ಟಡಗಳು ಧ್ವಂಸ

ಸಮರ ತೀವ್ರ: ಇರಾನ್-ಇಸ್ರೇಲ್‌ನಲ್ಲಿ ತಲಾ 10 ಸಾವು

ಟೆಹರಾನ್/ಟೆಲ್‌ಅವಿವ್: ಇರಾನ್ ಮತ್ತು ಇಸ್ರೇಲ್ ನಡುವಿನ ಸೇನಾ ಸಂಘರ್ಷ ಶುರುವಾಗಿ ಮೂರು ದಿನಗಳಾಗಿದ್ದು, ಭಾನುವಾರವೂ ಎರಡೂ ಕಡೆಯಿಂದ ದಾಳಿ ಮುಂದುವರಿದಿದೆ. ದಿನದಿಂದ ದಿನಕ್ಕೆ ಎರಡೂ ಕಡೆಯಲ್ಲಿ ದಾಳಿ ತೀವ್ರಗೊಳ್ಳುತ್ತಲೇ ಇದೆ. ಇನ್ನೊಂದೆಡೆ, ಇರಾನ್‌ಗೆ ಬೆಂಬಲವಾಗಿ ಯೆಮೆನ್‌ನಿಂದ ಹೌತಿ ಉಗ್ರ ಸಂಘಟನೆಯೂ ಇಸ್ರೇಲ್ ಮೇಲೆ ಖಂಡಾಂತರ ಕ್ಷಿಪಣಿ ಬಳಸಿ ದಾಳಿ ಮಾಡಿರುವುದಾಗಿ ಹೇಳಿಕೊಂಡಿದೆ.

ವಾರಾಂತ್ಯದ ದಿನವಾದ ಭಾನುವಾರ ಬೆಳಗ್ಗೆಯೇ ಎರಡೂ ದೇಶಗಳ ಜನರು ಕಣ್ಣು ಹೊಸಕಿಕೊಳ್ಳುತ್ತಾ ನಿದ್ರೆಯಿಂದ ಎಚ್ಚರಗೊಂಡರೆ ಮೊದಲಿಗೆ ಅನುಭವಕ್ಕೆ ಸಿಕ್ಕಿದ್ದೇ ಕ್ಷಿಪಣಿ ದಾಳಿ, ಸ್ಫೋಟದ ಸದ್ದು, ದಟ್ಟವಾಗಿ ಧೂಳು ಆವರಿಸಿದ ಆಕಾಶ.

ಶನಿವಾರ ತಡರಾತ್ರಿ ಇರಾನ್ ಸೇನಾಪಡೆಗಳು ನಡೆಸಿದ ತೀವ್ರಸ್ವರೂಪದ ವಾಯುದಾಳಿ, ಕ್ಷಿಪಣಿ ದಾಳಿಯಿಂದ ಇಸ್ರೇಲ್‌ನ ರಾಜಧಾನಿ ಟೆಲ್ ಅವಿವ್ ಸೇರಿದಂತೆ ಹಲವು ನಗರಗಳಲ್ಲಿನ ಹತ್ತಾರು ಕಟ್ಟಡಗಳು ಧ್ವಂಸಗೊಂಡಿವೆ. ಇರಾನ್ ಸೇನಾಪಡೆಗಳು ಹೊಸದಾದ ಕ್ಷಿಪಣಿಗಳನ್ನು ಬಳಸಿ ಇಸ್ರೇಲ್ ಮೇಲೆ ದಾಳಿ ಮಾಡಿದೆ ಎಂದು ಇರಾನ್ ಮಾಧ್ಯಮ ವರದಿ ಮಾಡಿದೆ. ಒಂದೇ ರಾತ್ರಿ 10 ಸಾವು: ಇಸ್ರೇಲ್‌ನ ವಿವಿಧ ನಗರಗಳಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಇದರೊಂದಿಗೆ ಮೂರು ದಿನಗಳಲ್ಲಿ ಇಸ್ರೇಲ್‌ನಲ್ಲಿ ಮಡಿದವರ ಸಂಖ್ಯೆ 13ಕ್ಕೇರಿದೆ. ಅಲ್ಲದೇ ಶನಿವಾರ ಇರಾನ್ ನಡೆಸಿದ ವೈಮಾನಿಕ ದಾಳಿಯಿಂದ ಇಸ್ರೇಲ್‌ನ ವಿವಿಧ ನಗರಗಳಲ್ಲಿ 150ಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ.

ಇರಾನ್ ಶನಿವಾರ ರಾತ್ರಿ ನಡೆಸಿದ ವೈಮಾನಿಕ ದಾಳಿಯಿಂದಾಗಿ ಇಸ್ರೇಲ್‌ನ ವಿವಿಧ ನಗರಗಳಲ್ಲಿ 80 ವರ್ಷದ ವೃದ್ಧೆ, 10 ವರ್ಷದ ಬಾಲಕ ಸೇರಿದಂತೆ 10 ಮಂದಿ ಸಾವಿಗೀಡಾಗಿದ್ದಾರೆ ಎಂದು ಇಸ್ರೇಲ್‌ನ ಅಧಿಕೃತ ಪ್ರಕಟಣೆ ತಿಳಿಸಿದೆ. ಇಸ್ರೇಲ್ ಕೂಡಾ ಭಾನುವಾರ ಬೆಳಗ್ಗೆ ಇರಾನ್ ಮೇಲಿನ ದಾಳಿಯನ್ನು ಚುರುಕುಗೊಳಿಸಿದೆ. ಕ್ಷಿಪಣಿ ದಾಳಿಗೆ ಇರಾನ್‌ನಲ್ಲಿನ ನೂರಾರು ಸ್ಥಳಗಳನ್ನು ಗುರುತಿಸಿಟ್ಟುಕೊಳ್ಳಲಾಗಿದೆ ಎಂದು ಇಸ್ರೇಲ್ ಸೇನಾ ಪ್ರಮುಖರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಭಾನುವಾರ ಇಸ್ರೇಲ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಇರಾನ್‌ನ ಉತ್ತರದ ನಗರ ಟಾಮ್ರಾ ಮತ್ತು ಇರಾನ್ ರಕ್ಷಣಾ ಸಚಿವಾಲಯದ ಪ್ರಧಾನ ಕಚೇರಿಗೆ ಸಮೀಪದ ಇಂಧನ ಘಟಕಗಳ ಮೇಲೆ ಭಾನುವಾರ ಕ್ಷಿಪಣ ದಾಳಿ ನಡೆಸಿದೆ. ಅಲ್ಲಿನ ಬ್ಯಾಟ್‌ಯಾಮ್ ಕಟ್ಟಡದಲ್ಲಿದ್ದ 6 ಜನರು ಸೇರಿದಂತೆ ಒಟ್ಟು 10 ಮಂದಿ ಸಾವಿಗೀಡಾದರು. 200 ಜನರು ಗಾಯಗೊಂಡರು ಎಂದು ವರದಿಯಾಗಿದೆ.ಇರಾನ್ ಮೇಲೆ ಶನಿವಾರ 80 ಸ್ಥಳಗಳ ಮೇಲೆ ದಾಳಿ ಮಾಡಲಾಗಿದೆ. ಅವುಗಳಲ್ಲಿ ಇಂಧನ ಘಟಕಗಳು, ಪರಮಾಣು ಶಸ್ತ್ರಾಸ್ತ್ರ ಸಂಗ್ರಹ ಕೇಂದ್ರಗಳೂ ಸೇರಿವೆ ಎಂದು ಸೇನಾಪ್ರಮುಖರು ಹೇಳಿದ್ದಾರೆ. ಇಸ್ರೇಲ್ ಶನಿವಾರ ರಾತ್ರಿ ನಡೆಸಿದ ವಾಯುದಾಳಿಯಲ್ಲಿ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಗ್ಯಾಸ ಫೀಲ್ಡ್ ಎನಿಸಿಕೊಂಡಿರುವ ಇರಾನ್‌ನ ಸೌತ್ ಪಾರ್ಸ್ ಕೂಡಾ ಹಾನಿಗೀಡಾಗಿದೆ. ಇದರಿಂದ ತೀವ್ರ ಸ್ವರೂಪದ ಅಪಾಯಗಳು ಎದುರಾಗಿವೆ ಎಂದು 'ಫ್ರಾನ್ಸ್ 24' ವರದಿಗಾರ ಅಜಿಮಿ ವರದಿ ಮಾಡಿದ್ದಾರೆ.

ಗುಪ್ತಚರ ಸೆರೆ: ಈ ಮಧ್ಯೆ, ಇಸ್ರೇಲ್‌ನ ವಿಶ್ವವಿಖ್ಯಾತ ಬೇಹುಗಾರಿಕೆ ಪಡೆಯಾದ 'ಮೊಸ್ಸಾದ್'ನ ಇಬ್ಬರು ಗುಪ್ತಚರರನ್ನು ಇರಾನ್ ಭದ್ರತಾಪಡೆಗಳು ಅಲ್‌ಬೋರ್ಜ್ ಪ್ರಾಂತ್ಯದಲ್ಲಿ ಭಾನುವಾರ ಬಂಧಿಸಿವೆ. ಗುಪ್ತಚರರಿಂದ ಸ್ಫೋಟಕ ತಯಾರಿಕೆಗೆ ಅಗತ್ಯವಾದ ಎಲೆಕ್ಟ್ರಾನಿಕ್ಸ್ ಸಾಧನಗಳನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಇರಾನ್ ಸರಕಾರಿ ಮಾಧ್ಯಮ ತಸ್ನಿಮ್ ನ್ಯೂಸ್ ಭಾನುವಾರ ವರದಿ ಮಾಡಿದೆ.

ಇಸ್ರೇಲ್‌ನ ವಿವಿಧ ನಗರಗಳ ಮೇಲೆ ಇರಾನ್ ಖಂಡಾಂತರ ಕ್ಷಿಪಣಿಗಳನ್ನು ಬಳಸಿ ಶನಿವಾರ ರಾತ್ರಿ ದಾಳಿ ಮಾಡಿದೆ.

ಸೇನಾಪಡೆ ಶಕ್ತಿ	ಇಸ್ರೇಲ್	ಇರಾನ್
ಯುದ್ಧ ವಿಮಾನ	241	186
ವಿಶೇಷ ಕಾರ್ಯ ವಿಮಾನ	23	10
ತರಬೇತಿ ಯುದ್ಧ ವಿಮಾನ	155	102
ವಾಯುಪಡೆ ಟ್ಯಾಂಕರ್ಸ್	14	7
ಹೆಲಿಕಾಪ್ಟರ್‌ಗಳು	146	129
ದಾಳಿ ಹೆಲಿಕಾಪ್ಟರ್‌ಗಳು	48	13
ಸೇನೆಯ ಟ್ಯಾಂಕ್	3501	1613
ಯುದ್ಧನೌಕೆಗಳು	64	261
ಕ್ಷಿಪಣಿ	ಮಧ್ಯಮಶ್ರೇಣಿ ಜೆರಿಛೊ-3	ಸಜ್ಜಿಲ್-2
(ಸಾಮರ್ಥ್ಯ	3106 ಮೈಲು	1491 ಮೈಲು)
ಸಕ್ರಿಯ ಯೋಧರು	1.70 ಲಕ್ಷ	6.10 ಲಕ್ಷ
ಮೀಸಲು	4.65 ಲಕ್ಷ	3.50 ಲಕ್ಷ
ಅರೆಸೇನಾಪಡೆ	35,000	2,20,00
ವಾಯುದಾಳಿ ತಡೆ	48 ಸಾಧನ	279 ಸಾಧನ

ಇರಾನ್ ಮೇಲಿನ ದಾಳಿ ಇನ್ನಷ್ಟು ತೀವ್ರ

'ಮುಂಬರುವ ದಿನಗಳು ಇರಾನ್ ಪಾಲಿಗೆ ಇನ್ನಷ್ಟು ಕರಾಳ ವಾಗಿರಲಿವೆ. ಇಸ್ರೇಲ್ ದಾಳಿ ತೀವ್ರಗೊಳ್ಳಲಿದೆ. ದಾಳಿ ನಿರಂತರವಾಗಿರಲಿದೆ' ಎಂದು ಇಸ್ರೇಲ್ ಸೇನಾಪಡೆಗಳ ವಕ್ತಾರ ಬ್ರಿಗೇಡಿಯರ್ ಜನರಲ್ ಎಫ್ಫಿ ಡೆಫ್ರಿನ್ ಭಾನು ವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ಸಂದೇಶ ನೀಡಿದ್ದಾರೆ. ಯೆಮೆನ್‌ನ ಉಗ್ರ ಸಂಘಟನೆ ಹೌತಿಯ ಸೇನಾಪಡೆ ಮುಖ್ಯಸ್ಥ ಮುಹಮ್ಮದ್ ಅಲ್ ಘಮಾರಿಯನ್ನು ಗುರಿ ಯಾಗಿಸಿ ಶನಿವಾರ ರಾತ್ರಿ ಇಸ್ರೇಲ್ ವಾಯುಪಡೆಯಿಂದ ದಾಳಿ ನಡೆಸಲಾಗಿದೆ. ಇಸ್ರೇಲ್‌ನ ಯುದ್ಧ ವಿಮಾನಗಳು 2000 ಕಿಮೀ ದೂರದ ಯೆಮೆನ್‌ನ ಸನಾ ನಗರದವರೆಗೂ ಹೋಗಿ ದಾಳಿ ಮಾಡಿವೆ. ಫಲಿತಾಂಶ ಇನ್ನಷ್ಟೇ ತಿಳಿಯಬೇಕಿದೆ ಎಂದೂ ಡೆಫ್ರಿನ್ ಹೇಳಿದ್ದಾರೆ.

ವಾಯುಪ್ರದೇಶ ನಿರ್ಬಂಧ: ಭಾರತದ ಪ್ರವಾಸಿಗರ ಸಂಕಷ್ಟ

ಇರಾನ್ ಕೂಡಾ ತೀವ್ರ ಸ್ವರೂಪದಲ್ಲಿ ಇಸ್ರೇಲ್‌ನ ವಿವಿಧ ನಗರಗಳ ಮೇಲೆ ವಾಯು ದಾಳಿ ನಡೆಸುತ್ತಿರುವುದರಿಂದ ಇಸ್ರೇಲ್‌ನ ವಾಯುಪ್ರದೇಶವನ್ನು ನಾಗರಿಕ ವಿಮಾನ ಸಂಚಾರಕ್ಕೆ ನಿರ್ಬಂಧಿಸಲಾಗಿದೆ. ಭಾನುವಾರವೂ ಸೇರಿದಂತೆ ಕಳೆದ ಮೂರು ದಿನಗಳಿಂದ ಇಸ್ರೇಲ್ ವಾಯುಪ್ರದೇಶ ಪ್ರಯಾಣಿಕ ವಿಮಾನಗಳ ಹಾರಾಟಕ್ಕೆ ಬಂದ್ ಆಗಿದ್ದು, ಇದು ಇನ್ನಷ್ಟು ಕಾಲ ಮುಂದುವರಿಯಲಿದೆ. ಇರಾನ್-ಇಸ್ರೇಲ್ ನಡುವಿನ ಯುದ್ಧದ ಕಾರಣದಿಂದ ಈ ಭಾಗದಲ್ಲಿನ ಹಲವು ದೇಶಗಳ ವಾಯುಪ್ರದೇಶದಲ್ಲಿ ಪ್ರಯಾಣಿಕ ವಿಮಾನಗಳ ಹಾರಾಟ ಬಹುತೇಕ ಸ್ಥಗಿತಗೊಂಡಿದೆ. ಪರಿಣಾಮವಾಗಿ ಜಾರ್ಜಿಯಾದಲ್ಲಿ ಭಾರತೀಯ ಪ್ರವಾಸಿಗರು ಸಂಕಷ್ಟಕ್ಕೀಡಾಗಿದ್ದಾರೆ. ರಾಜಸ್ಥಾನದ 61 ಜನರ ತಂಡ ಜಾರ್ಜಿಯಾದಲ್ಲಿ ಸಿಲುಕಿಕೊಂಡಿದ್ದು, ಭಾರತಕ್ಕೆ ವಾಪಸಾಗಲು ನೆರವಾಗುವಂತೆ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ. ಈ ತಂಡದಲ್ಲಿ 29 ಲೆಕ್ಕ ಪರಿಶೋಧಕರೇ(ಸಿಎಗಳೇ) ಇದ್ದಾರೆ. ಇವರೆಲ್ಲಾ ವೃತ್ತಿಕೌಶಲ ವೃದ್ಧಿ ತರಬೇತಿಗಾಗಿ ಜಾರ್ಜಿಯಾಗೆ ತೆರಳಿದ್ದರು ಎನ್ನಲಾಗಿದೆ.

ಇಡೀ ಯೂರೋಪ್‌ಗೆ ಅಪಾಯಕಾರಿ!

ಸಂಪ್ರದಾಯವಾದಿ ದೇಶವಾದ ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವುದು ಇಸ್ರೇಲ್ ಪಾಲಿಗಷ್ಟೇ ಅಲ್ಲ, ಇಡೀ ಯೂರೋಪ್ ಖಂಡಕ್ಕೆ ಅಪಾಯಕಾರಿ ಎಂದು ಫ್ರಾನ್ಸ್ ವಿದೇಶಾಂಗ ಸಚಿವ ಜೀನ್ ನೋಯಲ್ ಬ್ಯಾರಟ್ ಕಳವಳ ವ್ಯಕ್ತಪಡಿಸಿದ್ದಾರೆ. ಟೆಹರಾನ್(ಇರಾನ್ ರಾಜಧಾನಿ) ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವುದು, ಅಣ್ವಸ್ತ್ರಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮುಂದಾಗಿರುವ ಬಗೆಗೆ ತುರ್ತಾಗಿ ಚರ್ಚಿಸಬೇಕಿದೆ. ಹಾಗಾಗಿ, ಜರ್ಮನಿ, ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ಒಟ್ಟಾಗಿ ಇರಾನ್ ಜತೆಗೆ ಸಭೆ ನಡೆಸಲು ಸಿದ್ಧವಾಗಿವೆ ಎಂದು ಜೀನ್ ಹೇಳಿದ್ದಾರೆ.

ಭಾರತೀಯರಿಗೆ ಸಹಾಯವಾಣಿ

ಟೆಹರಾನ್: ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಇರಾನ್‌ನಲ್ಲಿರುವ ಭಾರತೀಯ ನಾಗರಿಕರಿಗೆ ಸಲಹಾ ಮತ್ತು ಹಲವಾರು ಸಹಾಯವಾಣಿ ಸಂಖ್ಯೆಗಳನ್ನು ನೀಡಿದೆ. ಇದರ ಜೊತೆಗೆ, ಜನರೊಂದಿಗೆ ಮಾತನಾಡಲು ಟೆಲಿಗ್ರಾಮ್ ಲಿಂಕ್ ಅನ್ನು ಸಹ ನೀಡಲಾಗಿದೆ. ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಹಲವಾರು ಪೋಸ್ಟ್‌ಗಳ ಮೂಲಕ ಈ ಮಾಹಿತಿಯನ್ನು ಹಂಚಿಕೊಂಡಿರುವ ರಾಯಭಾರ ಕಚೇರಿಯು, ಟೆಲಿಗ್ರಾಮ್ ಲಿಂಕ್ ಇರಾನ್‌ನಲ್ಲಿರುವ ಭಾರತೀಯ ನಾಗರಿಕರಿಗೆ ಮಾತ್ರ ಲಿಂಕ್ ಬಳಸುವಂತೆ ಒತ್ತಾಯಿಸಿದ್ದಾರೆ. ರಾಯ ಭಾರ ಕಚೇರಿ ಯಿಂದ ಸ್ಥಿತಿ ಮತ್ತು ನವೀಕರಣಗಳನ್ನು ಪಡೆಯ ಲು ಇರಾನ್‌ನಲ್ಲಿರುವ ಎಲ್ಲಾ ಭಾರತೀಯ ನಾಗರಿ ಕರು ಈ ಟೆಲಿಗ್ರಾಮ್ ಲಿಂಕ್‌ಗೆ ಸೇರಲು ವಿನಂತಿಸು ತ್ತೇವೆ ಎಂದೂ ಹೇಳಿದೆ. ತುರ್ತು ಸಂಪರ್ಕಕ್ಕಾಗಿ +98 9128109115 ಮತ್ತು +98 912810910 9, ವಾ ಟ್ಸಾಪ್ ಮೂಲಕ ಸಂಪರ್ಕಕ್ಕಾಗಿ +98 901044557, +98 9015993320, ಮತ್ತು +91 8086871709 ಸಂಪರ್ಕಿಸಲು ಕೋರಿದೆ.

ಅಮೆರಿಕ-ಇರಾನ್ ಸಭೆ ರದ್ದು

ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವುದೇ ಇಸ್ರೇಲ್ ಮತ್ತು ಅಮೆರಿಕದ ಆತಂಕಕ್ಕೆ ಕಾರಣವಾಗಿದೆ. ಪರಮಾಣು ನಿಶ್ಶಸ್ತ್ರೀಕರಣ ವಿಚಾರವಾಗಿ ಅಮೆರಿಕ ಮತ್ತು ಇರಾನ್ ಚರ್ಚೆ ನಡೆಸಲು ನಿಗದಿ ಯಾಗಿದ್ದ ಓಮನ್‌ನಲ್ಲಿನ ಸಭೆಯೂ ಈಗಿನ ಇರಾನ್-ಇಸ್ರೇಲ್ ಸಂಘ ರ್ಷದ ಕಾರಣ ರದ್ದಾಗಿದೆ. ಇರಾನ್-ಇಸ್ರೇಲ್ ನಡುವೆ ನಡೆದಿರುವ ಸೇನಾ ಸಂಘರ್ಷವನ್ನು ಆದಷ್ಟೂ ಬೇಗ ಕೊನೆಗೊಳಿಸಲು ಅಮೆರಿಕ ಮಧ್ಯಪ್ರವೇಶ ಮಾಡಲಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳ ವಿಚಾರದಲ್ಲಿ ಅಮೆರಿಕದ ಮಾತು ಕೇಳದೇ ಇದ್ದರೆ ಹಾಗೂ ಅಮೆರಿಕದ ಮೇಲೇನಾದರೂ ದಾಳಿ ಮಾಡಿದರೆ ಮಾತ್ರ, ಇರಾನ್ ಹಿಂದೆಂದೂ ನೋಡಿರದಂತಹ ಪೆಟ್ಟನ್ನು ತಿನ್ನಬೇಕಾಗುತ್ತದೆ ಎಂದೂ ಟ್ರಂಪ್ ಎಚ್ಚರಿಕೆ ಸಂದೇಶ ನೀಡಿದ್ದಾರೆ.

ಇಸ್ರೇಲ್ ಕ್ಷಿಪಣಿ ದಾಳಿಯಿಂದ ಇರಾನ್‌ನ ಇಂಧನ ಘಟಕವೊಂದರ ಕಟ್ಟಡಕ್ಕೆ ಹಾನಿಯಾಗಿದೆ.

ಇರಾನ್‌ನಲ್ಲಿ ಕಾಣದ ಇಸ್ರೇಲ್ 'ಎಕ್ಸ್' ಖಾತೆ!

ಇರಾನ್‌ನಲ್ಲಿನ ನೂರಾರು ಸ್ಥಳಗಳನ್ನು ದಾಳಿಗೆ ಗುರುತಿಸಿರುವ ಇಸ್ರೇಲ್ ಸೇನಾಪಡೆ, ಆ ಜಾಗಗಳ ಸಮೀಪದಲ್ಲಿ ವಾಸವಿರುವ ಜನರು ತಕ್ಷಣವೇ ಜಾಗ ಖಾಲಿ ಮಾಡಲಿ ಎಂಬ ಎಚ್ಚರಿಕೆ ಸಂದೇಶವನ್ನು 'ಎಕ್ಸ್' ಖಾತೆಯಲ್ಲಿ ರವಾನಿಸಿದೆ. ಆದರೆ, ಇಸ್ರೇಲ್ ಸೇನಾಪಡೆಯ 'ಎಕ್ಸ್' ಖಾತೆ ಇರಾನ್‌ನಲ್ಲಿ ವೀಕ್ಷಣೆಗೆ ಲಭ್ಯವಾಗದು. ಹಾಗಾಗಿ, ಇರಾನ್ ಮೇಲಿನ ದಾಳಿಗೆ ಇಸ್ರೇಲ್ ಗುರುತು ಮಾಡಿರುವ ಸ್ಥಳಗಳಲ್ಲಿ ಈಗಲೂ ನಾಗರಿಕರ ವಸತಿ ಮುಂದುವರಿದಿದೆ ಎಂಬ ಆತಂಕಕಾರಿ ಸಂಗತಿಯನ್ನು 'ಫ್ರಾನ್ಸ್ 24' ಸುದ್ದಿಸಂಸ್ಥೆಯ ಟೆಹರಾನ್ ವರದಿಗಾರ ಸಯೀದ್ ಅಜಿಮಿ ಹಂಚಿಕೊಂಡಿದ್ದಾರೆ.

ಯೆಮೆನ್ ಹೌತಿ ಉಗ್ರರಿಂದ ದಾಳಿ

ಒಂದೆಡೆ, ಇರಾನ್ ಸೇನಾಪಡೆಗಳು ತಮ್ಮ ಅಷ್ಟೂ ಶಕ್ತಿಯನ್ನು ಬಳಸಿಕೊಂಡು ಇಸ್ರೇಲ್‌ನ ವಿವಿಧ ನಗರಗಳ ಮೇಲೆ ಶನಿವಾರ ರಾತ್ರಿ ಪ್ರತಿಕಾರದ ದಾಳಿ ನಡೆಸಿದ್ದರೆ, ಇರಾನ್‌ಗೆ ಬೆಂಬಲವಾಗಿ ಯೆಮೆನ್ ದೇಶದ ಹೌತಿ ಉಗ್ರ ಸಂಘಟನೆಯೂ ತನ್ನ ಬಳಿ ಇರುವ ಖಂಡಾಂತರ ಕ್ಷಿಪಣಿಗಳನ್ನು ಬಳಸಿಕೊಂಡು ಇಸ್ರೇಲ್ ಮೇಲೆ ಶನಿವಾರ ರಾತ್ರಿ, ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ.

ಪಾಕ್ ಸುಳ್ಳು ಹೇಳುತ್ತಿದೆ: ಡಸಾಲ್ಟ್ ಕಂಪನಿ ಸಿಇಒ

ದೆಹಲಿ: ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ವೇಳೆ ಭಾರತದ ವಾಯುಪಡೆಯ 3 ರಫೇಲ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಪಾಕಿಸ್ತಾನ ಹೇಳುತ್ತಿರುವುದೆಲ್ಲಾ ಸುಳ್ಳು ಎಂಬುದು ಮತ್ತೊಮ್ಮೆ ಖಚಿತವಾಗಿದೆ.

> ಭಾರತದ ರಫೇಲ್ ಯುದ್ಧ ವಿಮಾನಗಳೆಲ್ಲ ಸುರಕ್ಷಿತ

ಈ ಬಗ್ಗೆ ಪ್ರತಿಕ್ರಿಯಿಸಿರುವ ಫ್ರಾನ್ಸ್‌ನ ವಿಮಾನ ತಯಾರಿಕಾ ಕಂಪನಿ 'ಡಸಾಲ್ಟ್ ಏವಿಯೇಷನ್'ನ ಅಧ್ಯಕ್ಷ ಮತ್ತು ಸಿಇಒ ಎರಿಕ್ ಟ್ರಾ ್ಯಪಿಯರ್, ತಮ್ಮ ಕಂಪನಿ ಭಾರತಕ್ಕೆ ರವಾನಿಸಿರುವ ರಫೇಲ್ ಯುದ್ಧ ವಿಮಾನಗಳೆಲ್ಲಾ ಸುರಕ್ಷಿತವಾಗಿವೆ. ಪಾಕಿಸ್ತಾನ ಸುಳ್ಳು ಹೇಳಿದೆ ಎಂದಿದ್ದಾರೆ. ರಫೇಲ್ ಯುದ್ಧ ವಿಮಾನ ವಿಶ್ವದ ಅತ್ಯುತ್ತಮ ಬಹುಮುಖಿ ಸಾಮರ್ಥ್ಯದ್ದಾಗಿದೆ. ಅಲ್ಲದೆ, ಈ ಫೈಟರ್ ಜೆಟ್ ಅಮೆರಿಕದ ಎಫ್-35 ಮತ್ತು ಚೀನಾದ ಫೈಟರ್ ಜೆಟ್‌ಗಳಿಗಿಂತಲೂ ಉತ್ತಮವಾಗಿದೆ ಎಂದಿದ್ದಾರೆ. ರಫೇಲ್ ಯುದ್ಧ ವಿಮಾನ ಎದುರಾಳಿ ಯುದ್ಧ ವಿಮಾನಗಳ ಮೇಲೆ, ಭೂಮಿಯಲ್ಲಿರುವ ಶತ್ರುಗಳ ನೆಲೆಗಳ ಮೇಲೆ ನಿಖರ ದಾಳಿ ಮಾಡಬಲ್ಲದು. ನೌಕಾಪಡೆ ವಿಮಾನ ವಾಹಕಗಳ ಮೇಲಿಂದಲೂ ಕಾರ್ಯಾಚರಣೆ ಮಾಡಬಲ್ಲದು ಎಂದಿದ್ದಾರೆ.

ಭಾರತದ ತಪ್ಪು ನಕ್ಷೆ ಪ್ರಕಟಿಸಿದ್ದಕ್ಕೆ ತರಾಟೆ: ಕ್ಷಮೆ ಕೇಳಿದ ಇಸ್ರೇಲ್

ದೆಹಲಿ: ಭಾರತದ ಪರಮಾಪ್ತ ದೇಶವಾದ ಇಸ್ರೇಲ್ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಭಾರತದ ಬಳಿ ಕ್ಷಮೆ ಕೋರಿದೆ. ಇರಾನ್ ಜೊತೆಗಿನ ಸಂಘರ್ಷ ತೀವ್ರವಾಗಿರುವ ಮಧ್ಯೆಯೇ ಈ ಘಟನೆ ನಡೆದಿರುವುದು ಕುತೂಹಲಕ್ಕೆ ಎಡೆ ಮಾಡಿದೆ.



ಇರಾನ್ ಬಳಿ ಎಂಥೆಂತಹ ಕ್ಷಿಪಣಿಗಳಿವೆ, ಅದರ ವ್ಯಾಪ್ತಿ ಎಲ್ಲಿಯವರೆಗಿದೆ ಎಂಬುದನ್ನು ತೋರಿಸಲು ಇರಾನ್ ನಕ್ಷೆ ಕೇಂದ್ರವಾಗಿಸಿ ರಚಿಸಿದ ವೃತ್ತಾಕಾರದ ನಕ್ಷೆಯನ್ನು ಇಸ್ರೇಲ್ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ. ಇದರಲ್ಲಿ ಭಾರತದ ನಕ್ಷೆಯನ್ನು ತಪ್ಪಾಗಿ ತೋರಿಸಲಾಗಿದೆ. ಜಮ್ಮು-ಕಾಶ್ಮೀರವನ್ನು ಪೂರ್ಣವಾಗಿ ಪಾಕಿಸ್ತಾನಕ್ಕೆ ಸೇರಿಸಿರುವುದು ನಕ್ಷೆಯಲ್ಲಿದೆ. ಇಸ್ರೇಲ್‌ನ 'ಎಕ್ಸ್' ಸಂದೇಶ ವೈರಲ್ ಆಗುತ್ತಿದ್ದಂತೆಯೇ ಭಾರತದಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಬಳಿಕ ಎಚ್ಚೆತ್ತ ಇಸ್ರೇಲ್ ರಕ್ಷಣಾ ಪಡೆ(ಐಡಿಎಫ್), ಸ್ಪಷ್ಟನೆ ನೀಡಿ ಭಾರತದ ಕ್ಷಮೆ ಕೋರಿದೆ. 'ಈ ನಕ್ಷೆಯು ಭಾರತದ ಗಡಿಗಳನ್ನು ನಿಖರವಾಗಿ ಚಿತ್ರಿಸುವಲ್ಲಿ ವಿಫಲವಾಗಿದೆ. ಈ ನಕ್ಷೆಯಿಂದ ಉಂಟಾಗುವ ಅಪರಾಧಕ್ಕಾಗಿ ಬೇಷರತ್ ಕ್ಷಮೆ ಯಾಚಿಸುತ್ತೇವೆ' ಎಂದು ಐಡಿಎಫ್ ಹೇಳಿದೆ.

ಇಸ್ರೇಲ್ ಭಾರತದ ಪರಮಾಪ್ತ ರಾಷ್ಟ್ರವೇ ಆಗಿರಬಹುದು. ಆದರೆ ಇಂತಹ ದೋಷಪೂರಿತ 'ಎಕ್ಸ್' ಸಂದೇಶ ಸರಿಯಲ್ಲ. ಮಿತ್ರರಾಷ್ಟ್ರಗಳ ಗಡಿಗಳ ಬಗ್ಗೆ ಇಸ್ರೇಲ್‌ಗೆ ಕನಿಷ್ಠ ಮಟ್ಟದ ಅರಿವಾದರೂ ಇರಬೇಕು. ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಇಂತಹ ಭಾವನಾತ್ಮಕ ವಿಚಾರಗಳ ಬಗ್ಗೆ ಇಸ್ರೇಲ್ ಕಟ್ಟೆಚ್ಚರದಿಂದಿರಬೇಕು ಎಂದು ಭಾರತದ ಜಾಲತಾಣ ಬಳಕೆದಾರರು ಇಸ್ರೇಲ್ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಕೇಂದ್ರ ಸರಕಾರ ಕೂಡಲೇ ಈ ಪೋಸ್ಟ್ ತೆಗೆದು ಹಾಕಿಸಲು ಕ್ರಮ ಕೈಗೊಳ್ಳಬೇಕು' ಎಂದು ಹಲವು ನೆಟ್ಟಿಗರು ಒತ್ತಾಯಿಸಿದ್ದಾರೆ.

ರಜೆ ಕೊಡದ್ದಕ್ಕೆ ಗುಂಡಿಕ್ಕಿದ ಬಿಎಸ್‌ಎಫ್ ಯೋಧ

ಮುರ್ಷಿದಾಬಾದ್: ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಸೇವೆಯಲ್ಲಿದ್ದ ಗಡಿ ಭದ್ರತಾ ಪಡೆಯ ಒಬ್ಬ ಹಿರಿಯ ಯೋಧನನ್ನು ಸಹೋದ್ಯೋಗಿಯೇ ಶನಿವಾರ ಗುಂಡಿಕ್ಕಿ ಕೊಂದಿದ್ದಾನೆ. ಕಾರಣ ರಜೆ ವಿಚಾರವಾಗಿ ಜಗಳ.

ಬಿಎಸ್‌ಎಫ್ ಯೋಧ ರಾಜಸ್ಥಾನ್ ಮೂಲದ ರತನ್ ಲಾಲ್ ಸಿಂಗ್ (55) ಸಹೋದ್ಯೋಗಿಯ ಸಿಟ್ಟಿಗೆ ಬಲಿಯಾಗಿದ್ದಾರೆ. ಛತ್ತೀಸ್‌ಗಢ ಮೂಲದ ಶಿವಂಕುಮಾರ್ ಮಿಶ್ರಾ(29), ತನ್ನ ಬಳಿ ಇದ್ದ ಸರ್ವಿಸ್ ರೈಫಲ್‌ನಿಂದ ರತನ್‌ಲಾಲ್ ಹೊಟ್ಟೆಗೆ 13 ಗುಂಡುಗಳನ್ನು ಸಿಡಿಸಿದ್ದಾನೆ. ಶನಿವಾರ ರಾತ್ರಿ ಇಬ್ಬರ ನಡುವೆ ರಜೆ ವಿಚಾರವಾಗಿ ಶುರುವಾದ ಜಗಳ ಕೊಲೆಯಲ್ಲಿ ಕೊನೆಯಾಗಿದೆ.

ಶಿವಂಕುಮಾರ್‌ನನ್ನು ಮುರ್ಷಿದಾಬಾದ್ ಜಿಲ್ಲೆಯ ಶಂಶೇರ್‌ಗಂಜ್ ಠಾಣೆಯ ಪೊಲೀಸರು ಬಂಧಿಸಿದ್ದು, ಕೊಲೆಗೆ ಬಳಸಲಾದ ಸ್ವಯಂಚಾಲಿತ ರೈಫಲ್ ವಶಪಡಿಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

4 ವರ್ಷಗಳ ಹಿಂದೆಯಷ್ಟೇ ಬಿಎಸ್‌ಎಫ್ ಸೇರಿದ್ದ ಮಿಶ್ರಾ, ಹಿರಿಯ ಯೋಧ ರತನ್‌ಲಾಲ್ ಸಿಂಗ್ ಅಧೀನದಲ್ಲಿ ಕೆಲಸ ಮಾಡಬೇಕಿತ್ತು. ಗರ್ಭಿಣಿ ಪತ್ನಿಯನ್ನು ನೋಡಿಕೊಂಡು ಬರಲೆಂದು ಮಿಶ್ರಾ ರಜೆ ಕೇಳಿದ್ದ. ಆದರೆ, ಸಿಂಗ್ ನಿರಾಕರಿಸಿದ್ದರು. ಅದೇ ವಿಷಯವಾಗಿ ಶನಿವಾರ ಜಗಳ ಆರಂಭವಾಗಿತ್ತು ಎಂದು ಬಿಎಸ್‌ಎಫ್ ಯೋಧರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ದುಬೈ: ಗಗನಚುಂಬಿ ಕಟ್ಟಡದಲ್ಲಿ ಬೆಂಕಿ

ದುಬೈ: ದುಬೈನ ಮರೀನಾದಲ್ಲಿರುವ ಗಗನಚುಂಬಿ ಕಟ್ಟಡದಲ್ಲಿ ಬೆಂಕಿ ಅವಘಡವಾಗಿದ್ದು, ಸದ್ಯ ಯಾವುದೇ ಜೀವಹಾನಿಯಾಗಿಲ್ಲ. 67 ಅಂತಸ್ತುಗಳ ವಸತಿ ಸಂಕೀರ್ಣದಲ್ಲಿದ್ದ 4 ಸಾವಿರಕ್ಕೂ ಅಧಿಕ ಜನರನ್ನು ತಕ್ಷಣವೇ ಮುಂಜಾಗ್ರತಾ ಕ್ರಮವಾಗಿ ಸ್ಥಳಾಂತರಗೊಳಿಸಲಾಗಿದೆ.



ಮೊದಲಿಗೆ ಕಟ್ಟಡದ 35ನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬಳಿಕ ಬೆಂಕಿ ಇಡೀ ಕಟ್ಟಡಕ್ಕೆ ವ್ಯಾಪಿಸಿದೆ. ಕಟ್ಟಡ ಒಣಗಿದ ಮರದಂತೆ ಹೊತ್ತಿ ಉರಿಯುತ್ತಿರುವ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿದ್ದು, ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಸುದ್ದಿ ತಿಳಿಯುತ್ತಲೇ ಅಗ್ನಿಶಾಮಕ ದಳ ಸಿಬ್ಬಂದಿ ಧಾವಿಸಿ ಬಂದು ಬೆಂಕಿ ಆರಿಸಲು ಶುರುವಿಟ್ಟರು. ನಗರಾದ್ಯಂತ ಹೊಗೆ ಆವರಿಸಿದೆ. ರಕ್ಷಣಾ ತಂಡಗಳು ಜಾಗರೂಕತೆಯಿಂದ 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿವೆ. ಬೆಂಕಿ ಅವಘಡದಲ್ಲಿ ಯಾವುದೇ ಜೀವಹಾನಿಯಾಗಿಲ್ಲ ಎಂದು ವರದಿಯಾಗಿದೆ. ಈ ಮೊದಲು ದುಬೈನ ಟೈಗರ್ ಟವರ್ ಎಂಬ ಮರೀನಾ ಪಿನಾಕಲ್ ಕಟ್ಟಡದ 47 ನೇ ಮಹಡಿಯಲ್ಲಿ 2015ರ ಮೇ ತಿಂಗಳಲ್ಲಿ ಅಗ್ನಿ ಅವಘಡವಾಗಿತ್ತು. ಬೆಂಕಿ ತಗುಲಿ 48 ನೇ ಮಹಡಿಗೂ ವ್ಯಾಪಿಸಿತ್ತು. 67 ಅಂತಸ್ತಿನ ಸ್ಕೈ ಸ್ಕ್ರೇಪರ್ ಕಟ್ಟಡದಲ್ಲಿ ಸುಮಾರು 764 ಅಪಾರ್ಟ್ಮೆಂಟ್‌ಗಳಿದ್ದು, 3,820 ನಿವಾಸಿಗಳಿದ್ದರು. ಉಳಿದಂತೆ ನಿರ್ವಹಣಾ ಕೆಲಸಗಾರರು, ಭದ್ರತಾ ಸಿಬ್ಬಂದಿಗಳಿದ್ದರು.

ಕೇರಳದಲ್ಲಿಳಿದ ಬ್ರಿಟನ್ ನೌಕಾಪಡೆಯ ವಿಮಾನ!

ತಿರುವನಂತಪುರಂ: ಬ್ರಿಟನ್ ನೌಕಾಪಡೆಯ ಎಫ್-35 ಯುದ್ಧ ವಿಮಾನ ಕೇರಳದ ರಾಜಧಾನಿ ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ತುರ್ತು ಭೂಸ್ಪರ್ಶ ಮಾಡಿದ್ದರಿಂದ ಆತಂಕ ಸೃಷ್ಟಿಯಾಗಿತ್ತು. ಬ್ರಿಟನ್ ರಾಯಲ್ ನೇವಿಯ 5ನೇ ತಲೆಮಾರಿನ ಸ್ಟೆಲ್ತ್ ಫೈಟರ್ ಎಫ್-35 ಯುದ್ಧ ವಿಮಾನದಲ್ಲಿನ ಇಂಧನ ಖಾಲಿಯಾಗಿದ್ದರಿಂದ ತಿರುವನಂತಪುರದಲ್ಲಿ ತುರ್ತು ಭೂಸ್ಪರ್ಶ ಮಾಡುವುದು ಅನಿವಾರ್ಯವಾಯಿತು ಎಂದು ತಿಳಿದುಬಂದಿದೆ. ಇತ್ತೀಚೆಗೆ ಭಾರತದ ನೌಕಾಪಡೆ ಜತೆ ಬ್ರಿಟನ್ ನೌಕಾಪಡೆ ಜಂಟಿ ಸಮರಾಭ್ಯಾಸ ನಡೆಸಿದೆ. ಹಾಗಾಗಿ ಪ್ರಸ್ತುತ ಇಂಡೋ- ಪೆಸಿಫಿಕ್ ಪ್ರದೇಶದಲ್ಲಿಯೇ ಈ ಯುದ್ಧ ವಿಮಾನ ಕಾರ್ಯ ನಿರ್ವಹಿಸುತ್ತಿದೆ. ಯುದ್ಧ ವಿಮಾನದ ತುರ್ತು ಭೂಸ್ಪರ್ಶ ಕಾರಣ ವಿಮಾನ ನಿಲ್ದಾಣ ಪ್ರದೇಶದಲ್ಲಿ ಅಧಿಕಾರಿಗಳು ತುರ್ತು ಪರಿಸ್ಥಿತಿ ಘೋಷಿಸಿದ್ದರು ಎಂದು ವರದಿಯಾಗಿದೆ. ಕೇಂದ್ರ ಸರಕಾರ ದಿಂದ ಅನುಮೋದನೆ ಪಡೆದ ನಂತರವಷ್ಟೇ ಬ್ರಿಟನ್ ಯುದ್ಧ ವಿಮಾನಕ್ಕೆ ಇಂಧನ ತುಂಬಿಸಲಾಗುವುದೆಂದು ತಿರುವನಂತಪುರ ವಿಮಾನ ನಿಲ್ದಾಣ ಅಧಿಕಾರಿಗಳು ತಿಳಿಸಿದ್ದಾರೆ.

ಕೆನಡಾ ಸೇರಿ 3 ದೇಶಕ್ಕೆ ಪ್ರಧಾನಿ ಮೋದಿ ಭೇಟಿ

ದೆಹಲಿ: ಕೆನಡಾ ಸೇರಿದಂತೆ ಮೂರು ದೇಶಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರ ವಿದೇಶ ಪ್ರವಾಸ ಭಾನುವಾರ ಆರಂಭವಾಗಿದೆ. ರಿಪಬ್ಲಿಕ್ ಆಫ್ ಸೈಪ್ರಸ್, ಕೆನಡಾ ಮತ್ತು ಕ್ರೊಯೇಷಿಯಾ ದೇಶಗಳಿಗೆ ಭೇಟಿ ನೀಡುವುದಕ್ಕಾಗಿ ಪ್ರಧಾನಿ ಭಾನುವಾರ ಬೆಳಗ್ಗೆ ವಿಶೇಷ ವಿಮಾನದಲ್ಲಿ ತೆರಳಿದರು. ಭಾರತ ಮತ್ತು ರಿಪಬ್ಲಿಕ್ ಆಫ್ ಸೈಪ್ರಸ್‌ನದು ಹಳೆಯ ಸ್ನೇಹ. ಜೂ.15-16ರಂದು ಸೈಪ್ರಸ್‌ಗೆ ಭೇಟಿ. ಸೈಪ್ರಸ್ ದೇಶದ ಅಧ್ಯಕ್ಷ ನಿಕೋಸ್ ಕ್ರಿಸ್ಟೊಡೌಲಿಡೆಸ್ ಅವರೊಂದಿಗೆ ವ್ಯಾಪಾರ, ಹೂಡಿಕೆ, ಭದ್ರತೆ, ತಂತ್ರಜ್ಞಾನ ಕ್ಷೇತ್ರಗಳ ವಿಚಾರವಾಗಿ ಪ್ರಧಾನಿ ಮೋದಿ ಮಾತುಕತೆ ನಡೆಸಲಿದ್ದಾರೆ. ಬಳಿಕ ಜೂ.16-17ರಂದು ಕೆನಡಾ ಭೇಟಿ. ಜಿ-7 ಶೃಂಗಸಭೆ ನಡೆಯಲಿರುವ ಕೆನಡಾದ ಕನಾನ್‌ಸ್ಕಿ ನಗರಕ್ಕೆ ತೆರಳುತ್ತಾರೆ. ಅಲ್ಲಿ ವಿಶ್ವದ ಪ್ರಮುಖ 7 ರಾಷ್ಟ್ರಗಳ ನಾಯಕರ ಜತೆ ಪ್ರತ್ಯೇಕವಾಗಿ ದ್ವಿಪಕ್ಷೀಯ ಸಭೆಗಳನ್ನು ನಡೆಸುವರು. ಮುಖ್ಯವಾಗಿ ಕೆನಡಾ ನೂತನ ಪ್ರಧಾನಿ ಮಾರ್ಕ್ ಕೆರ್ನಿ ಜತೆ ಮಾತುಕತೆ ನಡೆಸಿ ಎರಡೂ ದೇಶಗಳ ನಡುವಿನ ತಪ್ಪು ಕಲ್ಪನೆ, ವೈಮನಸ್ಯ ಕೊನೆಗಾಣಿಸುವ ಸಾಧ್ಯತೆಯಿದೆ ಎಂದು ನಿರೀಕ್ಷಿಸಲಾಗಿದೆ. ಬಳಿಕ ಜೂ.18ರಂದು ಕ್ರೊವೇಷಿಯಾ ಪ್ರವಾಸಕ್ಕೆ ದಿನ ನಿಗದಿಯಾಗಿದೆ. ಇದು ಭಾರತದ ಪ್ರಧಾನಿಯೊಬ್ಬರು ಕ್ರೊವೇಷಿಯಾ ದೇಶಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ.

ಇರಾನ್ ಮೇಲೆ ಇಸ್ರೇಲ್ ದಾಳಿ ನನಗೆ ಸಂಬಂಧವಿಲ್ಲ

ವಾಷಿಂಗ್ಟನ್: ಇರಾನ್‌ನ ಪರಮಾಣು ಘಟಕಗಳು ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನಾಪಡೆ ನಡೆಸಿದ ವೈಮಾನಿಕ ದಾಳಿಗೂ ಅಮೆರಿಕಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇರಾನ್-ಇಸ್ರೇಲ್ ನಡುವಿನ ಸಂಘರ್ಷ ತಾರಕಕ್ಕೇರಿದೆ. ಇಸ್ರೇಲ್ ದಾಳಿ ಮಾಡುವುದಕ್ಕೆ ಅಮೆರಿಕದ ಕುಮ್ಮಕ್ಕು ಇದೆ. ಬ್ರಿಟನ್ ಮತ್ತು ಫ್ರಾನ್ಸ್ ಕೂಡಾ ನೆರವಾಗುತ್ತಿವೆ ಎಂದು ಇರಾನ್ ಸಿಟ್ಟಾಗಿದೆ. ಅಲ್ಲದೇ, ದೇಶಕ್ಕೆ ಸಮೀಪದಲ್ಲಿರುವ ಮೂರೂ ದೇಶಗಳ ವಾಯುನೆಲೆ, ನೌಕಾಪಡೆಗಳ ಮೇಲೆ ದಾಳಿ ಮಾಡುವುದಕ್ಕೂ ಹಿಂಜರಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದೆ. ಈ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಒಂದೊಮ್ಮೆ ಇರಾನ್ ಸೇನಾಪಡೆ ಅಮೆರಿಕ ಮೇಲೆ ದಾಳಿ ಮಾಡಿದರೆ ಹಿಂದೆಂದೂ ನೋಡಿರದ ರೀತಿಯಲ್ಲಿ ತಿರುಗೇಟು ನೀಡಬೇಕಾಗುತ್ತದೆ ಎಂದೂ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, 'ಇರಾನ್ ಪರಮಾಣು ಯೋಜನೆಗಳನ್ನು ಸ್ಥಗಿತಗೊಳಿಸುವ ಸಂಬಂಧ ಶೀಘ್ರ ಒಪ್ಪಂದಕ್ಕೆ ಬರಬೇಕು.ಇರಾನ್-ಇಸ್ರೇಲ್ ಒಪ್ಪಂದ ಮಾಡಿಕೊಂಡು ರಕ್ತಸಿಕ್ತ ಸಂಘರ್ಷಕ್ಕೆ ಕೊನೆ ಹಾಡಬಹುದು' ಎಂದೂ ಟ್ರಂಪ್ ತಮ್ಮದೇ ಒಡೆತನದ 'ಟ್ರುಥ್ ಸೋಶಿಯಲ್'ನಲ್ಲಿ ಸಲಹೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಏರ್ ಇಂಡಿಯಾ: ತಪ್ಪಿದ ಅನಾಹುತ

ಲಖನೌ: ಉತ್ತರ ಪ್ರದೇಶದ ಗಾಜಿಯಾಬಾದ್‌ನ ಹಿಂಡನ್ ವಿಮಾನ ನಿಲ್ದಾಣದಿಂದ ಕೋಲ್ಕತ್ತಾಗೆ ಹೊರಟಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಟೇಕಾಫ್‌ಗೆ ಸ್ವಲ್ಪ ಸಮಯ ಬಾಕಿ ಇರುವಾಗ ತಾಂತ್ರಿಕ ದೋಷ ಕಾಣಿಸಿದ್ದು, ಅನಾಹುತವೊಂದು ತಪ್ಪಿದಂತಾಗಿದೆ. ಏರ್ ಇಂಡಿಯಾ ಐಎಕ್ಸ್-1511 ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ರನ್‌ವೇಯಲ್ಲಿದ್ದಾಗ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ, ವಿಮಾನ ಹಾರಾಟ ಒಂದು ಗಂಟೆ ಕಾಲ ವಿಳಂಬವಾಯಿತು. 'ವಿಮಾನದಲ್ಲಿನ ತಾಂತ್ರಿಕ ದೋಷದಿಂದಾಗಿ ಹಾರಾಟ ವಿಳಂಬವಾಗಿದೆ. ಪ್ರಯಾಣಿಕರಿಗೆ ಉಚಿತ ಟಿಕೆಟ್ ಮರುಹೊಂದಿಕೆ ಅಥವಾ ರದ್ದತಿಯನ್ನು ಪೂರ್ಣ ಮರುಪಾವತಿ ಯೊಂದಿಗೆ ಮಾಡಿಕೊಡಲಾಗಿದೆ. ಪ್ರಯಾಣಿಕರಿಗೆ ಉಂಟಾದ ಅನಾನುಕೂಲತೆಗೆ ನಾವು ವಿಷಾದಿಸುತ್ತೇವೆ' ಎಂದು ಏರ್ ಇಡಿಯಾ ವಕ್ತಾರರು ತಿಳಿಸಿದ್ದಾರೆ. ವಿಮಾನವು ರನ್‌ವೇಗೆ ಬಂದು ನಿರ್ಗಮನಕ್ಕೆ ಸಿದ್ಧತೆ ನಡೆಸುತ್ತಿದ್ದಾಗ ಸಿಬ್ಬಂದಿಗೆ ಕೊನೆಯ ಕ್ಷಣದಲ್ಲಿ ತೊಂದರೆ ಕಂಡುಬಂದಿದೆ. ಹಾಗಾಗಿ ಕೂಡಲೇ ಇಂಜಿನಿಯರ್ ಗಳನ್ನು ಕರೆಸಿ ಪರಿಶೀಲಿಸಲಾಯಿತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

2026ರ ವೇಳೆಗೆ ಭಾರತ ನಕ್ಸಲ್ ಮುಕ್ತ: ಶಾ

ಲಖನೌ: ಭಾರತವು 2026ರ ಮಾರ್ಚ್ 31ರ ವೇಳೆಗೆ ಸಂಪೂರ್ಣ ನಕ್ಸಲ್ ಮುಕ್ತವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪುನರುಚ್ಚರಿಸಿದರು. ಹೊಸದಾಗಿ ನೇಮಕಗೊಂಡ ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್ ಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ 11 ವರ್ಷಗಳ ಆಡಳಿತದಲ್ಲಿ ದೇಶದ ಭದ್ರತೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಬಿಗಿ ಕ್ರಮಗಳಿಂದ 11 ರಾಜ್ಯಗಳಲ್ಲಿ ಹರಡಿಕೊಂಡಿದ್ದ ನಕ್ಸಲ್ ಚಟುವಟಿಕೆಯು ಈಗ ಕೇವಲ ಮೂರು ಜಿಲ್ಲೆಗಳಿಗೆ ಸೀಮಿತಗೊಂಡಿದೆ. ಇನ್ನೊಂದು ವರ್ಷದಲ್ಲಿ ದೇಶವು ಸಂಪೂರ್ಣ ನಕ್ಸಲ್ ಮುಕ್ತವಾಗಲಿದೆ ಎಂದರು.

ಏರ್ ಇಂಡಿಯಾ ನಿರ್ವಹಣೆ ತಾನು ಮಾಡಿಲ್ಲ | ವಿಮಾನ ನಿರ್ವಹಣೆಯ ಲೋಪಕ್ಕೆ ಟರ್ಕಿ ಸಂಸ್ಥೆ ಕಾರಣ ಎಂಬ ಹೇಳಿಕೆಗೆ ಪ್ರತಿಕ್ರಿಯೆ

ತನ್ನ ಲೋಪ ಅಲ್ಲಗಳೆದ ಟರ್ಕಿ

ದೆಹಲಿ: ಕಳೆದ ಗುರುವಾರ ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾದ ಏರ್ ಇಂಡಿಯಾ ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನದ ನಿರ್ವಹಣೆಯಲ್ಲಿ ತನ್ನ ಸಂಸ್ಥೆ ಭಾಗಿಯಾಗಿದೆ ಎಂದು ಯೋಗಗುರು ಬಾಬಾ ರಾಮ್‌ದೇವ್ ಸೇರಿದಂತೆ ಕೆಲವರ ಆರೋಪವನ್ನು ಟರ್ಕಿ ನಿರಾಕರಿಸಿದೆ. ಟರ್ಕಿಯ ಸಂವಹನ ನಿರ್ದೇಶನಾಲಯ ಕೇಂದ್ರದ ತಪ್ಪು ಮಾಹಿತಿ ನಿಗ್ರಹ ಇಲಾಖೆ, ಬೋಯಿಂಗ್ 787-8 ಪ್ರಯಾಣಿಕ ವಿಮಾನದ ನಿರ್ವಹಣೆಯನ್ನು ಟರ್ಕಿಶ್ ಟೆಕ್ನಿಕ್ ನಿರ್ವಹಿಸಿದೆ ಎಂಬ ಹೇಳಿಕೆಯು ಸುಳ್ಳು ಎಂದು ಹೇಳಿದೆ.

ಅಪಘಾತಕ್ಕೊಳಗಾದ ವಿಮಾನವನ್ನು ಟರ್ಕಿಶ್ ಟೆಕ್ನಿಕ್ ನಿರ್ವಹಿಸಿದೆ ಎಂಬ ಹೇಳಿಕೆಯು ಟರ್ಕಿ-ಭಾರತ ಸಂಬಂಧಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ದಾರಿ ತಪ್ಪಿಸುವ ಗುರಿಯನ್ನು ಹೊಂದಿರುವ ತಪ್ಪು ಮಾಹಿತಿಯಾಗಿದೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ವಿಮಾನ ದುರಂತ ನಡೆದ ದಿನದ ಮೂರನೇ ದಿನ ಟರ್ಕಿ ಸಂಸ್ಥೆಯಿಂದ ಈ ಹೇಳಿಕೆ ಬಂದಿದೆ.

2024 ಮತ್ತು 2025ರಲ್ಲಿ ಏರ್ ಇಂಡಿಯಾ ಮತ್ತು ಟರ್ಕಿಶ್ ಟೆಕ್ನಿಕ್ ನಡುವೆ ಮಾಡಿಕೊಳ್ಳಲಾದ ಒಪ್ಪಂದಗಳ ಅಡಿಯಲ್ಲಿ, ಬಿ777 ಮಾದರಿಯ ವೈಡ್-ಬಾಡಿ ವಿಮಾನಗಳಿಗೆ ಮಾತ್ರ ನಿರ್ವಹಣಾ ಸೇವೆಗಳನ್ನು ಒದಗಿಸಲಾಗುತ್ತದೆ. ಅಪಘಾತದಲ್ಲಿ ಸಿಲುಕಿರುವ ಬೋಯಿಂಗ್ 787-8 ಡ್ರೀಮ್‌ಲೈನರ್ ಈ ಒಪ್ಪಂದದ ವ್ಯಾಪ್ತಿಗೆ ಬರುವುದಿಲ್ಲ. ಇಲ್ಲಿಯವರೆಗೆ ಟರ್ಕಿಶ್ ಟೆಕ್ನಿಕ್ ಈ ರೀತಿಯ ಯಾವುದೇ ಏರ್ ಇಂಡಿಯಾ ವಿಮಾನಗಳ ನಿರ್ವಹಣೆಯನ್ನು ನಡೆಸಿಲ್ಲ ಎಂದು ಸಂಸ್ಥೆ ಹೇಳಿದೆ.

ಅಪಘಾತಕ್ಕೀಡಾದ ವಿಮಾನದ ಇತ್ತೀಚಿನ ನಿರ್ವಹಣೆಯನ್ನು ನಿರ್ವಹಿಸಿದ ಕಂಪನಿಯ ಬಗ್ಗೆ ತನಗೆ ಅರಿವಿದೆ ಎಂದು ಅದು ಹೇಳಿಕೊಂಡಿದೆ, ಆದರೆ ಹೆಚ್ಚಿನ ಊಹಾಪೋಹಗಳನ್ನು ತಪ್ಪಿಸಲು ಈ ವಿಷಯದ ಬಗ್ಗೆ ಹೇಳಿಕೆ ನೀಡುವುದು ತನ್ನ ವ್ಯಾಪ್ತಿಯನ್ನು ಮೀರಿದೆ ಎಂದೂ ಹೇಳಿದೆ. ತಪ್ಪು ಮಾಹಿತಿ ನಿಗ್ರಹ ಕೇಂದ್ರ, ಅಂತರ ರಾಷ್ಟ್ರೀಯ ವೇದಿಕೆಯಲ್ಲಿ ಟರ್ಕಿಯನ್ನು ಪ್ರತಿನಿಧಿಸುವ ನಮ್ಮ ಪ್ರಮುಖ ಬ್ರ್ಯಾಂಡ್‌ಗಳ ಖ್ಯಾತಿಯನ್ನು ಗುರಿಯಾಗಿಸುವ ಪ್ರಯತ್ನಗಳ ವಿರುದ್ಧ ಮೇಲ್ವಿಚಾರಣೆ ಮಾಡುವುದನ್ನು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುತ್ತದೆ. ಟರ್ಕಿಯ ಪರವಾಗಿ ಈ ದುರಂತ ವಿಮಾನ ಅಪಘಾತದ ಬಗ್ಗೆ ಭಾರತೀಯ ಜನರ ದುಃಖವನ್ನು ನಾವು ಪ್ರಾಮಾಣಿಕವಾಗಿ ಹಂಚಿಕೊಳ್ಳುತ್ತೇವೆ ಎಂದು ಹೇಳಿದೆ.

ಕ್ರಮ ಕೈಗೊಂಡಿದ್ದ ಕೇಂದ್ರ ಸರಕಾರ

ಮೇ 15ರಂದು ನಾಗರಿಕ ವಿಮಾನಯಾನ ಸಚಿವಾಲಯವು ಸೆಲೆಬಿ ಗ್ರೌಂಡ್ ಹ್ಯಾಂಡ್ಲಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಭದ್ರತಾ ಅನುಮತಿಯನ್ನು ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿತ್ತು. ಮೇ 8ರಂದು ಭಾರತದ ಮೇಲೆ ಪಾಕಿಸ್ತಾನ ಹಾರಿಸಿದ ಡ್ರೋನ್‌ಗಳಲ್ಲಿ ಹೆಚ್ಚಿನವು ಟರ್ಕಿ ನಿರ್ಮಿತ ಆಸಿಸ್‌ಗಾರ್ಡ್ ಸೋಂಗಾರ್ ಮತ್ತು ಮಾನವರಹಿತ ಯುದ್ಧ ವೈಮಾನಿಕ ವಾಹನವಾದ ಬೇರಕ್ತಾರ್ ಟಿಬಿ-2ನ್ನು ಒಳಗೊಂಡಿವೆ ಎಂದು ಕಂಡುಬಂದ ನಂತರ ಕೇಂದ್ರ ಸರಕಾರ ಈ ಕ್ರಮ ಕೈಗೊಂಡಿತ್ತು.

ಭಾರತದಲ್ಲಿ ಅಕ್ರಮ ವಾಸ | 8 ಮಂದಿಯ ವಿರುದ್ಧ ಥಾಣೆ ನ್ಯಾಯಾಲಯ ತೀರ್ಪು

ಮ್ಯಾನ್ಮಾರ್ ಪ್ರಜೆಗಳಿಗೆ ಎರಡು ವರ್ಷ ಜೈಲು

ಥಾಣೆ: ಭಾರತದಲ್ಲಿ ಅಕ್ರಮವಾಗಿ ತಂಗಿದ್ದಕ್ಕಾಗಿ ಥಾಣೆ ನ್ಯಾಯಾಲಯವು ಎಂಟು ಮ್ಯಾನ್ಮಾರ್ ಪ್ರಜೆಗಳಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ, ಅಲ್ಲದೇ ಶಿಕ್ಷೆಯ ಅವಧಿ ಮುಗಿದ ನಂತರ ಅವರನ್ನು ಗಡೀಪಾರು ಮಾಡುವಂತೆ ಆದೇಶಿಸಿದೆ.

ಆರೋಪಿಗಳು ವಿದೇಶಿಯರಲ್ಲ ಎಂದು ಸಾಬೀತುಪಡಿಸಲು ಸಾಕ್ಷಿಗಳ ಕೊರತೆಯಿದೆ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಜಿ.ಟಿ ಪವಾರ್ ಅವರು ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದರು.

ಸಂಯುಕ್ತ ರಾಷ್ಟ್ರಗಳ ನಿರಾಶ್ರಿತರ ಹೈ ಕಮಿಷನರ್ ಕಚೇರಿ ನೀಡಿದ ನಿರಾಶ್ರಿತರ ಗುರುತಿನ ದಾಖಲೆಗಳು ಭಾರತದಲ್ಲಿ ಉಳಿಯಲು ಯಾವುದೇ ಕಾನೂನು ಮಾನ್ಯತೆಯನ್ನು ಹೊಂದಿಲ್ಲ, ಭಾರತ ದೇಶವು 1951ರ ಯುಎನ್ ನಿರಾಶ್ರಿತರ ಸಮಾವೇಶಕ್ಕೆ ಸಹಿ ಹಾಕಿಲ್ಲ ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ ಎಂದು ತೀರ್ಪಿನ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ. ವಿದೇಶಿಯರ ಕಾಯ್ದೆ 1946ರ ನಿಬಂಧನೆಗಳ ಅಡಿಯಲ್ಲಿ ಎಂಟು ವ್ಯಕ್ತಿಗಳನ್ನು ತಪ್ಪಿತಸ್ಥರೆಂದು ಘೋಷಿಸಲಾಯಿತು ಮತ್ತು ಪ್ರತಿಯೊಬ್ಬರಿಗೂ 10,000 ರು. ದಂಡ ವಿಧಿಸಲಾಯಿತು. ಒಂಬತ್ತನೇ ಆರೋಪಿ ಭಾರತದ ರಿಯಾಜ್ ಅಹ್ಮದ್ ಅಕ್ಬರ್ ಅಲಿ ಶೇಖ್ ವಿರುದ್ಧದ ಸಾಕ್ಷ್ಯಾಧಾರಗಳ ಕೊರತೆ ಇದ್ದ ಕಾರಣ ಪ್ರಕರಣ ಖುಲಾಸೆಗೊಳಿಸಲಾಯಿತು.

ತಲ್ಲಿಕಿ ವಂದನಂ 12 ಮಕ್ಕಳ ಮುಸ್ಲಿಂ ಕುಟುಂಬಕ್ಕೆ ₹1.56 ಲಕ್ಷ

ಅಮರಾವತಿ: ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ಆಂಧ್ರಪ್ರದೇಶ ಸರಕಾರದ 'ಸೂಪರ್ ಸಿಕ್ಸ್' ಭರವಸೆಗಳಲ್ಲೊಂದಾದ 'ತಲ್ಲಿಕಿ ವಂದನಂ'(ತಾಯಿಗೆ ವಂದನೆ) ಯೋಜನೆಯನ್ನು 1 ವರ್ಷ ತಡವಾಗಿ ಜಾರಿಗೊಳಿಸಿದೆ. ಹೆಚ್ಚು ಮಕ್ಕಳಿಗೆ ಜನ್ಮನೀಡಿದ ತಾಯಂದಿರಿಗೆ ಸರಕಾರದಿಂದ ನಗದು ಪುರಸ್ಕಾರ ನೀಡಿ ಸನ್ಮಾನಿಸುವುದೇ ಯೋಜನೆಯ ಉದ್ದೇಶವಾಗಿದೆ.

ಹೆಚ್ಚು ಮಕ್ಕಳನ್ನು ಹೊಂದುವಂತೆ ಕರೆ ನೀಡಿದ್ದ ಸಿಎಂ ಚಂದ್ರಬಾಬು ನಾಯ್ಡು, ಆ ಗುರಿಯ ಸಾಧನೆಗಾಗಿಯೆ ಈ ಯೋಜನೆ ಜಾರಿಗೊಳಿಸಿದ್ದಾರೆ. ಇದೀಗ ರಾಜ್ಯ ಸರಕಾರದ 'ತಲ್ಲಿಕಿ ವಂದನಂ' ಯೋಜನೆಯ ಮೊದಲ ಫಲಾನುಭವಿಯಾಗಿ ಒಟ್ಟು 12 ಮಕ್ಕಳಿಗೆ ಜನ್ಮನೀಡಿರುವ ಮೂವರು ತಾಯಂದಿರು ಇರುವ ಮುಸ್ಲಿಂ ಕುಟುಂಬ ಆಯ್ಕೆಯಾಗಿದೆ. ರಾಜ್ಯ ಸರಕಾರದಿಂದ 1.56 ಲಕ್ಷ ರು. ನಗದು ಪುರಸ್ಕಾರವನ್ನೂ ಕುಟುಂಬ ಪಡೆದುಕೊಂಡಿದೆ.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಬ್ಯಾಟರಾಯನಪುರ ಮುಖಂಡರು

ಸಂಸದೆ ಶೋಭಾ ಕರಂದ್ಲಾಜೆ, ರಾಜ್ಯ ಬಿಜೆಪಿ ಕಾರ್ಯದರ್ಶಿ ತಮ್ಮೇಶಗೌಡ, ಬ್ಯಾಟರಾಯನಪುರ ಮಂಡಲ ಅಧ್ಯಕ್ಷ ಹನುಮಂತ ಗೌಡ ನೇತೃತ್ವದಲ್ಲಿ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿ ಪಕ್ಷಕ್ಕೆ ಸೇರಿದರು.

ಬೆಂಗಳೂರು: ಬಿಜೆಪಿಯ ತತ್ವಸಿದ್ಧಾಂತಗಳನ್ನು ಮೆಚ್ಚಿಕೊಂಡು ಬೆಂಗಳೂರಿನ ಬ್ಯಾಟರಾಯನಪುರ ಮತಕ್ಷೇತ್ರದ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. ಸಂಸದೆ ಶೋಭಾ ಕರಂದ್ಲಾಜೆ, ರಾಜ್ಯ ಬಿಜೆಪಿ ಕಾರ್ಯದರ್ಶಿ ತಮ್ಮೇಶಗೌಡ, ಬ್ಯಾಟರಾಯನಪುರ ಮಂಡಲ ಅಧ್ಯಕ್ಷ ಹನುಮಂತ ಗೌಡ ನೇತೃತ್ವದಲ್ಲಿ ಬಿಜೆಪಿ ಸೇರಿದ ಕಾಂಗ್ರೆಸ್ ಮುಖಂಡರು ಹರ್ಷ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಸಮರ್ಥವಾಗಿ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿಜೀ ಕಾರ್ಯವೈಖರಿ, ಕೇಂದ್ರ ಬಿಜೆಪಿ ಸರಕಾರದ ಜನಪರ ಕಾಳಜಿ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್‌ನಂತಹ ನೀತಿಗಳನ್ನು ನೆಚ್ಚಿಕೊಂಡು ಬ್ಯಾಟರಾಯನಪುರ ವಿಧಾನ ಸಭಾ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಕಾಂಗ್ರೆಸ್ ಸರಕಾರದ ಕುಟಿಲ ನೀತಿಗಳು, ಸ್ವಜನ ಪಕ್ಷಪಾತ, ಸ್ಥಳೀಯ ಕಾಂಗ್ರೆಸ್ ಶಾಸಕರ ದರ್ಪ, ಸರ್ವಾಧಿಕಾರಿ ಧೋರಣೆ, ಕಾಂಗ್ರೆಸ್ ಆಡಳಿತದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳಿಂದ ಬೇಸತ್ತು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬೆಟ್ಟಲಸೂರು ಗ್ರಾಮ ಪಂಚಾಯಿತಿ ಸದಸ್ಯರಾದ ತರಹುಣಸೆ ಗ್ರಾಮದ ರಾಜಣ್ಣನವರು ಹಾಗು ಸುಗ್ಗಟ್ಟು ಗ್ರಾಮದ ಕಾಂಗ್ರೆಸ್ ಮುಖಂಡರಾದ ವೀರಣ್ಣ, ಗಜೇಂದ್ರ, ಸುನೀಲಯಾದವ್ ಹಾಗೂ ಹಲವಾರು ಕಾರ್ಯಕರ್ತರು ಕಾಂಗ್ರೆಸ್ ಪಕ್ಷವನ್ನು ತೊರೆದು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳಾ ಮಹೇಶ, ಪ್ರತಾಪ, ನವೀನ, ಅನಿಲ, ಶ್ರೀಕಂಠ ಮೂರ್ತಿ ಸೇರಿ ಹಲವರಿದ್ದರು.

ಪ್ರಧಾನಿ ಮೋದಿಗೆ ಭದ್ರತೆ ಚಂದ್ರಶೇಖರ್ ಮುಖ್ಯಸ್ಥ

ದೆಹಲಿ: ಹಿರಿಯ ಐಪಿಎಸ್ ಅಧಿಕಾರಿ ಆರ್.ಎ. ಚಂದ್ರಶೇಖರ್ ಅವರನ್ನು ಕೇಂದ್ರ ಸಂಪುಟ ಸಚಿವಾಲಯದ ಕಾರ್ಯದರ್ಶಿ (ಭದ್ರತೆ) ಆಗಿ ನೇಮಕ ಮಾಡಲಾ ಗಿದೆ. ಸದ್ಯ ಅವರು ಗುಪ್ತಚರ ವಿಭಾ ಗದ ವಿಶೇಷ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿಬ್ಬಂದಿ ಸಚಿವಾಲಯ ಈ ಕುರಿತಾಗಿ ಆದೇಶ ಹೊರಡಿಸಿದ್ದು, ಕಾರ್ಯದರ್ಶಿ (ಭದ್ರತೆ) ಹುದ್ದೆ ಯಲ್ಲಿ ಹರಿನಾಥ್ ಮಿಶ್ರಾ ಕಾರ್ಯನಿರ್ವ ಹಿಸುತ್ತಿ ದ್ದು, ಅವರ ಅಧಿಕಾರಾವಧಿಯು ಮುಂದಿನ ತಿಂಗಳು ಕೊನೆಗೊಳ್ಳಲಿದೆ. ಚಂದ್ರಶೇಖರ್ ಅವರು ಕೇರಳ ಕೇಡರ್‌ನ 1991ನೇ ಬ್ಯಾಚ್‌ನವರಾಗಿದ್ದು, ಆಗಸ್ಟ್ 1ರಿಂದ ಅವರು ಅಧಿಕಾರ ವಹಿಸಿಕೊಳ್ಳಲಿ ದ್ದಾರೆ. ಕಾರ್ಯದರ್ಶಿಯು (ಭದ್ರತೆ) ಪ್ರಧಾನಿ ಮತ್ತು ಅವರ ಅಧಿಕೃತ ನಿವಾಸದಲ್ಲಿ ವಾಸ ಮಾಡು ವ ಅವರ ಕುಟುಂಬ ಸದಸ್ಯರಿಗೆ ಭದ್ರತೆ ನೀಡುವ ವಿಶೇಷ ಭದ್ರತಾ ಪಡೆಯ ಮುಖ್ಯಸ್ಥ ರಾಗಿರುತ್ತಾರೆ.

ಮತ್ತೊಂದು ಆದೇಶದಲ್ಲಿ, ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ವಿಶೇಷ ಮಹಾನಿರ್ದೇಶಕ ಸುನಿಲ್ ಕುಮಾರ್ ಝಾ ಅವರನ್ನು ಅಗ್ನಿಶಾಮಕ ದಳ, ಸಾರ್ವಜನಿಕ ರಕ್ಷಣೆ ಮತ್ತು ಗೃಹ ದಳದ ಮಹಾನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ವಿಟಾಕೀಸ್

ಕ್ವಾಟ್ಲೆ ಕಿಚನ್ ಕಾಮಿಡಿ ಕುಕ್ಕಿಂಗ್

ಕನ್ನಡದ ಕಿರುತೆರೆಯಲ್ಲಿ ಈಗಾಗಲೇ ಹಲವು ರಿಯಾಲಿಟಿ ಶೋಗಳು ಪ್ರಸಾರವಾಗುತ್ತಿವೆ. ಅವುಗಳ ಸಾಲಿಗೆ ಈಗ ಕ್ವಾಟ್ಲೆ ಕಿಚನ್ ಕೂಡ ಸೇರ್ಪಡೆಯಾಗಿದೆ. ಇದು ಕುಕ್ಕಿಂಗ್ ಶೋ ಹಾಗಂತ ಅಷ್ಟಕ್ಕೇ ಸೀಮಿತವಾಗಿಲ್ಲ, ಇಲ್ಲಿ ಕ್ವಾಟ್ಲೆ, ಕಾಮಿಡಿ ಎಲ್ಲವೂ ಬೆರೆತಿದೆ.

ಅಡುಗೆಯ ಜತೆ ನಗುವಿನ ಔತಣವನ್ನೂ ಉಣಬಡಿಸುವ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಜೋಡಿಗಳ ಜತೆಯಾಟವಿರುತ್ತದೆ. ಈ ಜೋಡಿಯಲ್ಲಿ ಒಬ್ಬರಿಗೆ ಅಡುಗೆ ಬರುತ್ತದೆ, ಇನ್ನೊಬ್ಬರಿಗೆ ಪಾಕಶಾಸ್ತ್ರದ ಗಂಧ ಗಾಳಿಯೂ ಇರುವುದಿಲ್ಲ. ಐವರು ನಳಪಾಕ ಪ್ರವೀಣರಿಗೆ ಸಹಾಯಕರಾಗಿ ಮತ್ತೈದು ನಗೆಪಾಕ ಪ್ರವೀಣರು ಇರತ್ತಾರೆ. ಚಕಚಕ ಅಡುಗೆ ಮಾಡಿ ಮುಗಿಸಲು ಹೊರಟ ಪಾಕ ಪ್ರವೀಣರಿಗೆ ಅಡ್ಡಗಾಲಾಗಿ ನಿಲ್ಲುವುದೇ ಈ ಕ್ವಾಟ್ಲೆ ಸಹಾಯಕರು. ಟಾರ್ಚರ್ ಕೊಡಲಿಕ್ಕಂದೇ ಬಂದಿರುವ ಕ್ವಾಟ್ಲೆಗಳು ಸ್ವತಃ ಜೋಕರ್‌ಗಳಾಗುವ ಪರಿಹಾಸ್ಯವನ್ನು ನೋಡಿಯೇ ಆನಂದಿಸಬೇಕು.

ಈ ಶೋ ನ ವಿಶೇಷತೆ ಏನೆಂದರೆ ಇಲ್ಲಿ ಕುಕ್‌ಗಳು ಎಲಿಮಿನೇಟ್ ಆಗುತ್ತಾರೆ. ಕ್ವಾಟ್ಲೆಗಳು ಮಾತ್ರ ಎಲಿಮಿನೇಟ್ ಆಗೋದಿಲ್ಲ. ಪ್ರತಿ ವಾರವೂ ಕುಕ್-ಕ್ವಾಟ್ಲೆಗಳ ಜೋಡಿ ಬದಲಾಗುತ್ತಿರುತ್ತದೆ. ಒಳ್ಳೆ ಸಹಾಯಕ ಬರಲಿ ಎಂದು ಕಾಯುತ್ತಿರುವ ಕುಕ್‌ಗಳಿಗೆ, ಬೆಳ್ಳುಳ್ಳಿ ಈರುಳ್ಳಿಯ ನಡುವೆ ವ್ಯತ್ಯಾಸವೇ ಗೊತ್ತಿರದ ಕ್ವಾಟ್ಲೆ ಸಹಾಯಕರು ಸಿಕ್ಕು, ಉಂಟಾಗುವ ಪಜೀತಿ ನೋಡುಗರಿಗಂತೂ ಭರಪೂರ ಮನರಂಜನೆ ನೀಡಲಿದೆ.

ಬೆಳ್ಳುಳ್ಳಿ ಕಬಾಬ್ ಚಂದ್ರು, ಆರ್ ಕೆ ಚಂದನ್, ದಿಲೀಪ್ ಶೆಟ್ಟಿ, ರಾಘವೇಂದ್ರ, ಕೆಂಪಮ್ಮ, ಪ್ರೇರಣ ಕಂಬಮ್, ಕಾವ್ಯಾ ಗೌಡ, ಶಿಲ್ಪಾ ಕಾಮತ್, ಶರ್ಮಿತಾ ಗೌಡ, ಸೋನಿಯಾ ಪೊನ್ನಮ್ಮ ಕುಕ್ಕ್ ಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇವರಿಗೆ ಕ್ವಾಟ್ಲೆ ಕೊಡು ವುದಕ್ಕಂದೇ ಲ್ಯಾಗ್ ಮಂಜು, ಧನರಾಜ್ ಆಚಾರ್, ತುಕಾಲಿ ಸಂತೋಷ್, ನಿವೇದಿತಾ ಗೌಡ, ಪ್ರಶಾಂತ್, ಸೂರಜ್, ಗಿಲ್ಲಿ ನಟ, ಸೋನಿ ಮುಲೆವ, ವಾಣಿ ಗೌಡ, ದೀಶಾ ಉಮೇಶ್ ಇರುತ್ತಾರೆ.

ಅಡುಗೆಯ ಔತಣ ಮತ್ತು ನಗುವಿನ ರಸದೌತಣಗಳನ್ನು ಒಟ್ಟೊಟ್ಟಿಗೇ ಬಡಿಸುವ ಕ್ವಾಟ್ಲೆ ಕಿಚನ್, ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗಿಸುವ ಹಾಗೆ ನಗಿಸುವುದಂತೂ ಗ್ಯಾರಂಟಿ. ಈ ಶೋ ಕಲರ್ಸ್ ಕನ್ನಡದಲ್ಲಿ ವಾರಾಂತ್ಯದಲ್ಲಿ ಪ್ರಸಾರವಾಗಲಿದೆ.

ನಯನಾ ಲೇಡಿ ಗ್ಯಾಂಗ್‌ಸ್ಟರ್

ಕೆಜಿಎಫ್ ಬಳಿಕ ಯಶ್ ಅಭಿನಯದ ಬಹುನಿರೀಕ್ಷಿತ ಟಾಕ್ಸಿಕ್ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಮುಂಬೈನಲ್ಲಿ ಅದ್ದೂರಿ ಸೆಟ್ ಹಾಕಿ ಶೂಟಿಂಗ್ ನಡೆಸಲಾಗುತ್ತಿದೆ. ಟಾಕ್ಸಿಕ್ ಡ್ರಗ್ಸ್ ಮಾಫಿಯಾ ಕುರಿತ ಕಥೆಯನ್ನು ಒಳಗೊಂಡಿದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಈಗಾಗಲೇ ಈ ಸಿನಿಮಾದಲ್ಲಿ ಯಶ್ ಗೆಟಪ್ ಹೇಗಿರಲಿದೆ ಎಂಬುದು ರಿವೀಲ್ ಆಗಿದೆ. ಯಶ್ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಟಾಕ್ಸಿಕ್ ನಲ್ಲಿ ಗ್ಯಾಂಗ್ ಸ್ಟರ್ ಸ್ಟೋರಿ ಅಡಕವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ಯಶ್ ಇಲ್ಲಿಯೂ ಗ್ಯಾಂಗ್ ಸ್ಟರ್ ಆಗಿ ಅಬ್ಬರಿಸಲಿದ್ದಾರೆ ಎಂಬುದು ಖಚಿತವಾಗಿದೆ. ಟಾಕ್ಸಿಕ್ ನಲ್ಲಿ ಒಬ್ಬರಲ್ಲ ಇಬ್ಬರು ಗ್ಯಾಂಗ್ ಸ್ಟರ್ ಗಳಿದ್ದಾರೆ. ಅದರಲ್ಲಿ ಒಬ್ಬರು ಲೇಡಿ ಗ್ಯಾಂಗ್ ಸ್ಟರ್ ಪಾತ್ರ ಕೂಡ ಇದೆ ಎಂದು ಹೇಳಲಾಗುತ್ತಿದೆ.

ಈ ಪಾತ್ರದಲ್ಲಿ ನಯನಾ ತಾರಾ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಹೌದು ನಯನಾ ತಾರಾ ಈ ಚಿತ್ರದಲ್ಲಿ ಪವರ್ ಫುಲ್‌ರೋಲ್ ಗ್ಯಾಂಗರಮ್ ಸ್ಟರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಯಶ್ ವಿರುದ್ಧವೇ ನಿಲ್ಲುವ ಪಾತ್ರ ಇದಾಗಿದ್ದು, ಅವರ ಪಾತ್ರಕ್ಕೂ ಸಾಕಷ್ಟು ಒತ್ತು ನೀಡಲಾಗಿದೆ. ಅವರ ಭಾಗದ ಚಿತ್ರೀಕರಣ ನಡೆಯುತ್ತಿದೆ.

ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ, ಹುಮಾ ಖುರೇಷಿ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಮಲೆಯಾಳಂ ನಿರ್ದೇಶಕಿ ಗೀತು ಮೋಹನ್ ದಾಸ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಟಾಕ್ಸಿಕ್ ಕೆವಿಎನ್ ಪ್ರೊಡಕ್ಷನ್ಸ್ ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.



ಶೂಟಿಂಗ್ ಮುಗಿಸಿದ ದಿ ರೈಸ್ ಆಫ್ ಅಶೋಕ

ಸತೀಶ್ ನೀನಾಸಂ ನಟಿಸುತ್ತಿರುವ ದಿ ರೈಸ್ ಆಫ್ ಅಶೋಕ ಟೈಟಲ್ ಹಾಗೂ ಒಂದಷ್ಟು ಪೋಸ್ಟರ್ ಮೂಲಕವೇ ಕುತೂಹಲ ಮೂಡಿಸಿದೆ. ಚಿತ್ರದಿಂದ ಈಗ ಹೊಸ ಅಪ್ ಡೇಟ್ ಸಿಕ್ಕಿದೆ. ದಿ ರೈಸ್ ಆಫ್ ಅಶೋಕ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿವೆ. ಶ್ರೀರಂಗಪಟ್ಟಣ, ನಂಜನಗೂಡು, ಗುಂಡ್ಲುಪೇಟೆ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರತಂಡ ಬಹಳ ಅದ್ದೂರಿಯಾಗಿ ಶೂಟಿಂಗ್ ಮಾಡಿದೆ. ಸತೀಶ್ ನೀನಾಸಂ ದಿ ರೈಸ್ ಆಫ್ ಅಶೋಕ ಸಿನಿಮಾದಲ್ಲಿ ಕ್ರಾಂತಿಕಾರಿ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಕುರಿತ ಕಥೆ ಸಿನಿಮಾದಲ್ಲಿದ್ದು, ರೆಟ್ರೋ ಲುಕ್‌ನಲ್ಲಿ ಸಾಗಲಿದೆ.

ದಿ ರೈಸ್ ಆಫ್ ಅಶೋಕ ಚಿತ್ರದಲ್ಲಿ ಸತೀಶ್ ಗೆ ನಾಯಕಿಯಾಗಿ ಕಾಂತಾರ ಸಪ್ತಮಿ ಗೌಡ ನಟಿಸಿದ್ದಾರೆ. ಬಿ.ಸುರೇಶ್, ರವಿಶಂಕರ್, ಗೋಪಾಲಕೃಷ್ಣ ದೇಶಪಾಂಡೆ, ಸಂಪತ್ ಮೈತ್ರಿಯಾ ಹಾಗೂ ಯಶ್ ಶೆಟ್ಟಿ, ಡ್ರಾಗನ್ ಮಂಜು, ವಿಕ್ರಮ್ ವೇದ ಖ್ಯಾತಿಯ ಹರೀಶ್ ಪೆರಾಡಿ ತಾರಾಬಳಗದಲ್ಲಿದ್ದಾರೆ.

ನಿರ್ದೇಶಕ ವಿನೋದ್ ದೊಂಡಾಲೆ ನಿಧನದ ನಂತರ ಅಶೋಕ ಬ್ಲೇಡ್ ಸಿನಿಮಾ ನಿಂತೇ ಹೋಯಿತು ಎಂದು ಸುದ್ದಿ ಹರಡಿತ್ತು. ಆದರೆ ನಟ ಸತೀಶ್ ನೀನಾಸಂ ದಿ ರೈಸ್ ಆಫ್ ಅಶೋಕ ಹೆಸರಿನಲ್ಲಿ ಆ ಪ್ರಾಜೆಕ್ಟ್ ಅನ್ನು ಮತ್ತೆ ಕೈಗೆತ್ತಿಕೊಂಡು ಯಶಸ್ವಿಯಾಗಿ ಶೂಟಿಂಗ್ ಮುಗಿಸಿದ್ದಾರೆ. ಈಗಾಗಲೇ ರಿಲೀಸ್ ಆದ ಪೋಸ್ಟರ್ ನಲ್ಲಿ ಮಚ್ಚು ಹಿಡಿದು ತುಂಬ ರಗಡ್ ಲುಕ್ ನಲ್ಲಿ ನೀನಾಸಂ ಸತೀಶ್ ಕಾಣಿಸಿಕೊಂಡಿದ್ದಾರೆ. ಅವರ ಸಿನಿಕರಿಯರನ ಅತಿದೊಡ್ಡ ಬಜೆಟ್ ಚಿತ್ರವಾಗಿರುವ ದಿ ರೈಸ್ ಆಫ್ ಅಶೋಕ ಸತೀಶ್ ವೃತ್ತಿ ಬದುಕಿಗೆ ಹೊಸ ಆಯಾಮಾ ನೀಡಲಿದೆ ಎಂಬ ನಿರೀಕ್ಷೆಯೂ ಇದೆ.

ದಿ ರೈಸ್ ಆಫ್ ಆಫ್ ಅಶೋಕನಿಗೆ ದಯಾನಂದ್ ಕಥೆ ಬರೆದಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಲವಿತ್ ಕ್ಯಾಮೆರಾ ಛಾಯಾಗ್ರಹಣ, ಮನು ಶೇಡ್ಗಾರ್ ಸಂಕಲನ, ರವಿವರ್ಮಾ ಹಾಗೂ ವಿಕ್ರಮ್ ಮೋರ್ ಅವರು ಸಾಹಸ ನಿರ್ದೇಶನ , ಸಂತೋಷ್ ಶೇಖರ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಕಣ್ಣಪ್ಪನ ಪವರ್‌ಫುಲ್ ಟ್ರೇಲರ್

ಡಾ.ರಾಜ್ ಕುಮಾರ್ ಅಭಿನಯದ ಬೇಡರ ಕಣ್ಣಪ್ಪ ಚಿತ್ರದ ತೆರೆಗೆ ಬಂದಿತ್ತು. ಪೌರಾಣಿಕ ಕಥೆಯ ಜತೆಗೆ ಭಕ್ತಿ ಪ್ರಧಾನ ಕಥೆಯನ್ನು ಒಳಗೊಂಡಿದ್ದ ಈ ಸಿನಿಮಾ ಇಂದಿಗೂ ಎವರ್ ಗ್ರೀನ್ ಸಾಲಿಗೆ ಸೇರಿದೆ. ಕಣ್ಣಪ್ಪ ಚಿತ್ರದ ಕಥೆ ಇಂದಿಗೂ ಜನಜನಿತ. ಹಾಗಾಗಿಯೇ ಕಣ್ಣಪ್ಪನ ಕಥೆಯನ್ನು ಆಧರಿಸಿ ಟಾಲಿವುಡ್ ನಲ್ಲಿ ಹೈ ಬಜೆಟ್ ಸಿನಿಮಾ ತೆರೆಗೆ ಬರುತ್ತಿದೆ. ವಿಷ್ಣು ಮಂಚು ಅಭಿನಯ್ಮದ ಕಣ್ಣಪ್ಪ ಬಿಡುಗಡೆಗೂ ಸಿದ್ಧವಾಗಿದೆ. ಈಗ ಕಣ್ಣಪ್ಪನ ಟ್ರೇಲರ್ ರಿಲೀಸ್ ಆಗಿದ್ದು ಭರ್ಜರಿ ಕುತೂಹಲ ಮೂಡಿಸಿದೆ.

ಆಧುನಿಕ ತಂತ್ರಜ್ಞಾನದ ಮೂಲಕ ಕಣ್ಣಪ್ಪನನ್ನು ಅದ್ದೂರಿಯಾಗಿ ಕಟ್ಟಿಕೊಡಲಾಗಿದೆ. ಇಲ್ಲಿ ಭಕ್ತಿ ಪ್ರಧಾನ ಪಾತ್ರಕ್ಕಿಂತ ?ಕ್ಷನ್ ಗೆ ಒತ್ತು ನೀಡಲಾಗಿದೆ. ವಿಷ್ಣು ಮಂಚು ಸಾಹಸದ ಮೂಲಕ ಗಮನ ಸೆಳೆದಿದ್ದಾರೆ. ಕಣ್ಣಪ್ಪನ ತಾರಾಗಣವೂ ಹಿರಿದಾಗಿದೆ. ಬಾಲಿವುಡ್ ನಟ ಅಕ್ಷಯ್ ಕುಮಾರ್ ಶಿವನ ಪಾತ್ರದಲ್ಲಿ ನಟಿಸಿದ್ದು ಅವರ ಪಾತ್ರಕ್ಕೆ ಬಹಳ ಮಹತ್ವವಿದೆ. ಪ್ರಭಾಸ್ , ರುದ್ರನ ಪಾತ್ರದಲ್ಲಿ ಅಬ್ಬರಿಸಿದ್ದಾರೆ. ಮಲೆಯಾಳಂ ನಟ ಮೋಹನ್ ಲಾಲ್ ಬೇಡರ ದೊರೆಯಾಗಿ ಬಿಲ್ಲು ಹಿಡಿದು ಆರ್ಭಟಿಸಿದ್ದಾರೆ. ಕಾಜಲ್ ಅಗರ್ ವಾಲ್ ಪಾರ್ವತಿಯಾಗಿ ಬಣ್ಣಹಚ್ಚಿದ್ದಾರೆ.

ಹಿರಿಯ ನಟ ದೇವರಾಜ್ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಈಗ ಪರಭಾಷಾ ಸಿನಿಮಾಗಳಲ್ಲಿಯೂ ಬ್ಯುಸಿಯಾಗಿದ್ದಾರೆ. ಸಲಾರ್ ನಲ್ಲಿ ವಿಭಿನ್ನ ಪಾತ್ರದಲ್ಲಿ ಮಿಂಚಿದ್ದ ದೇವರಾಜ್, ಕಣ್ಣಪ್ಪ ಸಿನಿಮಾದಲ್ಲಿಯೂ ಪವರ್ ಫುಲ್ ರೋಲ್ ನಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರದ ಝಲಕ್ ಟ್ರೇಲರ್ ನಲ್ಲಿ ಗಮನಸೆಳೆಯುತ್ತದೆ. ಮುಖೇಶ್ ಕುಮಾರ್ ಸಿಂಗ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಕಣ್ಣಪ್ಪ, ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಮೋಹನ್ ಬಾಬು ಬಂಡವಾಳ ಹೂಡಿದ್ದಾರೆ. ಸ್ಟೀಫನ್ ದೇವಸ್ಸಿ ಸಂಗೀತ ಚಿತ್ರದ ಮೆರುಗು ಹೆಚ್ಚಿಸಿದೆ. ಇದೇ 27 ರಂದು ಕಣ್ಣಪ್ಪ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಹುಟ್ಟಿದ ಹತ್ತೂವರೆ ವರ್ಷದಲ್ಲೇ ಹಬ್ಬಿತು ಅಕ್ಷರ ರಸಬಳ್ಳಿ..

ಯಗಟಿ ರಘು ನಾಡಿಗ್, ರಮೇಶ್ ನಾಯಕ್ ಮತ್ತು ನಾಗರಾಜ ಮತ್ತಿಗಾರ್

'ವಿಶ್ವವಾಣಿ'- ಇದು ಅಕ್ಷರ ಪ್ರೇಮಿಗಳ ಎದೆಯಲ್ಲಿ ಪುಳಕವನ್ನು ಹುಟ್ಟುಹಾಕುವ ಹೆಸರು. ಅಷ್ಟೇ ಅಲ್ಲ, ವೈವಿಧ್ಯಮಯ ಬರಹಗಳಿಗಾಗಿ ತವಕಿಸುವವರ ಚಿತ್ತಪುಷ್ಪದ ಮೇಲೆ ಬಣ್ಣಬಣ್ಣದ ಚಿಟ್ಟೆಗಳನ್ನು ತೂರಿ ಬಿಡುವ ತೋಟದ ಮಾಲಿ. 'ವಿಶ್ವವಾಣಿ' ಶುರುವಾಗಿ ಹತ್ತೂವರೆ ವರ್ಷಗಳೇ ಸಂದಿವೆ. ಈ ಅವಧಿಯಲ್ಲಿ ತಾನು ಗುಣಾತ್ಮಕವಾಗಿ ಬೆಳೆದಿದ್ದರ ಜತೆಗೆ, ತನ್ನ ಬಳಗಕ್ಕೆ ಮತ್ತಷ್ಟು ಸೃಜನಶೀಲ ಮಗ್ಗುಲುಗಳನ್ನೂ ಸೇರಿಸಿಕೊಂಡಿದ್ದು ವಿಶ್ವವಾಣಿಯ ಹೆಗ್ಗಳಿಕೆ. ಈ ಕುರಿತಾದ ಒಂದು ಪಕ್ಷಿನೋಟ ಇಲ್ಲಿದೆ.

ಸೇರಿಕೊಂಡ ರೆಂಬೆ-ಕೊಂಬೆಗಳು

''ಹಾಲುಂಡ ತವರಿಗೆ ಏನೆಂದು ಹಾಡಲಿ, ಹೊಳೆ ದಂಡೆಲಿರುವಾ ಗರಕಿಯ ಕುಡಿ ಹಾಂಗ ಹಬ್ಬಲಿ ಅವರ ರಸಬಳ್ಳಿ'' ಎಂಬುದು ಹೆಣ್ಣೊಬ್ಬಳು ತನ್ನನ್ನು ಪೊರೆದ ತವರುಮನೆಯನ್ನು ಹರಸಿ ಹಾರೈಸುವ ಪರಿ. ನಾಡಿನ ಉದ್ದಗಲಕ್ಕೂ ವ್ಯಾಪಿಸಿರುವ ಲಕ್ಷಾಂತರ ಅಕ್ಷರ ಪ್ರೇಮಿಗಳು 'ವಿಶ್ವವಾಣಿ'ಯನ್ನು ಹೀಗೆಯೇ ಹರಸಿ-ಹಾರೈಸಿದ್ದರ ಫಲವಾಗಿ, ಹತ್ತೂವರೆ ವರ್ಷದಲ್ಲೇ ಅದರ ಅಕ್ಷರ ರಸಬಳ್ಳಿ ಹಬ್ಬಿದೆ. 'ವಿಶ್ವವಾಣಿ' ಎಂಬ ವೃಕ್ಷವೀಗ ಬೆಳೆದು ಹೆಮ್ಮರವಾಗಿದೆ. ಅದಕ್ಕೆ ಸೇರಿಕೊಂಡ ಒಂದಿಷ್ಟು ರೆಂಬೆ-ಕೊಂಬೆಗಳಿವು.

- ವಿಶ್ವವಾಣಿ ಟಿವಿ, ವಿಶ್ವವಾಣಿ ಟಿವಿ ಸ್ಪೆಷಲ್ ಮತ್ತು ವಿಶ್ವವಾಣಿ ಮನಿ (ವಿಷಯಾಧರಿತ ಯೂಟ್ಯೂಬ್ ಚಾನೆಲ್‌ಗಳು)
- ವಿಶ್ವವಾಣಿ ಪುಸ್ತಕ (ಪ್ರಕಾಶನ ಸಂಸ್ಥೆ)
- ವಿಶ್ವವಾಣಿ ಮಾಧ್ಯಮ ವಿದ್ಯಾಪೀಠ (ಪತ್ರಿಕೋದ್ಯಮ ಶಿಕ್ಷಣ ಸಂಸ್ಥೆ)
- ವಿಶ್ವವಾಣಿ ಕ್ಲಬ್‌ಹೌಸ್ (ಸಂಜೆವೇಳೆಯ ನಿತ್ಯ ಮಾತಿನ ಮಂಟಪ)
- ವಿಶ್ವವಾಣಿ ಗ್ಲೋಬಲ್ ಫೋರಂ (ಕನ್ನಡ ಸಾಧಕರ ಅಂತಾರಾಷ್ಟ್ರೀಯ ಸಮಾವೇಶ ವೇದಿಕೆ)
- ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್ (ಬಹು ಆಯಾಮದ ಸಾಂಸ್ಕೃತಿಕ ಸಂಘಟನೆ)
- ಲೋಕಧ್ವನಿ (ಪ್ರಾದೇಶಿಕ ದಿನಪತ್ರಿಕೆ)
- ಪ್ರವಾಸಿ ಪ್ರಪಂಚ (ಪ್ರವಾಸ-ಕೇಂದ್ರಿತ ನಿಯತಕಾಲಿಕೆ)

ಸ್ಥೂಲವಾಗಿ ಹೇಳುವುದಾದರೆ, 'ವಿಶ್ವವಾಣಿ' ಮತ್ತು ಅದರ ಬಳಗದ ಪ್ರಕಟಣೆಗಳು ಪ್ರಿಂಟ್, ವೆಬ್, ಡಿಜಿಟಲ್ ಮತ್ತು ಸೋಷಿಯಲ್ ಮೀಡಿಯಾ ವೇದಿಕೆಗಳಲ್ಲೂ ಬಲವಾದ ಅಸ್ತಿತ್ವವನ್ನು ಹೊಂದಿವೆ. ಇದಕ್ಕೆ ಉತ್ತೇಜನದ ನೀರೆರೆಯುತ್ತಿರುವುದು ಕನ್ನಡದ ಓದುಗರು, ಕೇಳುಗರು ಮತ್ತು ನೋಡುಗರು ಎಂಬುದು ಹೆಮ್ಮೆಯ ಸಂಗತಿ.

ಒಂದು ಪುಟ್ಟ ಫ್ಲ್ಯಾಷ್‌ಬ್ಯಾಕ್

'ವಿಶ್ವವಾಣಿ' ದಿನಪತ್ರಿಕೆಯನ್ನು ಧೀಮಂತ ಪತ್ರಕರ್ತ ಮತ್ತು ಅಗ್ರಗಣ್ಯ ಕನ್ನಡ ಹೋರಾಟಗಾರ, ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು 1958ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭಿಸಿ, ಐವತ್ತೇಳು ವರ್ಷಗಳ ಕಾಲ ಮುನ್ನಡೆಸಿದರು. ಆಗ ಅದು ಹುಬ್ಬಳ್ಳಿ-ಧಾರವಾಡಕ್ಕೆ ಮಾತ್ರ ಸೀಮಿತವಾಗಿತ್ತು. ಕಳೆದ ಹತ್ತೂವರೆ ವರ್ಷ ಗಳಿಂದ ಕನ್ನಡದ ಖ್ಯಾತ ಪತ್ರಕರ್ತ ವಿಶ್ವೇಶ್ವರ ಭಟ್ ಅವರು ಪ್ರಧಾನ ಸಂಪಾದಕರಾಗಿ 'ವಿಶ್ವವಾಣಿ'ಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈಗ 'ವಿಶ್ವವಾಣಿ' ಆರು ಆವೃತ್ತಿಗಳೊಂದಿಗೆ ರಾಜ್ಯಮಟ್ಟದ ಪತ್ರಿಕೆಯ ಹೆಗ್ಗಳಿಕೆಯನ್ನು ಪಡೆದುಕೊಂಡು ಕನ್ನಡದ ಓದುಗ ಸಮುದಾಯದಲ್ಲಿ ಜನಪ್ರಿಯತೆ ಗಳಿಸಿದೆ. ತಾಜಾಸುದ್ದಿ, ಹೊಸ ಪ್ರಯೋಗ, ಆಕರ್ಷಕ ವಿನ್ಯಾಸ, ವೈವಿಧ್ಯಮಯ ಅಂಕಣ, ವಿಶೇಷ ಪುರವಣಿಗಳಿಂದಾಗಿ 'ವಿಶ್ವವಾಣಿ' ಕನ್ನಡಿಗರ ಅಚ್ಚುಮೆಚ್ಚಿನ ದೈನಿಕವಾಗಿ ಹೆಸರುವಾಸಿಯಾಗಿದೆ. ವಿಶ್ವವಾಣಿ ಪತ್ರಿಕೆಯ ಜಾಲ ತಾಣ ಆವೃತ್ತಿಯೂ ದೇಶ-ವಿದೇಶಗಳಲ್ಲಿನ ಓದುಗರ ಪಾಲಿಗೆ ಮಾಹಿತಿ ಭಂಡಾರವೇ ಆಗಿಬಿಟ್ಟಿದೆ.
ಈ ಜಾಲತಾಣದ ಸಂಪರ್ಕಕೊಂಡಿಯಿದು:
https://vishwavani.news/



ಇಲ್ಲಿದೆ ಡಿಜಿಟಲ್ ಡಿಲೈಟ್

ದಿನಗಳೆದಂತೆ ಡಿಜಿಟಲ್ ಮಾಧ್ಯಮವು ತನ್ನದೇ ಆದ ಮಹತ್ವ ಹಾಗೂ ವ್ಯಾಪಕತೆಯನ್ನು ದಕ್ಕಿಸಿಕೊಳ್ಳುತ್ತಿರುವುದನ್ನು ಮನಗಂಡು 'ವಿಶ್ವವಾಣಿ' ಬಳಗದಿಂದ ಮೂರು ಯೂಟ್ಯೂಬ್ ಚಾನೆಲ್‌ಗಳನ್ನು ಹುಟ್ಟುಹಾಕಲಾಗಿದೆ. ಅವೆಂದರೆ, 'ವಿಶ್ವವಾಣಿ ಟಿವಿ', 'ವಿಶ್ವವಾಣಿ ಟಿವಿ ಸ್ಪೆಷಲ್' ಮತ್ತು 'ವಿಶ್ವವಾಣಿ ಮನಿ'.

- 'ವಿಶ್ವವಾಣಿ ಟಿವಿ'ಯು ಕನ್ನಡ ಪ್ರಾದೇಶಿಕ ಸುದ್ದಿ ಆಧಾರಿತ ಯೂಟ್ಯೂಬ್ ಚಾನೆಲ್. ಇದು ಸಂದರ್ಶನಗಳು ಮತ್ತು ವಿಷಯಾಧಾರಿತ ವಿಶೇಷ ದೃಶ್ಯಗಳನ್ನು ಒಳಗೊಂಡಿದ್ದು, ಗುಣಮಟ್ಟದ ಮಾಹಿತಿಗಳ ಭಂಡಾರವೇ ಆಗಿದೆ (https://www.youtube.com/@vishwavanitv).

- 'ವಿಶ್ವವಾಣಿ ಮನಿ' ಯೂಟ್ಯೂಬ್ ಚಾನೆಲ್, ಓದುಗರ ಮತ್ತು ಕೇಳುಗರ ಹಣಕಾಸಿನ ಆಪ್ತ ಸಲಹೆಗಾರನಂತೆ ಕಾರ್ಯನಿರ್ವಹಿಸುತ್ತಿದೆ. ಶಾಲಾ-ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ವೈಯಕ್ತಿಕ ಹಣಕಾಸು ಶಿಕ್ಷಣಕ್ಕೆ ಗಣನೀಯ ಮಹತ್ವ ನೀಡದಿರುವುದರಿಂದ, ಹಣಕಾಸು ಸಾಕ್ಷರತೆ ಪಡೆಯಲು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. 'ವಿಶ್ವವಾಣಿ ಮನಿ' ಯೂಟ್ಯೂಬ್ ಚಾನೆಲ್ ವೀಕ್ಷಕರಿಗೆ ಸುಲಭ ಮತ್ತು ಸರಳ ಆಯ್ಕೆಯಾಗಿದೆ. ಈ ಚಾನೆಲ್ ವೀಕ್ಷಕರ ವೈಯಕ್ತಿಕ ಹಣಕಾಸು ಸ್ಥಿತಿಗತಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಟಾನಿಕ್‌ನಂತೆ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಸಾಂಪ್ರದಾಯಿಕ ಹೂಡಿಕೆಗಳಾದ ಅಂಚೆ ಇಲಾಖೆಯ ನಾನಾ ಸಣ್ಣ ಉಳಿತಾಯ ಯೋಜನೆಗಳಿಂದ ಆರಂಭಿಸಿ, ಮ್ಯೂಚುವಲ್ ಫಂಡ್, ಷೇರು, ಇಟಿಎಫ್, ಬಾಂಡ್, ಕ್ರಿಪ್ಟೋ ಕರೆನ್ಸಿ, ರಿಯಲ್ ಎಸ್ಟೇಟ್, ಚಿನ್ನ-ಬೆಳ್ಳಿಯಲ್ಲಿನ ಹೂಡಿಕೆ, ಈಕ್ವಿಟಿ ಹೂಡಿಕೆಯ ಜತೆಗೆ ಸ್ಟಾಕ್ ಟ್ರೇಡಿಂಗ್, ವಿದೇಶಿ ಸ್ಟಾಕ್ ಮಾರುಕಟ್ಟೆಯಲ್ಲಿನ ಹೂಡಿಕೆ, ವಿಮೆ, ಆರೋಗ್ಯ ವಿಮೆ, ಟರ್ಮ್ ಇನ್ಶೂರೆನ್ಸ್, ಗೃಹಸಾಲ, ವಾಹನ ಸಾಲ, ವೈಯಕ್ತಿಕ ಸಾಲಗಳು, ಸಹಕಾರ ಸಂಘಗಳ ಪ್ರಯೋಜನ, ಮಾರುಕಟ್ಟೆಗಳ ಏರಿಳಿತಗಳ ಅಪಾಯ, ರಿಸ್ಕ್ ತೆಗೆದುಕೊಂಡು ಲಾಭ ಪಡೆಯುವ ಜಾಣ್ಮೆ- ಹೀಗೆ ಸಮಗ್ರ ಹಣಕಾಸು ಮಾರ್ಗದರ್ಶನವನ್ನು 'ವಿಶ್ವವಾಣಿ ಮನಿ' ಯೂಟ್ಯೂಬ್ ಚಾನೆಲ್ ನಿರಂತರವಾಗಿ ನೀಡುತ್ತಿದೆ. ನಾಡಿನ ಖ್ಯಾತ ಹೂಡಿಕೆದಾರರು, ಹಣಕಾಸು ಸಲಹೆಗಾರರು ಈ ಚಾನೆಲ್ ಮೂಲಕ ಅಮೂಲ್ಯ ವಿವರಗಳನ್ನು ನೀಡುತ್ತಿದ್ದು, ಇಂಥ ವಿವಿಧ ಮಾಹಿತಿಪೂರ್ಣ ಸಂಚಿಕೆಗಳು ಈಗಾಗಲೇ ನೋಡುಗರ ಮನಗೆದ್ದಿವೆ, ಅವರನ್ನು ಮಾಹಿತಿವಂತರನ್ನಾಗಿಸಿವೆ (https://www.youtube.com/@vishwavanimoney).

- 'ವಿಶ್ವವಾಣಿ ಟಿವಿ ಸ್ಪೆಷಲ್' ಎಂಬುದು ಮನರಂಜನೆ, ಹಣಕಾಸು, ಆರೋಗ್ಯ, ಆಹಾರ, ಜೀವನಶೈಲಿ, ಪ್ರಯಾಣ, ಮಕ್ಕಳ ಕಥೆಗಳು, ಧಾರ್ಮಿಕ, ಆಧ್ಯಾತ್ಮಿಕತೆ ಇತ್ಯಾದಿಗಳ ಕುರಿತು ವಿಶಿಷ್ಟ, ಅಪರೂಪದ, ಮಾಹಿತಿಯುಕ್ತ ಮತ್ತು ವಿಶೇಷ ಕಾರ್ಯಕ್ರಮಗಳನ್ನು ಹೊಂದಿರುವ ಗುಣಮಟ್ಟದ ದೃಶ್ಯಗಳ ಯೂಟ್ಯೂಬ್ ಚಾನೆಲ್ ಆಗಿದೆ (https://www.youtube.com/@vishwavanitvspecial).

ತಿರುಗೋಣು ಬಾರಾ..

ಕನ್ನಡ ಪತ್ರಿಕೋದ್ಯಮದಲ್ಲಿನ ಮೊದಲ ಮತ್ತು ಏಕೈಕ 'ಪ್ರವಾಸ-ಕೇಂದ್ರಿತ' ಪ್ರಕಟಣೆಯೇ 'ಪ್ರವಾಸಿ ಪ್ರಪಂಚ' ನಿಯತಕಾಲಿಕ. ವಾರಕ್ಕೊಮ್ಮೆ ಪ್ರಕಟ ವಾಗುವ 'ಪ್ರವಾಸಿ ಪ್ರಪಂಚ'ವು ದೇಶ-ವಿದೇಶಗಳ ವಿವಿಧ ಪ್ರವಾಸಿ ತಾಣಗಳ ಬಗೆಗಿನ ಅನುಪಮ ಮಾಹಿತಿ, ವೈವಿಧ್ಯಮಯ ಸುದ್ದಿ ಹಾಗೂ ಪ್ರಯಾಣ ನಿರೂಪಣೆಗಳಿಗೆ ಮೀಸಲು. ಪ್ರವಾಸಿ ತಾಣಗಳ ಆಕರ್ಷಕ ಒಳನೋಟಗಳು, ಪ್ರವಾಸಿಗರ ಅನುಭವಗಳು, ಪ್ರವಾಸ-ಪ್ರಯಾಣ ಸಂಬಂಧಿತ ಸಂದರ್ಶನಗಳು, ಮನರಂಜನಾ ಬರಹಗಳು ಮತ್ತು ಇನ್ನೂ ಹೆಚ್ಚಿನ ರಸವತ್ತಾದ ಹೂರಣದ ಮಡಿಲು ಈ 'ಪ್ರವಾಸಿ ಪ್ರಪಂಚ'. ಈ ನಿಯತಕಾಲಿಕೆಯ ಜಾಲತಾಣವೂ ಇದ್ದು ಅದರ ಸಂಪರ್ಕಕೊಂಡಿ ಹೀಗಿದೆ:
https://pravasiprapancha.com

ಲೋಕಪ್ರಿಯ ಲೋಕಧ್ವನಿ

ಉತ್ತರ ಕನ್ನಡ ಜಿಲ್ಲೆಯ ಪ್ರಪ್ರಥಮ ದೈನಿಕ 'ಲೋಕಧ್ವನಿ'. ಕಳೆದ 4 ದಶಕದಿಂದ ನಿರಂತರವಾಗಿ ಪ್ರಕಟವಾಗುತ್ತಿರುವ ಜಿಲ್ಲೆಯ ದನಿ 'ಲೋಕಧ್ವನಿ'. ಇದು ಶಿರಸಿಯನ್ನು ಕೇಂದ್ರ ಕಚೇರಿಯಾಗಿಸಿಕೊಂಡಿರುವ, ಉತ್ತರ ಕನ್ನಡ ಜಿಲ್ಲೆಯ ಮನೆಮಾತಾಗಿರುವ ಪತ್ರಿಕೆಯೆಂದರೆ ಅತಿಶಯೋಕ್ತಿಯಲ್ಲ.

ಗೋಪಾಲಕೃಷ್ಣ ಆನವಟ್ಟಿ ಅವರಿಂದ ಸ್ಥಾಪನೆಯಾಗಿ ಉಮೇಶ ಭಟ್ಟರೆಂಬ ಧೀಮಂತ ವ್ಯಕ್ತಿಯಿಂದ ಮುನ್ನಡೆಸಲ್ಪಟ್ಟ ಈ ಪ್ರಾದೇಶಿಕ ಪತ್ರಿಕೆ, ಪ್ರಸ್ತುತ 'ವಿಶ್ವವಾಣಿ' ಬಳಗದ ಮೂಲಸೆಲೆ ವಿಶ್ವೇಶ್ವರ ಭಟ್ ಅವರ ಮುಂದಾಳತ್ವದಲ್ಲಿ ದಾಪುಗಾಲಿಡುತ್ತಿದೆ. ವಿಶ್ವೇಶ್ವರ ಭಟ್ ಅವರು 'ಲೋಕಧ್ವನಿ'ಯನ್ನು ಮುನ್ನಡೆಸಲು ಮುಂದಾದ ನಂತರ ಪತ್ರಿಕೆ 'ಆಧುನಿಕತೆಯ ಸ್ಪರ್ಶ' ಪಡೆಯಿತು ಎನ್ನಬಹುದು. ಆರಂಭದಿಂದ ಈವರೆಗೂ ಜನರ ದನಿಯಾಗಿ ಕಾರ್ಯನಿರ್ವಹಿಸುತ್ತ ಬಂದಿರುವ ಪತ್ರಿಕೆ ಎಂಬ ಹೆಗ್ಗಳಿಕೆ 'ಲೋಕಧ್ವನಿ'ಯದ್ದು.

ಕಲೆ, ಸಂಸ್ಕೃತಿ, ಕೃಷಿ, ಸಾಹಿತ್ಯ, ರಾಜಕೀಯ ಹೀಗೆ ಹತ್ತು-ಹಲವು ಮಜಲುಗಳ ಸುದ್ದಿಯನ್ನು ನೀಡುತ್ತ ಜನಮಾನಸದಲ್ಲಿ ನೆಲೆ ನಿಂತ ಪತ್ರಿಕೆ ಇದಾಗಿದೆ. ವಾರಕ್ಕೊಂದು ಪುರವಣಿ, ನಿತ್ಯವೂ ಒಂದು ಪುಟ ಅಂಕಣಗಳಿಗೆ ಮೀಸಲು, ಸ್ಥಳೀಯವಾಗಿ ವಾರಕ್ಕೊಂದು ವಿಶೇಷ ಪುಟ, ಕೃಷಿ ಪುಟ, ಜತೆಯಲ್ಲಿ ಸರಣಿ ವರದಿ, ನಿತ್ಯ ವಿಶೇಷ ವರದಿ, ದೇಶ-ವಿದೇಶ ಸುದ್ದಿಗೂ ಆದ್ಯತೆ- ಹೀಗೆ ವಿಭಿನ್ನವಾಗಿ ಮತ್ತು ಶಿಸ್ತುಬದ್ಧವಾಗಿ ಮೂಡಿಬರುತ್ತಿದೆ, ತನ್ಮೂಲಕ ಪ್ರಾದೇಶಿಕ ಪತ್ರಿಕೆಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ನಿಂತಿದೆ 'ಲೋಕಧ್ವನಿ'.

▶▶ ಅವಧಿಗೆ ಮುನ್ನವೇ ದಾಳಿಯಿಟ್ಟ ಮುಂಗಾರು ▶▶ ನೂರಾರು ವಿದ್ಯುತ್ ಕಂಬ, ಮನೆ, ಮರ ಧರೆಗೆ

ಮಹಾಮಳೆಗೆ ಕಾಫಿನಾಡು ತಲ್ಲಣ ಬಿಕೋ ಎನ್ನುತ್ತಿವೆ ಪ್ರವಾಸಿ ತಾಣ

ಅನಿಲ್ ಎಚ್.ಟಿ., ಮಡಿಕೇರಿ

ಅವಧಿಗೆ ಮುನ್ನವೇ ಸುರಿದ ಮಹಾಮಳೆ ಕೊಡಗು ಜಿಲ್ಲೆಯಲ್ಲಿ ತಲ್ಲಣ ಸೃಷ್ಟಿಸಿದೆ. ಮುಂಗಾರು ಪ್ರಾರಂಭಕ್ಕೂ ಮುನ್ನವೇ ಭಾರೀ ಮಳೆಯಾಗಿರುವುದು ಪ್ರಮುಖವಾಗಿ ಕೃಷಿಕರನ್ನು ಆತಂಕಕ್ಕೀಡು ಮಾಡಿದೆ.

ನಿರೀಕ್ಷೆ ಮೀರಿ ಮಳೆ

ಕೇರಳಕ್ಕೆ ಗಡಿ ಹಂಚಿಕೊಂಡಿರುವ ಕೊಡಗು ಜಿಲ್ಲೆಯಲ್ಲಿ ಪ್ರತೀ ವರ್ಷ ಕೇರಳಕ್ಕೆ ಮುಂಗಾರು ಪ್ರವೇಶಿಸಿ 4-5 ದಿನಗಳ ಬಳಿಕವೇ ಮಳೆಗಾಲ ಆರಂಭವಾಗುತ್ತಿತ್ತು. ಹಲವಾರು ದಶಕಗಳಿಂದ ಇದೇ ವಾಡಿಕೆಯಾಗಿತ್ತು.

ಈ ಬಾರಿಯೂ ಮೇ ಅಂತ್ಯದಲ್ಲಿ ಕೇರಳಕ್ಕೆ ಮುಂಗಾರು ಪ್ರವೇಶಿಸಿ ಜೂನ್ ಎರಡನೇ ವಾರದಲ್ಲಿ ಕೊಡಗಿಗೆ ಮಳೆಗಾಲ ಕಾಲಿಡಲಿದೆ ಎಂದೇ ನಂಬಲಾಗಿತ್ತು. ಆದರೆ ನಿರೀಕ್ಷೆ ತಲೆ ಕೆಳಗು ಮಾಡಿ ಮೇ ತಿಂಗಳ ಕೊನೇ ವಾರದಲ್ಲಿಯೇ ಸುರಿದ ಮಹಾಮಳೆ ಜಿಲ್ಲೆಯ ಜನರನ್ನು ತಲ್ಲಣಗೊಳಿಸಿದೆ.

ತುಂಬಿದ ಕಾವೇರಿ

ಜೂನ್ ತಿಂಗಳ ಎರಡು ವಾರಗಳಲ್ಲಿಯೂ ಕಣ್ಣಾಮುಚ್ಚಾಲೆಯಾಡುತ್ತಾ ಸುರಿಯುತ್ತಿರುವ ಮಳೆಯಿಂದಾಗಿ, ಜನರೂ ಕಕ್ಕಾಬಿಕ್ಕಿಯಾಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಕೊಡಗಿನ ಕೆರೆಕಟ್ಟೆಗಳು ಭರ್ತಿಯಾಗಿದ್ದು ಕಾವೇರಿ, ಲಕ್ಷ್ಮಣತೀರ್ಥ ನದಿಗಳು ತುಂಬಿ ಹರಿಯುತ್ತಿವೆ. ಜಿಲ್ಲೆಯ ಜಲಧಾರೆಗಳೂ ಭೋರ್ಗರೆದು ಧುಮ್ಮಿಕ್ಕುತ್ತಿವೆ. ಹೊಲಗದ್ದೆಗಳಲ್ಲಿ ಕೂಡ ತೋಡುಗಳು ತುಂಬಿ ತುಳುಕಿವೆ.

ಎರಡು ತಿಂಗಳ ಮಳೆ

ಆಗಸ್ಟ್ ಅಂತ್ಯಕ್ಕೆ ಎಷ್ಟು ಮಳೆಯಾಗಬೇಕಿತ್ತೋ ಅಷ್ಟೊಂದು ಪ್ರಮಾಣದ ಮಳೆ ಜೂನ್ 15 ರೊಳಗಾಗಿಯೇ ಕೊಡಗಿನಲ್ಲಿ ಸುರಿದಿರುವುದು ಅಚ್ಚರಿಗೆ ಕಾರಣವಾಗಿದೆ. ಸುಮಾರು 108 ವರ್ಷಗಳ ನಂತರ ಈ ರೀತಿ ಜೂನ್ ಎರಡನೇ ವಾರದೊಳಗೇ ಆಗಸ್ಟ್ ತಿಂಗಳತನಕ ಆಗಬೇಕಾದ ಮಳೆ ಪ್ರಮಾಣ ಕಂಡುಬಂದಿದೆ. ಹೀಗೆಂದು ಹವಾಮಾನ ಇಲಾಖೆಯ ದಾಖಲೆಗಳು ಹೇಳುತ್ತಿವೆ.

ಎರಡು ಪಟ್ಟು ಹೆಚ್ಚು

ಕೊಡಗು ಜಿಲ್ಲೆಯಲ್ಲಿ ಜನವರಿಯಿಂದ ಜೂನ್ 12 ರವರೆಗೆ ಸರಾಸರಿ 810 ಮಿ.ಮೀ ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 476 ಮಿ.ಮೀ. ಮಳೆಯಾಗಿತ್ತು. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಎರಡು ಪಾಲು ಹೆಚ್ಚು ಮಳೆಯಾಗಿದೆ. ಮಡಿಕೇರಿ ತಾಲೂಕಿನಲ್ಲಿ ಕಳೆದ ವರ್ಷ ಜನವರಿಯಿಂದ ಜೂನ್ 12 ರವರೆಗೆ 674 ಮಿ.ಮೀ. ಮಳೆಯಾಗಿದ್ದರೆ ಈ ವರ್ಷ 1210 ಮಿ. ಮೀ. ಮಳೆಯಾಗಿತ್ತು. ಸೋಮವಾರಪೇಟೆ ತಾಲೂಕಿನಲ್ಲಿ ಕಳೆದ ವರ್ಷ 400 ಮಿ.ಮೀ. ಮಳೆ ಬಿದ್ದಿದ್ದರೆ ಈ ವರ್ಷ ಇದೇ ಅವಧಿಯಲ್ಲಿ 700 ಮಿ. ಮೀ ಮಳೆ ಬಿದ್ದಿದೆ. ವೀರಾಜಪೇಟೆಯಲ್ಲಿ ಕಳೆದ ವರ್ಷ 412 ಮಿ.ಮೀ. ಮಳೆಯಾಗಿದ್ದರೆ ಈ ವರ್ಷ ಜನವರಿಯಿಂದ ಜೂನ್ 12 ರವರೆಗೆ 838 ಮಿ.ಮೀ ಮಳೆಯಾಗಿದೆ.

ಅಲರ್ಟ್‌ಗೂ ಮುನ್ನ ದಾಳಿ

ಮೊದಲೆಲ್ಲಾ ಮಳೆಗಾಲದ ಮಳೆ ಕೊಡಗಿನ ಜನತೆಯ ಪಾಲಿಗೆ ಸಾಮಾನ್ಯವಾಗಿದ್ದರೆ, ಮುಂಗಾರಿನಲ್ಲಿ ಸುರಿಯುವ ಮಾಮೂಲಿ ಮಳೆ ಯಂತಾಗಿದ್ದರೆ ಇತ್ತೀಚಿನ ವರ್ಷಗಳಲ್ಲಿ ಹವಾಮಾನ ಇಲಾಖೆ ನೀಡುತ್ತಿರುವ ಮುನ್ಸೂಚನೆಯ ರೆಡ್/ಯೆಲ್ಲೋ ಅಲರ್ಟ್‌ಗಳಿಗೂ 1 ದಿನ ಮುಂಚೆಯೇ ಮಳೆಯ ಅಬ್ಬರದ ಸೂಚನೆ ನೀಡುತ್ತಿವೆ. ರೆಡ್ ಅಲರ್ಟ್ ಪದ ಕೇಳಿ ದೊಡನೇ ಭಾರಿ ಮಳೆಯ ಸೂಚನೆಯಂದಾಗಿ ಜನರು ಗಾಭರಿಯಾಗುವಂತಾಗಿದೆ.

ಕೆಲವೊಮ್ಮೆ ಎಡವಟ್ಟು

ಜೂನ್ 12 ಮತ್ತು 13 ರಂದು ಕೊಡಗಿನಲ್ಲಿ ರೆಡ್ ಅಲರ್ಟ್ ಘೋಷಣೆಯಾಗಿತ್ತು. ಎರಡೂ ದಿನಗಳೂ ಭಾರೀ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ಸೂಚಿಸಿತ್ತು. ರೆಡ್ ಅಲರ್ಟ್ ಜಿಲ್ಲಾಧಿಕಾರಿಗಳು ಕೂಡ ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಿದ್ದರು. ಆದರೆ, ಮಳೆ ಬೀಳದೇ ಜನರು ತಬ್ಬಿಬ್ಬಾದರು. ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಿದ್ದರಿಂದಾಗಿ ಬಿಸಿಲಿನ ವಾತಾವರಣದಲ್ಲಿಯೇ ಮಕ್ಕಳು ಮಳೆಯ ರಜೆಯ ಮಜ ಅನುಭವಿಸಿದ್ದರು.

ಹಾರಂಗಿ ಅಣೆಕಟ್ಟು ಭರ್ತಿ

ಕರ್ನಾಟಕದ ಪ್ರಮುಖ ಜಲಾಶಯ, ಕೆ.ಆರ್.ಎಸ್. ಭರ್ತಿಯಾಗಲು ಪ್ರಮುಖವಾಗಿರುವ ಕೊಡಗಿನ ಹಾರಂಗಿ ಅಣೆಕಟ್ಟು ಕೂಡ ಅನೇಕ ದಶಕಗಳ ಬಳಿಕ ಈ ವರ್ಷ ಭರ್ತಿಯಾಗಿ ಜಲಾಶಯದಿಂದ ನೀರನ್ನು ಹೊರ ಬಿಡಲಾಯಿತು. ಜುಲೈ ಅಥವಾ ಆಗಸ್ಟ್‌ನಲ್ಲಿ

ಭರ್ತಿಯಾಗುತ್ತಿದ್ದ ಹಾರಂಗಿ ಅಣೆಕಟ್ಟು ಈ ಬಾರಿ ಜೂನ್ ಮೊದಲ ವಾರದಲ್ಲಿಯೇ ಭರ್ತಿಯಾಗಿ ಅಚ್ಚರಿಗೆ ಕಾರಣವಾಯಿತು. 2859 ಅಡಿ ಗರಿಷ್ಠ ಸಂಗ್ರಹಣಾ ಸಾಮರ್ಥ್ಯದ ಹಾರಂಗಿಯಲ್ಲಿ 2852 ಅಡಿಗಳಷ್ಟು ನೀರು ಸಂಗ್ರಹವಾಗಿದೆ. ಹಾರಂಗಿಗೆ 3200ಕ್ಯೂ ಸೆಕ್ ನೀರಿನ ಹರಿವಿದೆ. ಜಲಾಶಯವನ್ನು ಅಪಾಯದ ಮಟ್ಟದಿಂದ ಸಂರಕ್ಷಿಸಲು ಜಲಾಶಯದಿಂದ 4 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ಪ್ರವಾಸಿ ತಾಣಗಳು ಬಿಕೋ

ಅತೀಯಾದ ಮಳೆ ಹಿನ್ನಲೆಯಲ್ಲಿ ಕೊಡಗಿನ ಪ್ರವಾಸೋದ್ಯಮವೂ ತೀವ್ರ ಹಿನ್ನಡೆ ಕಂಡಿದೆ. ಮೇ ಮತ್ತು ಜೂನ್ ಎರಡನೇ ವಾರದವರೆಗೂ ಕೊಡಗಿಗೆ ಪ್ರವಾಸಿಗರು ಭೇಟಿ ನೀಡುತ್ತಿದ್ದರು. ಆದರೆ ಈ ವರ್ಷ ಪ್ರವಾಸಿಗರಿಗೆ ರೆಡ್ ಅಲರ್ಟ್ ಸುಳಿವು ಸಿಗುತ್ತಿದ್ದಂತೆ ಕೊಡಗಿನ ಪ್ರವಾಸೀ ತಾಣಗಳು ಬಿಕೋ ಎನ್ನುತ್ತಿವೆ. ಅತೀ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಕೊಡಗಿನಲ್ಲಿ ಕಾಫಿ, ಭತ್ತದ ಫಸಲಿಗೆ ತೀವ್ರ ನಷ್ಟ ಉಂಟಾಗಿದೆ. ವರುಣ ಅವಧಿಗೂ ಮುನ್ನವೇ ಸುರಿದಿದ್ದರಿಂದ ನೂರಾರು ವಿದ್ಯುತ್ ಕಂಬಗಳು, ಮರಗಳು ಧರೆಗುರುಳಲು ಕಾರಣವಾಗಿದ್ದಾನೆ.

ಎನ್‌ಡಿಆರ್‌ಎಫ್ ಸಜ್ಜು

2018, 2019ರ ವಿಕೋಪದ ಕಹಿ ನೆನಪುಗಳಿಂದ ಇನ್ನೂ ಹೊರಬಾರದ ಕೊಡಗಿನ ಜನತೆ ಈಗ ಮಳೆ ಹೆಚ್ಚಾದರೆ ಗಾಭರಿಯಾಗುತ್ತಿದ್ದಾರೆ. ಜಿಲ್ಲಾಡಳಿತ ಆಗಿಂದಾಗ್ಗೆ ಮುನ್ನೆಚ್ಚರಿಕೆ ನೀಡುತ್ತಲೇ ಬಂದಿದೆ. ಮಡಿಕೇರಿಯಲ್ಲಿ ಈಗಾಗಲೇ ಎನ್‌ಡಿಆರ್‌ಎಫ್ ಪಡೆ ಬೀಡು ಬಿಟ್ಟಿದ್ದು ಜಿಲ್ಲೆಯ ಅಪಾಯಕಾರಿ ಪ್ರದೇಶಗಳಿಗೆ ರೌಂಡ್ ಹಾಕುತ್ತಿದ್ದಾರೆ.

▶▶ ಸವದತ್ತಿ ಯಲ್ಲಮ್ಮ ಅಭಿವೃದ್ಧಿಗೆ ಪ್ರಾಧಿಕಾರ ▶▶ ತಿರುಪತಿ ಮಾದರಿ ದರ್ಶನದ ಸರತಿ ಸೌಲಭ್ಯ

ಕೋಟಿ ಭಕ್ತರ ಯಲ್ಲಮ್ಮನ ಸನ್ನಿಧಾನ ಅಭಿವೃದ್ಧಿಗೆ ಕೋಟ್ಯಂತರ ಅನುದಾನ

ವಿನಾಯಕ ಮಠಪತಿ, ಬೆಳಗಾವಿ

ದಕ್ಷಿಣ ಭಾರತದ ಐತಿಹಾಸಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಶ್ರೀ ಸವದತ್ತಿ ಯಲ್ಲಮ್ಮ ದೇವಸ್ಥಾನ ಕ್ಷೇತ್ರವೂ ಒಂದು. ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೋಟ್ಯಾಂತರ ರೂ. ಅನುದಾನ ನೀಡುವ ಮೂಲಕ ಧಾರ್ಮಿಕ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿವೆ. ಈ ಅನುದಾನದಿಂದ ಶ್ರೀಯಲ್ಲಮ್ಮ ದೇವಿ ಕ್ಷೇತ್ರಕ್ಕೆ ಹೈಟೆಕ್ ಸ್ಪರ್ಶ ನೀಡಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ಭರದಿಂದ ಸಾಗಿವೆ.

ಅಸಂಖ್ಯ ಭಕ್ತರ ಕ್ಷೇತ್ರ:

ಹೌದು. ಕರ್ನಾಟಕ, ಮಹಾರಾಷ್ಟ್ರ, ಗೋವಾ ಹಾಗೂ ಆಂಧ್ರಪ್ರದೇಶದ ಸೇರಿದಂತೆ ದೇಶದ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ಸವದತ್ತಿ ಯಲ್ಲಮ್ಮ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಅತ್ಯಾಧುನಿಕ ಶೈಲಿಯಲ್ಲಿ ಸಂಪೂರ್ಣ ದೇವಸ್ಥಾನದ ಚಿತ್ರಣ ಬದಲಿಸಿ ಭಕ್ತರಿಗೆ ಸಹಕಾರಿಯಾಗುವಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುತ್ತಿದೆ. ಈಗಾಗಲೇ ಸವದತ್ತಿ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವ ರಾಜ್ಯ ಸರಕಾರ ಕಳೆದ ಬಜೆಟ್ ನಲ್ಲಿ 200 ಕೋಟಿ ರೂ. ಅನುದಾನ ಕಲ್ಪಿಸಿದೆ. ಅಷ್ಟೇ ಅಲ್ಲದೆ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಕೆಲಸ ನಡೆಯುತ್ತಿವೆ.

ತಿರುಪತಿ ಮಾದರಿ ಕ್ಯೂ

ಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಬರುವ ಭಕ್ತರಿಗೆ ದೇವಿ ದರ್ಶನಕ್ಕೆ ಅನುಕೂಲವಾಗುವ ಉದ್ದೇಶದಿಂದ ತಿರುಪತಿ ದೇವಸ್ಥಾನ ಮಾದರಿಯಲ್ಲಿ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ. ಈ ಹಿಂದೆ ಕೇವಲ 50 ಸಾವಿರ ಭಕ್ತರು ದರ್ಶನ ಪಡೆಯುವ ವ್ಯವಸ್ಥೆ ಇತ್ತು. ಹೊಸ ಮಾದರಿಯಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತರು ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ದೇವಿ ದರ್ಶನ ಪಡೆಯುವ ವ್ಯವಸ್ಥೆ ಕಾರ್ಯಗತಗೊಳ್ಳುತ್ತಿದೆ. ಅಷ್ಟೇ ಅಲ್ಲದೆ ಭಕ್ತರು ತೀರಿಸುವ ಹರಕೆಗಳಿಗೆ ಸಹಕಾರಿ ಆಗಲೆಂದು ವಿವಿಧ ಸೌಲಭ್ಯ ನೀಡಲಾಗುತ್ತಿದೆ.

ಬೃಹತ್ ದಾಸೋಹ ಭವನ

ಶ್ರೀಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಭೇಟಿನೀಡುವ ಭಕ್ತರಿಗೆ ಅನುಕೂಲಕರವಾಗುವಂತೆ ಬೃಹತ್ ದಾಸೋಹ ಭವನ ನಿರ್ಮಾಣಕ್ಕೆ ಪ್ರಾಧಿಕಾರ ಮುಂದಾಗಿದೆ. ಏಕಕಾಲಕ್ಕೆ 5 ಸಾವಿರ ಭಕ್ತರು ಕುಳಿತು ಪ್ರಸಾದ ಸ್ವೀಕರಿಸುವ ಉದ್ದೇಶದಿಂದ ಅತ್ಯಾಧುನಿಕ ರೀತಿ ದಾಸೋಹ ಭವನ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಇದರಿಂದ ಲಕ್ಷಾಂತರ ಭಕ್ತರಿಗೆ ದಾಸೋಹ ಒದಗಿಸಲು ಸಹಕಾರಿಯಾಗಲಿದೆ. ಧರ್ಮಸ್ಥಳ ಹಾಗೂ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನಗಳ ಪ್ರಸಾದ ನಿಲಯಗಳ ಮಾದರಿಯಲ್ಲಿ ಈ ಕಾರ್ಯ ಕೈಗೊಳ್ಳಲಾಗುತ್ತಿದೆ.

ಮದ್ಯ ಮಾರಾಟ ನಿಷೇಧ

ದೇಶದ ಅನೇಕ ಭಾಗಗಳಿಂದ ಸವದತ್ತಿ ಯಲ್ಲಮ್ಮ ದೇವಿ ದರ್ಶನಕ್ಕೆ ಜನ ಬರುತ್ತಾರೆ. ಈ ಸಂದರ್ಭದಲ್ಲಿ ಸ್ವಚ್ಛತೆ ಕಾಪಾಡುವುದು ಸವಾಲಿನ ಕೆಲಸವಾಗಿದೆ. ಈ ಕಾರಣಕ್ಕೆ ದೇವಸ್ಥಾನ ಆವರಣ ಸೇರಿದಂತೆ ವಿವಿಧೆಡೆ ಗುಟಕಾ ಮಾರಾಟ ಸಂಪೂರ್ಣ ನಿಲ್ಲಿಸುವ ಪ್ರಯತ್ನಕ್ಕೆ ಪ್ರಾಧಿಕಾರ ಮುಂದಾಗಿದೆ. ಅಷ್ಟೇ ಅಲ್ಲದೆ ಮದ್ಯ ಮಾರಾಟಕ್ಕೂ ನಿಷೇಧ ಹೇರುವ ಸಾಧ್ಯತೆ ಇದ್ದು ದೇವಸ್ಥಾನಕ್ಕೆ ಬರುವ ಮುಖ್ಯ ಮಾರ್ಗದಲ್ಲೇ ತಪಾಸಣೆ ಬಿಗಿಗೊಳಿಸುತ್ತಿದೆ.

ಕೇಂದ್ರದಿಂದ ಅನುದಾನ

ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದಲೂ 100 ಕೋಟಿ ರೂ. ಅನುದಾನ ಘೋಷಣೆ ಆಗಿದೆ. ಇದರಿಂದ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಮಹತ್ವಾಕಾಂಕ್ಷೆ ಇದ್ದು ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈಗಾಗಲೇ ಪ್ರಸಾದ್ ಯೋಜನೆಯಡಿ ಕೇಂದ್ರದಿಂದ 18.37 ಕೋಟಿ ರೂ. ನೀಡಲಾಗಿದ್ದು ಇದರಿಂದ ಅಭಿವೃದ್ಧಿ ಕಾರ್ಯ ನಡೆಯುತ್ತಿವೆ.

ಸವದತ್ತಿಗೆ ಬೇಕು ರೈಲು

ಕೋಟ್ಯಂತರ ಭಕ್ತರು ಸವದತ್ತಿ ಯಲ್ಲಮ್ಮ ಕ್ಷೇತ್ರಕ್ಕೆ ಬರುತ್ತಿದ್ದು ರೈಲು ಸೇವೆ ಅವಶ್ಯಕತೆ ಸಾಕ್ಷಿದೆ. ಸವದತ್ತಿ ಮಾರ್ಗವಾಗಿ ಲೋಕಾಪುರ - ಧಾರವಾಡ ನೇರ ರೈಲು ಮಾರ್ಗ ಸೇವೆ ನೆರವೇರಿದರೆ ಇದರಿಂದ ಲಕ್ಷಾಂತರ ಭಕ್ತರಿಗೆ ಸಹಕಾರಿಯಾಗಲಿದೆ.

2019 ರಲ್ಲಿ ರೈಲ್ವೆ ಇಲಾಖೆ ನಡೆಸಿದ್ದ ಪ್ರಾಥಮಿಕ ಸರ್ವೇ ಕಾರ್ಯದಲ್ಲಿ ಸಂಚಾರ ಮಾರ್ಗ ಕಡಿಮೆ ಇದೆ ಎಂಬ ಸಲಹೆ ನೀಡಿ ಕೈಬಿಟ್ಟಿತ್ತು. ಆದರೆ ಈಗ ಪರಿಸ್ಥಿತಿ ಸಾಕಷ್ಟು ಭಿನ್ನವಾಗಿದ್ದು ಕೇವಲ ಒಂದು ವರ್ಷಕ್ಕೆ ಒಂದು ಕೋಟಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದು, ರೈಲು ಸಂಚಾರ ಆರಂಭವಾದರೆ ಇದರಿಂದ ಇನ್ನಷ್ಟು ಅನುಕೂಲ ಆಗಲಿದೆ ಎಂಬುದು ಭಕ್ತರ ಆಶಯ.

ಬೀದಿ ಬದಿ ವ್ಯಾಪಾರ

ಸವದತ್ತಿ ಯಲ್ಲಮ್ಮ ದೇವಸ್ಥಾನವನ್ನೇ ನಂಬಿ ಅನೇಕರು ಬದುಕು ಸಾಗಿಸುತ್ತಿದ್ದಾರೆ. ಸದ್ಯ ಅಭಿವೃದ್ಧಿ ಹೆಸರಿನಲ್ಲಿ ಅಂಗಡಿ ಮುಂಗಟ್ಟುಗಳ ನೆಲಸಮಗೊಳಿಸಿದ್ದು ಸಾವಿರಾರು ಕುಟುಂಬಗಳು ಕಂಗಾಲಾಗಿವೆ. ದೇವಸ್ಥಾನ ಆಡಳಿತ ಮಂಡಳಿ ನಿರ್ಮಿಸುತ್ತಿರುವ ಕಾಂಪ್ಲೆಕ್ಸ್ ನಲ್ಲಿ ಜಾಗ ನೀಡುವ ಭರವಸೆ ನೀಡಿದ್ದರೂ ಇದು ಹೆಚ್ಚು ಸಮಯ ಹಿಡಿಯಲಿದೆ. ಇದರಿಂದ ತಾತ್ಕಾಲಿಕವಾಗಿ ಈ ಕುಟುಂಬಗಳು ಪರೋಹಾರದ ಮೊರೆ ಹೊಕ್ಕಿವೆ.

ಉಗರಗೋಳ ಮಕ್ಕಳ ಭವಿಷ್ಯ

ಶ್ರೀ ಸವದತ್ತಿ ಯಲ್ಲಮ್ಮ ದೇವಸ್ಥಾನ ಉಗರಗೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಈಗಾಗಲೇ ದೇವಸ್ಥಾನ ಅಭಿವೃದ್ಧಿಗಾಗಿ ಗ್ರಾಮ ಪಂಚಾಯತಿ ಸಾವಿರಾರು ಎಕರೆ ಸರಕಾರಿ ಜಾಗ ಬಿಟ್ಟುಕೊಟ್ಟಿದೆ. ದೇವಸ್ಥಾನದ ಅಭಿವೃದ್ಧಿ ನಂತರ ಸೃಷ್ಟಿಯಾಗುವ ಉದ್ಯೋಗದಲ್ಲಿ ಉಗರಗೋಳ ಗ್ರಾಮದ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಇದರಿಂದ ಬಡವರಿಗೂ ಸಹಕಾರಿಯಾಗಲಿದೆ. ಜೊತೆಗೆ ದೇವಿ ಸನ್ನಿಧಿಯಲ್ಲೇ ಗ್ರಾಮದ ಮಕ್ಕಳು ಸ್ಥಳೀಯವಾಗಿ ಬದುಕು ಕಟ್ಟಿಕೊಳ್ಳಲು ಅನುಕೂಲವೂ ಆಗಲಿದೆ ಎನ್ನುತ್ತಾರೆ ಗ್ರಾಮದ ಪ್ರಮುಖರು.

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ @vishwavaninews
ಬೆಂಗಳೂರು | 16-06-2025 ಸೋಮವಾರ



ನಮ್ಮ ಜೀವನದಲ್ಲಿ ಕೃಷಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಕೃಷಿ ಇಲ್ಲದೆ ಮಾನವರ ಅಸ್ತಿತ್ವವಿಲ್ಲ. ಭೂಮಿಯ ಮೇಲೆ ಉಳಿದುಕೊಳ್ಳಲು ಆಹಾರ ಅಗತ್ಯ. ಪ್ರಪಂಚದ ಆರ್ಥಿಕ ಅಭಿವೃದ್ಧಿಗೂ ಕೃಷಿ ಇಲ್ಲದೆ ಸಾಧ್ಯವಿಲ್ಲ. ಒಟ್ಟಾರೆಯಾಗಿ ಮಾನವನ ನಾಗರಿಕತೆಯ ಬೆಳವಣಿಗೆಗೆ ಕೃಷಿಯು ಮಹತ್ವದ ಪಾತ್ರ ವಹಿಸುತ್ತದೆ.

- ಹನುಮಂತ ರಾವ್ ಭೂಸನೂರ

ಕೃಷಿಯಲ್ಲಿ ಪ್ರಯೋಗ ನಡೆಸುತ್ತಾ, ಹಲವು ವಿಶಿಷ್ಟ ಸಾಧನೆಗಳನ್ನು ಇವರು ಮಾಡಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ ಸೇಬು, ಬಾದಾಮಿ, ಗೋಡಂಬಿ ಮೊದಲಾದ ಹಣ್ಣು ಬೆಳೆದಿದ್ದಾರೆ; ರೈತರಿಗೆ ಉಪಯೋಗಕ್ಕೆ ಬರುವ ಹೆಬ್ಬೇವು ಬೆಳೆದಿದ್ದಾರೆ! ಕೃಷಿಯಲ್ಲಿ ಇವರ ಸಾಧನೆಯನ್ನು ಗುರುತಿಸಿ, ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ಇವರಿಗೆ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

ಕೃಷಿಯಲ್ಲೇ ಖುಷಿ ಕಂಡ ಹನುಮಂತ ರಾವ್ ಭೂಸನೂರ

• ಕೇಶವ್ ಪ್ರಸಾದ್

ಕಲಬುರಗಿ ಎಂದರೆ ಬಿಸಿಲೂರು. ಇಲ್ಲಿನ ಆಳಂದ ತಾಲ್ಲೂಕು ಕೂಡ ಒಣಹವೆಯಿಂದ ಕೂಡಿರುವ ಪ್ರದೇಶ. ಆಳಂದದ ಸರಾಸರಿ ಮಳೆಯ ಪ್ರಮಾಣ 40.4 ಮಿ.ಮೀ. ಅಥವಾ ಸರಾಸರಿ 1.6 ಇಂಚು. ಅಂಥ ಬಿಸಿಲಿನ ನಾಡಿನಲ್ಲಿ ಅದ್ಭುತವಾಗಿ ಹಣ್ಣಿನ ಗಿಡಗಳನ್ನು ನೆಟ್ಟು, ಮಿಶ್ರ ಬೆಳೆಗಳನ್ನು ಬೆಳೆದು, ಕೃಷಿಕರಾಗಿ ಯಶಸ್ಸು ಗಳಿಸಿದವರು ಪ್ರಗತಿಪರ ರೈತರಾದ ಹನುಮಂತ ರಾವ್ ಭೂಸನೂರ ಅವರು.

ಕೃಷಿಗೆ ಸಂಬಂಧಿಸಿ ತಮ್ಮ ಒಳನೋಟ ಹಾಗೂ ಸಂಕಲ್ಪದಿಂದ ಕಡಗಂಚಿ ಸಮೀಪದ ಗುಡ್ಡದ ಮೇಲೆ ಕಲ್ಲುಬಂಡೆಗಳಿದ್ದ ಭೂಮಿಯನ್ನು ಹಸನುಗೊಳಿಸಿ ಹಸಿರಿನ ಹೊನ್ನಾಗಿಸಿದ ಸಾಧಕರಾಗಿ ಹೊರಹೊಮ್ಮಿದ್ದಾರೆ. ಅಲ್ಲೇ ಬಸವ ಶಾಂತಿ ಎಂಬ ಫಾರ್ಮ್ ಹೌಸ್ ಅನ್ನು ನಿರ್ಮಿಸಿ ಹಚ್ಚ ಹಸಿರಿನಿಂದ ನಳನಳಿಸುವಂತೆ ಮಾಡಿದ್ದಾರೆ.

ಇಂದಿನ ದಿನಮಾನಗಳಲ್ಲಿ ಕೃಷಿಯಿಂದ ಜನ ವಿಮುಖರಾಗುತ್ತಿರುವ ಸಂದರ್ಭದಲ್ಲಿ ಹನುಮಂತ ರಾವ್ ಭೂಸನೂರ ಅವರು, ಬಂಡೆಗಲ್ಲುಗಳಿಂದ ಕೂಡಿದ್ದ 50 ಎಕರೆ ಸ್ಥಳವನ್ನು ಎಲ್ಲರೂ ಬೆರಗಾಗುವಂತೆ ಕೃಷಿ ಭೂಮಿಯನ್ನಾಗಿಸಿದ್ದಾರೆ. ಕೃಷಿಕರಿಗೆ ಕಾಯಕವೇ ಕೈಲಾಸ ಎಂಬಂತೆ ಹೆಚ್ಚಿನ ಸಮಯವನ್ನೂ ಹೊಲಗದ್ದೆಯಲ್ಲಿ ಕಳೆಯುತ್ತ ಸುಸ್ಥಿರ ಬೇಸಾಯದಲ್ಲಿ ತೊಡಗಿಸಿದ್ದಾರೆ. ಸಾಂಪ್ರದಾಯಿಕ ಬೇಸಾಯದ ಹೊರತಾಗಿ ಹೆಚ್ಚು ಬಿಸಿಲಿನ ವಾತಾವರಣದ ನಡುವೆಯೂ ನಾನಾ ಹಣ್ಣುಗಳ ಕೃಷಿಯಲ್ಲಿಯೂ ಯಶಸ್ವಿಯಾಗಿದ್ದಾರೆ.

ಹಲವು ಹಣ್ಣುಗಳ ಬೆಳೆ!

ತಮ್ಮ ಜಮೀನಿನಲ್ಲಿ ಅಂಜೂರ, ಸೀತಾಫಲ, ಮಾವು, ಪೇರಲ, ತೆಂಗು, ನೆಲ್ಲಿ, ಗೇರು (ಗೋಡಂಬಿ), ಸೇಬು, ಗಜನಿಂಬೆ, ಜಂಬು ನೇರಳೆ, ಪನ್ನೇರಳೆ, ಹುಣಸೆ, ಡ್ರ್ಯಾಗನ್ ಫ್ರುಟ್, ಹೆಬ್ಬೇವು, ಹಲಸು, ಅತ್ತಿಮರ, ನುಗ್ಗೆ ಮರ, ಬಿಲ್ವಪತ್ರಿ ಮೊದಲಾದವುಗಳನ್ನೂ ಬೆಳೆದು ಮಾದರಿಯಾಗಿದ್ದಾರೆ.

ಹನುಮಂತ ರಾವ್ ಭೂಸನೂರರ ತಂದೆ ಬಸವರಾಜ ಮಾಲೀಪಾಟೀಲ್ ಮತ್ತು ತಾಯಿ ಶಾಂತಾ ಬಾಯಿ. ಹಾಗೂ ತಾತ ಸಿದ್ರಾಮಪ್ಪ ಮಾಲೀಪಾಟೀಲ್. ತಾತ ಸಿದ್ರಾಮಪ್ಪ ಮಾಲೀಪಾಟೀಲ್ ಅವರು ಪಿಎಲ್‌ಡಿ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದರು. ಸಾಲ ಮರುಪಾವತಿಸಿದ ಬಳಿಕವೂ ಅಡಮಾನ ಇಟ್ಟಿದ್ದ ಜಮೀನನ್ನು ಸರಕಾರ ಜಪ್ತಿ ಮಾಡಿತ್ತು. ತಾತನ ಕೈ ತಪ್ಪಿದ್ದ ಜಮೀನನ್ನು ಮರಳಿ ಪಡೆಯಲು ಹನುಮಂತ ರಾವ್ ಭೂಸನೂರ ಹೋರಾಟ ನಡೆಸಿ, ಜಯಶಾಲಿಯಾದರು. ಈ ನಡುವೆ ಕಡಗಂಚಿಯಿಂದ ದೂರದ ಬೆಂಗಳೂರಿಗೆ ಬಂದಿದ್ದರೂ, ಹೊಲ ಗದ್ದೆ, ಕೃಷಿ ಕಾಯಕವನ್ನೂ ಜತೆ ಜತೆಯಲ್ಲಿ ನಡೆಸಿ ಯಶಸ್ವಿಯಾದರು.

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು ಎಂಬಂತೆ ಕೃಷಿಯಲ್ಲಿ ತೊಡಗಿಸಿಕೊಂಡರು. ಪ್ರತಿ ವಾರ ಕಲಬುರಗಿಗೆ ಬಂದು ಕಡಗಂಚಿಯ ಹೊಲದಲ್ಲಿ ಕೃಷಿಭೂಮಿಯ ಅಭಿವೃದ್ಧಿ ಇವರ ಕಾಯಕವಾಯಿತು. ಭೂಮಿಯನ್ನು ಸಮತಟ್ಟುಗೊಳಿಸಿದರು. ಫಲವತ್ತಾದ ಮಣ್ಣನ್ನು ಭೂಮಿಗೆ ಹಾಕಿದರು. ಬಾವಿಯನ್ನು ನಿರ್ಮಿಸಿದರು. ಬೇಸಿಗೆಯಲ್ಲೂ ನೀರಿಗೆ ಕೊರತೆ ಇಲ್ಲಿ ಇರುವುದಿಲ್ಲ. ದಶಕದ ಹಿಂದೆ ಬರಿ ಬಂಡೆಗಳಿಂದ ತುಂಬಿದ್ದ ಭೂಮಿ ಈಗ ಹಸಿರಿನಿಂದ ನಳನಳಿಸುತ್ತಿದೆ.

ಹೆಬ್ಬೇವು ಮರದಿಂದ ನೆಲ ಹಸನು

ಮೊದಲಿಗೆ ಹೊಲವನ್ನು ಅಲ್ಪ ಸ್ವಲ್ಪ ಹಸನುಗೊಳಿಸಿ ದೂರದಿಂದ ಹೆಬ್ಬೇವು ತಂದು ನೆಟ್ಟರು. ಆಗಲೇ ರೈತರು ಅಚ್ಚರಿಪಟ್ಟರು. ಹತ್ತು ವರ್ಷ ಕಳೆದಾಗ ಹೆಬ್ಬೇವುಗಳನ್ನು ಕಟಾವು ಮಾಡಿ ಮಾರಾಟ ಮಾಡಿದರು. ಅದರಿಂದ ಲಾಭ ಆಗದಿದ್ದರೂ ಹಾನಿಯಾಗಲಿಲ್ಲ. ನೆಲ ಮತ್ತಷ್ಟು ಹಸನಾಗಿತ್ತು. ಉಳಿದ ಬಂಡೆಗಳನ್ನು ಹಸನುಗೊಳಿಸಿದರು. ಬಳಿಕ ಐವತ್ತು ಎಕರೆ ಪ್ರದೇಶದಲ್ಲಿ ಹಣ್ಣಿನ ಗಿಡ ಮರಗಳನ್ನು ಬೆಳೆಸಲು ನಿರ್ಧರಿಸಿದರು. ಆ ಒಣ ಭೂಮಿಯಲ್ಲಿ, ಕೃಷಿಯಲ್ಲಿ ಅದ್ಭುತ ಕ್ರಾಂತಿಯನ್ನೇ ಮಾಡಿದರು. ಇದರ ಪರಿಣಾಮ ಬಂಡೆಗಲ್ಲುಗಳಿದ್ದ ನೆಲವೀಗ ಹಸಿರಿನ ವನಸಿರಿಯಾಗಿದೆ. ಹಣ್ಣುಗಳ ಗೊಂಚಲುಗಳ ಬೀಡಾಗಿದೆ. ತಾವು ಬೆವರು ಹರಿಸಿ ಪರಿವರ್ತಿಸಿದ ಜಮೀನಿಗೆ 'ಬಸವ ಶಾಂತಿ ಫಾರ್ಮ್ ಹೌಸ್' ಎಂಬ ಸಾರ್ಥಕ ಹೆಸರಿಟ್ಟಿದ್ದಾರೆ.



ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಹನುಮಂತ ರಾವ್ ಅವರ ಸಮಗ್ರ ಸಾಧನೆಯನ್ನು ಗೌರವಿಸಿ, ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ 'ವಿಶ್ವವಾಣಿ' ದಿನಪತ್ರಿಕೆಯ ಆಶ್ರಯದಲ್ಲಿ ನಡೆದ ಗ್ಲೋಬಲ್ ಅಚಿವರ್ಸ್ ಸಮ್ಮೇಳನದಲ್ಲಿ, 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಯನ್ನು ಪ್ರದಾನ ಮಾಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಭಾರತ ಮತ್ತು ಜಾರ್ಜಿಯಾ ದೇಶದ ಅನೇಕ ಗಣ್ಯ ಮಾನ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಹನುಮಂತರಾವ್ ಅವರ ಸಾಧನೆಯ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು.

ಆರಂಭದಲ್ಲಿ ಹೊಲದ ತುಂಬಾ ರಾಶಿ ರಾಶಿ ಕಲ್ಲು, ಮುಳ್ಳು ಬಂಡೆಗಳು, ಅಲ್ಲಲ್ಲಿ ಕುರುಚಲು ಗಿಡಗಳು ಮಾತ್ರ ಇತ್ತು. ಇಲ್ಲೇನು ಉಳುಮೆ ಮಾಡಲು ಸಾಧ್ಯ ಎಂದು ಪೂರ್ವಜರು ಕೈ ಚೆಲ್ಲಿದ್ದರು. ಆದರೆ ಹಣಮಂತರಾವ ಭೂಸನೂರ ಅವರು ಸಹೋದರರು, ಸ್ಥಳೀಯ ಕಾರ್ಮಿಕರ ನೆರವಿನಿಂದ ಬಂಡೆಗಳನ್ನು ತೆಗೆಸಿದರು. ಹಿಟಾಚಿಗಳನ್ನು ಬಳಸಿದರು. ಬಂಡೆಗಲ್ಲುಗಳನ್ನು ಸರಿಸಿದರು. ಒಂದೂವರೆ ವರ್ಷಗಳ ಕಾಲ ಭೂಮಿ ತಟ್ಟುಗೊಳಿಸುವ ಪ್ರಕ್ರಿಯೆಯೇ ನಡೆದಿತ್ತು. ದೂರದ ಕೆರೆಯ ಫಲವತ್ತಾದ ಮಣ್ಣನ್ನು ತಂದು ಹರಡಿದರು. ಇದರಿಂದ ಫಲವತ್ತತೆ ಹೆಚ್ಚತೊಡಗಿತು. ಬಸವ ಶಾಂತಿ ಫಾರ್ಮ್ ಹೌಸ್‌ನಲ್ಲಿ ಕರಿ ಕಲ್ಲುಗಳಿಂದಲೇ ಸುಸಜ್ಜಿತ ಮನೆಯನ್ನೂ ನಿರ್ಮಿಸಿದ್ದಾರೆ.

ಕೋಟಿ ವೃಕ್ಷ ಆಂದೋಲನ

2012ರಲ್ಲಿ ಅರಣ್ಯ ಇಲಾಖೆಯು ತನ್ನ ಕೋಟಿವೃಕ್ಷ ಆಂದೋಲನದ ಸಮಾರೋಪ ಸಮಾರಂಭಕ್ಕೆ ಹನುಮಂತರಾವ್ ಭೂಸನೂರ್ ಅವರ ಹೊಲವನ್ನೇ ಆಯ್ಕೆ ಮಾಡಿತ್ತು. ಅಲ್ಲಿಗೆ ಬಂದವರಿಗೆಲ್ಲ ಸಾಲು ಸಾಲು ವೃಕ್ಷಗಳ ಹಸಿರಿನ ರಾಶಿಯನ್ನು ಕಂಡು ಅಚ್ಚರಿಯೋ ಅಚ್ಚರಿ. ಹಿಂದೆಂದೂ ಕಂಡಿರದ ವೃಕ್ಷಗಳು ಇಲ್ಲಿ ಹೇಗೆ ಬಂದವು ಎಂಬುದೇ ಅವರ ವಿಸ್ಮಯವಾಗಿತ್ತು. ಬರಡು ಭೂಮಿಯಲ್ಲಿ ಹೆಬ್ಬೇವು ಕೃಷಿ ಅವರನ್ನು ಚಕಿತಗೊಳಿಸಿತ್ತು. ಹೀಗೆ ಹೆಬ್ಬೇವನ್ನು ಕಲಬುರಗಿಗೆ ಮೊದಲ ಸಲ ಪರಿಚಯಿಸಿದವರು ಹನುಮಂತ ರಾವ್ ಭೂಸನೂರ.

ಹೆಬ್ಬೇವನ್ನು ದಕ್ಷಿಣ ಭಾಗದಲ್ಲಿ ಹೆಚ್ಚು ಬೆಳೆಸುತ್ತಾರೆ. ಉತ್ತರ ಕರ್ನಾಟಕ, ಅದರಲ್ಲೂ ಕಲ್ಯಾಣ ನಾಡಲ್ಲಿ ಹೆಬ್ಬೇವು ಇಲ್ಲವೇ ಇಲ್ಲ ಎನ್ನಬಹುದು. ಅಂಥ ಅಪರೂಪದ ವೃಕ್ಷ ಕೃಷಿಯನ್ನು ಭೂಸನೂರ ಅವರು ಪರಿಚಯಿಸಿದ್ದು ವಿಶೇಷ. ಕಬ್ಬು ಅವರು ಕೈಗೊಂಡ ವಾಣಿಜ್ಯ ಬೆಳೆ. ಇಡೀ 50 ಎಕರೆಯಲ್ಲಿ ಹನಿ ನೀರಾವರಿಯಲ್ಲೂ ಯಶಸ್ಸು ಗಳಿಸಿದ ಸಾಧಕ ಅವರಾಗಿದ್ದಾರೆ.

ತೋಟ ಎಂದರೆ ಎಲ್ಲ ಸಮಯಕ್ಕೂ ಕಾರ್ಮಿಕರಿಗೆ ಕೆಲಸ ಕೊಡುವ ತಾಣ. ಕಾರ್ಮಿಕ ಕುಟುಂಬಗಳಿಗೆ ತೋಟದಲ್ಲಿ ಮನೆಯನ್ನೂ ನಿರ್ಮಿಸಿ ಆಸರೆಯಾಗಿರುವುದು ವಿಶೇಷ. ಪಾರಂಪರಿಕ ತೊಗರಿಗೆ ವಿದಾಯ ಹೇಳಿ ಹಣ್ಣುಗಳ ಕೃಷಿಯ ಮೂಲಕ ಭಿನ್ನವಾದ ಕೃಷಿ ಪ್ರಯೋಗ ಮಾಡಿ ಅದರಲ್ಲಿ ಉತ್ತಮ ಪ್ರತಿಫಲವನ್ನೂ ಗಳಿಸಿದವರು ಹಣಮಂತರಾವ ಭೂಸನೂರ.

ಬಿಸಿಲೂರಿನಲ್ಲಿ ಸೇಬು!

ಇವರು ಬಿಸಿಲಿನೂರಿನಲ್ಲೂ ಆ್ಯಪಲ್ ಬೆಳೆದಿದ್ದಾರೆ! ಬಾದಾಮಿ, ಚೆರ್ರಿ, ಗೋಡಂಬಿ ಹಣ್ಣುಗಳನ್ನು ಕಲಬುರಗಿ ಜಿಲ್ಲೆಯಲ್ಲೂ ಬೆಳೆಯಬಹುದು ಎಂದು ತೋರಿಸಿ ಕೊಟ್ಟವರು. ತಾನು ಮಾಡುವ ಕೃಷಿ ತನಗೆ ಮಾತ್ರ ಲಾಭವಾದರೆ ಸಾಲದು. ಸುತ್ತುಮುತ್ತಲಿನ ಪ್ರದೇಶದ ಎಲ್ಲ ರೈತರಿಗೂ ಅದು ಮಾದರಿಯಾಗಬೇಕು, ಪ್ರಯೋಗಶಾಲೆಯಾಗಬೇಕು ಎಂಬ ಸಾಮಾಜಿಕ ಕಳಕಳಿಯನ್ನೂ ಅವರು ಮೆರೆದಿದ್ದಾರೆ. ಬೇರೆ ಬೇರೆ ಕಡೆಗೆ ಹೋಗಿ ಹಲವಾರು ಹಣ್ಣಿನ ಗಿಡಗಳನ್ನು ತಂದು ಪೋಷಿಸಿದ್ದಾರೆ. ಇದು ಅವರ ಕೃಷಿ ಪ್ರಯೋಗಶೀಲತೆಯನ್ನು, ಧೈರ್ಯವನ್ನು, ಸಾಹಸವನ್ನು ತೋರಿಸುತ್ತದೆ.

ವಿಶಿಷ್ಟ ಹವ್ಯಾಸ!

ಹನುಮಂತ ರಾವ್ ಅವರು ಉತ್ತಮ ಫೋಟೋಗ್ರಾಫರ್ ಕೂಡ ಆಗಿದ್ದಾರೆ ಮತ್ತು ಅದು ಅವರ ವಿಶಿಷ್ಟ ಹವ್ಯಾಸ! ಹಿಂದೆ ಬೆಂಗಳೂರಿನಲ್ಲಿ ಅವರು ದೊಡ್ಡ ಫೋಟೋ ಸ್ಟುಡಿಯೋ ಹೊಂದಿ ಖ್ಯಾತರಾಗಿದ್ದರು. ಧರ್ಮಸಿಂಗ್ ಅವರು ಮುಖ್ಯಮಂತ್ರಿ ಆಗಿದ್ದಾಗ ಮುಖ್ಯಮಂತ್ರಿ ಕಚೇರಿಯಲ್ಲಿ ಫೋಟೋಗ್ರಾಫರ್ ಆಗಿಯೂ ಕೂಡ ಇವರು ಕೆಲಸ ನಿರ್ವಹಿಸಿದ್ದರು. ಕೆಪಿಸಿಸಿಯಲ್ಲಿ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದರು. ಹಲವಾರು ಸಾಮಾಜಿಕ ಕೆಲಸ ಕಾರ್ಯಗಳಲ್ಲೂ ಇವರು ತಮ್ಮನ್ನು ತೊಡಗಿಸಿಕೊಂಡು ಯುವಕರಿಗೆ ಮಾದರಿಯಾಗಿದ್ದಾರೆ.

ಇಷ್ಟಿದ್ದರೂ, ಇವರಿಗೆ ಕೃಷಿ ಎಂದರೆ ವಿಪರೀತ ಆಸಕ್ತಿ! ಆದ್ದರಿಂದಲೇ, ಬಿಸಿಲ ನಾಡಿನಲ್ಲಿ ಹಲವು ಹಣ್ಣುಗಳನ್ನು ಬೆಳೆದಿದ್ದಾರೆ, ಹೆಬ್ಬೇವು ಬೆಳೆಸಿದ್ದಾರೆ, ಕೃಷಿಯಲ್ಲಿ ಹಲವು ಪ್ರಯೋಗಗಳನ್ನು ಮಾಡುತ್ತಲೇ ಇದ್ದಾರೆ!

ಟರ್ಟಲ್ ಮ್ಯಾನ್!

• ಎಲ್.ಪಿ.ಕುಲಕರ್ಣಿ.

ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಈ ಕೂರ್ಮಾವತಾರ(ಆಮೆ)ವೂ ಒಂದು. ದೇವಾಲಯದ ಗರ್ಭಗುಡಿಯ ಮುಂದಿನ ಪ್ರಾಂಗಣದಲ್ಲಿ ಆಮೆಯ ಮೂರ್ತಿಯಿರುತ್ತದೆ. ಶಾಂತಿ, ಸಾವಧಾನ, ಭಾರ ತಾಳಿಕೊಳ್ಳುವ ಪ್ರತೀಕವೆಂದು ನಂಬಲಾಗಿರುವ ಈ ಆಮೆಗಳು ದೀರ್ಘಾವಧಿ ಬಾಳುವ ಜೀವಿಗಳು.

ತುಂಬಾ ಸಂಭಾವಿತ ಜೀವಿಗಳು ಈ ಆಮೆಗಳು. ಆದರೆ, ಆಮೆಗಳ ಸಂತತಿ ಇತ್ತೀಚೆಗೆ ಕ್ಷೀಣಿಸುತ್ತಿದೆ ಎನ್ನುತ್ತಿದ್ದಾರೆ ಜೀವಶಾಸ್ತ್ರಜ್ಞರು. ಆಮೆಗಳನ್ನು ರಕ್ಷಿಸಿ 'ಟರ್ಟಲ್ ಮ್ಯಾನ್(ಆಮೆ ಮನುಷ್ಯ)' ಎಂದು ಹೆಸರಾದ ಅರಣ್ಯಾಧಿಕಾರಿ, ಅಮೆರಿಕದ ಜೀವಶಾಸ್ತ್ರಜ್ಞ ಆರ್ಚೀ ಫೇರ್ಲಿ ಕಾರ್, ಇವುಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಇದೇ ಜೂನ್ 16 ಅವರ ಹುಟ್ಟು ಹಬ್ಬ.

ಸಮುದ್ರ ಆಮೆಗಳ ಮೇಲೆ ಅವರು ಅಪಾರ ಅಧ್ಯಯನ ನಡೆಸಿದ್ದಾರೆ. ಆಮೆಗಳ 79 ಪ್ರಜಾತಿಗಳು ಮತ್ತು ಅವುಗಳ ಉಪಪ್ರಜಾತಿಗಳನ್ನು ವರ್ಗೀಕರಿಸಿದ್ದರು. ಟೋರ್ಟುಗುರೊ ಮತ್ತು ಅಸೆನ್ಶನ್ ದ್ವೀಪಗಳಲ್ಲಿ ಈ ಆಮೆಗಳ ಕುರಿತು ಸತತವಾಗಿ ಅಧ್ಯಯನ ಕೈಗೊಂಡಿದ್ದರು. ಇದು ಅವರಿಗೆ ಆಮೆ ಮನುಷ್ಯ ಎಂಬ ಬಿರುದನ್ನು ಗಳಿಸಿಕೊಟ್ಟಿತು. ಆಮೆಗಳ ವಲಸೆ, ಗೂಡುಕಟ್ಟುವ, ಸಂಯೋಗ ಮತ್ತು ಪೌಷ್ಟಿಕಾಂಶದ ಅಭ್ಯಾಸಗಳ ಮೇಲೆ ಕಾರ್ ಅವರ ಸಮಗ್ರ ಅಧ್ಯಯನವು ಬೆಳಕು ಚೆಲ್ಲಿದ್ದಲ್ಲದೇ ಆಮೆಗಳು ವಾಸಿಸಲು ಮತ್ತು ಸಂತಾನೋತ್ಪತ್ತಿ ನಡೆಸಲು ಸೂಕ್ತವಾದ ಪ್ರದೇಶಗಳನ್ನು ಪತ್ತೆಹಚ್ಚಲು ಸಾಧ್ಯವಾಯಿತು. ಅವರು ಆಫ್ರಿಕಾದ ನೈಸರ್ಗಿಕ ಇತಿಹಾಸದ ಕುರಿತು ಟೈಮ್ ಲೈಫ್ ಬುಕ್ಸ್ ಸರಣಿಗಾಗಿ ಹಲವಾರು ಲೇಖನಗಳನ್ನು ಬರೆದರು.

ಆರ್ಚೀ ಫೇರ್ಲಿ ಕಾರ್ 16 ಜೂನ್ 1909 ರಲ್ಲಿ ಅಲಬಾಮಾದ (ಯುಎಸ್) ಮೊಬೈಲ್ ಎಂಬಲ್ಲಿ ಪ್ರೆಸ್ಬಿಟೇರಿಯನ್ ಪಾದ್ರಿಯೊಬ್ಬರ ಮಗನಾಗಿ ಜನಿಸಿದರು. ಫ್ಲೋರಿಡಾ ವಿಶ್ವವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರವನ್ನು ಅಧ್ಯಯನ ಮಾಡಿ, ಹರ್ಪಿಟಾಲಜಿ(ಸರೀಸೃಪಗಳ ಅಧ್ಯಯನ)ಯಲ್ಲಿ ಪರಿಣತಿ ಪಡೆದರು.

ಅವರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗುವುದಕ್ಕೂ ಮುಂಚೆ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಕೆಲಸ ಮಾಡಿದ್ದರಂತೆ. 1952 ರಲ್ಲಿ ಕಾರ್ ಅವರ ಸಾಧನೆಯನ್ನು ಗುರುತಿಸಿ ಪ್ರತಿಷ್ಠಿತ ಡೇನಿಯಲ್ ಗಿರಾಡ್ ಎಲಿಯಟ್ ಮೆಡಲ್ ಪುರಸ್ಕಾರ ಲಭಿಸಿತ್ತು. ಪರಿಸರ ಸಂರಕ್ಷಣೆ,ಅದರಲ್ಲೂ ವಿಶೇಷವಾಗಿ ಆಮೆಗಳ ಸಂರಕ್ಷಣಾ ಕ್ಷೇತ್ರದಲ್ಲಿ ಅಪಾರ ಸಾಧನೆಗೈದಿದ್ದ ಪ್ರೊ.ಆರ್ಚೀ ಫೇರ್ಲಿ ಕಾರ್, ಫ್ಲೋರಿಡಾದ ಮಿಕಾನೋಪಿ ಎಂಬಲ್ಲಿ 21 ನೇ ಮೇ 1987 ರಲ್ಲಿ ಇಹಲೋಕ ತ್ಯಜಿಸಿದರು. ನಮ್ಮ ದೇಶದಲ್ಲಿ ಇವರಂತೆಯೇ ಆಮೆಗಳ ಕುರಿತು ಕೆಲಸ ಮಾಡಿದವರು, ಡಾ.ಶೈಲೇಂದ್ರ ಸಿಂಗ್. ಭಾರತದಲ್ಲಿರುವ 29 ಆಮೆ ತಳಿಗಳಲ್ಲಿ 18 ತಳಿಗಳನ್ನು ಸಂರಕ್ಷಿಸಿ, ಪೋಷಿಸಿ ಒಟ್ಟು 35 ಸಾವಿರ ಅಳಿವಿನಂಚಿಗೆ ಸೇರುತ್ತಿದ್ದ ಆಮೆಗಳನ್ನು ರಕ್ಷಿಸಿ ಬಹುದೊಡ್ಡ ಸಾಧನೆ ಮಾಡಿದ್ದಾರೆ. ನಮ್ಮ ರಾಜ್ಯದ ಕರಾವಳಿಯ ಮರಳಿನಲ್ಲೂ ಸಮುದ್ರದಿಂದ ಬರುವ ಆಮೆಗಳು ಮೊಟ್ಟೆ ಇಡುತ್ತವೆ; ಅವುಗಳ ಕುರಿತು ಇನ್ನಷ್ಟು ಅಧ್ಯಯನ ನಡೆಸಲು, ಕಾರ್, ಸಿಂಗ್‌ರಂತಹವರೇ ಸ್ಫೂರ್ತಿ.

ಹನಿ ಮಳೆ

ಅಪ್ಪ ನೀಡಿದ ತಿಂಡಿ!

ತಿಂಡಿ ತಿನಿಸುಗಳಿಗೆ
ಮಕ್ಕಳು ಪಡೆಯುತ್ತಾರೆ
ಅಮ್ಮನ ಅಪ್ಪಣೆ
ಸಿಗದಿದ್ದಾಗ ಅನುಮತಿ
ಗೊತ್ತಾಗದಂತೆ
ತಂದುಕೊಡುವನು ಅಪ್ಪನೇ!

• ಮಹಾಂತೇಶ ಮಾಗನೂರ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಸರ ತರುವಾಗ ಗಡಿಬಿಡಿ (4)
3. ಬಲವಾದ ಇಚ್ಛೆ (3)
4. ಕುಟುಂಬ ಪರಿವಾರ (3)
5. ಶಿವನ ಕೈಯಲ್ಲಿನ ವಾದ್ಯ ತಿರುಗಿದೆ (4)
6. ಮರದಲ್ಲೂ ಹೊಟ್ಟೆಕಿಚ್ಚು (3)
9. ವನದ ನಡುವಿನ ಮುಖ (3)
11. ಅಡವಿ (2)
13. ನೀರೆತ್ತುವ ಸಾಧನ (2)
14. ಕ್ಷೌರಿಕನ ಚೀಲದ ಹೆಸರು (3)
17. ಜನರು ಸರಕಾರಕ್ಕೆ ಕಟ್ಟುವ ಕರ (3)
18. ಗತ್ತಿನಿಂದ ಹಾಕಿದ ಸಹಿ (4)
19. ಕಾತರ (3)
20. ಹೋಮ (3)
21. ಸದಾ ನಡೆದಾಡುವವನು (4)

ಮೇಲಿಂದ ಕೆಳಕ್ಕೆ

2. ಸಿಹಿಯಾದ ಸ್ವಾದ (4)
3. ಬರುವಿಕೆ (4)
4. ಹಣವಿಲ್ಲದ ದೀನ (3)
7. ಭೂಮಿಯ ಕೆಳಗಿರುವ ಲೋಕ (4)
8. ಗಮನವನ್ನು ಕೇಂದ್ರೀಕರಿಸು (4)
10. ಸೊಕ್ಕು (2)
12. ನದಿಯ ತಟ (2)
14. ಆತನ ಶತ್ರುತ್ವ (4)
15. ಗೆದ್ದವರಿಗೆ ಸಿಗುವ ಬಿಲ್ಲೆ (3)
16. ನಳ ಇಲ್ಲೂ ಇದ್ದ! (4)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಅವಸರ 3. ಆಸಕ್ತಿ 4. ಬಳಗ 5. ಗರುಮಡ 6. ಮತ್ಸರ 9. ವದನ 11. ಕಾಡು 13. ಏತ 14. ಹಡಪ 17. ತೆರಿಗೆ 18. ದಸಕತ್ತು 19. ತವಕ 20. ಹವನ 21. ಅಲೆಮಾರಿ

ಮೇಲಿಂದ ಕೆಳಕ್ಕೆ: 2. ಸವಿರುಚಿ 3. ಆಗಮನ 4. ಬಡವ 7. ರಸಾತಲ 8. ಏಕಾಗ್ರತೆ 10. ದರ್ಪ 12. ದಡ 14. ಹಗೆತನ 15. ಪದಕ 16. ಪಾಕಶಾಲೆ

ಭಗವಂತನ ಮೇಲೆ ಸಂಪೂರ್ಣವಾದ ನಂಬಿಕೆ

ಒಂದು ರಾತ್ರಿ ಒಬ್ಬನಿಗೆ ಒಂದು ಕನಸು ಬಿದ್ದಿತು. ಆ ಕನಸಿನಲ್ಲಿ ಅವನು ಭಗವಂತನೊಂದಿಗೆ ಸಮುದ್ರದ ದಂಡೆಯಲ್ಲಿ ನಡೆಯುತ್ತಿದ್ದ. ಮೇಲೆ ಆಕಾಶದಲ್ಲಿ ಅವನ ಜೀವನದ ಅನೇಕ ಘಟ್ಟಗಳು ದೃಶ್ಯ ರೂಪದಲ್ಲಿ ಕಾಣಿಸುತ್ತಿದ್ದವು. ಪ್ರತಿಯೊಂದು ದೃಶ್ಯದಲ್ಲೂ ಎರಡೆರಡು ಜೊತೆ ಹೆಜ್ಜೆ ಗುರುತುಗಳು ಕಾಣುತ್ತಿದ್ದವು. ಅದರಲ್ಲಿ ಒಂದು ಅವನದಾದರೆ ಮತ್ತೊಂದು ಭಗವಂತನದು.

ಕಡೆಯ ದೃಶ್ಯ ಆಕಾಶದಲ್ಲಿ ಮೂಡಿ ಮರೆಯಾಗುತ್ತಿದ್ದಂತೆಯೇ ತಾನು ನಡೆದು ಬಂದ ಹಾದಿಯನ್ನು ಅವನು ತಿರುಗಿ ನೋಡಿದ. ಮರಳಿನಲ್ಲಿ ಅನೇಕ ಕಡೆ ಕೇವಲ ಒಂದೇ ಜೊತೆ ಹೆಜ್ಜೆ ಗುರುತುಗಳು ಕಾಣಿಸುತ್ತಿದ್ದವು. ಅದೂ ಸಹ ತಾನು ಯಾವ ಪರಿಸ್ಥಿತಿಗಳಲ್ಲಿ ಅತ್ಯಂತ ಕಷ್ಟದಿಂದ ಕುಗ್ಗಿ ಹೋಗಿದ್ದನೋ ಆ ಸಮಯದಲ್ಲೆಲ್ಲಾ ಅಲ್ಲಿ ಅವನಿಗೆ ಕೇವಲ ಒಂದೇ ಒಂದು ಜೊತೆ ಹೆಜ್ಜೆ ಗುರುತುಗಳಿರುವುದನ್ನು ಅವನು ಗಮನಿಸಿದ. ಇದೇನೆಂದು ಅವನು ಭಗವಂತನನ್ನು ಪ್ರಶ್ನಿಸಿದ. ದೇವಾ, ನಾನು ನಿನ್ನನ್ನು ಅನುಸರಿಸುವುದಕ್ಕೆ ಸಿದ್ಧನಾಗಿದ್ದರೆ ನೀನು ನನ್ನನ್ನು ಯಾವ ಪರಿಸ್ಥಿತಿಯಲ್ಲೂ ಕೈಬಿಡುವುದಿಲ್ಲವೆಂದೂ, ದಾರಿಯುದ್ದಕ್ಕೂ ನನಗೆ ನೀನು ಜೊತೆಯಾಗಿರುತ್ತೀಯೆಂದು ಭರವಸೆ ಕೊಟ್ಟೆಯಲ್ಲವೇ? ಆದರೆ ನಾನು ಜೀವನದಲ್ಲಿ ಕಷ್ಟಗಳನ್ನು ಎದುರಿಸುತ್ತಿದ್ದಾಗ ಮತ್ತು ಚಿಂತಾಜನಕ ಸ್ಥಿತಿಯಲ್ಲಿದ್ದಾಗ, ನನಗೆ ಮರಳಿನಲ್ಲಿ ಕೇವಲ ಒಂದೇ ಒಂದು ಜೊತೆ ಹೆಜ್ಜೆ ಗುರುತುಗಳು ಕಾಣಿಸುತ್ತಿವೆ, ಇದನ್ನು ನಾನು ಹೇಗೆ ಅರ್ಥ ಮಾಡಿಕೊಳ್ಳಬೇಕೋ ತಿಳಿಯುತ್ತಿಲ್ಲ. ನಿಜವಾಗಲೂ ನಿನ್ನ ಅವಶ್ಯಕತೆ ನನಗೆ ಹೆಚ್ಚಾಗಿ ಇದ್ದ ಸಮಯದಲ್ಲಿ ನೀನು ನನ್ನನ್ನು ಏಕೆ ಬಿಟ್ಟು ಹೊರಟು ಹೋದೆ ಸ್ವಾಮಿ? ಎಂದು ಕೇಳಿದ.

ಅದಕ್ಕೆ ಭಗವಂತ ನಕ್ಕು, ಮಗೂ, ನಾನು ನಿನ್ನನ್ನು ಬಹಳಷ್ಟು ಪ್ರೀತಿಸುತ್ತೇನೆ. ನಿನ್ನನ್ನು ಬಿಟ್ಟು ಹೋಗುವ ಪ್ರಶ್ನೆಯಾದರೂ ಏತಕ್ಕೆ ಉದ್ಭವಿಸುತ್ತದೆ? ನೀನು ದುಃಖಕ್ಕೆ ಮತ್ತು ಕಷ್ಟಗಳಿಗೆ ಈಡಾದ ಸಮಯದಲ್ಲಿ ನಿನಗೆ ಕಂಡು ಬಂದ ಒಂದೇ ಜೊತೆ ಹೆಜ್ಜೆ ಗುರುತುಗಳು ನನ್ನವೇ; ಆ ಸಮಯದಲ್ಲಿ ನಾನು ನಿನ್ನನ್ನು ನನ್ನ ಭುಜದ ಮೇಲೆ ಹೊತ್ತುಕೊಂಡು ನಡೆಯುತ್ತಿದ್ದೆ ಎಂದು ಹೇಳಿದ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಭಗವಂತನ ಮೇಲೆ ಸಂಪೂರ್ಣ ನಂಬಿಕೆಯಿಂದ ಶರಣಾಗತರಾದವರಿಗೆ ಕೂಡಾ ಒಮ್ಮೊಮ್ಮೆ ಆತ ನಮ್ಮನ್ನು ಕೈಬಿಟ್ಟನೇನೋ ಎನ್ನುವ ಅನುಮಾನವುಂಟಾಗುತ್ತದೆ. ಲೋಕದಲ್ಲಿ ಕೇವಲ ಲಾಭನಷ್ಟಗಳ ಮೇಲೆ ದೃಷ್ಟಿ ನೆಟ್ಟರೆ ಭಗವಂತನು ನಮ್ಮನ್ನು ಕಷ್ಟ ಕಾಲದಲ್ಲಿ ಕೈ ಬಿಟ್ಟನೇನೋ ಎನ್ನುವಂತೆ ಕಾಣುತ್ತದೆ, ಆದರೆ ಭಗವಂತ ನಂಬಿದವರನ್ನು ಎಂದಿಗೂ ಕೈಬಿಡನು.

ಈ ರೀತಿಯ ನಂಬಿಕೆ ನಮಗೆ ಮೂಡಲು ಸಾಧ್ಯವೇ? ಅದೆಷ್ಟೇ ದಿನವೂ ಪೂಜೆ ಪಾರಾಯಣದಲ್ಲಿ ನಿರತರಾಗಿದ್ದರು ಸಹ, ಆಗಾಗ ಕಷ್ಟದಲ್ಲಿ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುತ್ತೇವೆ. ಅದೆಷ್ಟೇ ಓದಿದ್ದರೂ, ತಿಳಿದಿದ್ದರೂ ಸಹ ಕಷ್ಟಗಳು ಎದುರಾದಾಗ ಮನಸ್ಸು ಒಂದು ರೀತಿ ಮಂಕು ಹಿಡಿದಂತಾಗುತ್ತದೆ. ಪ್ರಪಂಚಕ್ಕೆಲ್ಲ ಬುದ್ಧಿ ಹೇಳುವ ನಾವು ಒಂದು ಹಂತದ ನಂತರ ಆಶಾ ಭಾವನೆಯನ್ನು ಕಳೆದುಕೊಂಡು ಖಿನ್ನತೆಗೆ ಜಾರುತ್ತೇವೆ. ನಾವೇ ಆಚರಿಸುತ್ತಿದ್ದ ಅನೇಕ ವಿಚಾರಗಳು, ಹೇಳುತ್ತಿದ್ದ ವಿಷಯಗಳು ಆ ಕಷ್ಟದ ಬೇಗುದಿಯಲ್ಲಿ ಮರೆತಂತಾಗುತ್ತದೆ. ಈ ರೀತಿ ಆಗುವುದು ಸಹಜವೇ. ಆದರೆ ನಾವು ಮರೆತರೂ ಕೂಡ ಭಗವಂತ ನಮ್ಮನ್ನು ಮರೆಯುವುದಿಲ್ಲ. ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಾನಾ ರೀತಿಯಲ್ಲಿ ನಮಗೆ ಒದಗಿ ಬರುತ್ತಾ ಇರುತ್ತಾನೆ. ಸೂಕ್ಷ್ಮವಾಗಿ ಗಮನಿಸಿದರೆ ಯಾರೋ ಸ್ನೇಹಿತರ ರೂಪದಲ್ಲಿ, ಪರಿಚಿತರ ಸಹಾಯದಲ್ಲಿ ಮನೆಯವರ ಅಕ್ಕರೆಯಲ್ಲಿ ಭಗವಂತನ ಇರುವುವು ನಮಗೆ ಸದಾ ಗೋಚರವಾಗುತ್ತದೆ. ಅದನ್ನು ಗಮನಿಸದೆ ಹೋದಾಗ ನಾವು ಒಂಟಿ ಎನಿಸುವ ಭಾವ ಕಾಡುತ್ತದೆ. ಇಂತಹ ಸಮಯದಲ್ಲೇ ನಾವು ಭಗವಂತನ ಬಗ್ಗೆ ಇನ್ನೂ ಹೆಚ್ಚಿನ ನಂಬಿಕೆಯನ್ನು ಇರಿಸಿಕೊಂಡು, ಏನಾದರೂ ಆಗಲಿ ಅವನು ನಮ್ಮನ್ನು ಕಾಪಾಡುತ್ತಾನೆ ಎನ್ನುವ ಧೈರ್ಯ ಬೆಳೆಸಿಕೊಳ್ಳಬೇಕು.

ಇಂತಹ ಮಾತುಗಳೇ ನಮ್ಮನ್ನು ಅಧೀರರಾಗಿಸದೆ, ಸಾವಿಗೆ ಶರಣು ಹೋಗದಂತೆ ಬದುಕನ್ನ ಆತ್ಮವಿಶ್ವಾಸದಿಂದ ಎದುರಿಸುವಂತೆ ಪ್ರೇರಣೆಯಾಗುತ್ತದೆ.

ಭೂಮಿಗೆ ಭಾರವಾಗಿ ಬದುಕಬಾರದು!

**ತೊಲಗೆಲವೊ ಮನೆಯಿಂದ ಮನವು ಬರಡಾದಂದೆ
ಹೊಲಸ ತೊಳೆಯಲು ತೋಳ್ಗೆ ಬಲ ಕುಗ್ಗಿದಂದೆ
ತೊಲಗು ಜಗದಿಂ ದೂರ, ಇಳೆಗಾಗದಿರು ಭಾರ
ತೊಲಗಿ ನೀಂ ಮರೆಯಾಗು**

- ಮಂಕುತಿಮ್ಮ||

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನಿನ್ನ ಮನದಲ್ಲಿ ಎಂದು ಪ್ರೀತಿ ಬರಡಾಗುತ್ತದೆಯೋ! ನಿನ್ನನ್ನು ಪ್ರೀತಿಸುವ ಮನಸ್ಸುಗಳಲ್ಲಿ ಪ್ರೀತಿಯ ಒರತೆ ಕಡಿಮೆ ಆಗುತ್ತದೆಯೋ ಅಂದು, ನಿನ್ನ ಹೊಲಸನ್ನು ತೊಳೆಯಲು ನಿನ್ನ ತೋಳಿಗೆ ಬಲವಿಲ್ಲ ಎಂದು ನಿನಗನ್ನಿಸಿದಾಗ, ಈ ಭೂಮಿಗೆ ನೀನು ಭಾರವಾಗದೆ ಈ ಜಗದಿಂದ ತೊಲಗುವಂತನಾಗು, ಈ ಜಗದಿಂದ ನೀ ತೊಲಗಿ ಯಾರಿಗೂ, ಎಂದೂ, ಎಲ್ಲಿಯೂ ಕಾಣದೆ ನೀನು ಮರೆಯಾಗಿ ಹೋಗಿಬಿಡು.

ಇಂತಹ ಬದುಕು ಬೈರಾಗಿಯಂತೆ ಬದುಕುವ ಸೂತ್ರ, ಸಮಾಜದಲ್ಲಿ ಇರುವಾಗ ಅದಕ್ಕೆ ಪೂರಕವಾಗಿ ನಾವು ಬದುಕಬೇಕು. ಸಮಾಜದ ಎಲ್ಲರೊಂದಿಗೆ ಬೆರೆತು ಎಲ್ಲರಲ್ಲೂ ಪ್ರೀತಿ ಸೌಹಾರ್ದತೆಯಿಂದ ಬದುಕಬೇಕು. ನಮ್ಮ ಮನಸ್ಸಿನಲ್ಲಿ ಪ್ರೀತಿಯನ್ನು ತುಂಬಿಕೊಂಡು, ಅದನ್ನು ಎಲ್ಲರಿಗೂ ಹಂಚುತ್ತಾ ಬದುಕಬೇಕು, ಅದು ಸಾರ್ಥಕ ಬದುಕು. ಹಾಗೆ 'ಪ್ರೀತಿಯ ಒರತೆ ನಿನ್ನ ಮನದಲ್ಲಿ ಬತ್ತಿದರೆ, ಸಮಾಜಕ್ಕೆ ನೀಡಲು ನಿನ್ನಲ್ಲಿ ಏನೂ ಇಲ್ಲವಾಗುತ್ತದೆ ಮತ್ತು ಮನಸ್ಸು ಬರಡಾಗುತ್ತದೆಯಾದ್ದರಿಂದ, ಸಮಾಜದಿಂದ ದೂರ ತೊಲಗಿ ಹೋಗು' ಎನ್ನುವುದು ಸತ್ಯವೂ ಆಗಿದೆ. ಬದುಕಿನಲ್ಲಿ ಪ್ರತೀ ಕ್ಷಣವೂ ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳುವ ಪ್ರಯತ್ನದಲ್ಲಿರಬೇಕು. ಆ ಪ್ರಯತ್ನದಲ್ಲಿನ ಹೆಜ್ಜೆಗಳೇ ನಮ್ಮೆಲ್ಲಾ ಓದು, ವಿದ್ಯೆ, ಅಧ್ಯಯನ, ಧ್ಯಾನ, ಜಪ, ತಪಗಳು, ಸತ್ಸಂಗ, ಪ್ರಾರ್ಥನೆ, ಶರಣು ಹೋಗುವಿಕೆಗಳು. ಅವುಗಳು ನಮ್ಮ ಅಂತರಂಗಕ್ಕೆ ಅಂಟಿಕೊಂಡಿರುವ ಹೊಲಸನ್ನು ತೊಳೆಯಲು ಒದಗುತ್ತವೆ. ನಮ್ಮೊಳಗಿನ ಮಾನಸಿಕ, ದೈಹಿಕವಾದ ಹೊಲಸನ್ನು ತೊಳೆಯುವ ಪ್ರಕ್ರಿಯೆಯಲ್ಲಿ ನಮಗೆ ಶಕ್ತಿ ಕುಂದಿದರೆ, ಹಿಂದೆ ಮುಂದೆ ನೋಡದೆ ನಾವು ಅಂದೆಯೇ ನಮ್ಮ ಬದುಕಿನಿಂದ ನಾವು ನಿರ್ಗಮಿಸಬೇಕು ಎನ್ನುವುದೇ ಇಲ್ಲಿಯ ಕಗ್ಗದ ಹೂರಣ.

ಯಾವಾಗ ನಾವು ನಮ್ಮ ಭಾರವನ್ನು ಹೊರಲು ಅಸಮರ್ಥರಾಗುತ್ತೇವೆಯೋ ಮತ್ತು ಅನ್ಯರು ನಮ್ಮ ಭಾರ ಹೊರಬೇಕಾದ ಪರಿಸ್ಥಿತಿ ಏರ್ಪಡುತ್ತದೋ ಅಂದು ನಾವು ಈ ಬದುಕಿನಿಂದ ನಾವು ದೂರಾಗಬೇಕು. ಬದುಕಿರುವಾಗ, ಬದುಕಿನಿಂದ ಏನನ್ನಾದರೂ ಪಡೆದು ನಾವು ಸುಧಾರಿಸಬೇಕು. ಬದುಕಿಗೆ ಏನನ್ನಾದರೂ ನೀಡಿ ಅನ್ಯರ ಬದುಕು ಸುಧಾರಿಸುವಂತೆ ಆಗಬೇಕು. ಈ ಎರಡೂ ಆಗದಿದ್ದ ಮೇಲೆ ಇಲ್ಲಿ ಇದ್ದು ಸಾಧಿಸುವುದಾದರೂ ಏನು? ಹಾಗೆ ನಿರ್ಜೀವದಿಂದ ಇರುವುದಕ್ಕಿಂತ ತೊಲಗಿ ಮರೆಯಾಗುವುದೇ ಲೇಸು ಅಲ್ಲವೇ? ಅಂಗಡಿಯ ಸರಕು ಖಾಲಿಯಾದ ಮೇಲೆ, ಖಾಲಿಯಾದ ಅಂಗಡಿಯನ್ನು ಮುಚ್ಚುವುದು ಲೇಸಲ್ಲವೇ?

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕಾರ್ಯಕ್ರಮ ರದ್ದು ಸಾಧ್ಯತೆ

ಲಂಡನ್: ಜೂನ್ 20ರಿಂದ ಆರಂಭವಾಗಲಿರುವ ಭಾರತ-ಇಂಗ್ಲೆಂಡ್ ನಡುವಿನ 5 ಪಂದ್ಯಗಳ ಟೆಸ್ಟ್ ಸರಣಿಗೆ ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿ ಎಂದು ಮರುನಾಮಕರಣ ಮಾಡಲಾಗಿತ್ತು. ಅದರಂತೆ ಟ್ರೋಫಿ ಅನಾವರಣ ಕಾರ್ಯಕ್ರಮವನ್ನು ಅದ್ದೂರಿ ಯಾಗಿ

ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತದ ಹಿನ್ನೆಲೆಯಲ್ಲಿ ಆ ಕಾರ್ಯಕ್ರಮ ವನ್ನು ಮುಂದೂಡಿಕೆ ಮಾಡಲಾಗಿತ್ತು. ಇದೀಗ ಟ್ರೋಫಿ ಅನಾವರಣ ಕಾರ್ಯಕ್ರಮವೇ ರದ್ದಾಗುವ ಸಾಧ್ಯತೆ ಇದೆ ಎಂದು ವರದಿ ಯಾಗಿದೆ. ಈ ಹಿಂದೆ ಎರಡೂ ತಂಡಗಳ ಸರಣಿಯನ್ನು ಪಟೌಡಿ ಟ್ರೋಫಿ ಎಂದು ಕರೆಯಲಾಗುತ್ತಿತ್ತು. 2007ರಲ್ಲಿ ಉಭಯ ದೇಶಗಳ ನಡುವಿನ ಟೆಸ್ಟ್‌ಗೆ 75 ವರ್ಷ ಪೂರ್ಣಗೊಂಡಾಗ ಆ ಹೆಸರನ್ನು ಇಡಲಾಗಿತ್ತು. ಆದರೆ ಈ ಬಾರಿಯಿಂದ ಸರಣಿಯನ್ನು ಆ್ಯಂಡರ್ಸನ್-ತೆಂಡೂಲ್ಕರ್ ಹೆಸರಲ್ಲಿ ನಡೆಸಲು ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ (ಇಸಿಬಿ) ನಿರ್ಧರಿಸಿದೆ. ಆದರೆ ಸರಣಿಯ ಹೆಸರನ್ನು ಬದಲಾಯಿಸಿದ ಬಗ್ಗೆ ಬಿಸಿಸಿಐ ಆಕ್ಷೇಪ ವ್ಯಕ್ತಪಡಿಸಿದೆ ಎನ್ನಲಾಗಿದೆ. ಮನ್ಸೂರ್ ಅಲಿ ಖಾನ್ ಪಟೌಡಿ ಓರ್ವ ದಿಗ್ಗಜ ಕ್ರಿಕೆಟರ್ ಎಂದೆನಿಸಿದ್ದು, ಅವರ ಹೆಸರಿನ ಸರಣಿಯನ್ನು ಬದಲಾಯಿಸುವುದು ಸರಿಯಲ್ಲ ಎಂದು ಇಸಿಬಿ ಬಳಿ ವಿನಂತಿಸಿದೆ ಎನ್ನಲಾಗಿದೆ.

ತ್ರಿಸದಸ್ಯ ಸಮಿತಿ ರಚನೆ

ಮುಂಬೈ: ಆರ್‌ಸಿಬಿ ತಂಡವು ಐಪಿಎಲ್ ಪ್ರಶಸ್ತಿ ಗೆದ್ದ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಸಂಭವಿಸಿದ ದುರ್ಘಟನೆ ಮತ್ತೆ ಬೇರೆಲ್ಲೂ ಮರುಕಳಿಸಬಾರದೆಂಬ ಕಾಳಜಿ ವ್ಯಕ್ತಪಡಿಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಐಪಿಎಲ್ ಸಂಭ್ರಮಾಚರಣೆಗೆ ಸೂಕ್ತ ಮಾರ್ಗಸೂಚಿಯೊಂದನ್ನು ರಚಿಸಲು ಮುಂದಾಗಿದೆ. ಇದಕ್ಕಾಗಿ ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಅವರ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ರಚಿಸಲಾಯಿತು. ದೇವಜಿತ್ ಸೈಕಿಯಾ, ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಖಜಾಂಚಿ ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಈ ಸಮಿತಿ ಒಳಗೊಂಡಿದೆ. ಜೂನ್-4ರಂದು ಭ್ರಮಾಚರಣೆ ನೋಡಲು ತೆರಳುತ್ತಿದ್ದ ಸಂದರ್ಭದಲ್ಲಿ ಚಿನ್ನಸ್ವಾಮಿ ಸ್ಟೇಡಿಯಂನ ಹೊರಗಡೆ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಆರ್‌ಸಿಬಿ ಅಭಿಮಾನಿಗಳು ಮೃತರಾಗಿದ್ದರಲ್ಲದೆ, ಹಲವರು ಗಾಯಗೊಂಡಿದ್ದರು.

ವಿರಾಮ
ಪ್ರತಿ ಭಾನುವಾರ

ದ. ಆಫ್ರಿಕಾ ಟೆಸ್ಟ್ ಕ್ರಿಕೆಟ್ ನಾಯಕನಿಂದ ಹೊಸ ಇತಿಹಾಸ
ಮುರಿದ 1926ರ ಪೆರ್ಸಿ ಚಾಪ್‌ಮ್ಯಾನ್ ದಾಖಲೆ

ಟೆಸ್ಟ್‌ನಲ್ಲಿ ಬವುಮಾ ಸೋಲಿಲ್ಲದ ಸರದಾರ

ಲಾರ್ಡ್ಸ್: ವಿಶ್ವ ಟೆಸ್ಟ್ ಚಾಂಪಿಯನ್ ಟೆಸ್ಟ್ ಕ್ರಿಕೆಟ್‌ನ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಸೋಲಿಸುವ ಮೂಲಕ ಚಾಂಪಿಯನ್ ಆದ ದಕ್ಷಿಣ ಆಫ್ರಿಕಾ ತಂಡದ ನಾಯಕ ಟೆಂಬಾ ಬವುಮಾ 'ಸೋಲಿಲ್ಲದ ಸರದಾರ' ಎಂಬ ಹೊಸ ಇತಿಹಾಸವೊಂದನ್ನು ರಚಿಸಿದ್ದಾರೆ. ಬಹುಮಾ ಟೆಸ್ಟ್ ತಂಡದ ನಾಯಕತ್ವ ವಹಿಸಿದ ಬಳಿಕ ದಕ್ಷಿಣ ಆಫ್ರಿಕಾ ತಂಡವು ಒಂದೇ ಒಂದು ಸೋಲು ಕಂಡಿಲ್ಲ ಎಂಬುದೇ ಹೊಸ ವಿಶ್ವ ದಾಖಲೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ನಾಯಕನಾಗಿ ಮೊದಲ 10 ಪಂದ್ಯಗಳಲ್ಲಿ ಅತ್ಯಧಿಕ ಗೆಲುವು ಕಂಡ ನಾಯಕನೆಂಬ ವಿಶ್ವ ದಾಖಲೆ ಇಂಗ್ಲೆಂಡ್‌ನ ಪೆರ್ಸಿ ಚಾಪ್‌ಮ್ಯಾನ್ ಹೆಸರಿನಲ್ಲಿತ್ತು. 1926ರಲ್ಲಿ ಇಂಗ್ಲೆಂಡ್ ತಂಡವನ್ನು ಮುನ್ನಡೆಸಿದ್ದ ಚಾಪ್‌ಮ್ಯಾನ್ ಮೊದಲ 10 ಪಂದ್ಯಗಳಲ್ಲಿ 9 ಪಂದ್ಯಗಳಲ್ಲಿ ಅವರು ತಂಡವನ್ನು ಗೆಲುವಿ ನ ದಡ ಸೇರಿಸಿದ್ದರು. ಒಂದು ಪಂದ್ಯದಲ್ಲಿ ಮಾತ್ರ ಇಂಗ್ಲೆಂಡ್ ತಂಡ ಆಗ ಸೋಲನು ಭವಿಸಿತ್ತು.

ಇದೀಗ ಪೆರ್ಸಿ ಚಾಪ್‌ಮ್ಯಾನ್ ಹೆಸರಿನಲ್ಲಿದ್ದ ಈ ವಿಶ್ವ ದಾಖಲೆಯನ್ನು ದಕ್ಷಿಣ ಆಫ್ರಿಕಾದ ಟೆಂಬಾ ಬವುಮಾ ಮುರಿದಿದ್ದಾರೆ, ಅದು ಕೂಡ 99 ವರ್ಷಗಳ ಬಳಿಕ ಎಂಬುದು ವಿಶೇಷ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ 2025ರ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡ ವನ್ನು 10 ಪಂದ್ಯ ಗಳಲ್ಲಿ ಮುನ್ನಡೆಸಿ ರುವ ಬವುಮಾ ಒಟ್ಟು 9 ಗೆಲುವು ಕಂಡಿದ್ದಾರೆ, ಒಂದು ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಡ್ರಾ ಸಾಧಿಸಿದೆ.

ಟೆಂಬಾ ಬವುಮಾ ಮುನ್ನಡೆಸಿರುವ 10 ಟೆಸ್ಟ್ ಪಂದ್ಯಗಳ ಪೈಕಿ ದಕ್ಷಿಣ ಆಫ್ರಿಕಾ ತಂಡವು ಒಂದೇ ಒಂದು ಸೋಲು ಕಂಡಿಲ್ಲ. ಆ ಮೂಲಕ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಮೊದಲ ಹತ್ತು ಪಂದ್ಯಗಳಲ್ಲಿ ಸೋಲು ಕಾಣದ ಮೊದಲ ನಾಯಕನೆಂಬ ವಿಶ್ವ ದಾಖಲೆಯನ್ನು ಟೆಂಬಾ ಬವುಮಾ ಇದೀಗ ತಮ್ಮದಾಗಿಸಿಕೊಂಡಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಸರಣಿಯಲ್ಲಿ ಸೋಲು ಕಾಣದೇ ತಂಡಕ್ಕೆ ಚಾಂಪಿಯನ್ ಪಟ್ಟ ತಂದುಕೊಟ್ಟ ವಿಶ್ವದ ಮೊದಲ ನಾಯಕ ಎಂಬ ಹೆಗ್ಗಳಿಕೆಗೂ ಟೆಂಬಾ ಬವುಮಾ ಪಾತ್ರರಾಗಿದ್ದಾರೆ. ಈ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ಯಾರಿಂದಲೂ ಸಾಧ್ಯವಾಗದಂತಹ ದಾಖಲೆಗಳನ್ನು ನಿರ್ಮಿಸುವ ಮೂಲಕ ಬವುಮಾ ವಿಶ್ವ ಕ್ರಿಕೆಟ್ ಅಂಗಳದಲ್ಲಿ ಹೊಸ ಸಂಚಲನ ಸೃಷ್ಟಿಸಿದ್ದಾರೆ.

ಕೆಣಕಿದವರಿಗೆ ಬ್ಯಾಟಿಂಗ್ ಮೂಲಕ ತಕ್ಕ ಉತ್ತರ

ಟೆಸ್ಟ್ ಫೈನಲ್ ಪಂದ್ಯದ ಕೊನೆಯ ದಿನದ ಆಸೀಸ್ ಆಟಗಾರರ ಅಸಭ್ಯ ವರ್ತನೆಯ ಬಗ್ಗೆ ದ. ಆಫ್ರಿಕಾ ನಾಯಕ ಟೆಂಬ ಬವುಮಾ ಕಿಡಿಕಾರಿದ್ದಾರೆ. ಪಂದ್ಯದ ಬಳಿಕ ಮಾತನಾಡಿದ ಬವುಮಾ, ಗೆಲುವಿನ ಗುರಿ ಬೆನ್ನಟ್ಟುವಾಗ ನಾನು ಮತ್ತು ಮತ್ತು ಶತಕ ಸಿಡಿಸಿ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾರ್ಕ್ರಮ್ ಬ್ಯಾಟಿಂಗ್ ಮಾಡುತ್ತಿದ್ದ ವೇಳೆ ತಮ್ಮನ್ನು 'ಚೋಕರ್ಸ್' ಎಂದು ಆಸ್ಟ್ರೇಲಿಯನ್ನರು ಕೆಣಕುತ್ತಿದ್ದರು ಎಂದು ತಿಳಿಸಿದ್ದಾರೆ. 'ಆರಂಭಿಕ ಎರಡು ವಿಕೆಟ್ ಪತನದ ಬಳಿಕ ಮಾರ್ಕ್ರಮ್ ಮತ್ತು ನಾನು ಆಸೀಸ್ ಬೌಲರ್‌ಗಳ ದಾಳಿಯನ್ನು ನಿರ್ಭೀತಿಯಿಂದ ಎದುರಿಸಿ ಆಡುತ್ತಿರುವಾಗ ನಮ್ಮ ವಿಕೆಟ್ ಪಡೆಯುವ ನಿಟ್ಟಿನಲ್ಲಿ ಕೀಳು ಮಟ್ಟದಲ್ಲಿ ಸ್ಲೆಡ್ಜಿಂಗ್ ಮಾಡುತ್ತಿದ್ದರು. ಉದ್ದೇಶಪೂರ್ವಕವಾಗಿಯೇ ಆಸೀಸ್ ಆಟಗಾರರು 'ಚೋಕ್' ಎಂಬ ಪದವನ್ನು ಪದೇ ಪದೇ ಬಳಸುತ್ತಿದ್ದರು. ಆದರೆ ನಾವು ಅದನ್ನು ಲೆಕ್ಕಿಸದೆ ನಮ್ಮ ಸಾಮರ್ಥ್ಯದ ಮತ್ತು ನಂಬಿಕೆಯಿಂದ ಬ್ಯಾಟಿಂಗ್ ಮುಂದುವರಿಸಿ ಹೀಯಾಳಿಸಿದ ಆಟಗಾರರಿಗೆ ನಮ್ಮ ಆಟದ ಮೂಲಕ ತಕ್ಕ ಉತ್ತರ ನೀಡಿದ್ದೇವೆ' ಎಂದು ಟೆಂಬ ಬವುಮಾ ಹೇಳಿದ್ದಾರೆ.

ದೇಶೀಯ ಕ್ರಿಕೆಟ್ ವೇಳಾಪಟ್ಟಿ ಪ್ರಕಟ

ಮುಂಬೈ: 2025-26ನೇ ಋತುವಿನ ದೇಶೀಯ ಕ್ರಿಕೆಟ್ ವೇಳಾಪಟ್ಟಿ ಭಾನುವಾರ ಪ್ರಕಟಗೊಂಡಿದ್ದು, ಅಕ್ಟೋಬರ್ 15ರಿಂದ ಫೆ. 28ರವರೆಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ನಡೆಯಲಿದ್ದು, ಈ ಸಲದ ರಣಜಿ ಟೂರ್ನಿಯು ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತವು ಅ.15ರಿಂದ ನ.19ರವರೆಗೆ ಹಾಗೂ ಎರಡನೇ ಹಂತವು ಜ.22ರಿಂದ ಫೆ.1ರ ವರೆಗೆ ನಡೆಯಲಿದೆ. ನಾಕೌಟ್ ಹಂತವು ಫೆ. 6ರಿಂದ 28ರವರೆಗೆ ಆಯೋಜನೆಯಾಗಲಿದೆ.

ದುಲೀಪ್ ಟ್ರೋಫಿ ಟೂರ್ನಿಯನ್ನು ಮತ್ತೆ ವಲಯ ತಂಡಗಳ ಮಾದರಿಯಲ್ಲಿ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು. ಆಗಸ್ಟ್ 28ರಿಂದ ಸೆಪ್ಟೆಂಬರ್ 15ರವರೆಗೆ ಪಂದ್ಯಾವಳಿ ನಡೆಯಲಿದೆ. ತಂಡಗಳನ್ನು ವಲಯ ಆಯ್ಕೆ ಸಮಿತಿಗಳು ಆಯ್ಕೆ ಮಾಡಲಿವೆ ಎಂದು ಬಿಸಿಸಿಐ ತಿಳಿಸಿದೆ. ಸೈಯದ್ ಮುಷ್ತಾದ್ ಅಲಿ ಟಿ20 ಕ್ರಿಕೆಟ್ ಟೂರ್ನಿ ಪ್ಲೇಟ್ ಗುಂಪಿನಲ್ಲಿ ಸೂಪರ್ ಲೀಗ್ ಮಾದರಿಯನ್ನು ಜಾರಿ ಮಾಡಲಾಗುತ್ತಿದೆ.

ಕಳೆದ ವರ್ಷದವರೆಗೂ ಕ್ವಾರ್ಟರ್ ಫೈನಲ್, ಸೆಮಿಫೈನಲ್ ಮತ್ತು ಫೈನಲ್ ಹಂತದಲ್ಲಿ ನಾಕೌಟ್ ಪಂದ್ಯಗಳು ನಡೆದಿದ್ದವು. ಈ ವರ್ಷ ಸೂಪರ್ ಲೀಗ್ ಮಾಡುವುದರಿಂದ 3 ಪಂದ್ಯಗಳು ಹೆಚ್ಚಾಗಲಿದ್ದು, ಎ ಮತ್ತು ಬಿ-ಗುಂಪಿನ ಅಗ್ರ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಟೂರ್ನಿಯು ನವೆಂಬರ್ 26ರಿಂದ ಡಿಸೆಂಬರ್ 18ರವರೆಗೆ ನಡೆಯಲಿದೆ.

ಹೆಚ್ಚು ಪಂದ್ಯವಾಡಿದ ಮಾಜಿ ನಾಯಕ ದಿಲೀಪ್ ಟಿರ್ಕಿಯ ನಂತರದ ಸ್ಥಾನ

ಮನ್‌ಪ್ರೀತ್ ಸಿಂಗ್: 400 ಪಂದ್ಯ ಸಾಧನೆ

ದೆಹಲಿ: ಭಾರತ ಹಾಕಿ ತಂಡದ ಮಿಡ್ ಫೀಲ್ಡರ್ ಆಟಗಾರ ಮನ್‌ಪ್ರೀತ್ ಸಿಂಗ್ ತಮ್ಮ ಅಂತಾರಾಷ್ಟ್ರೀಯ ಹಾಕಿ ವೃತ್ತಿಜೀವನದಲ್ಲಿ ಮಹತ್ವ ಮೈಲಿಗಲ್ಲೊಂದನ್ನು ತಲುಪಿದ್ದಾರೆ. ಭಾರತ ತಂಡದ ಪರ 400ನೇ ಪಂದ್ಯವನ್ನಾಡಿದ ಎರಡನೇ ಮತ್ತು ವಿಶ್ವದ 8ನೇ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಅತ್ಯಂತ ಹೆಚ್ಚು ಪಂದ್ಯವಾಡಿದ ಭಾರತೀಯ ದಾಖಲೆ ಮಾಜಿ ನಾಯಕ, ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ(412) ಹೆಸರಿನಲ್ಲಿದೆ.

ಭಾನುವಾರ ನಡೆದ ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಮನ್‌ಪ್ರೀತ್ ಸಿಂಗ್ 400ನೇ ಪಂದ್ಯವನ್ನಾಡಿದ ಸಾಧನೆ ಮಾಡಿದರು. ಆದರೆ ಪಂದ್ಯದಲ್ಲಿ ಭಾರತ 2-3 ಅಂತರದಿಂದ ಸೋಲು ಕಂಡಿತ್ತು, ತಂಡ ಗೆಲ್ಲುತ್ತಿದ್ದರೆ ಮನ್‌ಪ್ರೀತ್‌ಗೆ ಈ ಪಂದ್ಯ ಸ್ಮರಣೀಯವಾಗುತ್ತಿತ್ತು.

ಪಂದ್ಯಕ್ಕೂ ಮುನ್ನ ಮಾತನಾಡಿದ ಮನ್‌ಪ್ರೀತ್ ಸಿಂಗ್, 'ಚೊಚ್ಚಲ ಪಂದ್ಯದಲ್ಲಿ ನಾನು ಅನುಭವಿಸಿದ ರೋಮಾಂಚನ ನನಗೆ ಇನ್ನೂ ನೆನಪಿದೆ, ಆದರೆ ಇದು 400 ಪಂದ್ಯಗಳವರೆಗೆ ವಿಸ್ತರಿಸುತ್ತದೆ ಎಂದು ಯೋಚಿಸಿಯೂ ಇರಲಿಲ್ಲ. ಈ ಮೈಲಿಗಲ್ಲು ತಲುಪಲು ನನಗೆ



ಪ್ರತಿಯೊಬ್ಬ ತರಬೇತುದಾರರು, ತಂಡದ ಸಹ ಆಟಗಾರರು ಮತ್ತು ಅಭಿಮಾನಿಗಳು ಕಾರಣರಾಗಿದ್ದಾರೆ. ನಾನು ಇನ್ನೂ ಕಲಿಯುತ್ತಿದ್ದೇನೆ, ಇನ್ನೂ ಬೆಳೆಯುತ್ತಿದ್ದೇನೆ ಮತ್ತು 19ನೇ ವಯಸ್ಸಿನಲ್ಲಿ ನನ್ನಲ್ಲಿದ್ದ ಅದೇ ಹುಮ್ಮಸ್ಸಿನಿಂದ ಈಗಲೂ ಹಾಕಿ ಆಡುತ್ತೇನೆ' ಎಂದು ಹೇಳಿದ್ದಾರೆ.

2011ರಲ್ಲಿ ತನ್ನ 19ನೇ ವಯಸ್ಸಿನಲ್ಲಿ ಭಾರತ ಹಾಕಿ ತಂಡಕ್ಕೆ ಪದಾರ್ಪಣೆ ಮಾಡಿದ ಮನ್‌ಪ್ರೀತ್ ಸಿಂಗ್, ಒಲಿಂಪಿಕ್ ಕಂಚಿನ ಪದಕ ಗೆದ್ದ ತಂಡದ ಸದಸ್ಯರಾಗಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಅವರ ನಾಯಕತ್ವದಲ್ಲೇ ಕಂಚಿನ ಪದಕ ಗೆದ್ದಿತ್ತು, ಆ ಮೂಲಕ 1980ರ ನಂತರ ಮೊದಲ ಬಾರಿಗೆ ಹಾಕಿ ಪಂದ್ಯದಲ್ಲಿ ಭಾರತೀಯ ತಂಡ ಪದಕ ಗೆದ್ದ ಸಾಧನೆ ಮಾಡಿತ್ತು. ಕಳೆದ ವರ್ಷ ಪ್ಯಾರಿಸ್‌ನಲ್ಲಿ ಕಂಚಿನ ಪದಕ ಗೆದ್ದಾಗಲೂ ಮನ್‌ಪ್ರೀತ್ ತಂಡದಲ್ಲಿದ್ದರು.

ಮನ್‌ಪ್ರೀತ್‌ಗೆ 2018ರಲ್ಲಿ ಅರ್ಜುನ ಪ್ರಶಸ್ತಿ ಮತ್ತು 2021ರಲ್ಲಿ ಭಾರತದ ಅತ್ಯುನ್ನತ ಕ್ರೀಡಾ ಗೌರವವಾದ 'ಮೇಜರ್ ಧ್ಯಾನ್‌ಚಂದ್ ಖೇಲ್‌ರತ್ನ' ಪ್ರಶಸ್ತಿಯನ್ನೂ ನೀಡಲಾಗಿತ್ತು.

ಮನ್‌ಪ್ರೀತ್ ಸಿಂಗ್: ಪ್ರಮುಖ ಸಾಧನೆಗಳು

- **2 ಒಲಿಂಪಿಕ್ ಕಂಚಿನ ಪದಕಗಳು (2020, 2024)**
- **2 ಏಷ್ಯನ್ ಗೇಮ್ಸ್ ಚಿನ್ನದ ಪದಕಗಳು (2014, 2023)**
- **2 ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕಗಳು (2014, 2022)**
- **4 ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಪ್ರಶಸ್ತಿಗಳು (2013, 2018, 2023 ಮತ್ತು 2024)**

ಗೌತಮ್ ಗಂಭೀರ್ ಬದಲಿಯಾಗಿ ಲಂಡನ್‌ಗೆ ತೆರಳಿದ ಮಾಜಿ ಆಟಗಾರ

ಮೊದಲ ಟೆಸ್ಟ್‌ಗೆ ಲಕ್ಷ್ಮಣ್ ಕೋಚ್?

ಬೆಕೆನ್‌ಹ್ಯಾಮ್: ತಾಯಿಯ ತುರ್ತು ವೈದ್ಯಕಿಯ ಪರಿಸ್ಥಿತಿಯಿಂದಾಗಿ ಇಂಗ್ಲೆಂಡ್‌ನಿಂದ ತವರಿಗೆ ಮರಳಿದ್ದ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತೆ ಭಾರತ ತಂಡ ಸೇರುವುದು ಕೊಂಚ ತಡವಾಗಲಿದೆ, ಹೀಗಾಗಿ ಜೂನ್ 20ರಂದು ಆರಂಭಗೊಳ್ಳುವ ಮೊದಲ ಪಂದ್ಯದಲ್ಲಿ ಗಂಭೀರ್ ಅನುಪಸ್ಥಿತಿಯಲ್ಲಿ ಹಂಗಾಮಿ ಕೋಚ್ ಆಗಿ ವಿ.ವಿ.ಎಸ್ ಲಕ್ಷ್ಮಣ್ ಅವರು ತಂಡದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ. ಈ ಕಾರಣಕ್ಕಾಗಿ ಇದೀಗ ಲಕ್ಷ್ಮಣ್ ಲಂಡನ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಗಂಭೀರ್ ಹೃದಯಾಘಾತವಾಗಿ ದೆಹಲಿಯ ಆಸ್ಪತ್ರೆಗೆ ದಾಖಲಿದ ಹಿನ್ನಲೆಯಲ್ಲಿ ಗಂಭೀರ್, ಜೂನ್ ಜೂನ್ 12ರಂದು ಲಂಡನ್‌ನಿಂದ ದೆಹಲಿಗೆ ಆಗಮಿಸಿದ್ದಾರೆ. ಭಾರತ ಹಾಗೂ ಭಾರತ-ಎ ತಂಡಗಳು ಆಂತರಿಕ ಅಭ್ಯಾಸ ಪಂದ್ಯದಲ್ಲಿ ಸಹಾಯಕ ಕೋಚ್ ರ್ಯಾನ್ ಟೆನ್ ಡೋಶೆಟ್ ಟೆಸ್ಟ್ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು. ಇದೀಗ ಲಕ್ಷಣ್ ಅವರು ಕೂಡ ಭಾರತ ಹಾಗೂ ಭಾರತ-ಎ ತಂಡಗಳ ಅಭ್ಯಾಸ ಪಂದ್ಯಕ್ಕೆ ಹಾಜಾರಾಗಿದ್ದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಜತೆ ಪಂದ್ಯವನ್ನು ವೀಕ್ಷಿಸಿದ್ದಾರೆ, ಹೀಗಾಗಿ ಅವರು ಮೊದಲ ಪಂದ್ಯದ ವೇಳೆ ತಂಡಕ್ಕೆ ಕೋಚಿಂಗ್ ನೀಡುವುದು ಖಚಿತ ಎನ್ನಲಾಗಿದೆ.

ಎನ್‌ಸಿಎ ಮುಖ್ಯಸ್ಥರೂ ಆಗಿರುವ ವಿ.ವಿ.ಎಸ್ ಲಕ್ಷ್ಮಣ್ ಈ ಹಿಂದೆ ರಾಹುಲ್ ದ್ರಾವಿಡ್ ಅವರ ಅನುಪಸ್ಥಿತಿಯಲ್ಲಿ ಹಲವು ಸರಣಿಗಳಲ್ಲಿ ಟೆಸ್ಟ್ ತಂಡದ ಕೋಚಿಂಗ್ ಅನ್ನು ನಿರ್ವಹಿಸಿದ್ದರು, ಜತೆಗೆ ಅಂಡರ್-19 ವಿಶ್ವಕಪ್ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ಶಿವಂ ಸಿಂಗ್ ಅಬ್ಬರದ ಬ್ಯಾಟಿಂಗ್

ಚೆನ್ನೈ: ಐಪಿಎಲ್ ಟೂರ್ನಿಯಲ್ಲಿ ಪಂಜಾಬ್ ತಂಡದಲ್ಲಿದ್ದರೂ ಆಡಲು ಅವಕಾಶ ಸಿಗದ ಶಿವ ಸಿಂಗ್ ಇದೀಗ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಅಬ್ಬರಿಸಿದ್ದಾರೆ. ದಿಂಡಿಗಲ್ ಡ್ರಾಗನ್ಸ್ ತಂಡದ ಪರ ಕಣಕ್ಕಿಳಿದಿರುವ ಶಿವಂ ಸಿಂಗ್ ಕಳೆದ ಮೂರು ಪಂದ್ಯಗಳಿಂದ 198 ರನ್ ಕಲೆ ಹಾಕಿದ್ದಾರೆ. ಇದೇ ವೇಳೆ ಶಿವಂ ಸಿಂಗ್ ಅವರ ಬ್ಯಾಟ್‌ನಿಂದ ಸಿಡಿದ ಸಿಕ್ಸರ್‌ಗಳ ಸಂಖ್ಯೆ 12. ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಸಂಚಲನ ಸೃಷ್ಟಿಸಿರುವ ಶಿವಂ ಸಿಂಗ್ ಮೂರು ಪಂದ್ಯಗಳಲ್ಲಿ ಎರಡು ಬಾರಿ ಅಜೇಯರಾಗಿ ಉಳಿದಿದ್ದಾರೆ. ಅದರಲ್ಲೂ ಮಧುರೈ ಪ್ಯಾಂಥರ್ಸ್ ವಿರುದ್ಧದ ಪಂದ್ಯದಲ್ಲಿ ಆರಂಭಿಕನಾಗಿ ಕಣಕ್ಕಿಳಿದ ಶಿವಂ 41 ಎಸೆತಗಳಲ್ಲಿ 8 ಬೌಂಡರಿ ಮತ್ತು 6 ಸಿಕ್ಸರ್‌ಗಳೊಂದಿಗೆ ಅಜೇಯ 86 ರನ್ ಬಾರಿಸಿದ್ದರು.